ತಾಡೋಲೆ

ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ನೆನಪಿನ ಸಂಪುಟ

ಗೌರವ ಸಂಪಾದಕರು
ಡಾ. ಸ.ಚಿ. ರಮೇಶ

ಪ್ರಧಾನ ಸಂಪಾದಕರು
ಡಾ. ಎಫ್. ಟಿ. ಹಳ್ಳಿಕೇರಿ

ಸಂಪಾದಕರು
ಡಾ. ವೀರೇಶ ಬಡಿಗೇರ
ಡಾ. ಕೆ. ರವೀಂದ್ರನಾಥ



ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೊತ್ರಿ, ಮೈಸೂರು



ಮೈಸೂರು ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಮೊದಲ ವಿಶ್ವವಿದ್ಯಾನಿಲಯವಾಗಿದ್ದು, ಭಾರತದಲ್ಲೇ ಸ್ಥಾಪನೆಗೊಂಡ ಆರನೇ ವಿಶ್ವವಿದ್ಯಾಲಯವಾಗಿದೆ. ಇತಿಹಾಸ, ಪರಂಪರೆ, ಸಂಸ್ಕೃತಿ ಮತ್ತು ಉತ್ತಮ ಗುಣಮಟ್ಟದ ಶಿಕ್ಷಣದಿಂದ ನಾಲ್ಕು ವಿಶ್ವವಿದ್ಯಾಲಯಗಳಿಗೆ ಮಾತೃ ಸಂಸ್ಥೆಯಾಗಿದೆ.

* ಮೈಸೂರು ವಿಶ್ವವಿದ್ಯಾನಿಲಯ ಮುಖ್ಯ ಕ್ಯಾಂಪಸ್ ಸುಮಾರು ೭೩೯ ಎಕರೆ ವಿಸ್ತೀರ್ಣ ಹೊಂದಿರುವ ನಯನ ಮನೋಹರವಾದ ಮಾನಸಗಂಗೋತ್ರಿಯಲ್ಲಿ ನೆಲೆಗೊಂಡಿದ್ದು, ಸುಮಾರು ೨೬೧ ಎಕರೆಗಳಷ್ಟು ವಿಶಾಲವಾದ ಕುಕ್ಕರಹಳ್ಳಿ ಕೆರೆಯಿಂದ ಸುತ್ತುವರೆದಿದೆ.
* ರಾಷ್ಟ್ರೀಯ ಮೌಲ್ಯಾಂಕ ಮತ್ತು ಮಾನ್ಯತ ಪರಿಷತ್ತಿನಿಂದ ನಾಲ್ಕನೇ ಆವೃತ್ತಿಯ ಮಾನ್ಯತೆಯನ್ನು ೨೦೨೧ರ ಸೆಪ್ಟೆಂಬರ್‌ನಿಂದ ಐದು ವರ್ಷಗಳಿಗೆ ಮರು ಮಾನ್ಯತೆಯನ್ನು ಪಡೆದಿದೆ.
* ಯುಜಿಸಿಯ ಶ್ರೇಣೀಕೃತ ಸ್ವಾಯತ್ತ ಅಧಿನಿಯಮದ ರೀತ್ಯಾ ೨ನೇ ಹಂತದ ಸ್ವಾಯತ್ತತೆಯನ್ನು ಹೊಂದಿದೆ.
* ಭಾರತ ಸರ್ಕಾರದ ವಿವಿಧ ಪ್ರಾಯೋಜಿತ ಸಂಸ್ಥೆಗಳಿಂದ ಯೋಜನೆಗಳಡಿ ಅನುದಾನವನ್ನು ಪಡೆದಿದೆ.
* ರೂಸಾ ೨.೦ ಅಡಿಯಲ್ಲಿ ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ೫೦ ಕೋಟಿ ಅನುದಾನ.
* ಯುಜಿಸಿಯು ವಿಶೇಷ ಅನುದಾನದ ಯೋಜನೆಗಳಡಿಯಲ್ಲಿ ೧೩ ವಿಭಾಗಗಳಿಗೆ ಮತ್ತು ನಾಲ್ಕು ವಿಭಾಗಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು FIST ಅನುದಾನ.
* ವಿಶ್ವವಿದ್ಯಾನಿಲಯವು ೫೪ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಮೂರು ಸ್ನಾತಕೋತ್ತರ ಕೇಂದ್ರ, ಮತ್ತು ಏಳು ಅಧೀನ ಕಾಲೇಜುಗಳನ್ನು ಒಳಗೊಂಡಿದೆ.
* ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯವು ಸುಸಜ್ಜಿತ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸುಮಾರು ೧೨,೫೦,೦೦೦ ಹೆಚ್ಚಿನ ಪುಸ್ತಕಗಳನ್ನು, ೭೫, ೫೦೦ ಇ-ನಿಯತಕಾಲಿಕೆಗಳಲ್ಲಿ ಲಭ್ಯವಿದ್ದು ವೃತ್ತಿ ಸಂಪನ್ಮೂಲ ಕೇಂದ್ರವನ್ನು ಹೊಂದಿದೆ.
* ೭೬ ಸ್ನಾತಕೋತ್ತರ ವಿವಿಧ ವಿಷಯಗಳನ್ನು ಬೋಧಿಸಲಾಗುತ್ತಿದೆ. ೧,೨೦,೦೦೦ಕ್ಕೂ ಹೆಚ್ಚು ಸ್ನಾತಕ/ಸ್ನಾತಕೋತ್ತರ ಪದವಿ, ಡಿಪ್ಲೊಮಾ, ಎಂ.ಫಿಲ್ ಮತ್ತು ಪಿಎಚ್.ಡಿ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ.
* ಸುಮಾರು ೫೫೦೦ಕ್ಕೂ ಹೆಚ್ಚು ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸ್ನಾತಕೋತ್ತರ ವಿಭಾಗಗಳಲ್ಲಿ ಅಧ್ಯಯನ ನಡೆಸುತ್ತಿದ್ದಾರೆ.
* ಮೂರು ಸ್ನಾತಕೋತ್ತರ ವಿಭಾಗಗಳು ರಾಷ್ಟ್ರೀಯ ಸಂಶೋಧನಾ ಸೌಲಭ್ಯಗಳನ್ನು ಹೊಂದಿವೆ. ವಿಶ್ವವಿದ್ಯಾನಿಲಯವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಶೋಧನ ಸಂಸ್ಥೆಗಳ ಜೊತೆಯಲ್ಲಿ ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡಿದೆ.
* ಕೇಂದ್ರ ಸೌಲಭ್ಯಗಳು : ಅಂತಾರಾಷ್ಟ್ರೀಯ ಕೇಂದ್ರ, ಬಹುಮಾಧ್ಯಮ ಶೈಕ್ಷಣಿಕ ಸಂಶೋಧನಾ ಕೇಂದ್ರ, ಮಾಹಿತಿ ಮತ್ತು ತಂತ್ರಜ್ಞಾನ ಕೇಂದ್ರ, ಸಾಮರ್ಥ್ಯ ಅಭಿವೃದ್ಧಿ ಹಾಗೂ ಉದ್ಯೋಗ ಸೇವಾ ಕೇಂದ್ರ.
* ವಿದೇಶಿ ವಿದ್ಯಾರ್ಥಿಗಳಿಗಾಗಿ ಸುಸಜ್ಜಿತ ಪ್ರತ್ಯೇಕ ವಿದ್ಯಾರ್ಥಿ ನಿಲಯ.
* ಕ್ರಿಕೆಟ್, ಟೆನಿಸ್, ಜಿಮ್ನಾಷಿಯಾಂ ಮತ್ತು ಈಜುಕೊಳಗಳ ನಿರ್ವಹಣೆಗೆ ಪ್ರತ್ಯೇಕ ನಿರ್ದೇಶನಾಲಯ ಮತ್ತು ವಿಶಾಲವಾದ ಆಟದ ಮೈದಾನಗಳು.
* ಸುಸಜ್ಜಿತ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೊಂದಿದೆ.
* ಭಾರತ ಸರ್ಕಾರದ ಉತ್ಕೃಷ್ಟ ಯೋಜನೆಗಳಲ್ಲೊಂದಾದ "ವೃತ್ತಿಕೇಂದ್ರ"(Career Hub)ಯೋಜನೆಯನ್ನು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ಹಾರ್ದಿಕ ಶುಭಾಶಯಗಳು

ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವ ವರ್ಷ ೨೦೨೧-೨೨
ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆ: ೭೧

ತಾಡೋಲೆ

ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ನೆನಪಿನ ಸಂಪುಟ

ಗೌರವ ಸಂಪಾದಕರು
ಡಾ. ಸ.ಚಿ. ರಮೇಶ

ಪ್ರಧಾನ ಸಂಪಾದಕರು
ಡಾ. ಎಫ್.ಟಿ. ಹಳ್ಳಿಕೇರಿ

ಸಂಪಾದಕರು
ಡಾ. ವೀರೇಶ ಬಡಿಗೇರ
ಡಾ. ಕೆ. ರವೀಂದ್ರನಾಥ

ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

TAADOOLE

(Silver Jubilee Commemoration Volume of Dept. of Manuscriptology)

Chief Editor

Dr. F.T. Hallikeri
Head, Dept. of Manuscriptology
Kannada University, Hampi
Vidyaranya 583 276

Editors

Dr. Veeresh Badiger
Dr. K. Ravindranatha
Dept. of Manuscriptology
Kannada University, Hampi
Vidyaranya 583 276

Published by

Dr. F.T. Hallikeri
Head, Dept. of Manuscriptology
Kannada University, Hampi
Vidyaranya 583 276

Pages: 16 + 20 + ೧೪೪ = **180**

First Impression: **2022**

www. kannadauniversity.org

ಮುಖಪುಟ: **ರಟ್ಟೀಹಳ್ಳಿ ರಾಘವಾಂಕುರ**

ಅಕ್ಷರ ಸಂಯೋಜನೆ
ಭೂಮಿ ಪುಸ್ತಕ, ಹೊಸಪೇಟೆ

ಮುದ್ರಣ
ಮಾರ್ಕೆಟಿಂಗ್ ಕಮ್ಯುನಿಕೇಶನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿ., ಬೆಂಗಳೂರು

ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವ ಸಮಿತಿ

ಅಧ್ಯಕ್ಷರು
ಡಾ. ಸ.ಚಿ. ರಮೇಶ
ಕುಲಪತಿಗಳು

*

ಸದಸ್ಯರು
ಡಾ. ಎ. ಸುಬ್ಬಣ್ಣ ರೈ
ಕುಲಸಚಿವರು

ಪ್ರೊ. ಎ.ವಿ. ನಾವಡ
ವಿಶ್ರಾಂತ ಪ್ರಾಧ್ಯಾಪಕರು

ಡಾ. ವೀರೇಶ ಬಡಿಗೇರ
ಪ್ರಾಧ್ಯಾಪಕರು

ಡಾ. ಕೆ. ರವೀಂದ್ರನಾಥ
ಪ್ರಾಧ್ಯಾಪಕರು

ಎಸ್.ಎಸ್. ಅಂಗಡಿ
ಪ್ರಾಧ್ಯಾಪಕರು

ಡಾ. ಎಸ್.ಆರ್. ಚನ್ನವೀರಪ್ಪ
ಪ್ರಾಧ್ಯಾಪಕರು

*

ಸದಸ್ಯ ಸಂಚಾಲಕ
ಡಾ. ಎಫ್.ಟಿ. ಹಳ್ಳಿಕೇರಿ
ಮುಖ್ಯಸ್ಥರು

‘ತಾಡೋಲೆ’ ರಜತ ಮಹೋತ್ಸವದ ನೆನಪಿನ ಸಂಪುಟ

ಗೌರವ ಸಂಪಾದಕರು
ಡಾ. ಸ.ಚಿ. ರಮೇಶ
ಕುಲಪತಿಗಳು

*

ಪ್ರಧಾನ ಸಂಪಾದಕರು
ಡಾ. ಎಫ್.ಟಿ. ಹಳ್ಳಿಕೇರಿ
ಮುಖ್ಯಸ್ಥರು

*

ಸಂಪಾದಕರು
ಡಾ. ವೀರೇಶ ಬಡಿಗೇರ
ಪ್ರಾಧ್ಯಾಪಕರು

ಡಾ. ಕೆ. ರವೀಂದ್ರನಾಥ
ಪ್ರಾಧ್ಯಾಪಕರು

*

ಸದಸ್ಯರು
ಡಾ. ಎಸ್.ಎಸ್. ಅಂಗಡಿ
ಪ್ರಾಧ್ಯಾಪಕರು

ಡಾ. ಎಸ್.ಆರ್. ಚನ್ನವೀರಪ್ಪ
ಪ್ರಾಧ್ಯಾಪಕರು

‘ಕನ್ನಡವು ಕನ್ನಡವ ಕನ್ನಡಿಸುತಿರಬೇಕು’

ಡಾ. ಸ.ಚಿ. ರಮೇಶ
ಕುಲಪತಿ

ಕನ್ನಡ–ಕರ್ನಾಟಕ ಕಲಿಕೆಯ ಮುನ್ನಡೆ, ಅಧ್ಯಯನ ಮತ್ತು ಪ್ರಸಾರಕ್ಕಾಗಿ ಶ್ರೀ ಪಂಪಾ ವಿರೂಪಾಕ್ಷನ ನೆಲೆಯಾದ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಗೊಂಡಿದೆ. ಕನ್ನಡವನ್ನು ಜಾಗತಿಕ ಮಟ್ಟದಲ್ಲಿ ಬೆಳೆಸುವುದು, ಕನ್ನಡದ ಸಾಂಸ್ಕೃತಿಕ ಚಹರೆಗಳನ್ನು ವಿಸ್ತರಿಸುವುದು, ಹೊರನಾಡ ಮತ್ತು ಹೊರದೇಶದಲ್ಲಿ ವಾಸಿಸುತ್ತಿರುವವರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಅಧ್ಯಯನ ಮಾಡಲು ಮುಂದಾದರೆ ಅವರಿಗೆ ತರಬೇತಿ ನೀಡುವುದು, ದೇಸಿ ಜ್ಞಾನಶಿಸ್ತುಗಳಾದ ಸಂಗೀತ, ರಂಗಕಲೆ, ಜಾನಪದ, ಪ್ರತಿಮಾಶಾಸ್ತ್ರ, ವರ್ಣಶಾಸ್ತ್ರ, ಶಿಲ್ಪಶಾಸ್ತ್ರ, ಭಾಷಾಶಾಸ್ತ್ರ, ಹಸ್ತಪ್ರತಿಶಾಸ್ತ್ರ, ಶಾಸನಶಾಸ್ತ್ರ, ಪುರಾತತ್ವಶಾಸ್ತ್ರ, ಧರ್ಮಶಾಸ್ತ್ರ, ತತ್ವಶಾಸ್ತ್ರ, ಖಗೋಳಶಾಸ್ತ್ರ, ಇತಿಹಾಸ ಅಷ್ಟೇ ಯಾಕೆ; ಆಧುನಿಕ ತಂತ್ರಜ್ಞಾನ, ವೈದ್ಯಕೀಯ ಜ್ಞಾನವನ್ನು ಕನ್ನಡದಲ್ಲಿ ಕಲಿಯಲು ಅನುವು ಮಾಡುವ ಮತ್ತು ಸಂಶೋಧನೆಗೆ ಅವಕಾಶ ಮಾಡಿಕೊಡುವ ಮೂಲ ಉದ್ದೇಶಕ್ಕಾಗಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ‘ಕನ್ನಡವು ಕನ್ನಡವ ಕನ್ನಡಿಸುತಿರಬೇಕು’ ಎಂಬ ವರಕವಿ ಬೇಂದ್ರೆಯವರ ಮಾತಿನ ಮಥಿತಾರ್ಥವಾಗಿ ಕನ್ನಡ ವಿಶ್ವವಿದ್ಯಾಲಯ ತನ್ನ ಕೆಲಸವನ್ನು ಮಾಡುತ್ತಿದೆ. ೧೯೯೨ರಲ್ಲಿ ಭಾರತವನ್ನು ಜಾಗತೀಕರಣ ನೀತಿಗೆ ಒಗ್ಗೂಡಿಸುವ ಕೆಲಸ ನಡೆಯಿತು. ಅಭಿವೃದ್ಧಿ, ಮಾರುಕಟ್ಟೆ, ಶಿಕ್ಷಣ, ಸಂಸ್ಕೃತಿ, ಸಂಶೋಧನೆ ಮುಂತಾದವುಗಳನ್ನು ಜಾಗತಿಕ ನೆಲೆಗೆ ಅನುಗುಣವಾಗಿ ಬದಲಾಯಿಸುವ ಪ್ರಯತ್ನ ಆರಂಭವಾಯಿತು. ಕುತೂಹಲದ ಸಂಗತಿಯೆಂದರೆ ಅದಕ್ಕೂ ಒಂದು ವರ್ಷ ಹಿಂದೆ ೧೯೯೧ರಲ್ಲಿ ಪ್ರಾದೇಶಿಕ ನೆಲೆಯ ಶೋಧ ಹಾಗೂ ಪ್ರಸಾರಕ್ಕಾಗಿ ಕನ್ನಡ ವಿಶ್ವವಿದ್ಯಾಲಯ ಜನ್ಮ ತಾಳಿತು. ಕನ್ನಡ ನಾಡಿಗೆ ಕನ್ನಡ ವಿಶ್ವವಿದ್ಯಾಲಯ ಬೇಕು ಎಂಬ ಕನಸು ಬಹಳ ಹಿಂದಿನಿಂದಲೂ ಇತ್ತು. ೧೯೨೯ರಲ್ಲಿ ಬೆಳಗಾವಿ ಸಮ್ಮೇಳನದಲ್ಲಿ ಶ್ರೀ ಬೆನಗಲ್ ರಾಮರಾಯರು, ೧೯೩೨ರಲ್ಲಿ ಮಡಿಕೇರಿ ಸಮ್ಮೇಳನದಲ್ಲಿ ಶ್ರೀ ಡಿ.ವಿ.ಜಿ. ಅವರು, ೧೯೩೮ರಲ್ಲಿ ಬಳ್ಳಾರಿ ಸಮ್ಮೇಳನದಲ್ಲಿ ಶ್ರೀ ದಿವಾಕರ ರಂಗನಾಥರಾಯರು ಮತ್ತು ೧೯೫೬ರಲ್ಲಿ ಶಿವಮೊಗ್ಗ ಸಮ್ಮೇಳನದಲ್ಲಿ ಶ್ರೀ ವರಕವಿ ಬೇಂದ್ರೆಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ “ವಿದ್ಯೆಯನ್ನು ಕಲಿಯಲು ನಮಗೆ ಕನ್ನಡ ವಿಶ್ವವಿದ್ಯಾಲಯ ಕೊನೆಗೂ ಬೇಕು” ಎಂದಿದ್ದರು. ಹೀಗಾಗಿ ಕನ್ನಡ ವಿಶ್ವವಿದ್ಯಾಲಯ ಹಿರಿಯ ಮತ್ತು ನಮ್ಮ ತಲೆಮಾರಿನ ವಿದ್ವಾಂಸರ ಸಾಮೂಹಿಕ ಕನಸಿನ ಫಲ.

ವಿದ್ಯೆಯನ್ನು ಸೃಷ್ಟಿಸುವ, ಸ್ವದೇಶಿ ಸತ್ಯವನ್ನು ಶೋಧಿಸುವ, ಕನ್ನಡದ ಬಹುತ್ವದ ನೆಲೆಗಳನ್ನು ಹುಡುಕುವ, ಅದನ್ನು ವಿಶ್ವಪ್ರಜ್ಞೆಯಾಗಿಸುವುದರ ಮೂಲಕ ಕನ್ನಡವೇ ಸತ್ಯ ಎಂಬ ಮಾತನ್ನು ಅಳಿಸಲಾಗದ ರೀತಿಯಲ್ಲಿ ಕನ್ನಡ

ವಿಶ್ವವಿದ್ಯಾಲಯ ಇದುವರೆಗೂ ತನ್ನ ಕೆಲಸವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಇಪ್ಪತ್ತೊಂದನೆಯ ಶತಮಾನದ ಎರಡನೇ ದಶಕ ಮುಗಿಯುತ್ತಿರುವ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳ ಮುಂದೆ ಜ್ಞಾನದ ಉತ್ಪಾದನೆ, ವಿನಿಯೋಗ, ವಿತರಣೆ ಹಾಗೂ ಸಾಮಾಜಿಕ ಫಲಾನುಭವಕ್ಕೆ ಸಂಬಂಧಿಸಿದ ಬಹುದೊಡ್ಡ ಹೊಣೆಗಾರಿಕೆ ಮತ್ತು ಸವಾಲುಗಳು ನಮ್ಮ ಮುಂದಿವೆ. ಇಂದು ಕೇವಲ ಮಾಹಿತಿಗಳನ್ನೇ ಜ್ಞಾನ ಎಂದು ಭಾವಿಸುತ್ತೇವೆ. ಆದರೆ ಮಾಹಿತಿ ಕೇಂದ್ರಿತವಾದ ಜ್ಞಾನ ಮಾನವನ ಕರುಳುಬಳ್ಳಿ ಸಂಬಂಧದಿಂದ ದೂರ ಹೋಗುತ್ತಿರುವಂತೆ ಭಾಸವಾಗುತ್ತಿದೆ. ಹಾಗೆ ನೋಡಿದರೆ ನಮ್ಮ ಜನಪದರು ತಮ್ಮ ಬದುಕು ಮತ್ತು ದುಡಿಮೆಯ ಭಾಗವಾಗಿ ಜ್ಞಾನವನ್ನು ಸೃಷ್ಟಿಸಿದ್ದಾರೆ. ಇದನ್ನೇ ನಾವು ಸಾಂದರ್ಭಿಕ ಸಾಹಿತ್ಯವೆಂದು ಕರೆಯುತ್ತೇವೆ. ಇದು ಕಾಯಕದ ಉಪ ಉತ್ಪನ್ನವಾಗಿ ರೂಪುಗೊಂಡಿದ್ದೂ ಹೌದು. ಅಂಥ ಸಂದರ್ಭವನ್ನು ಅರ್ಥ ಮಾಡಿಕೊಂಡು ಕನ್ನಡ ವಿಶ್ವವಿದ್ಯಾಲಯ ತನ್ನ ಪಾಲಿನ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುನ್ನಡೆಯುತ್ತಿದೆ. ಈ ನಡಿಗೆಯಲ್ಲಿ ಬದುಕು-ದುಡಿಮೆ-ಜ್ಞಾನ-ವಿವೇಕ-ತಿಳಿವಳಿಕೆಗಳನ್ನೊಳಗೊಂಡ ಜೀವಪ್ರಧಾನ ಅಂಶಗಳಿರುವುದನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಡುವ ಗುರುತರವಾದ ಹೊಣೆಗಾರಿಕೆಯೂ ನಮ್ಮ ಮೇಲಿದೆ. ಬಹುಭಾಷೆ, ಬಹುಸಂಸ್ಕೃತಿ, ಬಹುಜ್ಞಾನಶಿಸ್ತುಗಳಿಂದ ತನ್ನ ಅರಿವಿನ ಕ್ರಮವನ್ನು ನಿರೂಪಿಸುವುದೇ ಕನ್ನಡದ ದುಡಿಮೆ. ರಾಷ್ಟ್ರಕವಿ ಕುವೆಂಪು ಅವರು ಹೇಳುವಂತೆ ಇದು ಕನ್ನಡಕ್ಕಾಗಿ ಕಿರುಬೆರಳು ಎತ್ತುವ ಕೈಂಕರ್ಯವಾಗಿದೆ.

ಇಂದು ಬಹುಮುಖಿಯಾಗಿ ಜ್ಞಾನ ವಿಕಾಸವಾಗುತ್ತಿದ್ದು, ತಾಂತ್ರಿಕ ಶೋಧಗಳು ವಿಶೇಷವಾಗಿ ಡಿಜಿಟಲ್ ತಂತ್ರಜ್ಞಾನದ ಮೂಲಕ ವಿಶ್ವಾತ್ಮಕವಾಗಿ ಹರಡಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅದನ್ನು ಅರ್ಥ ಮಾಡಿಕೊಳ್ಳುವುದು, ಇತರರಿಗೆ ಅರ್ಥ ಮಾಡಿಸುವುದು, ಇದರ ಪ್ರಯೋಜನ ಪಡೆಯುವುದು, ಈ ಎಲ್ಲದರ ನಡುವೆಯೂ ನಮ್ಮ ದೇಸಿತನವನ್ನು ಹಸಿರಾಗಿಯೇ ಇರಿಸಿಕೊಳ್ಳುವುದು ನಮಗೊಂದು ಸವಾಲಾಗಿದೆ. ಕನ್ನಡ ವಿಶ್ವವಿದ್ಯಾಲಯ ಈ ಸವಾಲಿಗೆ ಮುಖಾಮುಖಿಯಾಗಲು ಬಯಸಿದೆ. ಇದರ ಫಲವಾಗಿ ಕನ್ನಡತನವನ್ನು ಅನ್ಯ ಜನರಿಗೂ, ಅನ್ಯರ ಜ್ಞಾನಲಾಭವನ್ನು ಕನ್ನಡಿಗರಿಗೂ ದೊರಕಿಸುವುದು ನಮ್ಮ ಆಶಯ. 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬ ಕವಿವಾಣಿಯ ಆಶಯವನ್ನು ಸಾಕ್ಷಾತ್ಕಾರಗೊಳಿಸುವುದಕ್ಕಾಗಿ ನಮ್ಮ ತ್ರಿಕರಣಗಳೂ ಮೀಸಲಾಗಿರಲೆಂಬ ಬಯಕೆ ನಮ್ಮದು.

ವಿಶ್ವವಿದ್ಯಾಲಯದ ವಿದ್ವಾಂಸರು ಹಾಗೂ ನಾಡಿನ ಹಿರಿಯ, ಕಿರಿಯ ವಿದ್ವಾಂಸರು ಕೂಡಿ ಅರಿವಿನ ತೇರನ್ನು ಎಳೆಯಬೇಕಾಗಿದೆ. ಜ್ಞಾನವನ್ನು ಇನ್ನೂ ಹುಲುಸಾಗಿ ಬೆಳೆಸಬೇಕಾಗಿದೆ. ದಾಸೋಹ ಭಾವನೆಯಿಂದ ಅದನ್ನು ಹಂಚಬೇಕಾಗಿದೆ. ಅಂದರೆ ಬೋಧನೆ ಮತ್ತು ಶೋಧನೆಗಳನ್ನು ಶ್ರೀಸಾಮಾನ್ಯರ ಮನೆ ಮನಗಳಿಗೆ ತಲುಪಿಸುವ ಮತ್ತೊಂದು ಅಂಗವೇ ಪ್ರಸಾರಾಂಗ. ಈ ಪ್ರಸಾರಾಂಗದ ಮೂಲಕ ದೇಸಿ ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ವಿಸ್ತರಿಸುವ ಕಾಯಕ ಕನ್ನಡ ವಿಶ್ವವಿದ್ಯಾಲಯದಿಂದ ನಿರಂತರವಾಗಿ ನಡೆಯುತ್ತಿದೆ ಎಂಬುದು ನಮ್ಮ ಆಶಯವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಸ್ಥಾಪನೆಯಾಗಿ ಇಪ್ಪತ್ತೈದು ವರ್ಷಗಳನ್ನು ಪೂರೈಸಿದೆ. ಈ ಅವಧಿಯಲ್ಲಿ ವಿಭಾಗವು ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ಹಳಗನ್ನಡ ಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯವಾದ ಕಾರ್ಯವನ್ನು ಮಾಡುತ್ತ ಬರುತ್ತಲಿದೆ. ಹಸ್ತಪ್ರತಿಗಳ ಸಂಗ್ರಹ-ಸಂರಕ್ಷಣೆ, ಸೂಚೀಕರಣ-ಸಂಪಾದನೆ, ಅಧ್ಯಯನ-ಪ್ರಕಟಣೆ ಹೀಗೆ ವಿವಿಧ ಆಯಾಮಗಳಿಂದ ವಿಭಾಗದ ಪ್ರಾಧ್ಯಾಪಕ ಬಳಗ ಯೋಜನೆಗಳನ್ನು ಕೈಗೊಂಡಿದೆ. ರಜತ ಮಹೋತ್ಸವದ ನೆನಪಿಗಾಗಿ ಇಪ್ಪತ್ತೈದು ಪುಸ್ತಕಗಳ ಪ್ರಕಟಣೆ, ಇಪ್ಪತ್ತೈದು ವಿಶೇಷ ಉಪನ್ಯಾಸ ಸರಣಿ ಕಾರ್ಯಕ್ರಮ, 'ತಾಡೋಲೆ' ನೆನಪಿನ ಸಂಪುಟ ಪ್ರಕಟಣೆ, ಹಸ್ತಪ್ರತಿಶಾಸ್ತ್ರ ವಿಭಾಗದ ವಿದ್ಯಾರ್ಥಿಗಳ ದತ್ತಿನಿಧಿ

–ಹೀಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. 'ತಾಡೋಲೆ' ನೆನಪಿನ ಸಂಪುಟವು ಹಸ್ತಪ್ರತಿಶಾಸ್ತ್ರ ವಿಭಾಗದ ಯೋಜನೆಗಳು, ಸಮ್ಮೇಳನ, ಶಿಬಿರ, ಕಮ್ಮಟ, ವಿಶೇಷ ಉಪನ್ಯಾಸ ಇತ್ಯಾದಿ ವಿಸ್ತರಣ ಕಾರ್ಯಕ್ರಮಗಳು, ಪುಸ್ತಕ ಪ್ರಕಟಣೆಗಳ ಅವಲೋಕನ, ಪಿಎಚ್.ಡಿ., ಎಂ.ಫಿಲ್ ಕಾರ್ಯಕ್ರಮಗಳ ಮಾಹಿತಿಗಳು ಅಡಕಗೊಂಡಿವೆ. ಒಟ್ಟಾರೆ ಈ ಸಂಪುಟವು ಹಸ್ತಪ್ರತಿಶಾಸ್ತ್ರ ವಿಭಾಗದ ಇಪ್ಪತ್ತೈದು ವರ್ಷಗಳ ನಡೆದು ಬಂದ ದಾರಿಯ ಅವಲೋಕನ ಮಾಡಲು ಸಹಾಯಕಾರಿಯಾಗುತ್ತದೆ.

ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ನೆನಪಿಗಾಗಿ ಪ್ರಕಟವಾಗುತ್ತಿರುವ ಪುಸ್ತಕಗಳಲ್ಲಿ "ತಾಡೋಲೆ" ಹೆಸರಿನ ಈ ಸಂಪುಟವೂ ಒಂದು. ವಿಭಾಗದ ಮುಖ್ಯಸ್ಥರಾದ ಡಾ. ಎಫ್.ಟಿ.ಹಳ್ಳಿಕೇರಿ ಅವರ ಪ್ರಧಾನ ಸಂಪಾದಕತ್ವದಲ್ಲಿ, ಪ್ರಾಧ್ಯಾಪಕರಾದ ಡಾ. ವೀರೇಶ ಬಡಿಗೇರ ಮತ್ತು ಡಾ. ಕೆ.ರವೀಂದ್ರನಾಥ ಅವರ ಸಂಪಾದಕತ್ವದಲ್ಲಿ ಅಚ್ಚುಕಟ್ಟಾಗಿ ಸಿದ್ಧಪಡಿಸಲಾಗಿದೆ. ಸಂಪಾದನ ಸಮಿತಿಯ ಸದಸ್ಯರಾದ ಡಾ. ಎಸ್.ಎಸ್.ಅಂಗಡಿ ಮತ್ತು ಎಸ್.ಆರ್.ಚನ್ನವೀರಪ್ಪ ಅವರು ಸಂಪಾದನ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಹೀಗಾಗಿ ಈ ಎಲ್ಲ ಪ್ರಾಧ್ಯಾಪಕರಿಗೆ ಕನ್ನಡ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.

ಈ ಸಂಪುಟವನ್ನು ಅಚ್ಚುಕಟ್ಟಾಗಿ ಪ್ರಕಟಿಸಿದ ಪ್ರಸಾರಾಂಗದ ನಿರ್ದೇಶಕರಾದ ಡಾ. ಶೈಲಜಾ ಇಂ. ಹಿರೇಮಠ ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು.

ಥಾವರ್‌ಚಂದ್ ಗೆಹ್ಲೋಟ್
थावरचंद गेहलोत
THAAWARCHAND GEHLOT
Governor of Karnataka



ಸಂಖ್ಯೆ: ಜಿಎಸ್ ೧೪೯ ಸಂದೇಶ ೨೦೨೨

ಶುಭ ಸಂದೇಶ

ಕನ್ನಡ ಭಾಷೆಯ ಸಾಹಿತ್ಯ ಸಂಸ್ಕೃತಿ ಅಧ್ಯಯನಕ್ಕೆ ತಾಡೋಲೆ – ಕೋರಿಕಾಗದ – ಕಡತರೂಪದ ಹಸ್ತಪ್ರತಿಗಳು ಬಹುಮುಖ್ಯವಾದ ಆಕರಗಳಾಗಿವೆ. ಅವುಗಳ ಸಂಗ್ರಹ ಸಂರಕ್ಷಣೆ ಮತ್ತು ಅಧ್ಯಯನಕ್ಕಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಆರಂಭವಾದ ಹಸ್ತಪ್ರತಿಶಾಸ್ತ್ರ ವಿಭಾಗವು ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಈ ಮಹೋತ್ಸವದ ನೆನಪಿಗಾಗಿ ತಾಡೋಲೆ ಹೆಸರಿನ ನೆನಪಿನ ಸಂಪುಟವನ್ನು ಪ್ರಕಟಿಸುತ್ತಿದೆ. ಜೊತೆಗೆ ಪುಸ್ತಕಗಳ ಲೋಕಾರ್ಪಣೆ, ದತ್ತಿನಿಧಿ ಸ್ಥಾಪನೆ, ರಾಷ್ಟ್ರೀಯ ವಿಚಾರಸಂಕಿರಣ, ರಜತ ಮಹೋತ್ಸವ ಸಮಾರಂಭ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವುದನ್ನು ಕೇಳಿ ಸಂತೋಷವಾಗಿದೆ. ಕನ್ನಡ ನಾಡು ನುಡಿಯ ಬೆಳವಣಿಗೆಯಲ್ಲಿ ಹಸ್ತಪ್ರತಿಗಳ ಅಧ್ಯಯನ ನಿರಂತರವಾಗಿ ನಡೆಯಲಿ ಎಂದು ಆಶಿಸುತ್ತೇನೆ.

ಇದಕ್ಕಾಗಿ ಶ್ರಮಪಡುತ್ತಲಿರುವ ರಜತ ಮಹೋತ್ಸವದ ಸಲಹಾ ಸಮಿತಿ ಸದಸ್ಯರಿಗೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.

2.6.22

(ಥಾವರ್‌ಚಂದ್ ಗೆಹ್ಲೋಟ್)


Raj Bhavan, Bengaluru - 560 001 (Karnataka) Ph. 080-22254102 - 108

ಬಸವರಾಜ ಬೊಮ್ಮಾಯಿ
ಮುಖ್ಯ ಮಂತ್ರಿ

ಸಂಖ್ಯೆ: ಮುಮಂ/ಪಶಾ/೧೦೭/೨೦೨೧

ವಿಧಾನ ಸೌಧ
ಬೆಂಗಳೂರು - ೫೬೦ ೦೦೧

ದಿನಾಂಕ : ೧೭-೦೧-೨೦೨೨



ಸಂದೇಶ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸದ ಅಂಗವಾಗಿ ನೆನೆಪಿನ ಸಂಪುಟ ಹೊರತರುತ್ತಿರುವುದು ಸಂತಸದ ಸಂಗತಿ.

ಕನ್ನಡ ನಾಡ, ನುಡಿ, ಸಂಸ್ಕೃತಿಗಳ ಶೋಧನೆ, ಪ್ರಸಾರ ಹಾಗೂ ಸಂರಕ್ಷಣೆಗಾಗಿ ಸ್ಥಾಪನೆಗೊಂಡ ಕನ್ನಡ ವಿಶ್ವವಿದ್ಯಾಲಯ ಭಾಷೆಗಾಗಿಯೇ ಹುಟ್ಟಿಕೊಂಡ ಅದ್ವಿತೀಯ ಸಂಸ್ಥೆ. ಕನ್ನಡ, ಕನ್ನಡಿಗ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದ ಎಲ್ಲಾ ಕಾಯಕ ಮತ್ತು ಚಟುವಟಿಕೆಗಳನ್ನು ಹಮ್ಮಿಕೊಂಡು ಕನ್ನಡ ಸಾಹಿತ್ಯದ ಕುರಿತು ಜ್ಞಾನ ವೃದ್ಧಿಸುವ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ನೀಡುತ್ತಿರುವ ಕೊಡುಗೆ ಅನನ್ಯ.

ರಜತ ಮಹೋತ್ಸವದ ಸವಿನೆನಪಿಗಾಗಿ ೨೫ ಪುಸ್ತಕ ಪ್ರಕಟಣೆ, ತಾಡೋಲೆ ನೆನಪಿನ ಸಂಪುಟ ಪ್ರಕಟಣೆ, ವಿಚಾರ ಸಂಕಿರಣ ಸೇರಿದಂತೆ ಹಲವು ಕಾರ್ಯಚಟುವಟಿಕೆಗಳನ್ನು ಆಯೋಜಿಸಿರುವುದು ಶ್ಲಾಘನೀಯ. ರಜತ ಮಹೋತ್ಸವದ ಸಂದರ್ಭದಲ್ಲಿ ಹೊರತರಲಾಗುತ್ತಿರುವ ನೆನಪಿನ ಸಂಪುಟವು, ಹಸ್ತಪ್ರತಿಶಾಸ್ತ್ರ ವಿಭಾಗ ಕೈಗೊಂಡಿರುವ ಕನ್ನಡ ಕಾಯಕವನ್ನು ಪ್ರತಿಬಿಂಬಿಸಿ, ಅತ್ಯಂತ ವಿಶಿಷ್ಟವಾಗಿ ಮೂಡಿಬರಲಿ ಎಂದು ಹಾರೈಸುತ್ತೇನೆ.

(ಬಸವರಾಜ ಬೊಮ್ಮಾಯಿ)

ಡಾ. ಅಶ್ವಥ್ ನಾರಾಯಣ ಸಿ.ಎನ್.

ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ, ಮತ್ತು ಕೌಶಲ್ಯಾಭಿವೃದ್ಧಿ
ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು
ಮತ್ತು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ ೨೪೨-೨೪೩
೨ನೇ ಮಹಡಿ, ವಿಕಾಸಸೌಧ
ಬೆಂಗಳೂರು - ೫೬೦ ೦೦೧
ದೂರವಾಣಿ ಸಂಖ್ಯೆ : ೦೮೦-೨೨೨೫೪೯೬೫
೦೮೦-೨೨೦೩೪೬೪೭

ದಿನಾಂಕ : ೦೭/೦೩/೨೦೨೨



ಸಂಖ್ಯೆ:ಉಶಿ,ಐಟಿ&ಬಿಟಿ,ವಿ&ತಂ,ಕೌಅಸ/೬೬೦/೨೦೨೧-೨೨

ಶುಭ ಸಂದೇಶ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ಅಂಗವಾಗಿ 'ತಾಡೋಲೆ' ಹೆಸರಿನ ನೆನಪಿನ ಸಂಪುಟವನ್ನು ಹೊರತರುತ್ತಿರುವುದು ಸಂತಸದ ವಿಷಯವಾಗಿದೆ.

ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಸಂಸ್ಕಾರಗಳು ಪ್ರಾಚೀನ ಕಾಲದಿಂದಲೂ ಬೆಳೆದು ಬಂದು ಪರಂಪರೆಯನ್ನು ನಿರ್ಮಿಸಿದೆ. ಕನ್ನಡ ಭಾಷೆ ಆಡಲು ಚಂದ, ಹಾರುವ ಹಕ್ಕಿ ನೋಡಲು ಚಂದ ಎಂಬಂತೆ ರತ್ನನ ಪದಗಳಲ್ಲಿ ಹೊರಹೊಮ್ಮಿರುವ ಕನ್ನಡ ನುಡಿ ಸಂಪದ್ಭರಿತವಾಗಿದೆ.

ಮರೆಯಲಾಗದ ಸಾಮ್ರಾಜ್ಯ ಮುತ್ತು ರತ್ನಗಳನ್ನು ಬಳ್ಳಗಳಿಂದ ಅಳದು ಮಾರಿದ ಸುವರ್ಣ ಸಾಮ್ರಾಜ್ಯದ ರಾಜಧಾನಿ ಹಂಪಿಯ ಹೆಸರನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ನಾಮಂಕಿತ ಮಾಡಿರುವುದು ಕನ್ನಡ ನಾಡು ನುಡಿಗೆ ಇನ್ನಷ್ಟು ಮೆರುಗನ್ನು ತಂದಿದೆ.

ಹಸ್ತಪ್ರತಿಗಳು ಕನ್ನಡ ಭಾಷೆ ಜೊತೆಗೆ ಹುಟ್ಟಿಕೊಂಡಿದೆ. ಹಳೆಗನ್ನಡ, ಮಧ್ಯಕನ್ನಡ, ಹೊಸಗನ್ನಡದ ಕಾಲದ ಆದಿಯಲ್ಲಿ ಹಸ್ತಪ್ರತಿಗಳ ಗ್ರಂಥಗಳು ಅತೀ ಪ್ರಾಮುಖ್ಯತೆಯನ್ನು ಹೊಂದಿದ್ದವು. ಇತ್ತೀಚಿಗೆ ಆಧುನಿಕತೆ ಬೆಳೆದಂತೆಲ್ಲಾ ಹಸ್ತಪ್ರತಿಗಳ ಬದಲಾಗಿ ನಾವಿನ್ಯತೆ ಪ್ರತಿಗಳು ಉದ್ಭವವಾಗಿರುತ್ತವೆ. ಆದರೂ ಕೈಬರಹದ ಪ್ರತಿಗಳು ಈಗಲೂ ವಿಶೇಷತೆಯನ್ನು ಹೊಂದಿವೆ. ಇಂತಹ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ೨೫ ವರ್ಷಗಳು ಸಂಧಿರುವುದು ನಿಜಕ್ಕೂ ಪ್ರಂಶನಿಯವಾಗಿದೆ.

ರಜತ ಮಹೋತ್ಸವ ಸಂದರ್ಭದಲ್ಲಿ ಹೊರ ತರುತ್ತಿರುವ ಹಸ್ತಪ್ರತಿ ನೆನಪಿನ ಸಂಪುಟದಲ್ಲಿ ಸಹ ಪ್ರಬಂಧಗಳು ಹಸ್ತಪ್ರತಿ ಗ್ರಂಥ ಸಂಪಾದನೆಗಳು ವಿಭಾಗದ ಯೋಜನೆಗಳು ಕಾರ್ಯಕ್ರಮಗಳು ಪುಸ್ತಕ ಪ್ರಕಟಣೆಗಳನ್ನು ಒಳಗೊಂಡ ಈ ನೆನಪಿನ ಸಂಪುಟದಲ್ಲಿ ಹಸ್ತಪ್ರತಿಶಾಸ್ತ್ರದ ಮಹತ್ವ ಉದ್ದೇಶ ಮತ್ತು ಇಂದಿನ ಪೀಳಿಗೆಗೆ ಉಪಯುಕ್ತವಾದಂತಹ ಅಂಶಗಳನ್ನು ಒಳಗೊಂಡ ಸಂಪುಟವು ರಚಿತವಾಗಿ ಎಲ್ಲರಿಗೂ ಮಾರ್ಗದರ್ಶಕವಾಗಲೆಂದು ಶುಭ ಹಾರೈಸುತ್ತೇನೆ.


(ಡಾ. ಅಶ್ವಥ್ ನಾರಾಯಣ ಸಿ.ಎನ್.)

Ministry of Culture
Government of India

ಡಾ. ಚಂದ್ರಶೇಖರ ಕಂಬಾರ
ಅಧ್ಯಕ್ಷರು

Sahitya Akademi
(National Academy of Letters
Rabindra Bhavan, 35, Ferozaeshah Road
New Delhi 110 001

೨೫.೮.೨೦೨೨



ಶುಭ ಸಂದೇಶ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಬರವಣಿಗೆಯ ಪ್ರಾಚೀನ ಪರಿಕರಗಳಾದ ತಾಡೋಲೆ, ಕೋರಿಕಾಗದ, ಕಡತಗಳ ಸಂಗ್ರಹ-ಸಂರಕ್ಷಣೆ-ಪ್ರಕಟಣ ಕಾರ್ಯದಲ್ಲಿ ಸಾರ್ಥಕವಾದ ಕಾರ್ಯಗಳನ್ನು ಮಾಡುತ್ತ ಬಂದಿರುವುದು ಸಂತೋಷದ ಸಂಗತಿ. ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ, ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ, ಹಳಗನ್ನಡ ಸಾಹಿತ್ಯ ಬೋಧನ ತರಬೇತಿ ಶಿಬಿರಗಳನ್ನು ಕರ್ನಾಟಕದಾದ್ಯಂತ ಏರ್ಪಡಿಸಿ ಹಸ್ತಪ್ರತಿಗಳ ಮಹತ್ವವನ್ನು ಜನತೆಗೆ ತಲುಪಿಸಲಾಗುತ್ತಿದೆ. ರಜತ ಮಹೋತ್ಸವದ ಸವಿನೆನಪಿಗಾಗಿ 'ತಾಡೋಲೆ' ಹೆಸರಿನ ಸ್ಮರಣ ಗ್ರಂಥವನ್ನು ಹೊರತರುತ್ತಿರುವುದು, ಜೊತೆಗೆ ಪುಸ್ತಕಗಳ ಪ್ರಕಟಣೆ, ಹಳೆಯ ವಿದ್ಯಾರ್ಥಿಗಳ ದತ್ತಿನಿಧಿ ಸ್ಥಾಪನೆ, ವಿಚಾರ ಸಂಕಿರಣ ಇತ್ಯಾದಿ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಲಿ, ಶ್ರದ್ಧೆ ಮತ್ತು ಪರಿಶ್ರಮ ಬಯಸುವ ಈ ಕೈಂಕರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಿಗೆ ಹಾರ್ದಿಕ ಅಭಿನಂದನೆಗಳು.

(ಡಾ. ಚಂದ್ರಶೇಖರ ಕಂಬಾರ)

ಡಾ. ಎ. ಮುರಿಗೆಪ್ಪ
ವಿಶ್ರಾಂತ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭೨, ಎಸ್.ಎಫ್.ಎಸ್, ೪೦೭, ೪ನೇ
ಹಂತ, ಯಲಹಂಕ ಉಪನಗರ,
ಬೆಂಗಳೂರು ೫೬೦ ೦೬೪



ಶುಭ ಹಾರೈಕೆಗಳು

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗವು ಸಾರ್ಥಕ ೨೫ ವರ್ಷಗಳನ್ನು ಪೂರೈಸುತ್ತಿದೆ. ಈವರೆಗೆ ಕನ್ನಡ ಹಸ್ತಪ್ರತಿ ಮತ್ತು ಹಳೆಗನ್ನಡ ಸಾಹಿತ್ಯವನ್ನು ಮುಖ್ಯವಾಹಿನಿಯಾಗಿರಿಸಿಕೊಂಡು ಹಸ್ತಪ್ರತಿಗಳ ಸಂಗ್ರಹಣೆ, ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದೆ. ಇತರ ವಿಶ್ವವಿದ್ಯಾಲಯಗಳ ಮತ್ತು ಮಠಮಾನ್ಯಗಳಲ್ಲಿ ಹಸ್ತಪ್ರತಿ ಸಂಗ್ರಹಣೆ, ಸಂರಕ್ಷಣೆಗೆ ಮಾರ್ಗದರ್ಶನ ಮಾಡುತ್ತಾ ಬಂದಿದೆ. ಹಳೆಗನ್ನಡ ಸಾಹಿತ್ಯ ಓದು ಹಾಗೂ ಹಸ್ತಪ್ರತಿ ಸಂಬಂಧಿಸಿದ ಸಮ್ಮೇಳನಗಳು ಮತ್ತು ವಿಶೇಷ ಉಪನ್ಯಾಸಗಳನ್ನು ಹಮ್ಮಿಕೊಳ್ಳುವುದರ ಮೂಲಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕನ್ನಡ ನಾಡಿನ ಒಳಗೆ ಮತ್ತು ಹೊರಗೆ ಪರಿಚಯಿಸಿ ದಾಖಲಿಸುತ್ತಾ ಬಂದಿದೆ. ವಿಭಾಗದ ಪ್ರಾಧ್ಯಾಪಕರು ಸಾಂಘಿಕವಾಗಿ ಹಾಗೂ ವೈಯಕ್ತಿಕವಾಗಿ ಯೋಜನೆಗಳು ಮತ್ತು ಪ್ರಕಟಣೆಗಳನ್ನು ಕೈಗೊಳ್ಳುವುದರ ಮೂಲಕ ವಿಶ್ವವಿದ್ಯಾಲಯದ ಬೆಳವಣಿಗೆಗೆ ಕಾರಣವಾಗಿದ್ದಾರೆ. ಕನ್ನಡ ವಿಶ್ವವಿದ್ಯಾಲಯವು ನ್ಯಾಕ್ ಸಮಿತಿಯ ಪರೀಕ್ಷೆಗೆ ಒಳಗಾಗಿ 'ಎ'ಶ್ರೇಣಿ ಪಡೆಯಲು ವಿಭಾಗದ ಪ್ರಾಧ್ಯಾಪಕರು ಮತ್ತು ಆಡಳಿತ ಸಿಬ್ಬಂದಿಗಳು ಶ್ರಮವಹಿಸಿ ದುಡಿದಿದ್ದಾರೆ. ವಿಭಾಗದ ೨೫ರ ಸಂದರ್ಭದಲ್ಲಿ ವಿಭಾಗದ ಎಲ್ಲಾ ಸಿಬ್ಬಂದಿವರ್ಗಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಡಾ. ಎ. ಮುರಿಗೆಪ್ಪ)

ಡಾ. ಮಲ್ಲಿಕಾ ಎಸ್. ಘಂಟಿ
ವಿಶ್ರಾಂತ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಂಗರಗಿ
ಬಾದಾಮಿ ತಾಲೂಕು
ಬಾಗಲಕೋಟೆ ಜಿಲ್ಲೆ



ಶುಭ ಸಂದೇಶ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಆರಂಭಗೊಂಡು ಇಪ್ಪತ್ತೈದು ವರ್ಷಗಳಾಗುತ್ತಲಿವೆ. ಈ ಅವಧಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಂಶೋಧನೆಗೆ ಬಹುಮುಖ್ಯ ಆಕರಗಳಾದ ತಾಡೋಲೆ – ಕೋರಿಕಾಗದ – ಕಡತರೂಪದ ಸಾಮಗ್ರಿಗಳ ಸರ್ವೇಕ್ಷಣೆ – ಸಂಗ್ರಹ, ಸಂರಕ್ಷಣೆ – ಸಂಪಾದನೆ, ಅಧ್ಯಯನ, ಪ್ರಕಟಣೆ – ಹೀಗೆ ಎಲ್ಲಾ ಹಂತಗಳಲ್ಲಿ ವಿಭಾಗದ ಪ್ರಾಧ್ಯಾಪಕರು ಕಾರ್ಯನಿರ್ವಹಿಸುತ್ತ ಬಂದಿದ್ದಾರೆ. ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆಯಡಿ ಎಪ್ಪತ್ತಕ್ಕೂ ಹೆಚ್ಚು ಗ್ರಂಥಗಳು ಪ್ರಕಟಗೊಂಡಿವೆ. ಹಸ್ತಪ್ರತಿ ಸಮ್ಮೇಳನ, ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ, ಹಳಗನ್ನಡ ಸಾಹಿತ್ಯ ಬೋಧನ ತರಬೇತಿ ಶಿಬಿರ, ವಿಶೇಷ ಉಪನ್ಯಾಸಗಳನ್ನು ನಾಡಿನಾದ್ಯಂತ ಏರ್ಪಡಿಸುವುದರ ಮೂಲಕ ಹಸ್ತಪ್ರತಿಗಳ ಬಗ್ಗೆ ಜನಜಾಗೃತಿ ಮೂಡಿಸುವ ಕೆಲಸ ನಿರಂತರವಾಗಿದೆ.

ಇಪ್ಪತ್ತೈದು ವರ್ಷಗಳು ಪೂರೈಸಿದ ಹಿನ್ನೆಲೆಯಲ್ಲಿ ರಜತ ಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಸಂತೋಷದ ವಿಷಯ. ಈ ಸಂದರ್ಭದಲ್ಲಿ ತಾಡೊಲೆ – ರಜತ ಮಹೋತ್ಸವದ ನೆನಪಿನ ಸಂಪುಟ, ಹಸ್ತಪ್ರತಿಶಾಸ್ತ್ರ ವಿಭಾಗದ ಹಿರಿಯ ವಿದ್ಯಾರ್ಥಿಗಳ ದತ್ತಿನಿಧಿ ಸ್ಥಾಪನೆ, ಇಪ್ಪತ್ತೈದು ಪುಸ್ತಕಗಳ ಲೋಕಾರ್ಪಣೆ ಸಮಾರಂಭ ಯಶಸ್ವಿಯಾಗಲಿ. ಮುಂದಿನ ದಿನಮಾನಗಳಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗವು ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದು ಹಾರೈಸುತ್ತೇನೆ.

(ಡಾ. ಮಲ್ಲಿಕಾ ಎಸ್. ಘಂಟಿ)

ಡಾ. ಸ. ಚಿ. ರಮೇಶ
ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಶುಭ ಹಾರೈಕೆ

ರಜತ ಮಹೋತ್ಸವದ ವರ್ಷಾಚರಣೆಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಅನೇಕ ರಚನಾತ್ಮಕ ಸಂಶೋಧನ ಯೋಜನೆಗಳನ್ನು ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಚಾಚೂ ತಪ್ಪದೇ ಆಯೋಜನೆ ಮಾಡಿಕೊಂಡು ಬಂದಿದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ವಿಭಾಗವು ಹಸ್ತಪ್ರತಿಶಾಸ್ತ್ರ, ಗ್ರಂಥ ಸಂಪಾದನೆ, ಹಳಗನ್ನಡ ಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯವಾದ ಕಾರ್ಯವನ್ನು ಮಾಡುತ್ತ ಬರುತ್ತಲಿದೆ. ಹಸ್ತಪ್ರತಿಗಳ ಸಂಗ್ರಹ-ಸಂರಕ್ಷಣೆ, ಸೂಚೀಕರಣ-ಸಂಪಾದನೆ, ಅಧ್ಯಯನ-ಪ್ರಕಟಣೆ ಹೀಗೆ ವಿವಿಧ ಆಯಾಮಗಳಿಂದ ವಿಭಾಗದ ಪ್ರಾಧ್ಯಾಪಕ ಬಳಗ ಯೋಜನೆಗಳನ್ನು ಕೈಕೊಂಡಿದೆ. ರಜತ ಮಹೋತ್ಸವದ ನೆನಪಿಗಾಗಿ ಪುಸ್ತಕಗಳ ಪ್ರಕಟಣೆ, ಇಪ್ಪತ್ತೈದು ವಿಶೇಷ ಉಪನ್ಯಾಸ ಸರಣಿ ಕಾರ್ಯಕ್ರಮ, 'ತಾಡೋಲೆ' ನೆನಪಿನ ಸಂಪುಟ ಪ್ರಕಟಣೆ, ಹಸ್ತಪ್ರತಿಶಾಸ್ತ್ರ ವಿಭಾಗದ ಹಿರಿಯ ವಿದ್ಯಾರ್ಥಿಗಳ ದತ್ತಿನಿಧಿ - ಹೀಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ತಾಡೋಲೆ ನೆನಪಿನ ಸಂಪುಟವು ಹಸ್ತಪ್ರತಿಶಾಸ್ತ್ರ ವಿಭಾಗದ ಸಮಗ್ರ ಕಾರ್ಯಚಟುವಟಿಕೆಗಳನ್ನು ಪರಿಚಯಿಸುತ್ತದೆ. ರಜತ ಮಹೋತ್ಸವದ ಸಮಾರಂಭವು ಯಶಸ್ವಿಯಾಗಲಿ ಎಂದು ಶುಭ ಹಾರೈಸುತ್ತೇನೆ.

(ಡಾ. ಸ. ಚಿ. ರಮೇಶ)

ಡಾ. ಎ. ಸುಬ್ಬಣ್ಣ ರೈ
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಶುಭ ಹಾರೈಕೆ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಆರಂಭವಾಗಿ ಇಪ್ಪತ್ತೈದು ವರ್ಷಗಳನ್ನು ಪೂರೈಸಿದೆ. ಆ ಅವಧಿಯಲ್ಲಿ ವಿಭಾಗದ ಪ್ರಾಧ್ಯಪಕರು ಹಸ್ತಪ್ರತಿ ಸರ್ವೇಕ್ಷಣೆ-ಸಂಗ್ರಹ, ಸೂಚೀರಚನೆ-ಸಂಪಾದನೆ, ಅಧ್ಯಯನ-ಪ್ರಕಟಣೆ ಹೀಗೆ ವಿವಿಧ ನೆಲೆಗಳಲ್ಲಿ ಕಾರ್ಯಕೈಕೊಂಡಿದ್ದಾರೆ. ಹಸ್ತಪ್ರತಿ ಸಮ್ಮೇಳನ, ತರಬೇತಿ ಶಿಬಿರ, ಹಳಗನ್ನಡ ಬೋಧನ ತರಬೇತಿ ಶಿಬಿರಗಳನ್ನು ಪ್ರತಿವರ್ಷ ಆಯೋಜಿಸುವುದರ ಮೂಲಕ ಹಸ್ತಪ್ರತಿಶಾಸ್ತ್ರ – ಗ್ರಂಥಸಂಪಾದನಶಾಸ್ತ್ರದ ಎಲ್ಲೆಯನ್ನು ವಿಸ್ತರಿಸಲಾಗಿದೆ. ರಜತ ಮಹೋತ್ಸವದ ನೆನಪಿಗಾಗಿ ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆಯಡಿ ಇಪ್ಪತ್ತು ಪುಸ್ತಕಗಳ ಲೋಕಾರ್ಪಣೆ, ತಾಡೋಲೆ ಹೆಸರಿನ ಸಂಪುಟದ ಪ್ರಕಟಣೆ, ವಿಭಾಗದ ವಿದ್ಯಾರ್ಥಿಗಳು ನೀಡಿದ ಧನಸಹಾಯದಿಂದ ಹಿರಿಯ ವಿದ್ಯಾರ್ಥಿಗಳ ಹೆಸರಿನಲ್ಲಿ ದತ್ತಿನಿಧಿ ಸ್ಥಾಪನೆ ಮೊದಲಾದ ಕಾರ್ಯಕ್ರಮಗಳನ್ನು ವಿಭಾಗದ ಪ್ರಾಧ್ಯಾಪಕರು ಅನುಷ್ಠಾನಗೊಳಿಸುತ್ತಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಲಿ ಎಂದು ಶುಭ ಹಾರೈಸುತ್ತೇನೆ.

(ಡಾ. ಎ. ಸುಬ್ಬಣ್ಣ ರೈ)

ಹಸ್ತಪ್ರತಿಶಾಸ್ತ್ರ ವಿಭಾಗವನ್ನು ಸಾಂಸ್ಥಿಕವಾಗಿ ರೂಪಿಸಿದ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು


ಡಾ. ಚಂದ್ರಶೇಖರ ಕಂಬಾರ


ಡಾ. ಎಂ. ಎಂ. ಕಲಬುರ್ಗಿ


ಡಾ. ಎಚ್. ಜೆ. ಲಕ್ಕಪ್ಪಗೌಡ


ಡಾ. ಬಿ. ಎ. ವಿವೇಕ ರೈ


ಡಾ. ಎ. ಮುರಿಗೆಪ್ಪ


ಡಾ. ಹಿ. ಚಿ. ಬೋರಲಿಂಗಯ್ಯ


ಡಾ. ಮಲ್ಲಿಕಾ ಎಸ್. ಘಂಟಿ


ಡಾ. ಸ. ಚಿ. ರಮೇಶ

ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು



ಪ್ರೊ. ಎ. ವಿ. ನಾವಡ



ಡಾ. ವೀರೇಶ ಬಡಿಗೇರ



ಡಾ. ಎಫ್. ಟಿ. ಹಳ್ಳಿಕೇರಿ



ಡಾ. ಕೆ. ರವೀಂದ್ರನಾಥ



ಡಾ. ಎಸ್.ಎಸ್.ಅಂಗಡಿ



ಡಾ. ಎಸ್. ಆರ್. ಚನ್ನವೀರಪ್ಪ

ವಿಭಾಗಕ್ಕೆ ಗಣ್ಯಮಾನ್ಯರ ಭೇಟಿ













ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳು













ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರಗಳು













ಡಿ.ಎಲ್. ನರಸಿಂಹಾಚಾರ್ ದತ್ತಿನಿಧಿ ಪ್ರಯುಕ್ತ
ಹಳಗನ್ನಡ ಸಾಹಿತ್ಯ ಬೋಧನ ತರಬೇತಿ ಶಿಬಿರಗಳು













ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ













ವಿಚಾರ ಸಂಕಿರಣ ಮತ್ತು ವಿಶೇಷ ಉಪನ್ಯಾಸಗಳು














ಹಳೆಯ ಹೊನ್ನು : ಸಂವಾದ ಕಾರ್ಯಕ್ರಮಗಳು














ಪುಸ್ತಕಗಳ ಲೋಕಾರ್ಪಣೆ













ಸನ್ಮಾನ ಕಾರ್ಯಕ್ರಮ













ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಕಾಲೇಜು ವಿದ್ಯಾರ್ಥಿಗಳ ಭೇಟಿ













ಹಸ್ತಪ್ರತಿಶಾಸ್ತ್ರ ವಿಭಾಗ: ರಜತ ಮಹೋತ್ಸವದ ಸಂಭ್ರಮ

ಡಾ. ಎಫ್.ಟಿ. ಹಳ್ಳಿಕೇರಿ
ಮುಖ್ಯಸ್ಥರು, ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನಕ್ಕೆ "ಹಸ್ತಪ್ರತಿ"ಗಳು ಬಹುಮುಖ್ಯ ಆಕರಗಳಾಗಿವೆ. ತಾಡೋಲೆ-ಕೋರಿಕಾಗದ-ಕಡತ ರೂಪದ ಈ ಹಸ್ತಪ್ರತಿಗಳಿಗೆ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವಿದೆ; ಪರಂಪರೆಯಿದೆ. ಈ ಇತಿಹಾಸ ಮತ್ತು ಪರಂಪರೆಯನ್ನು ಅವಲೋಕನ ಮಾಡಿದರೆ ನಮ್ಮ ಕವಿಗಳ ಪ್ರತಿಭೆ-ಪಾಂಡಿತ್ಯ ಮತ್ತು ಅವರಿಂದ ರಚನೆಗೊಂಡ ಸಾಹಿತ್ಯದ ವೈವಿಧ್ಯತೆ-ವಿಶಿಷ್ಟತೆ ಎಂಥದ್ದು ಎಂಬುದು ನಮಗೆ ಗೊತ್ತಾಗುತ್ತದೆ. ಶ್ರೀವಿಜಯನಿಂದ ಮುದ್ದಣ್ಣನವರೆಗಿನ ಅವಧಿಯಲ್ಲಿ ರಚನೆಗೊಂಡ ಕಾವ್ಯ-ಪುರಾಣ-ಶಾಸ್ತ್ರ ಗ್ರಂಥಗಳೆಲ್ಲವೂ ಉಳಿದುಕೊಂಡು ಬಂದದ್ದು ಈ ಹಸ್ತಪ್ರತಿಗಳ ಮೂಲಕವೇ. ಹೀಗಾಗಿ ಆಧುನಿಕಪೂರ್ವ ಕನ್ನಡ ಸಾಹಿತ್ಯ ಸಂಸ್ಕೃತಿ ಅಧ್ಯಯನದ ಸಂದರ್ಭದಲ್ಲಿ ಈ ಹಸ್ತಪ್ರತಿಗಳಿಗೆ ಚಾರಿತ್ರಿಕ ಮಹತ್ವವಿದೆ. ಇಂಥ ಹಸ್ತಪ್ರತಿಗಳ ಕುರಿತು ಸರ್ವೇಕ್ಷಣೆ-ಸಂಗ್ರಹ, ಸಂರಕ್ಷಣೆ-ಸೂಚೀ ರಚನೆ, ಪರಿಷ್ಕರಣೆ-ಪ್ರಕಟಣೆ, ಅಧ್ಯಯನ-ಅಧ್ಯಾಪನ ಹೀಗೆ ವಿವಿಧ ಆಯಾಮಗಳಿಂದ ಅಧ್ಯಯನಗಳು ನಡೆದಿವೆ; ನಡೆಯುತ್ತಲಿವೆ. ಇದರಿಂದಾಗಿ ಲಕ್ಷೋಪಲಕ್ಷ ಹಸ್ತಪ್ರತಿಗಳು ಶೋಧಗೊಂಡು ಸಂರಕ್ಷಣೆಗೊಂಡಿವೆ; ಸಾವಿರಾರು ಕವಿಗಳಿಂದ ರಚನೆಗೊಂಡ ಕೃತಿಗಳು ಇಂದಿಗೂ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡಿವೆ. ಆ ಅಸ್ಮಿತೆಯ ಫಲವಾಗಿ ಕನ್ನಡ ಸಾಹಿತ್ಯದ ಆಳ-ಅಗಲ-ವಿಸ್ತಾರ-ಮಹತ್ವ ಗೊತ್ತಾಗುತ್ತಿದೆ. ಈ ಮಹತ್ಕಾರ್ಯದಲ್ಲಿ ನಾಡಿನ ಮಠಮಾನ್ಯಗಳು, ಸರಕಾರಿ ಇಲಾಖೆಗಳು, ಸಾರ್ವಜನಿಕ ಸಂಘಸಂಸ್ಥೆಗಳು, ವಿಶ್ವವಿದ್ಯಾಲಯಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತ ಬರುತ್ತಲಿವೆ. ಅಂಥ ಸಂಸ್ಥೆಗಳಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ "ಹಸ್ತಪ್ರತಿಶಾಸ್ತ್ರ ವಿಭಾಗ"ವು ಒಂದು.

ವಿಭಾಗಕ್ಕೆ ಇಪ್ಪತ್ತೈದು ವರ್ಷ(೧೯೯೫-೨೦೨೧)ಗಳ ತುಂಬು ಯೌವ್ವನ. ಈ ಇಪ್ಪತ್ತೈದು ವರ್ಷಗಳ ಪಯಣದಲ್ಲಿ ವಿಭಾಗದ ಪ್ರಾಧ್ಯಾಪಕರು ನಾಡಿನಾದ್ಯಂತ ಕ್ಷೇತ್ರಕಾರ್ಯದ ಮೂಲಕ ಹಸ್ತಪ್ರತಿಗಳ ಸರ್ವೇಕ್ಷಣ ಕಾರ್ಯ ಕೈಕೊಂಡಿದ್ದಾರೆ. ಐದು ಸಾವಿರಕ್ಕೂ ಹೆಚ್ಚು ತಾಡೋಲೆ-ಕೋರಿಕಾಗದ-ಕಡತ ರೂಪದ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಇವುಗಳ ಸಂರಕ್ಷಣೆಗಾಗಿ ಒಂದು ಸುಸಜ್ಜಿತವಾದ "ಹಸ್ತಪ್ರತಿ ಭಂಡಾರ"ವನ್ನು ಸ್ಥಾಪಿಸಲಾಗಿದೆ. ಧೂಳು-ಕ್ರಿಮಿ-ಕೀಟಗಳು ಸೋಕದಂತೆ ಹಸ್ತಪ್ರತಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂರಕ್ಷಣೆ ಮಾಡಲಾಗಿದೆ. ಕಟ್ಟಿಗೆಯ ಫಲಕಗಳಲ್ಲಿ ಹಸ್ತಪ್ರತಿಗಳನ್ನಿಟ್ಟು ದಾರದಿಂದ ಬಂಧುರವಾಗಿ ಕಟ್ಟಲಾಗಿದೆ. ತಾಡೋಲೆ ಪ್ರತಿಗಳಿಗೆ ಸಿಟ್ರೆನಲ್ ಆಯಿಲ್ ಲೇಪಿಸಿ ಸಂರಕ್ಷಿಸಲಾಗುತ್ತಿದೆ.

ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಹಸ್ತಪ್ರತಿಗಳನ್ನು ಸ್ಕ್ಯಾನ್ ಮಾಡುವುದರ ಮೂಲಕ ಡಿಜಿಟಲೀಕರಣ ಮಾಡಲಾಗುತ್ತದೆ. ಹೀಗೆ ಸಂರಕ್ಷಣೆಗೊಳಪಟ್ಟ ಹಸ್ತಪ್ರತಿಗಳ ವಿವರಣಾತ್ಮಕ ಸೂಚೀಗಳನ್ನು ತಯಾರಿಸಿ, ಸಂಪುಟಗಳಲ್ಲಿ ಪ್ರಕಟಿಸಲಾಗುತ್ತಿದೆ. ಈಗಾಗಲೇ ಐದು ಸಂಪುಟಗಳು ಪ್ರಕಟವಾಗಿವೆ. ಇವುಗಳಿಂದಾಗಿ ಕೃತಿ ಮತ್ತು ಪ್ರತಿಗಳ ಸಮಗ್ರ ಮಾಹಿತಿ ಅಧ್ಯಯನಾಸಕ್ತರಿಗೆ ಲಭ್ಯವಾದಂತಾಗಿದೆ. ಇನ್ನು ಈ ಕಾರ್ಯಗಳ ಜೊತೆಗೆ ಕೃತಿಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ವಿಭಾಗದ ಪ್ರಾಧ್ಯಾಪಕರು ಸಾಕಷ್ಟು ಕೆಲಸ ಮಾಡಿದ್ದಾರೆ. ಉಪೇಕ್ಷೆಗೆ ಒಳಗಾಗಿದ್ದ ಮತ್ತು ಅಪ್ರಕಟಿತ ರೂಪದ ಅನೇಕ ಕಾವ್ಯ-ಪುರಾಣ-ಶಾಸ್ತ್ರ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸುವ ಕೆಲಸ ಮುಂದುವರೆದಿದೆ. ಈಗಾಗಲೇ ಚಿದಾನಂದಾವಧೂತ ಚಾರಿತ್ರ್ಯ, ಹಳೆಯ ಲಾವಣಿಗಳು, ನವಮೋಹನ ತರಂಗಿಣಿ, ಮಾಧವಾಂಕ ಚರಿತೆ, ಹಾಲಸಿದ್ಧೇಶ್ವರ ಸಾಂಗತ್ಯ, ಕೋಕಶಾಸ್ತ್ರ, ಬಸವಯುಗದ ವಚನೇತರ ಸಾಹಿತ್ಯ, ಉದ್ಧರಣೆ ಸಾಹಿತ್ಯ, ಬಸವ ಕಲ್ಪದ್ರುಮಂ, ವರರಮ್ಯ ರತ್ನಾಕರ ಮೊದಲಾದ ಕೃತಿಗಳು ಹಸ್ತಪ್ರತಿಯ ಒಡಲಿನಿಂದ ಮೊದಲ ಬಾರಿಗೆ ಬೆಳಕುಕಂಡಿವೆ.

ಪರಿಷ್ಕರಣೆ-ಪ್ರಕಟಣೆಯ ಜೊತೆಜೊತೆಗೆ ಹಸ್ತಪ್ರತಿಗಳನ್ನು ವಿವಿಧ ಶಿಸ್ತುಗಳ ಮೂಲಕ ಅಧ್ಯಯನಕ್ಕೊಳಪಡಿಸುವ ಕೆಲಸವೂ ಅಷ್ಟೇ ಸಮರ್ಪಕವಾಗಿ ನಡೆಯುತ್ತಲಿದೆ. ಸಾಮೂಹಿಕ ಮತ್ತು ವೈಯಕ್ತಿಕ ಯೋಜನೆಗಳಡಿಯಲ್ಲಿ ಪ್ರಾಧ್ಯಾಪಕರು ಕಾಲಬದ್ಧವಾಗಿ ಯೋಜನೆಗಳನ್ನು ಪೂರೈಸುತ್ತಲಿದ್ದಾರೆ. ಸಾಮೂಹಿಕ ಯೋಜನೆಯಡಿ "ಹಸ್ತಪ್ರತಿಗಳ ಸರ್ವೇಕ್ಷಣೆ-ಸಂಗ್ರಹ-ಸಂರಕ್ಷಣೆ-ಸೂಚೀರಚನೆ"ಯನ್ನು ಕೈಗೊಳ್ಳಲಾಗಿದೆ. ಇದು ನಿರಂತರವಾಗಿ ನಡೆಯುವಂಥ ಯೋಜನೆ. ಹಸ್ತಪ್ರತಿಗಳ ಡಿಜಿಟಲೈಜೇಷನ್, ಹಸ್ತಪ್ರತಿ ಲಿಪಿಕಾರರ ಚರಿತ್ರೆ, ಕನ್ನಡ ದಾಖಲು ಸಾಹಿತ್ಯ, ಕನ್ನಡ ಹಸ್ತಪ್ರತಿಗಳ ಭಾಷಿಕ ರಚನೆ, ಹಾಲುಮತ ಸಂಸ್ಕೃತಿ: ದಾಖಲೀಕರಣ ಮತ್ತು ವಿಶ್ಲೇಷಣೆ, ಕನ್ನಡ ಮತ್ತು ಮರಾಠಿ ಮೋಡಿಲಿಪಿ ದಾಖಲೆಗಳ ಗಣಕೀಕರಣ ಮೊದಲಾದ ಯೋಜನೆಗಳನ್ನು ಪೂರೈಸಲಾಗಿದೆ. ಇಂತಹ ಯೋಜನೆಗಳಿಗೆ ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ ಸರಕಾರ, ಭಾರತ ಸರಕಾರ, ವಿಶ್ವವಿದ್ಯಾಲಯ ಧನಸಹಾಯ ಆಯೋಗ, ಪತ್ರಾಗಾರ ಇಲಾಖೆ, ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್ಸ್, ಭಾರತೀಯ ಭಾಷಾ ಸಂಸ್ಥಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳಂಥ ಅನೇಕ ಸರಕಾರ-ಸಾರ್ವಜನಿಕ ಸಂಘಸಂಸ್ಥೆಗಳು ಅನುದಾನವನ್ನು ಮಂಜೂರು ಮಾಡಿವೆ.

ಈ ಯೋಜನೆಗಳಿಗೆ ಪೂರಕವಾಗಿ ಪ್ರತಿವರ್ಷ ವಿಚಾರ ಸಂಕಿರಣ, ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ, ಹಸ್ತಪ್ರತಿ ಜಾಗೃತಿ ಮತ್ತು ತರಬೇತಿ ಶಿಬಿರ, ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ, ಡಿ.ಎಲ್.ನರಸಿಂಹಾಚಾರ್ ದತ್ತಿನಿಧಿ ಅಂಗವಾಗಿ ಹಳಗನ್ನಡ ಸಾಹಿತ್ಯ ಬೋಧನ ತರಬೇತಿ ಶಿಬಿರ, ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಚಾಚೂ ತಪ್ಪದೇ ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ವಿದ್ಯಾರ್ಥಿಗಳಿಗಾಗಿ ಹಳೆಯ ಹೊನ್ನು ಹೆಸರಿನ ಚಿಂತನ ವೇದಿಕೆಯನ್ನು ಬಹುಹಿಂದೆಯೇ ಆರಂಭಿಸಲಾಗಿದೆ. ಇನ್ನು ಪುಸ್ತಕ ಪ್ರಕಟಣೆಯಲ್ಲಿಯೂ ಹಸ್ತಪ್ರತಿಶಾಸ್ತ್ರ ವಿಭಾಗದ ಸಾಧನೆ ಗಮನಾರ್ಹವೆನಿಸಿದೆ. "ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆ"ಯಡಿ ಪ್ರಕಟಗೊಂಡ ಅರುವತ್ತು ಪುಸ್ತಕಗಳು ಈ ಕ್ಷೇತ್ರದ ಎಲ್ಲೆಯನ್ನು ವಿಸ್ತಾರಗೊಳಿಸಿವೆ. ವಿಭಾಗದ ದಶಮಾನೋತ್ಸವ(೨೦೦೬)ದ ಸಂದರ್ಭದಲ್ಲಿ ಏಕಕಾಲಕ್ಕೆ ಹತ್ತು ಪುಸ್ತಕಗಳ ಪ್ರಕಟಣೆ, ಹತ್ತು ಜನ ಹಸ್ತಪ್ರತಿ ತಜ್ಞರಿಗೆ ಸನ್ಮಾನ, ಹತ್ತು ಜನ ಹಸ್ತಪ್ರತಿ ತಜ್ಞರ ಭಾವಚಿತ್ರ ಅನಾವರಣ, ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜನೆ, 'ಕವಳಿಗೆ' ಹೆಸರಿನ ನೆನಪಿನ ಸಂಪುಟ ಪ್ರಕಟಣೆ -ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಹೀಗೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಹಸ್ತಪ್ರತಿಗಳನ್ನು ವಿವಿಧ ಆಯಾಮಗಳಿಂದ ಅಧ್ಯಯನಕ್ಕೆ ಒಳಪಡಿಸಿ, ಅದರ ಫಲಿತಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುತ್ತ ಬರುತ್ತಲಿರುವುದು ಈ ವಿಭಾಗದ ಸಾಧನೆಯಾಗಿದೆ.

ಇಂದು ಎಲ್ಲ ಕ್ಷೇತ್ರಗಳ ಮೇಲೆ ಜ್ಞಾನ-ವಿಜ್ಞಾನ-ತಂತ್ರಜ್ಞಾನಗಳ ಪ್ರಭಾವ ಸಾಕಷ್ಟು ಬೀರುತ್ತಲಿವೆ. ಇದಕ್ಕೆ ಹಸ್ತಪ್ರತಿಶಾಸ್ತ್ರವೂ ಹೊರತಾಗಿಲ್ಲ. ತಾಡೋಲೆ, ಕೋರಿಕಾಗದ ಕಡತಗಳಂಥ ಸಾಮಗ್ರಿಗಳು ನಶಿಸಿಹೋಗುತ್ತಿವೆ. ಭೌತಿಕವಾಗಿ ಇಂಥ ಸಾಮಗ್ರಿಗಳನ್ನು ಸಂರಕ್ಷಿಸಲು ನಮಗೆ ಕಷ್ಟವಾಗುತ್ತಿದೆ. ಹೀಗಾಗಿ ಆಧುನಿಕ ತಂತ್ರಜ್ಞಾನದ ನೆರವಿನಿಂದ ಅವುಗಳಲ್ಲಿರುವ ಪಠ್ಯವನ್ನು ಗಣಕೀಕರಣಕ್ಕೊಳಪಡಿಸುವುದರ ಮೂಲಕ ಸಂರಕ್ಷಣೆಗೆ ಮುಂದಾಗಿದ್ದೇವೆ. ಬರುವ ದಿನಗಳಲ್ಲಿ ಈ ಕ್ಷೇತ್ರವನ್ನು ಇನ್ನೂ ಹೇಗೆ ವಿಸ್ತರಿಸಬೇಕು ಎಂಬ ಪ್ರಶ್ನೆ ನಮ್ಮ ಮುಂದಿದೆ. ನಾಡಿನ ವಿದ್ವಾಂಸರ ಸಲಹೆ ಸಹಕಾರವನ್ನು ಪಡೆದುಕೊಂಡು ನಾವು ಅನೇಕ ರಚನಾತ್ಮಕ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕೆನ್ನುವ ಯೋಚನೆ ನಮ್ಮದಾಗಿದೆ.

ವಿಭಾಗವು ಆರಂಭವಾಗಿ ಈಗ ಇಪ್ಪತ್ತೈದು ವರ್ಷಗಳನ್ನು ಪೂರೈಸುತ್ತಲಿದೆ. ಹೀಗಾಗಿ ೨೦೨೧-೨೨ನೆಯ ಶೈಕ್ಷಣಿಕ ಅವಧಿಯನ್ನು "ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವ ವರ್ಷ" ಎಂದು ನಾವು ಘೋಷಿಸಿದ್ದೇವೆ. ಈ ಮಹೋತ್ಸವದ ನೆನಪಿಗಾಗಿ ಇಪ್ಪತ್ತೈದು ಆನಲೈನ್ ವಿಶೇಷ ಸರಣಿ ಉಪನ್ಯಾಸ ಕಾರ್ಯಕ್ರಮ, ಇಪ್ಪತ್ತೈದು ಪುಸ್ತಕಗಳ ಪ್ರಕಟಣೆ, ರಾಷ್ಟ್ರೀಯ ವಿಚಾರ ಸಂಕಿರಣ, ನೆನಪಿನ ಸಂಪುಟ, ದತ್ತಿನಿಧಿ ಸ್ಥಾಪನೆ -ಹೀಗೆ ಹತ್ತು ಹಲವು ವಿಧಾಯಕ ಕಾರ್ಯಕ್ರಮಗಳನ್ನು ಆಯೋಜಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಅಂಥ ಯೋಜನೆಗಳ ಒಂದು ಭಾಗವಾಗಿ ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆಯಲ್ಲಿ ಎಪ್ಪತ್ತೊಂದನೆಯ ಪುಸ್ತಕವಾಗಿ ಪ್ರಕಟಗೊಳ್ಳುತ್ತಿದೆ, ತಾಡೋಲೆ(ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವ ನೆನಪಿನ ಸಂಪುಟ).

ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ನೆನಪಿಗಾಗಿ ಪುಸ್ತಕ ಪ್ರಕಟಣೆ, ನೆನಪಿನ ಸಂಪುಟ, ದತ್ತಿನಿಧಿ ಸ್ಥಾಪನೆ, ವಿಶೇಷ ಉಪನ್ಯಾಸ ಸರಣಿ ಕಾರ್ಯಕ್ರಮ, ವಿಚಾರ ಸಂಕಿರಣ ಮೊದಲಾದ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ, ರಜತ ಮಹೊತ್ಸವದ ನೆನಪಿನ "ತಾಡೋಲೆ" ಹೆಸರಿನ ಸಂಪುಟ ಈಗ ಪ್ರಕಟಗೊಳ್ಳುತ್ತಿದೆ. ಹಸ್ತಪ್ರತಿಶಾಸ್ತ್ರ ವಿಭಾಗದ ಈವರೆಗಿನ ಸಂಶೋಧನ ಯೋಜನೆಗಳು, ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ವಿವರಗಳನ್ನು ಈ ಸಂಪುಟದಲ್ಲಿ ದಾಖಲಿಸಲಾಗಿದೆ. ಹಸ್ತಪ್ರತಿಶಾಸ್ತ್ರ ವಿಭಾಗದ ಸ್ಥಾಪನೆ, ಸ್ವರೂಪ ಮತ್ತು ಉದ್ದೇಶಗಳು, ಪ್ರಾಧ್ಯಾಪಕರು ಕೈಕೊಂಡ ವಿಭಾಗ ಮತ್ತು ವೈಯಕ್ತಿಕ ಸಂಶೋಧನ ಯೊಜನೆಗಳ ಮಾಹಿತಿಗಳು, ಆಯೋಜಿಸಿದ ಸಮ್ಮೇಳನ, ಶಿಬಿರ, ಕಮ್ಮಟ, ಉಪನ್ಯಾಸ ಕಾರ್ಯಕ್ರಮಗಳ ವಿವರಗಳನ್ನು ಒಳಗೊಂಡಿದೆ. ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆಯಡಿ ಪ್ರಕಟವಾದ ಪುಸ್ತಕಗಳ ಅವಲೋಕನ, ಪ್ರಾಧ್ಯಾಪಕರ ಸಾಧನೆಗಳು, ಪಿಎಚ್.ಡಿ. ಮತ್ತು ಎಂ.ಫಿಲ್ ಪದವಿ ವಿವರಗಳು, ವಿಭಾಗದ ಬಗ್ಗೆ ಗಣ್ಯಮಾನ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಈ ಸಂಪುಟವು ಒಳಗೊಂಡಿದೆ. ವಿಭಾಗದ ಈವರೆಗಿನ ಕಾರ್ಯಕ್ರಮಗಳ ಆಯ್ದ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ಹೀಗೆ 'ತಾಡೋಲೆ' ಸಂಪುಟವು ಹಸ್ತಪ್ರತಿಶಾಸ್ತ್ರ ವಿಭಾಗದ ಇಪ್ಪತ್ತೈದು ವರ್ಷಗಳ ಸಮಗ್ರ ಕಾರ್ಯಚಟುವಟಿಕೆಗಳ ಪರಿಚಯವನ್ನು ಮಾಡಿಕೊಡುತ್ತದೆ.

ಈ ಸಂಪುಟದ ಗೌರವ ಸಂಪಾದಕರಾಗಿ ನಮಗೆ ಮಾರ್ಗದರ್ಶನ ನೀಡಿದ ಕುಲಪತಿಗಳಾದ ಡಾ. ಸ.ಚಿ.ರಮೇಶ ಅವರಿಗೆ ಮತ್ತು ಆಡಳಿತಾತ್ಮಕವಾಗಿ ಎಲ್ಲ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಿದ ಕುಲಸಚಿವರಾದ ಡಾ. ಸುಬ್ಬಣ್ಣ ರೈ ಅವರಿಗೆ ಗೌರವಪೂರ್ವಕ ನಮಸ್ಕಾರಗಳು. 'ತಾಡೋಲೆ' ಸಂಪುಟವನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟ ಡಾ. ವೀರೇಶ ಬಡಿಗೇರ ಮತ್ತು ಡಾ. ಕೆ.ರವೀಂದ್ರನಾಥ ಅವರಿಗೆ, ಸಂಪಾದನ ಸಮಿತಿಯ ಸದಸ್ಯರಾಗಿ ಸಲಹೆ-ಸಹಕಾರ ನೀಡಿದ ಡಾ. ಎಸ್.ಎಸ್.ಅಂಗಡಿ ಮತ್ತು ಡಾ.ಎಸ್.ಆರ್.ಚನ್ನವೀರಪ್ಪ ಅವರಿಗೆ ಹಾರ್ದಿಕ ಅಭಿನಂದನೆಗಳು.

ಈ ಸಂಪುಟದ ಪ್ರಕಟಣೆಗೆ ಜಾಹೀರಾತು ನೀಡಿ ಪ್ರೋತ್ಸಾಹಿಸಿದ ನಾಡಿನ ವಿವಿಧ ಶೈಕ್ಷಣಿಕ ಸಂಸ್ಥೆಗಳ ಅಧ್ಯಕ್ಷರು, ಆಡಳಿತಾಧಿಕಾರಿಗಳಿಗೆ ಹಸ್ತಪ್ರತಿಶಾಸ್ತ್ರ ವಿಭಾಗವು ಸದಾ ಋಣಿಯಾಗಿರುತ್ತದೆ. ಇನ್ನು ರಜತ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ವಿಭಾಗದ ಸಂಶೋಧನ ವಿದ್ಯಾರ್ಥಿಗಳ ಸಹಕಾರವನ್ನು ಸ್ಮರಿಸುತ್ತದೆ.

ಸಂಪುಟದ ಪ್ರಕಟಣೆಗೆ ಸಹಕಾರ ನೀಡಿದ ಪ್ರಸಾರಾಂಗದ ನಿರ್ದೇಶಕರಾದ ಡಾ. ಶೈಲಜಾ ಹಿರೇಮಠ ಅವರಿಗೆ, ತಾಂತ್ರಿಕ ನೆರವು ನೀಡಿದ ಪ್ರಕಟಣ ಸಹಾಯಕರಾದ ಶ್ರೀ ಕೆ.ಎಲ್.ರಾಜಶೇಖರ ಅವರಿಗೆ, ಅಂದವಾದ ಮುಖಪುಟ ಹಾಗೂ ಛಾಯಾಚಿತ್ರಗಳನ್ನು ವಿನ್ಯಾಸಗೊಳಿಸಿದ ಶ್ರೀ ರಟ್ಟಿಹಳ್ಳಿ ರಾಘಂವಾಂಕುರ ಅವರಿಗೆ, ಅಚ್ಚುಕಟ್ಟಾಗಿ ಪುಟವಿನ್ಯಾಸಗೊಳಿಸಿದ ಹೊಸಪೇಟೆಯ ಯಾಜಿ ಪ್ರಕಾಶನದ ಶ್ರೀಮತಿ ಸವಿತಾ ಯಾಜಿ ಮತ್ತು ಗಣೇಶ ಯಾಜಿ ಅವರಿಗೆ ಕೃತಜ್ಞತೆಗಳು.

ಹಸ್ತಪ್ರತಿಶಾಸ್ತ್ರ ವಿಭಾಗದ ಅಧ್ಯಯನ ಮಂಡಳಿ ಬಾಹ್ಯ ಸದಸ್ಯರು
೨೦೦೬-೨೦೨೨

ಶ್ರೀ ಬಿ.ಎಸ್. ಸಣ್ಣಯ್ಯ, ಮೈಸೂರು

ಡಾ. ಬಿ.ವಿ. ಶಿರೂರ, ಹುಬ್ಬಳ್ಳಿ

ಶ್ರೀ ಜಿ.ಜಿ. ಮಂಜುನಾಥನ್, ಮೈಸೂರು

ಡಾ. ವೈ.ಸಿ. ಭಾನುಮತಿ, ಮೈಸೂರು

ಡಾ. ಎ. ಸತ್ಯನಾರಾಯಣ, ಬೆಂಗಳೂರು

ಡಾ. ಡಿ.ಬಿ. ನಾಯಕ, ಕಲಬುರ್ಗಿ

ಡಾ. ಶಿವಕುಮಾರಸ್ವಾಮಿ ಚಲ್ಯ, ಶಿವಮೊಗ್ಗ

ಡಾ. ಎಂ.ಜಿ. ಮಂಜುನಾಥ, ಮೈಸೂರು

ಡಾ. ಕೆ. ಶಾರದಾ, ಕುಪ್ಪಂ

ಡಾ. ತಮಿಳ್ ಸೆಲ್ವಿ, ಚೆನ್ನೈ

ಡಾ. ಚಿತ್ತಯ್ಯ ಪೂಜಾರ, ಬೆಂಗಳೂರು

ಡಾ. ಜಿ.ಎನ್. ಉಪಾಧ್ಯೆ, ಮುಂಬಯಿ

ಡಾ. ಎನ್.ಬಿ. ಪವಾರ, ವಿಜಯಪುರ

ಸಂಪಾದಕೀಯ

ಡಾ. ವೀರೇಶ ಬಡಿಗೇರ, ಡಾ. ಕೆ. ರವೀಂದ್ರನಾಥ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಸ್ಥಾಪನೆಯಾಗಿ ೨೫ ವರ್ಷಗಳು ಪೂರ್ಣಗೊಂಡು ೨೬ನೇ ವರ್ಷಕ್ಕೆ ಕಾಲಿಡುತ್ತಲಿದೆ. ಹೀಗಾಗಿ ೨೦೨೧-೨೨ನೇ ವರ್ಷವನ್ನು "ಹಸ್ತಪ್ರತಿಶಾಸ್ತ್ರ ವಿಭಾಗದ ರಜತಮಹೋತ್ಸವ ವರ್ಷಾಚರಣೆ" ಎಂದು ಘೋಷಿಸಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. ಅವುಗಳಲ್ಲಿ ಇಪ್ಪತ್ತೈದು ಪುಸ್ತಕಗಳ ಪ್ರಕಟಣೆ, 'ತಾಡೋಲೆ' ಹೆಸರಿನ ನೆನಪಿನ ಸಂಪುಟ, ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನ ಶಾಸ್ತ್ರಗಳಿಗೆ ಸಂಬಂಧಿಸಿದ ಅಪರೂಪದ ಹಾಗೂ ಮಹತ್ವದ ಲೇಖನಗಳನ್ನೊಳಗೊಂಡ ಸಾಂದರ್ಭಿಕ ಸಂಪುಟಗಳು, ರಾಷ್ಟ್ರೀಯ ವಿಚಾರಸಂಕಿರಣ, ೨೫ ಆನ್‌ಲೈನ್ ಸರಣಿ ಉಪನ್ಯಾಸಗಳು, ವಿಭಾಗದ ಹಳೆಯ ವಿದ್ಯಾರ್ಥಿಗಳ ದತ್ತಿನಿಧಿ ಸ್ಥಾಪನೆ ಹೀಗೆ ನಮ್ಮ ವಿಭಾಗದ ರಜತಮಹೋತ್ಸವ ಕಾರ್ಯಕ್ರಮಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈ ಕಾರ್ಯಸೂಚಿಗಳಲ್ಲಿ ಕಳೆದ ೨೫ ವರ್ಷಗಳಲ್ಲಿ ವಿಭಾಗ ಮಾಡಿದ ಶೈಕ್ಷಣಿಕ ಕೆಲಸ ಕಾರ್ಯಗಳು, ಅಧ್ಯಯನ-ಯೋಜನೆಗಳನ್ನು ದಾಖಲಿಸುವ ನೆನಪಿನ ಸಂಪುಟವನ್ನು ಹೊರತರಬೇಕೆಂಬುದು ವಿಭಾಗ ಸದಸ್ಯರ ಸಂಕಲ್ಪವಾಗಿತ್ತು. ಅಂತಹ ಸಂಕಲ್ಪದಿಂದ ಸಿದ್ಧಗೊಂಡ ನೆನಪಿನ ಸಂಪುಟ "ತಾಡೋಲೆ".

ಕನ್ನಡ-ಕನ್ನಡಿಗ ಮತ್ತು ಕರ್ನಾಟಕ ಅಧ್ಯಯನಕ್ಕಾಗಿ ಸ್ಥಾಪನೆಯಾದ ಕನ್ನಡ ವಿಶ್ವವಿದ್ಯಾಲಯ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನಕ್ಕೆ ಹಸ್ತಪ್ರತಿಗಳು ಪ್ರಮುಖ ಆಕರ ಸಾಮಗ್ರಿಗಳೆಂಬುದನ್ನು ಗಮನಿಸಿ 'ಹಸ್ತಪ್ರತಿಶಾಸ್ತ್ರ ವಿಭಾಗ' ಹೆಸರಿನ ಸ್ವತಂತ್ರ ವಿಭಾಗವನ್ನು ಸ್ಥಾಪನೆ ಮಾಡಲಾಯಿತು. ಇಲ್ಲಿಯ ಆರು ಜನ ಪ್ರಾಧ್ಯಾಪಕರು ಹಸ್ತಪ್ರತಿ ಸರ್ವೇಕ್ಷಣೆ, ಸಂಗ್ರಹ ಮತ್ತು ಪ್ರಕಟಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಪರಿಶ್ರಮದ ಭಾಗವಾಗಿ 'ಹಸ್ತಪ್ರತಿ ಭಂಡಾರ' ಅಸ್ತಿತ್ವಕ್ಕೆ ಬಂದಿದೆ. ಹೀಗೆ ಹಸ್ತಪ್ರತಿಗಳ ಸಂಗ್ರಹ-ಸಂಪಾದನೆಯೆಂಬ ಸಾಂಪ್ರದಾಯಿಕ ಕಾರ್ಯದ ಜೊತೆಗೆ ಹಸ್ತಪ್ರತಿ ಮತ್ತು ಗ್ರಂಥಸಂಪಾದನ ಶಾಸ್ತ್ರಗಳ ಅಧ್ಯಯನವನ್ನು ಬೇರೆ ಬೇರೆ ನೆಲೆಗಳಲ್ಲಿ ನಿರ್ವಚಿಸುವುದರ ಮೂಲಕ 'ಹಸ್ತಪ್ರತಿಶಾಸ್ತ್ರ ವಿಭಾಗ'ವನ್ನು "ಹಸ್ತಪ್ರತಿಶಾಸ್ತ್ರ ಅಧ್ಯಯನ ವಿಭಾಗ"ವನ್ನಾಗಿ ತಮ್ಮ ಕಾರ್ಯ ಯೋಜನೆಗಳ ಮೂಲಕ ವಿಸ್ತರಿಸಿದ್ದಾರೆ.

'ತಾಡೋಲೆ' ನೆನಪಿನ ಸಂಪುಟದಲ್ಲಿ ಹದಿನೇಳು ಮಹತ್ವದ ಮಾಹಿತಿಗಳನ್ನು ಒಳಗೊಂಡ ಲೇಖನಗಳಿವೆ. ಹಸ್ತಪ್ರತಿಶಾಸ್ತ್ರ ವಿಭಾಗದ ಸ್ಥಾಪನೆ, ಸ್ವರೂಪ, ಉದ್ದೇಶ, ವಿಭಾಗದ ಸಂಶೋಧನೆ ಮತ್ತು ಯೋಜನೆಗಳು, ಪ್ರತಿವರ್ಷ ವಿಭಾಗದಿಂದ ನಡೆಸಿಕೊಂಡು ಬರುತ್ತಿರುವ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳು, ವಿಚಾರ ಸಂಕಿರಣಗಳು,

ವಿಶೇಷ ಉಪನ್ಯಾಸಗಳು, ಹಸ್ತಪ್ರತಿ ತರಬೇತಿ ಶಿಬಿರಗಳು ಮತ್ತು ಜಾಗೃತಿ ಶಿಬಿರಗಳು, ಹಳಗನ್ನಡ ಸಾಹಿತ್ಯ ಬೋಧನ ತರಬೇತಿ ಶಿಬಿರಗಳು, ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮಗಳು, ಹಳೆಯ ಹೊನ್ನು ಹೆಸರಿನ ಸಂವಾದ ಕಾರ್ಯಕ್ರಮ, ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರ ಸಂಪಾದಿತ-ಸ್ವತಂತ್ರ ಕೃತಿಗಳ ಪರಿಚಯ ಮತ್ತು ಅವರ ಶೈಕ್ಷಣಿಕ ಸಾಧನೆಯನ್ನು ಪರಿಚಯಿಸುವ ಲೇಖನಗಳು, ವಿಭಾಗದಲ್ಲಿ ದತ್ತಿನಿಧಿ ಸ್ಥಾಪನೆ-ಉದ್ದೇಶ ಹಾಗೂ ಕಾರ್ಯಯೋಜನೆಯ ವಿವರಗಳಲ್ಲದೆ ಕಳೆದ ೨೫ ವರ್ಷಗಳಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗದಿಂದ ಪೂರೈಸಿದ ಪಿಎಚ್.ಡಿ., ಎಂ.ಫಿಲ್. ಹಾಗೂ ಪಿಡಿಎಫ್ ವಿದ್ಯಾರ್ಥಿಗಳ ವಿವರಗಳು, ವಿಭಾಗದ ಕಾರ್ಯಕ್ರಮಗಳನ್ನು ಗಮನಿಸಿ ವಿಭಾಗಕ್ಕೆ ಭೇಟಿಕೊಟ್ಟ ವಿದ್ವಾಂಸರ-ಗಣ್ಯಮಾನ್ಯರ ಅಭಿಪ್ರಾಯಗಳನ್ನು ಒಳಗೊಂಡ "ತಾಡೋಲೆ"ಯ ಕಟ್ಟು ಈ ನೆನಪಿನ ಸಂಪುಟ.

ಈ ಸಂಪುಟವನ್ನು ಸಂಪಾದಿಸಿಕೊಡುವ ಹೊಣೆಗಾರಿಕೆಯನ್ನು ನೀಡಿದ ರಜತ ಮಹೋತ್ಸವ ಸಮಿತಿಯ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳಾದ ಪ್ರೊ. ಸ.ಚಿ. ರಮೇಶ ಅವರಿಗೂ, ಕುಲಸಚಿವರಾದ ಪ್ರೊ. ಸುಬ್ಬಣ್ಣ ರೈ ಅವರಿಗೂ, ಸದಸ್ಯರಾದ ಪ್ರೊ. ಎ.ವಿ.ನಾವಡ, ಡಾ. ವೀರೇಶ ಬಡಿಗೇರ, ಡಾ. ಎಫ್.ಟಿ.ಹಳ್ಳಿಕೇರಿ, ಡಾ. ಕೆ. ರವೀಂದ್ರನಾಥ, ಡಾ. ಎಸ್.ಎಸ್.ಅಂಗಡಿ ಮತ್ತು ಡಾ. ಎಸ್.ಆರ್.ಚನ್ನವೀರಪ್ಪ ಅವರುಗಳಿಗೆ, ವಿಭಾಗದ ಬೋಧಕೇತರ ಸಿಬ್ಬಂದಿಗಳಿಗೆ, ಸಮಸ್ತ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ರಜತ ಮಹೋತ್ಸವದ ಅಂಗವಾಗಿ ನೆನಪಿನ ಸಂಚಿಕೆಯನ್ನೊಳಗೊಂಡಂತೆ ವಿಭಾಗದ ಕೃತಿಗಳನ್ನು ಪ್ರಕಟಿಸಲು ಆಸ್ಥೆವಹಿಸಿದ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದ ಗೌರವಾನ್ವಿತ ನಿರ್ದೇಶಕರಾದ ಪ್ರೊ. ಶೈಲಜಾ ಹಿರೇಮಠ ಅವರಿಗೆ ಮತ್ತು ಅವರ ಆಡಳಿತ ಸಿಬ್ಬಂದಿಗೆ ಪ್ರೀತಿ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಪರಿವಿಡಿ

೧

ಹಸ್ತಪ್ರತಿಶಾಸ್ತ್ರ ವಿಭಾಗ: ಸ್ಥಾಪನೆ–ಸ್ವರೂಪ ಮತ್ತು ಉದ್ದೇಶಗಳು

ಕೆ. ರವೀಂದ್ರನಾಥ

ಭರತ ಖಂಡದ ಅಖಂಡ ಪರಂಪರೆಯಲ್ಲಿ ಕನ್ನಡ ಹಸ್ತಪ್ರತಿಗಳಿಗೆ ವಿಶಿಷ್ಟ ಸ್ಥಾನವಿದೆ. ಕರ್ನಾಟಕದ ಪ್ರಮುಖ ಧರ್ಮಗಳು ತಮ್ಮ ಧಾರ್ಮಿಕ ಸಿದ್ಧಾಂತಗಳನ್ನು, ತಾತ್ವಿಕ ಗ್ರಂಥಗಳನ್ನು ಒಳಗೊಂಡಂತೆ ಶಾಸ್ತ್ರ–ಲೌಕಿಕಶಾಸ್ತ್ರಗಳನ್ನು ಹಸ್ತಪ್ರತಿಗಳಲ್ಲಿ ಬರೆದಿಟ್ಟ ಕಾರಣವಾಗಿ ಹಸ್ತಪ್ರತಿ ಸಂಪತ್ತು ರಾಷ್ಟ್ರೀಯ ಸಂಪತ್ತಾಗಿ ಮಾನ್ಯತೆ ಪಡೆದಿದೆ. ಈ ಸಂಪತ್ತನ್ನು ಕುರಿತು ಪಾಶ್ಚಾತ್ಯರು ೧೯–೨೦ನೇ ಶತಮಾನದ ಹೊತ್ತಿಗೆ ಅಧ್ಯಯನ ಪ್ರಾರಂಭಿಸಿದರು. ಅದು ಭಾರತದಲ್ಲೂ ಮುಂದುವರಿಯಿತು. ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹ, ಸೂಚಿರಚನೆ, ವರ್ಗೀಕರಣ ಮತ್ತು ಹಸ್ತಪ್ರತಿಶಾಸ್ತ್ರ ನಿರ್ಮಾಣಗಳ ಹಂತಗಳಲ್ಲಿ ಅಧ್ಯಯನಗಳು ನಡೆದಿರುವುದನ್ನು ಸ್ಥೂಲವಾಗಿ ಗುರುತಿಸುತ್ತೇವೆ.

ನಾಡಿನ ಜ್ಞಾನಪರಂಪರೆಯನ್ನು ಪ್ರತಿನಿಧಿಸುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪರಿಷ್ಕರಣೆ ಮಾಡಿ ಗ್ರಂಥರೂಪದಲ್ಲಿ ಪ್ರಕಟಿಸುವ ಹೊಣೆಯನ್ನು ಕರ್ನಾಟಕದ ಬಹುತೇಕ ವಿಶ್ವವಿದ್ಯಾಲಯಗಳು ನಿರ್ವಹಿಸಿಕೊಂಡು ಬಂದಿವೆ. ಭಾರತೀಯ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತೆ ಕರ್ನಾಟಕದ ಕೆಲವು ವಿಶ್ವವಿದ್ಯಾಲಯಗಳು(ಇತ್ತೀಚೆಗೆ ಸ್ಥಾಪನೆಯಾದ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿ, ಶಾಸನ, ಪುರಾತತ್ವ ಸಾಮಾಗ್ರಿ ಸಂಗ್ರಹ ಮತ್ತು ಪ್ರದರ್ಶನಗಳು, ಭಂಡಾರಗಳು ಇಲ್ಲವೆಂದೇ ಹೇಳಬೇಕು) ಆಯಾಪ್ರಾಂತೀಯ ಭಾಷಾ ವಿಭಾಗಳಲ್ಲಿ 'ಸಂಪಾದನೆಯ ವಿಭಾಗ' ಹೆಸರಿನ ಹಸ್ತಪ್ರತಿ ಭಂಡಾರಗಳು ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ಆದರೆ ಕನ್ನಡ–ಕನ್ನಡಿಗ–ಕರ್ನಾಟಕದ ಶೋಧ–ಪ್ರಸಾರ–ಪ್ರಕಟಣೆಗಾಗಿ ಸ್ಥಾಪನೆಯಾದ ಕನ್ನಡ ವಿಶ್ವವಿದ್ಯಾಲದಲ್ಲಿ ಬೇರೆ ಅಧ್ಯಯನ ವಿಭಾಗಗಳಂತೆ ಸ್ವತಂತ್ರ ಅಧ್ಯಯನ ವಿಭಾಗವಾಗಿ ಸ್ಥಾಪನೆಯಾಗಿದೆ, "ಹಸ್ತಪ್ರತಿಶಾಸ್ತ್ರ ವಿಭಾಗ".

೧. ಹಸ್ತಪ್ರತಿಶಾಸ್ತ್ರ ವಿಭಾಗದ ಸ್ಥಾಪನೆ

೨೩ ಅಕ್ಟೋಬರ್ ೧೯೯೧ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಸ್ಮರಣೀಯ ದಿನ. ಕನ್ನಡಿಗರ ಆಶೋತ್ತರಗಳನ್ನು ಹೊತ್ತು ಕರ್ನಾಟಕ ಘನ ಸರ್ಕಾರ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಡಾ. ಎಸ್. ಎಸ್.ಒಡೆಯರ ಅವರ ಏಕ ಸದಸ್ಯ ಆಯೋಗವನ್ನು ರಚಿಸಿ, ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳನ್ನಾಗಿ

ಪ್ರೊ. ಚಂದ್ರಶೇಖರ ಕಂಬಾರ ಅವರನ್ನು ನೇಮಿಸಿತು. ಹತ್ತಾರು ಕನಸುಗಳ ಬುತ್ತಿಯನ್ನು ಕಟ್ಟಿಕೊಂಡು ಬಂದ ಪ್ರೊ. ಚಂದ್ರಶೇಖರ ಕಂಬಾರರು ಶಾಸನಶಾಸ್ತ್ರ ವಿಭಾಗ, ಬುಡಕಟ್ಟು ಅಧ್ಯಯನ ವಿಭಾಗ, ದೃಶ್ಯಕಲಾ ವಿಭಾಗ, ಶಿಲ್ಪ ಮತ್ತು ಪ್ರತಿಮಾ ಶಾಸ್ತ್ರ ವಿಭಾಗ, ಅಭಿವೃದ್ಧಿ ಅಧ್ಯಯನ ವಿಭಾಗ, ಮಹಿಳಾ ಅಧ್ಯಯನ ವಿಭಾಗ ಹೆಸರಿನ ವಿನೂತನ ವಿಭಾಗಗಳನ್ನು ಇತರೆ ವಿಭಾಗಗಳೊಂದಿಗೆ ಹೊಸದಾಗಿ ಆರಂಭಿಸಿದರು. ಇವುಗಳ ಸಾಲಿನಲ್ಲಿ ೧೯೯೬ರಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗವೂ ತಲೆ ಎತ್ತಿತು. ಆರಂಭದಲ್ಲಿ ಪ್ರೋ. ಎ.ವಿ.ನಾವಡ ಅವರ ಏಕ ಪ್ರಾಧ್ಯಾಪಕರೊಂದಿಗೆ ಕಾರ್ಯನಿರ್ವಹಿಸಿದ ಹಸ್ತಪ್ರತಿಶಾಸ್ತ್ರ ವಿಭಾಗ ನಂತರದಲ್ಲಿ ಪ್ರೊ. ವೀರೇಶ ಬಡಿಗೇರ, ಪ್ರೊ. ಎಫ್.ಟಿ. ಹಳ್ಳಿಕೇರಿ, ಪ್ರೊ. ಕೆ.ರವೀಂದ್ರನಾಥ, ಪ್ರೊ. ಎಸ್.ಎಸ್.ಅಂಗಡಿ ಹಾಗೂ ಪ್ರೊ. ಎಸ್.ಆರ್.ಚನ್ನವೀರಪ್ಪ ಅವರುಗಳನ್ನೊಳಗೊಂಡಂತೆ ೧೯೯೭ರಲ್ಲಿ ಪೂರ್ಣ ಪ್ರಮಾಣದ ಪ್ರಾಧ್ಯಾಪಕರಿಂದ ಹಸ್ತಪ್ರತಿಶಾಸ್ತ್ರ ವಿಭಾಗ ಬೆಳವಣಿಗೆಯನ್ನು ಹೊಂದಿತು. ಆರಂಭದಲ್ಲಿ ತ್ರಿಪದಿ ಕಟ್ಟಡ, ನಂತರದಲ್ಲಿ ಅಕ್ಷರ ಕಟ್ಟಡ, ಅನಂತರದಲ್ಲಿ ಈಗಿನ ಕಂಠಪತ್ರ ಕಟ್ಟಡಕ್ಕೆ ಸ್ಥಳಾಂತರಗೊಂಡು ಒಂದು ಕಡೆ ನೆಲೆಗೊಂಡಿತು.

೨. ಹಸ್ತಪ್ರತಿ ವಿಭಾಗದ ಸ್ವರೂಪ

ಹಸ್ತಪ್ರತಿಶಾಸ್ತ್ರ ವಿಭಾಗದ ಸ್ವರೂಪವೆಂದರೆ ಒಂದರ್ಥದಲ್ಲಿ ಅದರ ಕಾರ್ಯವ್ಯಾಪ್ತಿ. ಪ್ರಾಚೀನ ಕರ್ನಾಟಕದ, ಕನ್ನಡ ಸಾಹಿತ್ಯದ ಜ್ಞಾನ ಪೀಳಿಗೆಗಳಾದ ಹಸ್ತಪ್ರತಿಗಳನ್ನು ನಾಡಿನಾದ್ಯಂತ ಸರ್ವೇಕ್ಷಣೆ ಮಾಡುವುದು ಅವುಗಳನ್ನು ಸಂಗ್ರಹಿಸುವುದು, ಸೂಚೀರಚನೆ ಮಾಡುವುದು, ಅಪ್ರಕಟಿತ ಕೃತಿಗಳನ್ನು ಪ್ರಕಟಿಸುವುದು. ಮುಖ್ಯವಾಗಿ, ದೊರೆತ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಒಳಪಡಿಸುವುದು. ವಿಶೇಷವಾಗಿ, ಹಸ್ತಪ್ರತಿ ತರಬೇತಿ ಕಾರ್ಯಾಗಾರ, ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನವನ್ನು ಆಯೋಜಿಸುವುದು, ಹಸ್ತಪ್ರತಿ-ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಹಸ್ತಪ್ರತಿ ವ್ಯಾಸಂಗ ಹೆಸರಿನ ಪತ್ರಿಕೆಯನ್ನು ಹೊರಡಿಸುವುದು-ಇದು ಹಸ್ತಪ್ರತಿಶಾಸ್ತ್ರ ವಿಭಾಗದ ಶೈಕ್ಷಣಿಕ ಸ್ವರೂಪವಾಗಿದೆ.

ಹಸ್ತಪ್ರತಿಗಳ ಸರ್ವೇಕ್ಷಣೆ-ಸಂಗ್ರಹ : ಹಸ್ತಪ್ರತಿಶಾಸ್ತ್ರ ವಿಭಾಗ ನಾಡಿನಾದ್ಯಂತ ಮನೆ-ಮಠಗಳಲ್ಲಿ ಮತ್ತು ವ್ಯಕ್ತಿ ಒಡೆತನದಲ್ಲಿರುವ ಹಸ್ತಪ್ರತಿಗಳನ್ನು ಸರ್ವೇಕ್ಷಣೆ ಮಾಡಿ ಸಂಗ್ರಹಿಸುವುದಕ್ಕೆ ಮೊದಲ ಆದ್ಯತೆ ನೀಡಿದೆ. ಹಸ್ತಪ್ರತಿಗಳ ಸೂಚೀರಚನೆ, ಸಂಪಾದನೆ, ಅಧ್ಯಯನ ಮತ್ತು ಪ್ರಕಟಣೆ ಎಂಬ ಆರು ಹಂತಗಳಲ್ಲಿ ಇಲ್ಲಿ ಕೆಲಸ ನಡೆಯುತ್ತಿದೆ. ೧೯೯೮ರಲ್ಲಿ ಕುಲಪತಿಗಳಾಗಿ ಬಂದ ಡಾ. ಎಂ.ಎಂ.ಕಲಬುರ್ಗಿ ಅವರು ಈ ವಿಭಾಗಕ್ಕೆ ಸ್ಪಷ್ಟವಾದ ಸ್ವರೂಪವನ್ನು ಹಾಕಿಕೊಟ್ಟರು. ಅಲ್ಲದೆ ಜನವರಿ ೪, ೧೯೯೯ರಂದು ನಡೆದ ನುಡಿಹಬ್ಬದ ಸಂದರ್ಭದಲ್ಲಿ ಅಂದಿನ ಸ್ಥಳೀಯ ಶಾಸಕರಾದ ಶ್ರೀ ಜಿ.ಶಂಕರಗೌಡ ಅವರಿಂದ ಸುಸಜ್ಜಿತವಾದ ಹಸ್ತಪ್ರತಿ ಭಂಡಾರವು ವಿಧ್ಯುಕ್ತವಾಗಿ ಉದ್ಘಾಟನೆಗೊಳ್ಳಲು ಡಾ. ಎಂ.ಎಂ.ಕಲಬುರ್ಗಿ ಅವರ ಕ್ರಿಯಾಶಕ್ತಿಯೇ ಕಾರಣ. ನಂತರ ಬಂದ ಕುಲಪತಿಗಳಾದ ಡಾ. ಎಚ್.ಜೆ.ಲಕ್ಕಪ್ಪಗೌಡ, ಡಾ. ಬಿ.ಎ.ವಿವೇಕ ರೈ, ಡಾ. ಎ.ಮುರಿಗೆಪ್ಪ, ಡಾ. ಹಿ.ಚಿ.ಬೋರಲಿಂಗಯ್ಯ, ಡಾ. ಮಲ್ಲಿಕಾಘಂಟಿ, ಡಾ. ಸ.ಚಿ.ರಮೇಶ ಅವರುಗಳು ವಿಭಾಗದ ಅಭಿವೃದ್ಧಿಗೆ ಸಾಕಷ್ಟು ಪ್ರೋತ್ಸಾಹ ನೀಡಿದ್ದಾರೆ. ಅಧಿಕಾರಿಗಳ ಮತ್ತು ವಿಭಾಗದ ಪ್ರಾಧ್ಯಾಪಕರ ಅದಮ್ಯವಾದ ಆಸಕ್ತಿ, ಪ್ರೋತ್ಸಾಹ ಕಾರಣವಾಗಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮತ್ತು ಸಂಶೋಧನಾ ಕಾರ್ಯ ವ್ಯಾಪಕವಾಗಿ ತೀವ್ರಗತಿಯಲ್ಲಿ ನಡೆದುಕೊಂಡು ಬಂದಿದೆ. ಹಸ್ತಪ್ರತಿಗಳ ಸರ್ವೇಕ್ಷಣೆ ಹಾಗೂ ಸಂಗ್ರಹವೆಂಬ ಸಾಂಸ್ಥಿಕ ಯೋಜನೆಯನ್ವಯ ಮೊದಲು ಬಳ್ಳಾರಿ ಜಿಲ್ಲೆಯನ್ನು ಆಯ್ಕೆ ಮಾಡಲಾಯಿತು. ಕ್ಷೇತ್ರಕಾರ್ಯಕ್ಕೆ ಮೊದಲು ಈ ಜಿಲ್ಲೆಯನ್ನೇ ಆಯ್ದುಕೊಳ್ಳಲು ಕಾರಣ ಇಲ್ಲಿಯವರೆಗೂ ಈ ಜಿಲ್ಲೆಯಲ್ಲಿ ಸಮಗ್ರವಾದ ಹಸ್ತಪ್ರತಿಗಳ ಸಂಗ್ರಹ ಕಾರ್ಯ ನಡೆಯದಿರುವುದು ಒಂದಾದರೆ, ಹಿಂದೆ ಈ ಪ್ರದೇಶ ಮದ್ರಾಸ್ ಪ್ರಾಂತದ ಆಡಳಿತಕ್ಕೆ ಒಳಪಟ್ಟ ಕಾರಣ

ಇಲ್ಲಿ ವ್ಯಾಪಕವಾದ ಸಂಗ್ರಹಕಾರ್ಯ ಪೂರೈಸದಿರುವುದು ಮತ್ತೊಂದು ಕಾರಣವಾಗಿದೆ. ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಹಡಗಲಿ ಮತ್ತು ಹರಪನಹಳ್ಳಿ ತಾಲೂಕಿನ ಗ್ರಾಮಗಳಲ್ಲಿ ಡಾ. ಎಫ್.ಟಿ.ಹಳ್ಳಿಕೇರಿ, ಡಾ. ಕೆ.ರವೀಂದ್ರನಾಥ ಅವರು, ಬಳ್ಳಾರಿ, ಹೊಸಪೇಟೆ, ಸಂಡೂರು, ಸಿರಗುಪ್ಪ ತಾಲೂಕಿನ ಗ್ರಾಮಗಳಲ್ಲಿ ಡಾ. ವೀರೇಶ ಬಡಿಗೇರ, ಡಾ.ಎಸ್.ಆರ್.ಚನ್ನವೀರಪ್ಪ ಅವರು ಕ್ಷೇತ್ರಕಾರ್ಯ ಕೈಗೊಂಡು ಪರಿವೀಕ್ಷಣೆ ನಡೆಸಿ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಈ ಕಾರ್ಯ ತುಂಬಾ ಪ್ರಯಾಸದಾಯಕವಾದುದು. ಹಸ್ತಪ್ರತಿ ಒಡೆಯನನ್ನು ಮನವೊಲಿಸಿ, ತಿಳಿಹೇಳಿ ಅವುಗಳನ್ನು ಪಡೆದುಕೊಳ್ಳುವಲ್ಲಿ ಕ್ಷೇತ್ರಕಾರ್ಯಕರ್ತರ ಜಾಣ್ಮೆ ಮುಖ್ಯವಾಗುತ್ತದೆ. ಕೆಲವರು ಕೇಳಿದ ತಕ್ಷಣ ಕೊಟ್ಟರೆ, ಇನ್ನೂ ಕೆಲವರಿಂದ ಬೇರೊಬ್ಬರ ಮುಖಾಂತರ ಅಂದರೆ ಊರ ಹಿರಿಯರಿಂದ, ಅಧಿಕಾರಿಗಳಿಂದ ತಿಳಿಹೇಳಿಸಿ ಪಡೆಯ ಬೇಕಾಗುತ್ತದೆ. ಇಂತಹ ಪ್ರತಿಕೂಲ ಸಂದರ್ಭಗಳನ್ನು ಎದುರಿಸಿ ಬಿಸಿಲು, ಮಳೆ, ಚಳಿ ಎನ್ನದೇ, ಊಟ ನಿದ್ರೆಗಳ ಸೌಕರ್ಯವನ್ನು ಲೆಕ್ಕಿಸದೇ ಹಸ್ತಪ್ರತಿಗಳ ಸಂಗ್ರಹ ಕಾರ್ಯವನ್ನು ವಿಭಾಗದ ಪ್ರಾಧ್ಯಾಪಕರು ನಿರಂತರವಾಗಿ ನಡೆಸಿ ಕೊಂಡು ಬರುತ್ತಿದ್ದಾರೆ. ನಂತರದ ವರ್ಷಗಳಲ್ಲಿ ರಾಯಚೂರು, ಕೊಪ್ಪಳ, ಬಾಗಲಕೋಟೆ, ಬಿಜಾಪುರ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಯಾದ್ಯಂತ ಪರಿವೀಕ್ಷಣೆ ನಡೆಸಿ ಹಸ್ತಪ್ರತಿಗಳನ್ನು ಸಂಗ್ರಹಿಸಲಾಯಿತು. ಇದರ ಫಲವಾಗಿ ಸುಮಾರು ೫೦೦೦ ಹಸ್ತಪ್ರತಿಗಳು ಭಂಡಾರಕ್ಕೆ ಸೇರ್ಪಡೆಯಾಗಿವೆ.

ವಿಭಾಗದಲ್ಲಿ ಸಂಗ್ರಹಿತವಾದ ಹಸ್ತಪ್ರತಿಗಳು ಕನ್ನಡ, ಸಂಸ್ಕೃತ, ದೇವನಾಗರಿ, ತೆಲಗು, ತಮಿಳು ಮತ್ತು ಮೋಡಿ ಲಿಪಿಗಳನ್ನೊಳಗೊಂಡಿದ್ದು, ವೈವಿಧ್ಯಮಯವಾದ ವಸ್ತುವನ್ನೊಳಗೊಂಡಿವೆ. ವಿಶೇಷವಾಗಿ ಮಧ್ಯಕಾಲೀನ ಸಾಹಿತ್ಯದ ಹಲವಾರು ಕೃತಿಗಳು ಇಲ್ಲಿ ಸಂಗ್ರಹಗೊಂಡಿದ್ದು, ಅವು ವಿವಿಧ ಛಂದಸ್ಸಿನಲ್ಲಿ ರಚನೆಗೊಂಡಿವೆ. ಈಗ ಸಂಗ್ರಹಗೊಂಡ ಹಸ್ತಪ್ರತಿಗಳಲ್ಲಿ ತಾಳೆಗರಿ ಮತ್ತು ಕೋರಿ ಕಾಗದ ಹಾಗೂ ಕಡತ ರೂಪದ ಹಸ್ತಪ್ರತಿಗಳ ಪ್ರಮಾಣ ಪ್ರತಿಶತ ಅರವತ್ತು ಮತ್ತು ನಲವತ್ತು. ೧೦.೧ ಇಂಚು ಅಗಲದಿಂದ ಹಿಡಿದು ೪ ಅಡಿ ಉದ್ದನೆಯ, ಒಂದೆರಡು ಪುಟಗಳಿಂದ ಹಿಡಿದು ಒಂದು ಸಾವಿರ ಪುಟಗಳನ್ನೊಳಗೊಂಡ ಕೃತಿಗಳು ಇಲ್ಲಿವೆ. ಅಮರಕೋಶ, ಬಸವಪುರಾಣ, ಬಸವರಾಜವಿಜಯ, ಭೈರವೇಶ್ವರನ ಕಾವ್ಯ, ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ರಾಜಶೇಖರ ವಿಳಾಸ, ಶಬರಶಂಕರ ವಿಳಾಸ, ಸ್ಥಲಕಟ್ಟಿನ ವಚನಗಳು, ಕರಣಹಸಿಗೆ, ಪದಮಂತ್ರಗೋಪ್ಯ, ತತ್ವಪದಗಳು ಕೀರ್ತನೆಗಳಂತಹ ಹಲವಾರು ಕೃತಿಗಳು ಲಭ್ಯವಾಗಿವೆ. ವಿಶೇಷವಾಗಿ ಈ ಪ್ರದೇಶದಲ್ಲಿ ಚನ್ನಬಸವಣ್ಣನ ಕರಣಹಸಿಗೆ, ಪದಮಂತ್ರಗೋಪ್ಯ, ಚೆನ್ನಪ್ಪ ಕವಿಯ ಶರಣಲೀಲಾಮೃತ, ಯಕ್ಷಗಾನ, ಗುರುಬಸವನ ಸಪ್ತಕಾವ್ಯಗಳು, ಚಿದಾನಂದಾವಧೂತರ ಜ್ಞಾನಸಿಂಧು ಶಾಸ್ತ್ರ ಕೃತಿಗಳ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿ ದೊರೆತಿವೆ. ಇವುಗಳ ಜೊತೆಗೆ ಹಲವಾರು ಲಘು ಕೃತಿಗಳನ್ನು ಸಂಗ್ರಹಿಸಲಾಗಿದೆ. ಯಂತ್ರ ಮಂತ್ರ, ಕುರುಬ ರಟ್ಟಮತ, ವೈದ್ಯ, ಸಮಾಧಿಕ್ರಿಯೆ, ಅಶ್ವ, ಜ್ಯೋತಿಷ್ಯ, ಗಾರ್ಧಬ, ಹೋರಾಶಾಸ್ತ್ರ ಮುಂತಾದ ಲೌಕಿಕಶಾಸ್ತ್ರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲವು ತಾಳೆಗರಿ ಕೋರಿ ಕಾಗದದ ಹಸ್ತಪ್ರತಿಗಳು ಇಲ್ಲಿವೆ. ವಿವಿಧ ನಮೂನೆಯ ಉದ್ಧರಣೆ ಪಟಲಗಳು, ದಾಖಲೆಗಳು, ಕಡತಗಳು, ಬರವಣಿಗೆ ಸಾಧನಗಳು ಸಂಗ್ರಹಗೊಂಡಿವೆ. ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಸುಸಜ್ಜಿತವಾದ ಭಂಡಾರ ಅಸ್ತಿತ್ವಕ್ಕೆ ಬಂದ ನಂತರ ನವದೆಹಲಿಯ ನ್ಯಾಶನಲ್ ಮಿಷನ್ ಫಾರ್ ಮಾನ್ಯುಸ್ಕ್ರಿಪ್ಟ್(ಎನ್.ಎಮ್.ಎಮ್) ಸಂಸ್ಥೆ ವಿಭಾಗದ ಹಸ್ತಪ್ರತಿ ಭಂಡಾರವನ್ನು ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣಾ ಕೇಂದ್ರವೆಂದು ಪರಿಗಣಿಸಿ ಆಂಶಿಕವಾದ ಅನುವಾದವನ್ನು ನೀಡಿತು. ಇದರಿಂದಾಗಿ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳ ಹಸ್ತಪ್ರತಿ ಸರ್ವೇಕ್ಷಣೆ ಮತ್ತು ದಾಖಲೀಕರಣ ಮಾಡಲಾಗಿದೆ.

ಹಸ್ತಪ್ರತಿಗಳ ಸಂರಕ್ಷಣೆ : ಹಸ್ತಪ್ರತಿಗಳನ್ನು ಸಂಗ್ರಹಿಸುವುದರ ಜೊತೆಗೆ ಅವುಗಳ ಸಂರಕ್ಷಣೆಗೆ ವಿಶೇಷ ಕಾಳಜಿಯನ್ನು ವಹಿಸಲಾಗಿದೆ. ಯಾಕೆಂದರೆ ಹಸ್ತಪ್ರತಿಗಳನ್ನು ಬೆಂಕಿ, ನೀರು, ಎಣ್ಣೆ ಹಾಗೂ ಮುರ್ಖರ ಕೈಯಿಂದ ರಕ್ಷಿಸಬೇಕೆಂಬುದನ್ನು ಲಿಪಿಕಾರರು ಉಲ್ಲೇಖಿಸುತ್ತಾ ಬಂದಿದ್ದಾರೆ. ರಾಷ್ಟ್ರೀಯ ಸಂಪತ್ತಾದ ಹಸ್ತಪ್ರತಿಗಳ ಸಂಗ್ರಹದಷ್ಟೇ ಮುತುವರ್ಜಿಯನ್ನು ಅವುಗಳ ಸಂರಕ್ಷಣೆಯ ಬಗೆಗೂ ವಹಿಸಿಕೊಂಡು ಬರಲಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಪ್ರಾಚೀನರು ಹಸ್ತಪ್ರತಿಗಳ ಸಂರಕ್ಷಣೆಗಾಗಿ ಅನೇಕ ವಿಧಾನಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ಧೂಳು, ಹುಳುಗಳಿಂದ ದೂರವಿಡಲು ಹಸ್ತಪ್ರತಿಗಳನ್ನು ಬಟ್ಟೆಸುತ್ತಿ ಇಡುವ ಪದ್ಧತಿ ಬಹು ಹಿಂದಿನಿಂದಲೂ ಜಾರಿಯಲ್ಲಿದೆ. ಡಾ. ಮಲ್ಲಿಕಾರ್ಜುನ ಘಂಟಿ ಅವರು ಕುಲಪತಿಗಳಾಗಿದ್ದಾಗ, ಮುಖ್ಯಸ್ಥನಾಗಿದ್ದ ನನ್ನ ಮನವಿಗೆ ವಿಶೇಷ ಅನುದಾನ ಬಿಡುಗಡೆ ಮಾಡಿ ಭಂಡಾರದ ಎಲ್ಲಾ ಹಸ್ತಪ್ರತಿಗಳನ್ನು ಕೇಸರಿ ಬಟ್ಟೆಯಿಂದ ಭದ್ರವಾಗಿ ಕಟ್ಟಿ ಸಂರಕ್ಷಣೆ ಮಾಡಲಾಗಿದೆ. ತಂಪಾದ ಪ್ರದೇಶಗಳಲ್ಲಿ ಸಂಗ್ರಹವಾಗಿರುವ ತಾಳೆಗರಿ, ಹಸ್ತಪ್ರತಿಗಳನ್ನು ಸಂರಕ್ಷಿಸಲು ಫ್ಯೂಮಿಗೇಷನ್ ಛೇಂಬರ್‌ನ್ನು ಬಳಸಲಾಗುತ್ತದೆ. ತಾಳೆಪ್ರತಿಗಳಿಗೆ ಧೂಳು ರೋಗಾಣುಗಳಾಗಬಾರದೆಂಬ ದೃಷ್ಟಿಯಿಂದ ಇತ್ತೀಚೆಗೆ ಅವುಗಳಿಗೆ ಸಿಟ್ರೆನಲ್ ಆಯಿಲ್‌ನ್ನು ಲೇಪಿಸಲಾಗುತ್ತದೆ. ಈ ಎಲ್ಲಾ ವಿಧಾನಗಳನ್ನು ನಮ್ಮಲ್ಲಿ ಅನುಸರಿಸಲಾಗುತ್ತದೆ. ಪರಂಪರಾನುಗತ ವಿಧಾನಗಳ ಜೊತೆಗೆ ಎಲ್ಲಾ ಹಸ್ತಪ್ರತಿಗಳನ್ನು ಕಂಪ್ಯೂಟರ್, ಸ್ಕ್ಯಾನರ್, ಸಿ.ಡಿ. ಇತ್ಯಾದಿ ತಂತ್ರಜ್ಞಾನಗಳ ಮೂಲಕ ಸಂರಕ್ಷಿಸುವ ಯೋಜನೆಯನ್ನು ಇಲ್ಲಿ ರೂಪಿಸಲಾಗಿದೆ. ಈಗಾಗಲೇ ಸುಮಾರು ೧೦೦೦ ಹಸ್ತಪ್ರತಿ ಕಟ್ಟುಗಳ ಸಾವಿರಾರು ಪುಟ ಮತ್ತು ಗರಿಗಳನ್ನು ಇಮೇಜ್ ರೂಪದಲ್ಲಿ ಗಣಕೀಕರಣಗೊಳಿಸಲಾಗಿದೆ. ಮುರಿದ ತಾಳೆಗರಿಗಳನ್ನು, ಹರಿದ ಕಾಗದ ಪತ್ರಗಳನ್ನು ಕಂಪ್ಯೂಟರ್ ಇಮೇಜ್ ಮೂಲಕ ಅವುಗಳನ್ನು ಜೋಡಿಸಿ ದುರಸ್ಥಿ ಮಾಡಲಾಗುತ್ತದೆ. ಇದರಿಂದಾಗಿ ಕಂಪ್ಯೂಟರ್ ಮೂಲಕ ಹಸ್ತಪ್ರತಿಗಳನ್ನು ಕಣ್ಣಿಗೆ ಹಿತವಾಗುವಂತೆ ನೋಡಲು ಸಾಧ್ಯವಾಗಿದೆ. ಜೊತೆಗೆ ವೈವಿಧ್ಯಮಯ ಬಣ್ಣಗಳಲ್ಲಿ ಮುದ್ರಿಸಿಕೊಳ್ಳಲು ಅವಕಾಶಗಳಿವೆ. ಹೀಗೆ ಹಸ್ತಪ್ರತಿಗಳನ್ನು ವೆಬ್‌ಸೈಟ್ ಮೂಲಕ ವಿಶ್ವದಾದ್ಯಂತ ಬಳಸಿಕೊಳ್ಳಬಹುದಾದ ಸಾಧ್ಯತೆಗಳನ್ನು ರೂಪಿಸಿರುವುದು ಈ ಭಂಡಾರದ ವೈಶಿಷ್ಟ್ಯವಾಗಿದೆ. ಸ್ಕ್ಯಾನರ್ ಮೂಲಕ ಹಸ್ತಪ್ರತಿಗಳು ಸಿ.ಡಿಯಲ್ಲಿ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗಿದೆ.

ಹಸ್ತಪ್ರತಿ ಭಂಡಾರದ ವಿಶೇಷತೆ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಹಸ್ತಪ್ರತಿ ಭಂಡಾರದಲ್ಲಿ ಅಪ್ರಕಟಿತ ಹಸ್ತಪ್ರತಿಗಳು ಸಂಗ್ರಹಗೊಂಡಿವೆ. ಕುಮಾರರಾಮನ ಸಾಂಗತ್ಯ, ಉದ್ಧರಣೆ ಸಾಹಿತ್ಯ, ಸಾಂಘಿಕಶಾಸ್ತ್ರ, ಕಂಚಿಪುರಾಣ ಎಳೆಮಲೆಯ ಗುರುಶಾಂತಾದೇವನ ಬಸವಸ್ತೋತ್ರದ ವಚನಗಳು, ಕೊಟ್ಟೂರು ಬಸವೇಶ್ವರ ತಾರಾವಳಿ, ಕುಮಾರಸ್ವಾಮಿ ತಾರಾವಳಿ, ಕೋಳೂರು ಶಂಕರಕವಿಯ ಕೃತಿಗಳು, ಕಿತ್ತೂರು ರುದ್ರಮ್ಮನ ಕಥೆ, ಲಿಂಗಣ್ಣ ಕವಿಯ ವರರಮ್ಯರತ್ನಾಕರ, ಕೈವಲ್ಯಸಾರಟೀಕು, ಹಿರಿಯಣ್ಣ ಕವಿಯ ಹಯರತ್ನಶ್ರೇಣಿ, ಗುಂಡಬ್ರಹ್ಮಯ್ಯಗಳ ದಾಖಲೆ, ಗ್ರಾಮ ಮ್ಯಾನ್ಯುಯಲ್, ಕೋರಿಶೆಟ್ಟಿ, ಹಸುಬೆಶೆಟ್ಟಿ ನಿರ್ಣಯ, ಹೊಸಕುಮಾರರಾಮನ ಸಾಂಗತ್ಯ, ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರಸಂಗ್ರಹ, ಲಾವಣಿಗಳು, ಸ್ವರವಚನಗಳು, ತತ್ವಪದಗಳು ಇತ್ಯಾದಿ ಅಪ್ರಕಟಿತ ಕೃತಿಗಳನ್ನು ಶೋಧಿಸಿ ವಿಭಾಗ ಮಾಲೆಯಡಿ ಅವುಗಳನ್ನು ಪ್ರಕಟಿಸುವ ಕಾರ್ಯ ನಿರಂತರವಾಗಿ ನಡೆದಿದೆ. ಹಸ್ತಪ್ರತಿಗಳ ವಿನ್ಯಾಸದಿಂದಲೂ ನಮ್ಮ ಹಸ್ತಪ್ರತಿ ಭಂಡಾರ ಗಮನ ಸೆಳೆದಿದೆ. ದುಂಡಾದ, ಸಣ್ಣದಾದ, ಅಲಂಕಾರದಿಂದ ಕೂಡಿದ ಅಕ್ಷರಗಳಿಂದ, ಬಣ್ಣ-ರೇಖಾಚಿತ್ರಗಳಿಂದ ಕೂಡಿದ ಚಿತ್ರಸಾಹಿತ್ಯ ಪ್ರತಿಗಳು, ಕಡತ ರೂಪ ಹಸ್ತಪ್ರತಿಗಳು ಸಂಗ್ರಹಗೊಂಡಿವೆ. ಇಲ್ಲಿಯ ಹಸ್ತಪ್ರತಿಗಳಲ್ಲಿ ಹಲವಾರು ಜನ ಈ ಭಾಗದ ಲಿಪಿಕಾರರು ಬೆಳಕಿಗೆ ಬಂದಿದ್ದಾರೆ. ಉದಾಹರಣೆಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುದರಿಮೋತಿ ಗ್ರಾಮದ ಸಣ್ಣ ವೀರಪ್ಪನವರ ಮಗಳಾದ ಸರಸ್ವತಿ ಬಾಯಿಯೂ ಪ್ರತಿ ಮಾಡಿದ ಚಿದಾನಂದಾವಧೂತ ಚಾರಿತ್ರದ ಅಕ್ಷರಗಳು ತುಂಬಾ ಸೊಗಸಾಗಿ

ಮೂಡಿ ನಿಂತಿವೆ. ಹಾಗೆಯೇ ಇದೇ ಜಿಲ್ಲೆಯ ಮುದ್ದಾಬಳ್ಳಿಯ ಶೇಷೇಂದ್ರಾಚಾರ್ ಅವರ ಬರವಣಿಗೆಯು ಅಷ್ಟೇ ಮನಮೋಹಕವಾಗಿವೆ. ಅಂದಾಜು ೨೦ ಕೃತಿಗಳನ್ನು ಪ್ರತಿಮಾಡಿದ ಆಚಾರ್ ಅವರು ತಮ್ಮ ಕಲಾ ನೈಪುಣ್ಯವನ್ನು ಅಲ್ಲಲ್ಲಿ ಮೆರೆದಿರುವುದು ಅವರ ವಿಶೇಷತೆಯಾಗಿದೆ. ಮೋನಪ್ಪಯ್ಯನ ಚರಿತ್ರೆಯ ಹಸ್ತಪ್ರತಿಯಲ್ಲಿ ಅವರು ಬಿಡಿಸಿದ ತಿಂತಿಣಿ ಮೋನಪ್ಪಯ್ಯ, ಕೋಳೂರು ಶಂಕರಕವಿಯ ರೇಖಾಚಿತ್ರಗಳು ಕಣ್ಮನ ಸೆಳೆಯುತ್ತವೆ. ಯಂತ್ರ-ಮಂತ್ರ ಪುಸ್ತಕವನ್ನು ಪ್ರತಿಮಾಡಿದ ಹೊಳಿತೊಗರುವನಳ್ಳಿ ಪಿಂಜಾರ ಮೆಹಬೂಬ ಸಾಬ್‌ನಂಥ ನೂರಾರು ಲಿಪಿಕಾರರ ಹಸ್ತಪ್ರತಿಗಳು ದೊರೆತಿವೆ. ಕೆಲವರು ತಮ್ಮ ಓದಿಗಾಗಿ ಆಸಕ್ತಿಯಿಂದ ಹಸ್ತಪ್ರತಿಗಳನ್ನು ಲಿಪಿಕಾರರಿಂದ ಬರೆಸಿಕೊಂಡ ಉಲ್ಲೇಖಗಳು ಹೇರಳವಾಗಿ ದೊರಕುತ್ತವೆ. ಹಗರಿಬೊಮ್ಮನಹಳ್ಳಿ ತಾಲೂಕಿನ ರಾಮೇಶ್ವರ ಬಂಡಿಯ ಶೋಭಾನದ ವೀರಭದ್ರಪ್ಪನವರ ಮನೆಯಲ್ಲಿ ಪಂಚತಂತ್ರದ ಕಾಗದದ ಹಸ್ತಪ್ರತಿಯಲ್ಲಿ ಮನೆತನದವರ ಉಲ್ಲೇಖ ಹೀಗಿದೆ. "ರಾಮೇಶ್ವರ ಬಂಡಿಯಲ್ಲಿರುವಂಥ ಶೋಭಾನದ ಹಿರೇಬಸಪ್ಪನವರ ಗರ್ಭಸಂಭವರಾದ ಚನ್ನಬಸಪ್ಪ ಈರಬಸಪ್ಪ ಉಭಯುತರು ಪಂಚತಂತ್ರವನ್ನು ಓದಲಿಕ್ಕೆ ಮನೋಪ್ರೀತಿಯಿಂದ ಬರೆದವರಿಗೆ ವಸ್ತ್ರಪಾತ್ರವಂ ಕೊಟ್ಟು ಬರೆಸಿಕೊಂಡುಯಿದ್ದರು". ಗುಬ್ಬಿ ಮಲ್ಲಣಾರ್ಯನ ಗಣಭಾಷಿತ ರತ್ನಮಾಲೆ ಕೃತಿಯನ್ನು ಬರೆಸಿಕೊಂಡ ಕೆತ್ತನಕೆರೆಯ ಚನ್ನದೇವರ ಸುಪುತ್ರ ಮಲ್ಲಿಸಿದ್ದಪ್ಪನವರ ಕುಮಾರ ಸದಾಶಿವದೇವರು, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಕಾವ್ಯವನ್ನು ಬರೆಸಿಕೊಂಡವರು ಅಬ್ಬಿಗೆರೆಗೆ ಅಧಿಪತಿಗಳಾದ ಈರಣಗೌಡ. ಹೀಗೆ ಈ ನಾಡಿನ ಗ್ರಾಮದ ಮುಖಂಡರು, ಶ್ರೀಸಾಮಾನ್ಯರು, ಅಕ್ಷರಸ್ಥರು, ಹಸ್ತಪ್ರತಿಗಳನ್ನು ಸಂರಕ್ಷಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ವೀರಶೈವ ಧರ್ಮ, ತತ್ವವನ್ನು ಚಿತ್ರಗಳ ಮುಖಾಂತರ ಜನಸಾಮಾನ್ಯರಿಗೆ ತಿಳಿಹೇಳುವ ವೈವಿಧ್ಯಮಯ ಉದ್ಧರಣೆ ಪಟಲಗಳು, ಹಸ್ತಪ್ರತಿಗಳ ರಕ್ಷಾಫಲಕ, ಒಳಪುಟ ಹಾಗೂ ಮುಖಪುಟಗಳಲ್ಲಿ ಲಿಪಿಕಾರರು ಅಥವಾ ಕಲಾಕಾರರು ಬರೆದ ಚಿತ್ರಗಳು, ಸುಳುವು ನಕ್ಷೆಗಳು ವಿದ್ವಾಂಸರ ಅಧ್ಯಯನದ ಆಸಕ್ತಿಯನ್ನು ಹೆಚ್ಚಿಸಿವೆ. ಹೀಗೆ ಸಂಗ್ರಹಿಸಿದ ವಿಶೇಷ ಹಸ್ತಪ್ರತಿಗಳ ಜೊತೆಗೆ ಹಸ್ತಪ್ರತಿಗಳನ್ನು ನೀಡಿದ ದಾನಿಗಳ ವಿವರವನ್ನು ಹಸ್ತಪ್ರತಿಸೂಚಿ ಸಂಪುಟಗಳ ಕೊನೆಗೆ ಅನುಬಂಧದಲ್ಲಿ ದಾಖಲಿಸಲಾಗಿದೆ. ಪ್ರತಿಯೊಂದು ಹಸ್ತಪ್ರತಿ ಕಟ್ಟುಗಳ ಮೇಲೆ ಕೃತಿಯ ಹೆಸರು, ಅದನ್ನು ನೀಡಿದವರ ಹೆಸರನ್ನು ಬರೆಯಲಾಗಿದೆ. ಹೀಗೆ ದಾನ ನೀಡಿದವರನ್ನು ಹಸ್ತಪ್ರತಿಶಾಸ್ತ್ರ ವಿಭಾಗದ ವತಿಯಿಂದ "ಹಸ್ತಪ್ರತಿ ದಾನಿಗಳ ಸಮಾವೇಶ"ವನ್ನು ನಡೆಸಲಾಗಿದೆ. ಸಾರ್ವಜನಿಕರಿಂದ ಸಂಗ್ರಹಗೊಂಡ ಹಸ್ತಪ್ರತಿಗಳ ಒಡೆಯರಾದ ಅನೇಕ ದಾನಿಗಳು ವಿಭಾಗದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಕೆಲವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸುವುದಾದರೆ, ಉತ್ತಂಗಿಯ ಶ್ರೀ ಶಂಕರಸ್ವಾಮಿಗಳು, ಗದುಗಿನ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು, ಹಂಪಿಯ ಗಾಯತ್ರಿ ಪೀಠದ ಶ್ರೀ ದಯಾನಂದ ಪುರಿ ಮಹಾಸ್ವಾಮಿಗಳು, ಮಹಾದೇಶ್ವರ ಬೆಟ್ಟದ ಸಾಲೂರು ಮಠದ ಶ್ರೀ ಮಹದೇವ ಸ್ವಾಮಿಗಳು, ಅಂಬಳಿ ನಗರಗಡ್ಡಿ ಮಠದ ಶ್ರೀಶಾಂತವೀರಸ್ವಾಮಿಗಳು, ಗಂಗಾವತಿಯ ಅಕ್ಕಸಾಲಿಮಠ, ಹೊಸಪೇಟೆಯ ಮಲ್ಲಿಕಾರ್ಜುನ ಮಠ, ಮುದ್ದಾಬಳ್ಳಿಯ ಶ್ರೀ ಗುರುನಾಥ ಸ್ವಾಮಿಗಳು, ಕಡ್ಲಬಾಳು ಷ.ಬ್ರ. ಶಶಿಧರಮಹಾಸ್ವಾಮಿಗಳು, ಧರ್ಮಸ್ಥಳದ ವೀರೇಂದ್ರ ಹೆಗಡೆಯವರು, ಬೈಲುವದ್ದಿಗೇರಿಯ ಶ್ರೀ ಜಡೆಸ್ವಾಮಿಗಳು, ಅಂಬಳಿಯ ಗುತ್ತಲ ನಾಗಮ್ಮ, ಡಾ. ಸಾ.ಶಿ. ಮರುಳಯ್ಯ, ಡಾ. ಬಿ.ವಿ.ಶಿರೂರು, ಡಾ. ವೀರಣ್ಣ ರಾಜೂರು, ಪ್ರೊ. ಇಟಗಿ ಈರಣ್ಣ, ಪ್ರೊ.ಎಸ್. ಉಮಾಪತಿ, ಕುಂಚೂರಿನ ಪಿ. ಸತ್ತಾರ್‌ಸಾಬ್, ಡಾ. ಡಬ್ಲ್ಯು.ಎನ್. ಬಿಳಿಯಂಗಡಿ, ಹಿರೇಹಾಳದ ಶೆಟ್ಟರ ದೊಡ್ಡಪ್ಪ, ಶ್ರೀ ಎಸ್. ಶಿವಣ್ಣ, ಕೊಪ್ಪಳದ ಬಿಸರಳ್ಳಿ ಬಸವರಾಜ ಮೇಷ್ಟ್ರು ಹೀಗೆ ನಾಡಿನ ಮಠಾಧಿಪತಿಗಳು, ಶ್ರೀ ಸಾಮಾನ್ಯರು, ವಿದ್ವಾಂಸರು ಮತ್ತು ಆಸಕ್ತ ಮಹನಿಯರು ಹಸ್ತಪ್ರತಿ ಭಂಡಾರದ ಬೆಳವಣಿಗೆಗೆ ಕೈ ಜೋಡಿಸಿದ್ದಾರೆ.

ಸಂಗ್ರಹಗೊಂಡ ಹಸ್ತಪ್ರತಿಗಳ ಸಮಗ್ರ ಗಣಕೀಕರಣ ಯೋಜನೆಯನ್ನು ಹಾಕಿಕೊಂಡು ಎಲ್ಲಾ ಹಸ್ತಪ್ರತಿಗಳನ್ನು ಇಮೇಜ್ ಮೂಲಕ ಗಣಕೀಕರಣಗೊಳಿಸಲಾಗಿದೆ.

ಹಸ್ತಪ್ರತಿಗಳ ಸೂಚಿ ರಚನೆ: ಸಂಗ್ರಹಿಸಿದ ಹಸ್ತಪ್ರತಿಗಳನ್ನು ಹಾಗೆಯೇ ಇಟ್ಟರೆ ಅವುಗಳ ಮಹತ್ವ ಮತ್ತು ಬಳಕೆ ಸಾರ್ವಜನಿಕರಿಗೆ, ವಿದ್ವಾಂಸರಿಗೆ ಮತ್ತು ಆಸಕ್ತರಿಗೆ ತಿಳಿಯುವುದಿಲ್ಲ. ಇವುಗಳಲ್ಲಿ ಏನಿದೆಂಬುದನ್ನು ವಿವರಣಾತ್ಮಕ ಸೂಚಿಗಳು. ಪರಿಚಯಿಸುತ್ತವೆ. ೪೦೦ ಕಟ್ಟುಗಳಿಗೆ ಒಂದರಂತೆ "ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ" ಹೆಸರಿನ ೪ ಸಂಪುಟಗಳು ಈಗಾಗಲೇ ಮುದ್ರಣಗೊಂಡಿವೆ. ಕೃತಿ/ಪ್ರತಿಯ ವಿವರವನ್ನೊಳಗೊಂಡ ಸೂಚಿಗಳು ಒಂದು ಹಸ್ತಪ್ರತಿಯ ಭಾಷಾ ಸ್ವರೂಪ, ಲಿಪಿಸ್ವರೂಪ, ಪ್ರತಿಸ್ವರೂಪ, ಸಮಗ್ರ-ಅಸಮಗ್ರ, ಆದಿಪದ್ಯ, ಅಂತ್ಯಪದ್ಯ ಇತ್ಯಾದಿ ಆ ಹಸ್ತಪ್ರತಿಯ ಜಾತಕವನ್ನು ವಿವರಿಸುತ್ತವೆ. ಡಾ. ಎಫ್.ಟಿ. ಹಳ್ಳಿಕೇರಿ ಮತ್ತು ಡಾ. ಕೆ. ರವೀಂದ್ರನಾಥ ಅವರುಗಳು ಸೇರಿ ಸೂಚಿಸಂಪುಟ-೧ ಮತ್ತು ಇನ್ನು, ಡಾ. ವೀರೇಶ ಬಡಿಗೇರ ಹಾಗೂ ಡಾ. ಎಸ್.ಆರ್. ಚನ್ನವೀರಪ್ಪ ಸೇರಿ ಸೂಚಿ ಸಂಪುಟ ೨ ಮತ್ತು ೪ನ್ನು, ಡಾ. ವೀರೇಶ ಬಡಿಗೇರ ಸಂಪಾದಕತ್ವದಲ್ಲಿ ಸಂಪುಟ ೫ ಪ್ರಕಟಗೊಂಡಿವೆ. ಹೀಗೆ ನಮ್ಮ ವಿಭಾಗದ ಹಸ್ತಪ್ರತಿ ಸೂಚಿಗಳನ್ನು ಬಳಸಿಕೊಂಡು ನಾಡಿನ ಅನೇಕ ವಿದ್ವಾಂಸರು ಹಸ್ತಪ್ರತಿಗಳ ಪರಿಶೀಲನೆ ಹಾಗೂ ಅಧ್ಯಯನಕ್ಕೆ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಭೇಟಿಕೊಟ್ಟಿರುವ ಉದಾಹರಣೆಗಳಿವೆ.

ಅಪ್ರಕಟಿತ ಕೃತಿಗಳ ಪ್ರಕಟಣೆ: ಹಸ್ತಪ್ರತಿಶಾಸ್ತ್ರ ವಿಭಾಗ ಸಾಂಸ್ಥಿಕ ಯೋಜನೆಯಡಿಯಲ್ಲಿ ಹಸ್ತಪ್ರತಿಗಳ ಸರ್ವೇಕ್ಷಣೆ-ಸಂಗ್ರಹ ಕಾರ್ಯಕೈಗೊಂಡಂತೆ. ವೈಯಕ್ತಿಕ ಯೋಜನೆಯಡಿ ಅವುಗಳಲ್ಲಿ ಲಭ್ಯವಾದ ಅಪ್ರಕಟಿತ ಕೃತಿಗಳನ್ನು ಪ್ರಕಟಿಸುವ ಕೆಲಸವನ್ನು ಕಳೆದ ೨೫ ವರ್ಷಗಳಿಂದ ಮಾಡುತ್ತಾ ಬಂದಿದೆ. ಎಮ್ಮೆಬಸವನ ಕಾಲಜ್ಞಾನ ಸಾಹಿತ್ಯ, ಕನ್ನಡ ದಾಖಲುಸಾಹಿತ್ಯ, ನಾಗಲಿಂಗಸ್ವಾಮಿ ತತ್ವಪದಗಳು, ಕರಸ್ಥಲ ಸಾಹಿತ್ಯ, ಹಳೆಯ ಲಾವಣಿಗಳು, ಬಸವಯುಗದ ವಚನೇತರ ಸಾಹಿತ್ಯ, ಕೋಳೂರು ಶಂಕರ ಕವಿಯ ಕೃತಿಗಳು, ಗುಂಡಬ್ರಹ್ಮಯ್ಯಗಳ ಸಾಹಿತ್ಯ, ಉದ್ಧರಣೆ ಸಾಹಿತ್ಯ, ಸ್ವರವಚನ ತರಂಗ, ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರಸಂಗ್ರಹ, ಹಿರಿಯಣ್ಣ ಕವಿಯ ಹಯರತ್ನಶ್ರೇಣಿ, ಕೋಕಶಾಸ್ತ್ರ, ಕಿತ್ತೂರು ರುದ್ರಮ್ಮನ ಕಥೆ, ವರರಮ್ಯ ರತ್ನಾಕರ, ಹೊಸ ಕುಮಾರರಾಮನಸಾಂಗತ್ಯ ಮುಂತಾದ ಮಹತ್ವದ ಕೃತಿಗಳು ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸ ಸೇರ್ಪಡೆಯಾಗಿವೆ.

ಹಸ್ತಪ್ರತಿಗಳ ಅಧ್ಯಯನ: ವಿವಿಧ ಹಸ್ತಪ್ರತಿಶಾಸ್ತ್ರ ವಿಭಾಗ ಕೇವಲ ಹಸ್ತಪ್ರತಿಗಳ ಸರ್ವೇಕ್ಷಣೆ-ಸಂಗ್ರಹ ಮತ್ತು ಸೂಚಿರಚನೆ ಹಾಗೂ ಪ್ರಕಟಣೆ ಮಾತ್ರ ಸೀಮಿತವಾಗಿಲ್ಲ. ಮುಂದುವರಿದು ಹಸ್ತಪ್ರತಿಗಳನ್ನು ಬೇರೆಬೇರೆ ನೆಲೆಯಲ್ಲಿ ಅಧ್ಯಯನ ಮಾಡುವ "ಹಸ್ತಪ್ರತಿಶಾಸ್ತ್ರ ಅಧ್ಯಯನದ" ಮತ್ತೊಂದು ಮಗ್ಗಲುನ್ನು ಬೆಳೆಸಿರುವುದು ಈ ವಿಭಾಗದ ವೀಶೆಷತೆ. ಅಂದರೆ ಸಂಶೋಧನ ಯೋಜನೆಗಳು, ವಿಭಾಗದ ಮಾಲೆಯ ಪ್ರಕಟಣೆಗಳು, ಹಸ್ತಪ್ರತಿ ಅಧ್ಯಯನ ಹೆಸರಿನ ನಿಯತಕಾಲಿಕೆಗಳು, ವಿಚಾರ ಸಂಕಿರಣ, ವಿಶೇಷ ಉಪನ್ಯಾಸ, ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳು, ಹಳೆಯ ಹೊನ್ನು, ಉಪನ್ಯಾಸ ಸರಣಿಗಳು, ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮಗಳು, ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರಗಳು, ಹಳಗನ್ನಡ ಬೋಧನ ತರಬೇತಿ ಕಾರ್ಯಗಳನ್ನು ನಡೆಸುವುದರ ಮೂಲಕ ವಿಭಾಗದ ಕಾರ್ಯವ್ಯಾಪ್ತಿಯನ್ನು "ಸಂಗ್ರಹ-ಸಂಪಾದನೆ" ನೆಲೆಯಿಂದ 'ಹಸ್ತಪ್ರತಿಶಾಸ್ತ್ರ ಅಧ್ಯಯನದ' ನೆಲೆಗೆ ವಿಸ್ತರಿಸಿಕೊಂಡಿರುವುದು ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಶಾಸ್ತ್ರ ವಿಭಾಗದ ಬಹುದೊಡ್ಡ ಕೊಡುಗೆಯೆಂದೇ ಹೇಳಬೇಕು. ಡಾ. ಎಸ್.ಎಸ್. ಅಂಗಡಿ ಅವರ ಕನ್ನಡ ಹಸ್ತಪ್ರತಿ ರಚನೆ:ಭಾಷಿಕ ವಿವೇಚನೆ; ಡಾ. ವೀರೇಶ ಬಡಿಗೇರ ಅವರ ಕನ್ನಡ ಹಸ್ತಪ್ರತಿಗಳು:ಬಹುಪಠ್ಯೀಯ ನೆಲೆಗಳು, ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಶಿ

ವಿವೇಕ, ಡಾ. ಕೆ. ರವೀಂದ್ರನಾಥ ಅವರ ಕನ್ನಡ ಟೀಕಾಸಾಹಿತ್ಯ, ಹಸ್ತಪ್ರತಿಗಳು:ಕನ್ನಡಿಗರ ಬದುಕು, ಕನ್ನಡ ದಾಖಲು ಸಾಹಿತ್ಯ ಮುಂತಾದವುಗಳು ಹಸ್ತಪ್ರತಿಗಳ ಮೂಲಕ ನಡೆಸಿದ ಅಧ್ಯಯನಗಳಾಗಿವೆ.

ಹಸ್ತಪ್ರತಿಶಾಸ್ತ್ರ ವಿಭಾಗದ ವಿಚಾರ ಸಂಕಿರಣಗಳು ವಿನೂತವಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಗ್ರಂಥಸಂಪಾದನೆಯ ವಿಧಿ-ವಿಧಾನಗಳು, ಕನ್ನಡ ಹಸ್ತಪ್ರತಿ ಭಂಡಾರಗಳು, ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ, ರಾಷ್ಟ್ರಮಟ್ಟದ ಹಸ್ತಪ್ರತಿ ಕಾರ್ಯಗಾರ, ಡಿ.ಎಲ್.ನರಸಿಂಹಚಾರ್ ಶತಮಾನ ಸ್ಮರಣೆ, ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು, ದಕ್ಷಿಣ ಭಾರತೀಯ ಗ್ರಂಥಸಂಪಾದನೆ ಹೆಸರಿನ ವಿಚಾರ ಸಂಕಿರಣಗಳನ್ನು ವಿಭಾಗ ಆಯೋಜಿಸಿದೆ. ಅದೇರೀತಿ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಚರ್ಚಾವೇದಿಕೆಯನ್ನು ಒದಗಿಸುವ ಉದ್ದೇಶದಿಂದ ಹಳಗನ್ನಡ, ಹಸ್ತಪ್ರತಿ, ಗ್ರಂಥಸಂಪಾದನೆ ಕ್ಷೇತ್ರ ಕುರಿತಾದ 'ಹಳೆಯ ಹೊನ್ನು' ಹೆಸರಿನ ಉಪನ್ಯಾಸ ಸರಣಿಯನ್ನು ರೂಪಿಸಿದೆ. ವಿಭಾಗದ ಇನ್ನೊಂದು ಕಾರ್ಯಕ್ರಮ 'ವಿಶೇಷ ಉಪನ್ಯಾಸಗಳು' ಇವು ಒಂದು ವಿಷಯದ ಖಚಿತ ಮತ್ತು ಸೂಕ್ಷ್ಮ ವಿಷಯಗಳ ಮೇಲೆ ಬೆಳಕು ಚಲ್ಲುವ ಉದ್ದೇಶವನ್ನು ಹೊಂದಿವೆ. 'ಹಸ್ತಪ್ರತಿಶಾಸ್ತ್ರ ಪ್ರಸ್ತುತತೆ,' 'ಕನ್ನಡ ಕೈಫಿಯತ್ತುಗಳು,' 'ಕನ್ನಡಶಾಸ್ತ್ರ ಸಾಹಿತ್ಯ,' 'ಕನ್ನಡ ಲೌಕಿಕಶಾಸ್ತ್ರ ಕಾವ್ಯಗಳು,' 'ನಿರೂಪಗಳು,' 'ಬಖೈರುಗಳು' ಮುಂತಾದ ಈ ಕ್ಷೇತ್ರದ ಪರಿಣಿತ ವಿದ್ವಾಂಸರಿಂದ ವಿಶೇಷ ಉಪನ್ಯಾಸ ಮಾಡಿಸಿ ಅವುಗಳಲ್ಲಿ ಕೆಲವು ಈಗಾಗಲೇ ಕೃತಿರೂಪದಲ್ಲಿ ಪ್ರಕಟಿಸಲಾಗಿದೆ.

'ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ'ದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಪದವಿ ಕಾಲೇಜುಗಳ ಪ್ರಾಧ್ಯಾಪಕರಿಗೆ ಹಸ್ತಪ್ರತಿಗಳ ಓದು, ಪ್ರತಿಮಾಡುವುದನ್ನು ತಿಳಿಸಿಕೊಡುವುದರ ಜೊತೆಗೆ ಅವುಗಳ ಅರ್ಥ, ಸ್ವರೂಪ, ಪ್ರಕಾರ, ಸಂರಕ್ಷಣೆ, ಪ್ರಯೋಜನ ಕುರಿತು ವಿದ್ವಾಂಸರಿಂದ ಪ್ರಬಂಧಗಳನ್ನು ಮಂಡಿಸಲಾಗುತ್ತದೆ. ಇಂತಹ ತರಬೇತಿ ಶಿಬಿರಗಳು ಬೆಳಗಾವಿ, ಗದಗ, ಶಿವಯೋಗ ಮಂದಿರ, ತಾಳಿಕೋಟಿ, ಬೀದರ್ ಬಾಗಲಕೋಟಿ, ಕೂಡಲಸಂಗಮ, ಧಾರವಾಡ, ಚಿತ್ರದುರ್ಗ ಮುಂತಾದ ಕಡೆ ನಡೆಸಿಕೊಂಡು ಬಂದಿದ್ದೇವೆ. ಹಸ್ತಪ್ರತಿಗಳ ಸಂಗ್ರಹದ ಅನುಕೂಲತೆಗಾಗಿ ಮತ್ತು ಜನಸಂಪರ್ಕ ಕಲ್ಪಿಸಿಕೊಳ್ಳುವ ಉದ್ದೇಶದಿಂದ ಹಸ್ತಪ್ರತಿಶಾಸ್ತ್ರ ವಿಭಾಗವು ಪ್ರತಿವರ್ಷ 'ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ' ಕಾರ್ಯಕ್ರಮವನ್ನು ರೂಪಿಸಿಕೊಂಡಿದೆ. ಕೆರೆ, ಬಾವಿ, ದೇವಾಲಯ, ಶಿಲ್ಪ, ಶಾಸನ, ನಾಣ್ಯ, ಸ್ಮಾರಕಗಳು, ಜಾನಪದ ಪರಿಕರಗಳು ಕಲಾಕೃತಿಗಳ ಸಂರಕ್ಷಣೆ ಮತ್ತು ಉಪಯುಕ್ತತೆಯನ್ನು ಜನರಿಗೆ ತಿಳಿಸಿಕೊಡುವುದು ಈ ಸಪ್ತಾಹದ ಉದ್ದೇಶವಾಗಿದೆ. ಇದರಿಂದ ವಿಭಾಗದ ಹಸ್ತಪ್ರತಿ ಭಂಡಾರಕ್ಕೆ ಬಹುಸಂಖ್ಯೆಯ ಹಸ್ತಪ್ರತಿಗಳನ್ನು ಜನರೇ ಸ್ವಂತಃ ತಂದುಕೊಟ್ಟ ನಿದರ್ಶನಗಳಿವೆ. ಮೊದಮೊದಲು ಕರ್ನಾಟಕ ಇತಿಹಾಸ ಅಕಾಡೆಮಿ ನೆರವಿನೊಂದಿಗೆ ಇಸಪ್ತಾಹ ಕಾರ್ಯಕ್ರಮವನ್ನು ವಿಭಾಗದಲ್ಲಿ ಅಕಾಡೆಮಿಯ ಸದಸ್ಯರಾದ ಡಾ. ಎಫ್.ಟಿ. ಹಳ್ಳಿಕೇರಿ ಮತ್ತು ಡಾ. ಕೆ. ರವೀಂದ್ರನಾಥ ಅವರು ಆರಂಭ ಮಾಡಿದರು. ಜಿಲ್ಲಾವಾರು ಆಯ್ದ ಕಾಲೇಜುಗಳಲ್ಲಿ ಪ್ರತಿವರ್ಷ ಈ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಬರಲಾಗಿದೆ. ಹಸ್ತಪ್ರತಿಶಾಸ್ತ್ರ ದಶಮಾನೋತ್ಸವ ಸಂದರ್ಭದಲ್ಲಿ(೨೦೦೬) ಡಿ.ಎಲ್. ನರಸಿಂಹಾಚಾರ್ ದತ್ತಿ ನಿಧಿಯನ್ನು ಅವರ ಕುಟುಂಬ ವರ್ಗದವರು ಸ್ಥಾಪಿಸಿದರು. ಈ ದತ್ತಿನಿಧಿಯಿಂದ ಪ್ರತಿವರ್ಷ ಹಳಗನ್ನಡ ಬೋಧನಾ ತರಬೇತಿ ಶಿಬಿರವನ್ನು ನಾಡಿನಾದ್ಯಂತ ಪದವಿ ಕಾಲೇಜುಗಳು, ಸಂಘ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಲಾಗುತ್ತದೆ. ಪದವಿ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರಿಗೆ ಹಳಗನ್ನಡ ಕಾವ್ಯಗಳ ಪದವಿಭಜನೆ ಅರ್ಥ, ಸ್ವರೂಪ, ಭಾಷಿಕ ಅಧ್ಯಯನವನ್ನು ಪರಿಚಯ ಮಾಡಿಕೊಡಲಾಗುತ್ತಿದೆ.

ಹಸ್ತಪ್ರತಿಶಾಸ್ತ್ರ ವಿಭಾಗದ 'ನುಡಿಹಬ್ಬ' ಅಥವಾ 'ಘಟಿಕೋತ್ಸವ'ವೆಂಬ ಹೆಗ್ಗಳಿಕೆಗೆ ಪಾತ್ರವಾದ "ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ" ಕನ್ನಡ ವಿಶ್ವವಿದ್ಯಾಲಯ ನಾಡಿಗೆ ನೀಡಿದ ಕೊಡುಗೆಯಾಗಿದೆ. ಈ ಹೊತ್ತು ಶರಣಸಾಹಿತ್ಯ

ಸಮ್ಮೇಳನ, ಕನ್ನಡ ಸಾಹಿತ್ಯ ಸಮ್ಮೇಳನ, ಜಾನಪದ ಸಮ್ಮೇಳನ, ದಲಿತಸಾಹಿತ್ಯ ಸಮ್ಮೇಳನಗಳು ನಡೆಯುತ್ತಿದ್ದವು. ಪ್ರಾಚೀನ ಕನ್ನಡಿಗರ ಜ್ಞಾನ ಪರಂಪರೆಯನ್ನು ಪ್ರತಿನಿಧಿಸುವ ಹಸ್ತಪ್ರತಿಗಳನ್ನು ಕುರಿತು ಎರಡು ದಿನಗಳ ಕಾಲ ಸಮ್ಮೇಳನವನ್ನು ೨೦೦೩ ರಿಂದ ಇಲ್ಲಿಯವರೆಗೆ ಹತ್ತೊಂಬತ್ತು ಸಮ್ಮೇಳನಗಳನ್ನು ನಡೆಸಲಾಗಿದೆ. ಶಾಸ್ತ್ರ ಕೃತಿಗಳು, ಪರಿಷ್ಕೃತಗೊಂಡ ಆವೃತ್ತಿಗಳು, ಈ ಕ್ಷೇತ್ರದಲ್ಲಿ ದುಡಿದ ವಿದ್ವಾಂಸರ ಸಾಧನೆಯ ಗೋಷ್ಠಿಗಳು, ಆಯಾ ಪ್ರದೇಶದ ಹಸ್ತಪ್ರತಿಗಳ ಸಂಪತ್ತು ಹೀಗೆ ಹಸ್ತಪ್ರತಿ–ಗ್ರಂಥಸಂಪಾದನೆಗೆ ಸಂಬಂಧಿಸಿದ ವಿಷಯಗಳು ಇಲ್ಲಿ ಚರ್ಚೆಯಾಗುತ್ತವೆ. ಉಪೇಕ್ಷಿತ ಕ್ಷೇತ್ರವಾದ ಹಸ್ತಪ್ರತಿಗಳನ್ನು ಕುರಿತು ಸ್ವತಂತ್ರ ಸಮ್ಮೇಳನ ರೂಪಿಸಬೇಕೆಂದು ವಿಭಾಗದ ಸಭೆಯಲ್ಲಿ ಪ್ರೊ. ಕೆ. ರವೀಂದ್ರನಾಥ ಅವರು ನೀಡಿದ ಸಲಹೆಯನ್ನು ವಿಭಾಗದ ಮುಖ್ಯಸ್ಥರು ಪ್ರತಿವರ್ಷ ಅನುಪಾಲನೆಗೆ ತರುವುದರ ಮೂಲಕ ಈ ಕ್ಷೇತ್ರದ ವಿದ್ವಾಂಸರನ್ನು ಗೌರವಿಸುವ ಕೆಲಸವನ್ನು ಮಾಡುತ್ತಿದ್ದಾರೆ.

೩. ಹಸ್ತಪ್ರತಿಶಾಸ್ತ್ರ ವಿಭಾಗದ ಉದ್ದೇಶಗಳು

ಕನ್ನಡ ಸಾಹಿತ್ಯ ಚರಿತ್ರೆಗೆ ಮತ್ತು ಕರ್ನಾಟಕ ಕವಿಚರಿತೆಯ ನಿರ್ಮಾಣಕ್ಕೆ ಅಡಿಗಲ್ಲಾಗಿರುವ ಹಸ್ತಪ್ರತಿಗಳನ್ನು ಕುರಿತು ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾದ "ಹಸ್ತಪ್ರತಿಶಾಸ್ತ್ರ ವಿಭಾಗ"ವು ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮತ್ತು ಸೂಚಿ ರಚನೆಯಂಥ ಸಾಂಪ್ರದಾಯಿಕ ವಿದ್ವತ್ತಿನ ಕೆಲಸಗಳೊಂದಿಗೆ ಭಿನ್ನಪಾಠದ ಚಲನಶೀಲತೆಯನ್ನು, ಹಸ್ತಪ್ರತಿಗಳ ಕಂಪ್ಯೂಟರೀಕರಣದಂಥ ನವೀನ ಚಿಂತನೆಗಳ ಮೂಲಕ ಹಸ್ತಪ್ರತಿ ಕ್ಷೇತ್ರವನ್ನು ವಿಸ್ತರಿಸುವ ಪ್ರಮುಖ ಉದ್ದೇಶವನ್ನು ಒಳಗೊಂಡಿದೆ. 'ಜನಗಣತಿ' ರೂಪದಲ್ಲಿ 'ಹಸ್ತಪ್ರತಿಗಣತಿ'ಯನ್ನು ಮಾಡಿ ಅಖಂಡ ಕರ್ನಾಟಕದ ಸಮಗ್ರ ಹಸ್ತಪ್ರತಿಗಳ "ಕೇಂದ್ರ ಹಸ್ತಪ್ರತಿಭಂಡಾರ"ವನ್ನು ಅಸ್ತಿತ್ವಕ್ಕೆ ತರಬೇಕೆಂಬ ಉದ್ದೇಶವನ್ನು ಹಾಕಿಕೊಂಡು ಇಲ್ಲಿಯ ಪ್ರಾಧ್ಯಾಪಕರು ದುಡಿಯುತ್ತಲಿದ್ದಾರೆ. ವಿಶೇಷವಾಗಿ ಕನ್ನಡ ಸಾಹಿತ್ಯ–ಸಂಸ್ಕೃತಿ ಅಧ್ಯಯನಗಳಿಗಿಂತ ಭಿನ್ನವಾಗಿ ಈ ವಿಭಾಗದ ಪ್ರಾಧ್ಯಾಪಕರು ಪಿಎಚ್.ಡಿ ವಿದ್ಯಾರ್ಥಿಗಳಿಗೆ ಶಾಸ್ತ್ರಸಾಹಿತ್ಯ, ಹಸ್ತಪ್ರತಿಭಂಡಾರಗಳು, ಹಸ್ತಪ್ರತಿ ಲಿಪಿಕಾರರ ಚರಿತ್ರೆ, ಗ್ರಂಥಸಂಪಾದಕರ ಸಂಪಾದನ ವೈಧಾನಿಕತೆ, ಲಘುಸಾಹಿತ್ಯ ಪ್ರಕಾರಗಳನ್ನು ಕುರಿತು ಅಧ್ಯಯನ ಮಾಡಿಸುವ ಉದ್ದೇಶವನ್ನು ತಮ್ಮ ಅಧ್ಯಯನ ಮತ್ತು ಮಾರ್ಗದರ್ಶನದ ಮೂಲಕ ತೋರಿಸಿಕೊಟ್ಟಿದ್ದಾರೆ.

ಸಾಂಸ್ಕೃತಿಕ ಅಧ್ಯಯನದ ಸಾಮಗ್ರಿಗಳನ್ನಾಗಿ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಒಳಪಡಿಸುವುದು. ಈ ಕ್ಷೇತ್ರದ ವಿದ್ವಾಂಸರ ಸಾಧನೆಗಳನ್ನು ಕುರಿತು ಹಸ್ತಪ್ರತಿ–ಗ್ರಂಥಸಂಪಾದನೆ ಸಾಧಕರಮಾಲೆಯನ್ನು ಪ್ರಕಟಿಸುವುದು. ಹಸ್ತಪ್ರತಿ ಲಿಪಿ ಮತ್ತು ಲಿಪಿಕಾರರ ಚರಿತ್ರೆಯನ್ನು ನಿರೂಪಿಸುವುದು, ಅಪ್ರಕಟಿತ ಮತ್ತು ಅನುಪಲಬ್ದ ಕೃತಿಗಳನ್ನು ಪ್ರಕಟಿಸುವುದು ಮತ್ತು ಪರಿಷ್ಕರಿಸುವುದು. ಹಸ್ತಪ್ರತಿಶಾಸ್ತ್ರ ಸ್ನಾತಕೋತ್ತರ ಡಿಪ್ಲೋಮ ಪದವಿಯನ್ನು ನೀಡುವುದು, ಇತ್ತೀಚೆಗೆ ನಮ್ಮ ವಿಭಾಗದಲ್ಲಿಯೂ ಪಿಡಿಎಫ್ ವಿದ್ಯಾರ್ಥಿಗಳು ಅಧ್ಯಯನ ನಿರತರಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಸಂಗ್ರಹಿತ ಹಸ್ತಪ್ರತಿಗಳನ್ನು ಗಣಕೀಕರಣಕ್ಕೆ ಒಳಪಡಿಸುವುದು. ಹಸ್ತಪ್ರತಿಶಾಸ್ತ್ರವನ್ನು ಮುಖ್ಯವಾಹಿನಿಗೆ ತರುವುದರ ಮೂಲಕ ಸ್ವತಂತ್ರವಾದ ಶೈಕ್ಷಣಿಕ ಅಧ್ಯಯನ ವಿಭಾಗವಾಗಿ ಅದರ ಕಾರ್ಯಸ್ವರೂಪವನ್ನು ನಿರೂಪಿಸುವ ಉದ್ದೇಶವನ್ನು ಇರಿಸಿಕೊಳ್ಳಲಾಗಿದೆ.

ಒಟ್ಟಾರೆ ನಾಡಿನ ಸಾಂಸ್ಕೃತಿಕ ಸಂಪತ್ತಿನ ಭಾಗವಾಗಿರುವ ಹಸ್ತಪ್ರತಿಗಳನ್ನು ಸಂರಕ್ಷಿಸುವ, ಅಧ್ಯಯನಕ್ಕೆ ಒಳಪಡಿಸುವ, ನಮ್ಮ ಪಠ್ಯಭಾಗವಾಗಿ ಬೋಧಿಸುವ ಉದ್ದೇಶದ ಜೊತೆಗೆ ಅನೇಕ ಮಹತ್ವದ ಕಾರ್ಯಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಸಾಹಿತ್ಯ–ಸಂಸ್ಕೃತಿ ಅಧ್ಯಯನ ಶಿಸ್ತಾಗಿ ಈ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುವ ಉದ್ದೇಶದಿಂದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಕಳೆದ ೨೫ ವರ್ಷಗಳಿಂದ ದುಡಿಯುತ್ತಾ ಬಂದಿದ್ದಾರೆ.

❑❑

೨

ವಿಭಾಗದ ಸಂಶೋಧನ ಯೋಜನೆಗಳು

ವೀರೇಶ ಬಡಿಗೇರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೇ ಒಂದು ಐತಿಹಾಸಿಕ ಹೆಗ್ಗುರುತು ಆದರೆ, ಅದರಲ್ಲಿ ಹಸ್ತಪ್ರತಿ ವಿಭಾಗದ ಸ್ಥಾಪನೆ ಮತ್ತೊಂದು ಐತಿಹಾಸಿಕ ಮೈಲುಗಲ್ಲಾಗಿದೆ. ವಸ್ತುಸಂಗ್ರಹಾಲಯ, ಕನ್ನಡ ವಿಭಾಗ ಅಥವಾ ಪುರಾತತ್ವ ವಿಭಾಗಗಳ ಅನುಬಂಧದಂತೆ ಇದ್ದ ಹಸ್ತಪ್ರತಿಗಳ ಅಧ್ಯಯನಕ್ಕೆ, ದೇಶದಲ್ಲಿಯೇ ಮೊದಲಬಾರಿಗೆ ಒಂದು ಶೈಕ್ಷಣಿಕ ಅಧ್ಯಯನ ವಿಭಾಗವನ್ನು ಪ್ರಾರಂಭಿಸಿದ ಕೀರ್ತಿ ಕನ್ನಡ ವಿಶ್ವವಿದ್ಯಾಲಯದ್ದಾಗಿದೆ. ಸಂಸ್ಥಾಪಕ ಕುಲಪತಿಗಳಾಗಿದ್ದ ಡಾ. ಚಂದ್ರಶೇಖರ ಕಂಬಾರ ಅವರ ದೂರದೃಷ್ಟಿಯ ಫಲವಾಗಿ ಹುಟ್ಟಿದ ಹಸ್ತಪ್ರತಿಶಾಸ್ತ್ರ ವಿಭಾಗವು, ಇಂದು ೨೫ರ ಹರೆಯದಲ್ಲಿದೆ. ಅನೇಕ ಉಪೇಕ್ಷಿತ ವಿಷಯಗಳ ಸಂಗ್ರಹ, ಸಂರಕ್ಷಣೆ, ಸಂಶೋಧನೆ, ಅಧ್ಯಯನ ಹಾಗೂ ಪ್ರಕಟಣೆಗಳ ಕೆಲಸಕ್ಕಾಗಿ ಶೈಕ್ಷಣಿಕ ಯೋಜನೆಗಳನ್ನು ರೂಪಿಸಿಕೊಂಡು ವಿಭಾಗವು ಕಾರ್ಯನಿರತವಾಗಿದೆ. ಇದರಲ್ಲಿ ಬಹುಮುಖ್ಯವಾಗಿ ಸಾಂಸ್ಥಿಕ ಮತ್ತು ವೈಯಕ್ತಿಕ ಯೋಜನೆಗಳೆಂದು ಎರಡು ಭಾಗಗಳಿವೆ. ವಿಶ್ವವಿದ್ಯಾಲಯದ ಅನುದಾನದೊಂದಿಗೆ ರಾಜ್ಯ ಸರಕಾರ ಮತ್ತು ಮತ್ತು ಕೇಂದ್ರ ಸರಕಾರದ ವಿವಿಧ ಇಲಾಖೆಗಳಿಂದಲೂ ಧನಸಹಾಯ ಪಡೆದು ವಿಭಾಗವು ಶೈಕ್ಷಣಿಕ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತ ಬಂದಿದೆ. ಸಾಂಸ್ಥಿಕ ಯೋಜನೆ ಸ್ವರೂಪವು ಹಸ್ತಪ್ರತಿಗಳ ಸರ್ವೆ, ಸಂಗ್ರಹ, ಸಂರಕ್ಷಣೆ ಹಾಗೂ ಸೂಚೀಕರಣ ರೂಪದಲ್ಲಿದ್ದರೆ. ವೈಯಕ್ತಿಕ ಯೋಜನೆಗಳು ಅಧ್ಯಾಪಕರ ಹೆಚ್ಚಿನ ಓದು ಹಾಗೂ ಅಧ್ಯಯನ ಆಸಕ್ತಿಗಳ ಹಿನ್ನೆಲೆಯಲ್ಲಿ ರೂಪ ಪಡೆದಿರುತ್ತವೆ. ಸಾಂಸ್ಥಿಕ ಯೋಜನೆಗಳ ನಿರಂತರ ಸ್ವರೂಪದ್ದಾಗಿದ್ದರೆ, ವೈಯಕ್ತಿಕ ಯೋಜನೆಗಳು ಕಾಲಬದ್ಧವಾಗಿರುತ್ತವೆ. ಅಂತಹ ಅರ್ಥಪೂರ್ಣ ಯೋಜನೆಗಳನ್ನು ವಿಭಾಗದ ಪ್ರಾಧ್ಯಾಪಕರು ಇದುವರೆಗೂ ಪೂರೈಸುತ್ತಾ ಬಂದಿದ್ದಾರೆ.

೧. ಸಾಂಸ್ಥಿಕ ಯೋಜನೆಗಳು

ಸಾಂಸ್ಥಿಕ ಯೋಜನೆ ವಿಭಾಗದ ನಿರ್ದಿಷ್ಠ ಶೈಕ್ಷಣಿಕ ಗೊತ್ತು ಗುರಿಗಳನ್ನು, ಆಲೋಚನ ಕ್ರಮಗಳನ್ನು ಪ್ರತಿನಿಧಿಸುತ್ತದೆ. ವಿಭಾಗದ ಆರು ಜನ ಪ್ರಾಧ್ಯಾಪಕರು ಕರ್ನಾಟಕದಾದ್ಯಂತ ಕ್ಷೇತ್ರಕಾರ್ಯ ಮಾಡಿ ಹಸ್ತಪ್ರತಿ ನೆಲೆಗಳನ್ನು ಗುರುತಿಸಿ, ಸಂಗ್ರಹಿಸಿ, ಸಂರಕ್ಷಿಸಿ, ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸುತ್ತಾರೆ.

೧೯೯೬ರಿಂದ 'ಹಸ್ತಪ್ರತಿ ಸಂಗ್ರಹ ಮತ್ತು ಸೂಚೀಕರಣ' ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಇದುವರೆಗೂ ಸುಮಾರ ೫೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಡಾ. ವೀರೇಶ ಬಡಿಗೇರ ಡಾ. ಎಸ್.ಆರ್.ಚನ್ನವೀರಪ್ಪ ಒಂದು ತಂಡವಾಗಿ, ಡಾ. ಎಫ್.ಟಿ.ಹಳ್ಳಿಕೇರಿ, ಡಾ. ಕೆ.ರವೀಂದ್ರನಾಥ ಒಂದು ತಂಡವಾಗಿ ಸಂಗ್ರಹಿಸಿದ ಹಸ್ತಪ್ರತಿಗಳನ್ನು ೪೦೦ ಕಟ್ಟಿಗೊಂದರಂತೆ, ಈಗ ಒಟ್ಟು ಐದು ಹಸ್ತಪ್ರತಿ ಸೂಚಿ ಸಂಪುಟಗಳನ್ನು ಪ್ರಕಟಿಸಿದ್ದಾರೆ. ಆರನೆಯದ್ದು ಪ್ರಕಟಣೆಯ ಹಂತದಲ್ಲಿದೆ. ಈ ಸೂಚಿಗಳಲ್ಲಿ ಒಟ್ಟು ೨೪೦೦ ಹಸ್ತಪ್ರತಿಗಳ ಮಾಹಿತಿ ಇದೆ. ಪ್ರತಿಯೊಂದು ಸೂಚಿಯ ಸ್ವರೂಪವು ಕೃತಿ ಮತ್ತು ಪ್ರತಿ ಎಂದು ಎರಡು ಭಾಗಗಳನ್ನು ಹೊಂದಿರುತ್ತದೆ. ಕೃತಿ ಭಾಗದಲ್ಲಿ ಕೃತಿಯ ಹೆಸರು, ಕವಿ, ಕಾಲ, ಕೃತಿಯ ಸ್ವರೂಪ(ಗದ್ಯ-ಪದ್ಯ) ಮತ್ತು ಕೃತಿಯ ವಸ್ತು ವಿಷಯದ ಮಾಹಿತಿಗಳಿರುತ್ತವೆ. ಪ್ರತಿ ಭಾಗದಲ್ಲಿ ಪ್ರತಿಯ ಸ್ವರೂಪ, ಆಕಾರ, ಅಳತೆ, ಕಟ್ಟಿನ ಸಂಖ್ಯೆ, ಅದರ ಮಾಧ್ಯಮ (ತಾಡೋಲೆ, ಕಾಗದ, ಕಡತ,) ಪ್ರತಿಯ ಭಾಷೆ, ಅದರ ಸ್ವರೂಪ, ಸಮಗ್ರ, ಅಸಮಗ್ರ, ಅದರಲ್ಲಿನ ಇತರೆ ಕೃತಿಗಳ ವಿವರಗಳನ್ನು ಹೊಂದಿರುತ್ತದೆ. ಕೃತಿಯ ಆದಿ ಮತ್ತು ಅಂತ್ಯಗಳ ಪರಿಚಯವೂ ಇದೆ ಭಾಗದಲ್ಲಿ ಇರುತ್ತದೆ. ಇದರಿಂದ ಪ್ರಕಟಿತ ಅಪ್ರಕಟಿತ ಕೃತಿಗಳನ್ನು ಗುರುತಿಸಲು ಸಾಧ್ಯವಾಗುತ್ತವೆ. ಆಧುನಿಕ ಪೂರ್ವ ಸಾಹಿತ್ಯದ ಅಧ್ಯಯನಕ್ಕೆ ವಿಭಾಗದ ಹಸ್ತಪ್ರತಿ ಸೂಚಿಗಳು ಮಾರ್ಗದರ್ಶಿಯಾಗಿವೆ.

೨. ವೈಯಕ್ತಿಕ ಯೋಜನೆಗಳು

ವೈಯಕ್ತಿಕ ಯೋಜನೆಗಳು ಕಾಲಬದ್ಧ ಯೋಜನೆಗಳಾಗಿವೆ. ವಿಭಾಗದ ಅಧ್ಯಾಪಕರೆಲ್ಲರೂ ವಿಭಾಗ ಮತ್ತು ಅವರ ಶೈಕ್ಷಣಿಕ ಅಧ್ಯಯನ ಶಿಸ್ತಿನ ಭಾಗವಾಗಿ ಕಳೆದ ೨೫ ವರ್ಷಗಳಿಂದ ವೈಯಕ್ತಿಕ ಯೋಜನೆಗಳನ್ನು ಕೈಗೊಳ್ಳತ್ತಾ ಬಂದಿದ್ದಾರೆ. ಯೋಜನೆಗಳ ಸ್ಥೂಲನೋಟ ಕೆಳಗಿನಂತಿದೆ.

೧. ವೀರೇಶ ಬಡಿಗೇರ

ಸಾಹಿತ್ಯ, ಸಂಸ್ಕೃತಿ, ಜಾನಪದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಇವರಿಗೆ ಆಸಕ್ತಿ. ಜಾನಪದ ಕ್ಷೇತ್ರದ ಬಗ್ಗೆ ಅತೀವ ಪ್ರೀತಿ ಇರುವ ಡಾ. ವೀರೇಶ ಬಡಿಗೇರ ಅವರು 'ಗುಳ್ಳವ್ವ: ಆಚರಣೆ ಮತ್ತು ವಿಶ್ಲೇಷಣೆ' ಎನ್ನುವ ಯೋಜನೆಯನ್ನು ೧೯೯೫ ಮತ್ತು ೧೯೯೬ರಲ್ಲಿ ಪೂರೈಸಿದ್ದಾರೆ. ಭೂಮಿ, ಬೆಳೆ, ಮಳೆ, ಮಕ್ಕಳೊಂದಿಗಿನ ವಿವಿಧ ಸಾಂಸ್ಕೃತಿಕ ಸಂಬಂಧಗಳನ್ನು ಕ್ಷೇತ್ರಾಧ್ಯಯನದ ಮೂಲಕ ಶೋಧಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಪ್ರಕಟಣಾ ಯೋಜನೆಯಾದ 'ನಮ್ಮವರು ಮಾಲೆ'ಯಲ್ಲಿ ೧೯೯೬ರಲ್ಲಿ ಪ್ರಗತಿಶೀಲ ಸಾಹಿತಿಗಳಾದ 'ಡಾ. ಬಸವರಾಜ ಕಟ್ಟೀಮನಿ' ಯವರ ಕುರಿತು ಕಿರು ಯೋಜನೆಯನ್ನು ಮಾಡಿದ್ದಾರೆ. ಇದರಲ್ಲಿ ಕಟ್ಟೀಮನಿಯವರ ಬದುಕು ಮತ್ತು ಬರಹದ ವೈಶಿಷ್ಟ್ಯಗಳ ಕುರಿತು ಚರ್ಚಿಸಿದ್ದಾರೆ. ೧೯೯೭ನೇ ಸಾಲಿನಲ್ಲಿ 'ಗೃಹವಾಸ್ತು ಮತ್ತು ಶಿಲ್ಪಶಾಸ್ತ್ರ' ಕೃತಿಯನ್ನು ಎರಡು ಹಸ್ತಪ್ರತಿಗಳೊಂದಿಗೆ ಸಂಪಾದನೆ ಮಾಡಿದ್ದಾರೆ. ಕನ್ನಡದಲ್ಲಿ ದೊರೆತಿರುವ ಸನತ್ಕುಮಾರ ವಾಸ್ತು ಪರಂಪರೆಯ ಮೊದಲ ಅನುವಾದ ಕೃತಿ ಇದಾಗಿದೆ. ಈ ಹಸ್ತಪ್ರತಿ ಬಾಗಲಕೋಟೆ ಜಿಲ್ಲೆಯ ಬಿಳಗಿ ತಾಲೂಕಿನ ಮನ್ನಿಕೇರಿಯ ಶ್ರೀ ಸಿದ್ದಪ್ಪ ಪತ್ತಾರ ಅವರ ಮನೆಯಲ್ಲಿ ಸಿಕ್ಕಿತ್ತು. ೧೯೯೮-೧೯೯೯ನೇ ಸಾಲಿನಲ್ಲಿ 'ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟವೇರ್ ತಂತ್ರಜ್ಞಾನ' ಯೋಜನೆ ಪೂರೈಸಿ ಅದರಲ್ಲಿ ಹಸ್ತಪ್ರತಿಗಳ ಗಣಕೀರಣ ಪ್ರಕ್ರಿಯೆಗಳ ಬಗೆ ವಿವರಿಸಿದ್ದಾರೆ.

೧೯೯೯ನೆಯ ಸಾಲಿನಲ್ಲಿ ಹಸ್ತಪ್ರತಿಗಳಲ್ಲಿ ದೊರೆತ ಲಾವಣಿಗಳನ್ನು 'ಹಳೆಯ ಲಾವಣಿಗಳು' ಎಂದು ಸಂಪಾದಿಸಿದ್ದಾರೆ. ಇದರಲ್ಲಿ ಐತಿಹಾಸಿಕ, ಶೃಂಗಾರ, ನೀತಿಪ್ರಧಾನ ಹಾಡುಗಳು ಹೊಸ ಕವಿಗಳಿಂದ ರಚಿತವಾಗಿರುವುದನ್ನು ಗುರುತಿಸಿದ್ದಾರೆ. ಇವೆಲ್ಲವೂ ಅಪ್ರಕಟಿತ ಎನ್ನುವುದನ್ನು ಹೇಳಿದ್ದಾರೆ. ೨೦೦೦ದಿಂದ ೨೦೦೨ರ ವರೆಗೆ 'ವಿಷ್ಣುಶರ್ಮನ ಪಂಚತಂತ್ರ

ಕಥೆಗಳ ಕನ್ನಡ ಸಾರ ಸಂಗ್ರಹ' ಯೋಜನೆಯನ್ನು ಡಾ. ಎಸ್.ಆರ್.ಚೆನ್ನವೀರಪ್ಪನವರೊಂದಿಗೆ ಸಂಪಾದಿಸಿದ್ದಾರೆ. ಶಾಸ್ತ್ರೀಯ ಸಂಪಾದನೆ ವಿಧಾನಕ್ಕಿಂತ ಭಿನ್ನವಾದ ವಿಧಾನವನ್ನು ಅನುಸರಿಸಿರುವುದು ಈ ಸಂಪಾದನೆಯ ವೈಶಿಷ್ಟ್ಯವಾಗಿದೆ. ೨೦೦೨ರಿಂದ ೨೦೦೪ರಲ್ಲಿ 'ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು' ಎನ್ನುವ ವಿನೂತನ ಯೋಜನೆಯನ್ನು ಪೂರೈಸಿದ್ದಾರೆ. ಹಸ್ತಪ್ರತಿಗಳ ಪ್ರತೀಕರಣಕ್ಕೆ, ಲಿಪೀಕರಣಕ್ಕೆ ಕಾರಣವಾಗುವ ವಿವಿಧ ಸಾಂಸ್ಕೃತಿಕ ನೆಲೆಗಳನ್ನು ಶೋಧಿಸಿದ್ದಾರೆ. ೨೦೦೬ರಲ್ಲಿ ಹನ್ನೆರಡನೆಯ ಶತಮಾನದ ಪ್ರಮುಖ, ಆದರೆ ಉಪೇಕ್ಷೆಗೆ ಒಳಗಾದ 'ಬಾಚಿಕಾಯಕದ ಬಸವಯ್ಯನ ವೃತ್ತಿ ಹಾಗೂ ತತ್ವಮೀಮಾಂಸೆ' ಎನ್ನುವ ಯೋಜನೆ ಪೂರೈಸಿದ್ದಾರೆ. ಇಲ್ಲಿ ಬಸವಯ್ಯನ ವಚನಗಳ ಅಭಿವ್ಯಕ್ತಿಯ ವಿಶೇಷತೆಗಳ ಕುರಿತು ಶೋಧಿಸಿದ್ದಾರೆ. ೨೦೦೭ರಿಂದ ೨೦೧೦ರ ವರೆಗೆ 'ಕನ್ನಡ ಮೋಡಿಲಿಪಿ ಸಂರಚನೆ ಮತ್ತು ಸವಂರ್ಧನೆ' ಯೋಜನೆ ಪೂರೈಸಿದ್ದಾರೆ. ಕನ್ನಡ ಮತ್ತು ಮೋಡಿಲಿಪಿಯ ಬೆಳವಣಿಗೆ ಕುರಿತ ವಿಸ್ತಾರ ಅಧ್ಯಯನ ಇದಾಗಿದೆ. ಕನ್ನಡದಲ್ಲಿ ಇದೊಂದು ವಿನೂತನ ಪ್ರಯತ್ನವಾಗಿದೆ. ೨೦೧೨ರಲ್ಲಿ 'ಭದ್ರಕಾಳಿ ವಿವಾಹ' ಎನ್ನುವ ಕೃತಿಯನ್ನು ಏಕೈಕ ಹಸ್ತಪ್ರತಿ ಸಹಾಯದಿಂದ ಸಂಪಾದಿಸಿದ್ದಾರೆ. ವಿರೂಪಣ್ಣ ಎನ್ನುವ ವಿಶ್ವಕರ್ಮ ಕವಿಯ ಹೊಸ ಶೋಧ ಮಾಡಿದ್ದಾರೆ. ಈ ಕೃತಿಯಲ್ಲಿ ವಿಶ್ವಕರ್ಮ ಗುರು ಪೀಠಗಳ ಉಲ್ಲೇಖ ಇರುವುದನ್ನು ಪ್ರಸ್ತಾಪಿಸಿದ್ದಾರೆ. ೨೦೧೪ರಲ್ಲಿ 'ಕನ್ನಡ ಹಸ್ತಪ್ರತಿಗಳ ಮೌಖಿಕ ಸಂಕಥನ' ಎನ್ನುವ ವಿನೂತನ ಯೋಜನೆ ಮಾಡಿದ್ದಾರೆ. ಮಾತು ಬರೆಹ, ಬರೆಹ ಮಾತು, ಮಾತು ಲಿಪಿಯಾಗುವ, ಲಿಪಿ ಮಾತಾಗುವ ವೈವಿಧ್ಯತೆಗಳನ್ನು ಗುರುತಿಸಿ, ಕನ್ನಡಿಗರು ಸ್ಥಿರ ಪಠ್ಯಕ್ಕಿಂತ ಚರ ಪಠ್ಯದ ಹರಿಕಾರರಾಗಿದ್ದನ್ನು ಗುರುತಿಸಿದ್ದಾರೆ. ೨೦೧೫ನೇ ಸಾಲಿನಲ್ಲಿ 'ಜಲಶಾಸ್ತ್ರ ಹಸ್ತಪ್ರತಿಗಳು ಮತ್ತು ದೇಶಿ ವಿವೇಕ' ಎನ್ನುವ ಯೋಜನೆ ಕೈಗೊಂಡಿದ್ದಾರೆ. ಕನ್ನಡಿಗರ ನೆಲ, ಜಲ, ಬೀಜ, ಬೆಳೆ, ಸಿಹಿನೀರಿನ ಹಾಗೂ ನೀರಿನ ಇರುವಿಕೆಯನ್ನು ಗುರುತಿಸುವ ಪಾರಂಪರಿಕ ನೆಲೆಗಳ ಕುರಿತು ಶೋಧಿಸಿದ್ದಾರೆ.

೨೦೧೫–೨೦೧೬ರಲ್ಲಿ 'ತತ್ವಕೊರವಂಜಿ' ಕೃತಿ ಸಂಪಾದನೆ ಯೋಜನೆ ಮಾಡಿದ್ದು, ಕೊರವಂಜಿಯ ಕುಲಮೂಲ ನೆಲೆಗಳು, ಜ್ಞಾನ ಮತ್ತು ಕೌಶಲ್ಯಗಳು, ಶೈವ ಮತ್ತು ವೈಶಿಷ್ಟ್ಯ ಪಂಥಗಳು ಕೊರವಂಜಿಯನ್ನು ಗ್ರಹಿಸಿದ ವಿವಿಧ ಆಯಾಮಗಳ ಕುರಿತು ಚರ್ಚಿಸಿದ್ದಾರೆ. ೨೦೧೮–೧೯ನೇ ಸಾಲಿನಲ್ಲಿ 'ಕರ್ನಾಟಕದ ಆಯಗಾರರು' ಯೋಜನೆ ಮಾಡಿದ್ದಾರೆ. ದುಡಿಯುವ ವರ್ಗಗಳ ಸಾಂಸ್ಕೃತಿಕ ಹಾಗೂ ಸಾಮಾಜಿಕ, ಐತಿಹಾಸಿಕ ಹಾಗೂ ಅವರ ಪಾರಂಪರಿಕ ಉತ್ಪಾದನಾ ಕೌಶಲ್ಯಗಳ ಮೂಲಕ ಗುರುತಿಸಿದ್ದಾರೆ. ಬಹುಮುಖ್ಯವಾಗಿ ಪ್ರಬಲ ಜಾತಿ, ಮತ್ತು ಧರ್ಮಗಳು ದುಡಿವ ಜನರ ವಿಜ್ಞಾನ ಮತ್ತು ತಾಂತ್ರಿಕ ಕೌಶಲ್ಯಗಳನ್ನು ವಿಸ್ಮೃತಿಗೆ ಸರಿಸಿದ ಹುನ್ನಾರಗಳ ಕುರಿತು ವಿವರಿಸಿದ್ದಾರೆ. ೨೦೧೯–೨೦೨೦ನೇ ಸಾಲಿನಲ್ಲಿ 'ಮಳೆಯರಾಜ ಕಾವ್ಯ'ವನ್ನು ಎರಡು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದ್ದಾರೆ. ೨೦೨೧–೨೦೨೨ನೇ ಸಾಲಿನಲ್ಲಿ 'ಕರ್ನಾಟಕ ಚರ್ಮವಾದ್ಯ' ಯೋಜನೆ ಪೂರೈಸಿದ್ದಾರೆ. ವಿಶೇಷವಾಗಿ ದಲಿತರ ಚರ್ಮ ವಿಜ್ಞಾನ ಮತ್ತು ಧ್ವನಿ ಜ್ಞಾನದ ಕೌಶಲ್ಯಗಳ ಕುರಿತು ಅಧ್ಯಯನ ಮಾಡಿದ್ದಾರೆ. ಬಹುಶಿಸ್ತೀಯ ಮತ್ತು ಅಂತರ ಶಿಸ್ತೀಯ ಸ್ವಭಾವವುಳ್ಳ ಡಾ. ವೀರೇಶ ಬಡಿಗೇರ ಅವರ ಯೋಜನೆಗಳು ಕನ್ನಡ ಸಾಹಿತ್ಯ ಸಂಸ್ಕೃತಿಗೆ ವಿನೂತನ ಸೇರ್ಪಡೆಗಳಾಗಿವೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಒಟ್ಟು ಹದಿನಾರಕ್ಕೂ ಹೆಚ್ಚು ಯೋಜನೆಗಳನ್ನು ಪೂರೈಸಿದ್ದಾರೆ.

೨. ಎಫ್.ಟಿ.ಹಳ್ಳಿಕೇರಿ

ಡಾ. ಎಫ್.ಟಿ.ಹಳ್ಳಿಕೇರಿ ಅವರು ವೈಯಕ್ತಿಕ ಯೋಜನೆಯಡಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಹತ್ತಕ್ಕೂ ಹೆಚ್ಚು ಯೋಜನೆಗಳನ್ನು ಪೂರೈಸಿದ್ದಾರೆ. ಕನ್ನಡದ ಲಘು ಸಾಹಿತ್ಯ ಪ್ರಕಾರವಾದ ಕಾಲಜ್ಞಾನ ಸಾಹಿತ್ಯದ ಬಗ್ಗೆ ಅಷ್ಟೊಂದು

ಅಧ್ಯಯನ ನಡೆದಿರಲಿಲ್ಲ. ಇದನ್ನು ಗಮನಿಸಿ ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯದ ಶೋಧ ಮತ್ತು ಪರಿಷ್ಕರಣವನ್ನು ೧೯೯೮ರಲ್ಲಿ ಕೈಕೊಂಡಿದ್ದಾರೆ. ಹಂಪಿ ಪರಿಸರದ ಕಾಲಜ್ಞಾನಿಯಾದ ಎಮ್ಮೆ ಬಸವಣ್ಣ ಸಮಕಾಲೀನ ಸಂದರ್ಭದಲ್ಲಿ ಹಂಪಿಯ ಆಗುಹೋಗುಗಳನ್ನು ತನ್ನ ಕಾಲಜ್ಞಾನ ಹಾಡುಗಳಲ್ಲಿ ಹೇಳಿದ್ದಾನೆ. ಅಂಥ ಎಲ್ಲ ಹಾಡುಗಳನ್ನು ಕ್ಷೇತ್ರಿಯ ಮತ್ತು ಕೇಂದ್ರಿಯ ನೆಲೆಯಲ್ಲಿ ಸಂಗ್ರಹಿಸಿ ಪರಿಷ್ಕರಿಸಿದ್ದಾರೆ. ಕರಸ್ಥಲ ವೀರಣ್ಣೊಡೆಯ, ಕರಸ್ಥಲ ನಾಗಿದೇವ, ಕರಸ್ಥಲ ಮಲ್ಲಿಕಾರ್ಜುನೊಡೆಯರ ಸಾಹಿತ್ಯವನ್ನು ಒಂದೆಡೆ ಪರಿಷ್ಕರಿಸಿ ಪ್ರಕಟಿಸುವ ಕಾರ್ಯವನ್ನು ಕರಸ್ಥಲ ಸಾಹಿತ್ಯದ ಪರಿಷ್ಕರಣ ಯೋಜನೆಯಡಿ ಪೂರೈಸಿದ್ದಾರೆ(೧೯೯೯). ಸ್ವರವಚನ, ಕೀರ್ತನೆಗಳಂತೆ ಜೈನ ಸಾಹಿತ್ಯದಲ್ಲಿ ಹಾಡುಗಳು ಪ್ರಸಿದ್ಧವಾಗಿವೆ. ಅಂಥ ಎಲ್ಲ ಹಾಡುಗಳನ್ನು ಕನ್ನಡ ಜೈನ ಹಾಡುಗಳು ಹೆಸರಿನಲ್ಲಿ ಪರಿಷ್ಕರಿಸಿ ಪ್ರಕಟಿಸಲಾಗಿದೆ(೨೦೦೦).

ಅಪ್ರಕಟಿತ ಸಾಹಿತ್ಯ ಕೃತಿಗಳ ಶೋಧ ಮತ್ತು ಪರಿಷ್ಕರಣೆ ಡಾ. ಎಫ್.ಟಿ.ಹಳ್ಳಿಕೇರಿ ಅವರು ವೈಯಕ್ತಿಕ ಯೋಜನೆಯಡಿ ಕಳೆದ ಇಪ್ಪತ್ತು ವರ್ಷಗಳಿಂದ ಪೂರೈಸುತ್ತ ಬಂದಿದ್ದಾರೆ. ಕನ್ನಡ ಲೌಕಿಕ ಕಾವ್ಯಗಳಲ್ಲಿ ಅಶ್ವಶಾಸ್ತ್ರ ಕುರಿತು ಅನೇಕ ಕವಿಗಳು ಕಾವ್ಯಗಳನ್ನು ರಚನೆ ಮಾಡಿದ್ದಾರೆ. ಅಂಥವರಲ್ಲಿ ಹಿರಿಯಣ್ಣ ಕವಿಯೂ ಒಬ್ಬ. ಈತ ಹರಪನಹಳ್ಳಿ ಪಾಳೆಯಗಾರರ ಕಾಲದಲ್ಲಿ ಪುರೋಹಿತನಾಗಿದ್ದನು. ಈತ ಅಶ್ವಶಾಸ್ತ್ರ ಕುರಿತು ಹಯರತ್ನಶ್ರೇಣಿ ಹೆಸರಿನ ಕಾವ್ಯವನ್ನು ರಚನೆ ಮಾಡಿದ್ದನು. ಅದನ್ನು ಎಫ್.ಟಿ.ಹಳ್ಳಿಕೇರಿ ಅವರು ಶೋಧಿಸಿ ಪರಿಷ್ಕರಿಸಿದ್ದಾರೆ. ಅವಧೂತರಲ್ಲಿ ಒಬ್ಬನಾದ ಚಿದಾನಂದಾವಧೂತರನ್ನು ಕುರಿತು ಅಯ್ಯಪ್ಪ ಕವಿ ಕಾವ್ಯವೊಂದನ್ನು ಬರೆದಿದ್ದಾನೆ. ಆ ಕಾವ್ಯದ ಮೂಲಕ ಚಿದಾನಂದಾವಧೂತರ ಬಗ್ಗೆ ಅನೇಕ ಹೊಸ ಹೊಸ ಸಂಗತಿಗಳಿದ್ದುದು ಗೊತ್ತಾಯಿತು. ಹಾಗೆಯೇ ಇನ್ನೊಂದು ಉಪೇಕ್ಷಿತ ಮತ್ತು ಅಪ್ರಕಟಿತ ಕಾವ್ಯ ಮಲ್ಲಿಕಾರ್ಜುನ ಕವಿಯ ಹಾಲಸಿದ್ಧೇಶ್ವರ ಸಾಂಗತ್ಯ. ಸ್ಥಳೀಯ ಮಠಾಧಿಪತಿಯೊಬ್ಬನ ಚರಿತ್ರೆಯನ್ನು ಇಲ್ಲಿ ಕಾಣಬಹುದು. ಈ ಕಾವ್ಯದ ಮೂಲಕ ಸ್ಥಳೀಯ ಚರಿತ್ರೆಯನ್ನು ಅರಿತುಕೊಳ್ಳಲು ಸಾಧ್ಯವಾಗಿದೆ. ಕನ್ನಡ ಲೌಕಿಕಶಾಸ್ತ್ರದಲ್ಲಿ ಕಾಮಶಾಸ್ತ್ರವೂ ಒಂದು. ಈ ಶಾಸ್ತ್ರದಲ್ಲಿ ರಚನೆಯಾದುದು ಕೋಕಶಾಸ್ತ್ರ. ಇದನ್ನು ರಚನೆ ಮಾಡಿದ ಕವಿ ಮಲ್ಲಣ್ಣ. ಕಾಮಶಾಸ್ತ್ರ ಕುರಿತು ವಿವರವಾಗಿ ತಿಳಿಸಿಕೊಡುವ ಕೃತಿ ಇದಾಗಿದೆ. ಹದಿನೇಳನೆಯ ಶತಮಾನದ ಕೊನೆಯ ಭಾಗದಲ್ಲಿದ್ದವನು ಕೋಳೂರು ಶಂಕರ ಕವಿ. ಈತ ಚೋರಬಸವೇಶ್ವರನ ಕಾವ್ಯ, ತಿಂಥಿಣಿ ಮೋನಪ್ಪಯ್ಯನ ಚಾರಿತ್ರ, ನವಮೋಹನ ತರಂಗಿಣಿ, ಮಾಧವಾಂಕ ಚರಿತೆ ಕಾವ್ಯಗಳನ್ನು ರಚನೆ ಮಾಡಿದ್ದಾನೆ. ಮಾಧವಾಂಕ ಚರಿತೆಯು ಸತ್ಯೇಂದ್ರಚೋಳನ ಕಥೆಯನ್ನು ನಿರೂಪಿಸುವ ಷಟ್ಪದಿ ಕಾವ್ಯ. ಇದನ್ನು ಎರಡು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಲಾಗಿದೆ. ವಿಜಯನಗರ ಅರಸುಮನೆತನದ ಎರಡನೆಯ ಪ್ರೌಢದೇವರಾಯನ ಕಾಲದಲ್ಲಿ ಮಂತ್ರಿಯಾಗಿದ್ದವನು ಲಕ್ಕಣ್ಣ ದಂಡೇಶ. ಈತ ಕವಿಯಾಗಿ, ಕಲಿಯಾಗಿ, ಆಡಳಿತಗಾರನಾಗಿ ಪ್ರಸಿದ್ಧನಾಗಿದ್ದವನು. ಶಿವತತ್ವ ಚಿಂತಾಮಣಿ ಎಂಬ ಬೃಹತ್ ಕಾವ್ಯವನ್ನು ರಚಿಸಿದ್ದಾನೆ. ಪಂಡಿತ ಎಸ್.ಬಸಪ್ಪನವರು ಬಹಳ ವರ್ಷಗಳ ಹಿಂದೆ ಈ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದರು. ಈಗ ಎಫ್.ಟಿ.ಹಳ್ಳಿಕೇರಿ ಅವರು ತಮಗೆ ದೊರೆತ ಮತ್ತೊಂದು ಹಸ್ತಪ್ರತಿಯ ನೆರವಿನಿಂದ ಈ ಕಾವ್ಯವನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಕನ್ನಡ ಲೌಕಿಕಶಾಸ್ತ್ರ ಸಾಹಿತ್ಯ ಕುರಿತು ತಾತ್ವಿಕ ಹಿನ್ನೆಲೆಯಲ್ಲಿ ಕೃತಿಯೊಂದನ್ನು ರಚನೆ ಮಾಡುವ ಯೋಜನೆಯನ್ನು ಇವರು ಪೂರೈಸಿದ್ದಾರೆ. ಕನ್ನಡದ ಲೌಕಿಕಶಾಸ್ತ್ರ ಪ್ರಕಾರಗಳ ವಿಷಯ ವೈವಿಧ್ಯ, ಸ್ವರೂಪ ಹಾಗೂ ಆಯಾ ಶಾಸ್ತ್ರಗಳಲ್ಲಿ ರಚನೆಗೊಂಡ ಸಾಹಿತ್ಯ ಕೃತಿಗಳ ಕುರಿತು ಇಲ್ಲಿ ಚರ್ಚಿಸಿದ್ದಾರೆ. ಕನ್ನಡ ಹಸ್ತಪ್ರತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ತಲುಪಿಸಿದವರಲ್ಲಿ ಲಿಪಿಕಾರರ ಪಾತ್ರ ದೊಡ್ಡದು. ಇಂಥ ಲಿಪಿಕಾರರ ಸಂಕಥನವನ್ನು ಯೋಜನೆಯೊಂದರಲ್ಲಿ ಕಟ್ಟಿಕೊಟ್ಟಿದ್ದಾರೆ. ಲಿಪಿಕಾರರು ಅಂದರೆ

ಯಾರು? ಅವರ ವಂಶಾವಳಿ, ಊರು, ವೃತ್ತಿ, ಪ್ರತಿಮಾಡಿದ ಕೃತಿಗಳು, ಅವುಗಳ ವೈಶಿಷ್ಟ್ಯ ಕುರಿತು ಇಲ್ಲಿ ವಿವೇಚನೆ ಮಾಡಲಾಗಿದೆ. ಹೀಗೆ ಎಫ್.ಟಿ.ಹಳ್ಳಿಕೇರಿ ಅವರು ವೈಯಕ್ತಿಕ ಯೋಜನೆಯಡಿ ಉಪೇಕ್ಷೆಗೊಳಪಟ್ಟ ಹಸ್ತಪ್ರತಿಗಳನ್ನು ಶೋಧಿಸಿ, ಅವುಗಳನ್ನು ಪರಿಷ್ಕರಿಸುವುದರ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಯ ವಿಸ್ತಾರಕ್ಕೆ ಕಾರಣರಾಗಿದ್ದಾರೆ.

೩. ಕೆ.ರವೀಂದ್ರನಾಥ

ಪ್ರಾಧ್ಯಾಪಕರಾದ ಡಾ. ಕೆ.ರವೀಂದ್ರನಾಥ ಅವರು ಹಳಗನ್ನಡ, ನಡುಗನ್ನಡ, ವಚನಸಾಹಿತ್ಯ, ದಾಖಲುಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನಾಶಾಸ್ತ್ರ, ಶಾಸನಶಾಸ್ತ್ರ ಹಾಗೂ ಶಾಸ್ತ್ರಸಾಹಿತ್ಯ ಕ್ಷೇತ್ರದಲ್ಲಿ ಕೃಷಿಮಾಡಿದವರು. ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಹತ್ವದ ಯೋಜನೆಗಳನ್ನು ಪೂರೈಸಿದ್ದಾರೆ. "ಕನ್ನಡ ದಾಖಲುಸಾಹಿತ್ಯ" ಎಂಬ ಯೋಜನೆಯಲ್ಲಿ ನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ನಿರೂಪಿಸಲು ಬೇಕಾದ ಶಾಸನ, ಕಡತ, ಭಿನ್ನವತ್ತಳೆ, ಬಖೈರು, ನಿರೂಪ, ದಿನಚರಿ, ನಾಮೆ, ಸ್ಥಳಮಹಾತ್ಮೆ, ವಂಶಾವಳಿಗಳನ್ನು ಕುರಿತಂತೆ ಅವುಗಳ ಅರ್ಥ, ಲಕ್ಷಣ, ಸ್ವರೂಪ ಮತ್ತು ಮಹತ್ವವನ್ನು ವಿವರಿಸಲಾಗಿದೆ. ೨೫೦ ವರ್ಷಗಳ ಅಧ್ಯಯನದ ಇತಿಹಾಸವಿರುವ ದಾಖಲೆಗಳನ್ನು ಕುರಿತು ಅಧಿಕೃತವಾಗಿ ವಿವರಿಸುವ ಸಂಶೋಧನ ಯೋಜನೆಯಾಗಿದೆ. "ಬಸವಯುಗದ ವಚನೇತರ ಸಾಹಿತ್ಯ" ಎಂಬ ಯೋಜನೆ ಶರಣರ ವಚನೇತರ ಸಾಹಿತ್ಯ ಮತ್ತು ಶಾಸ್ತ್ರಕೃತಿಗಳಾದ ಕಾಲಜ್ಞಾನ, ಕರಣಹಸುಗೆ, ಮಿಶ್ರಾರ್ಪಣ, ದೀಕ್ಷಾವಿಧಾನ, ಸ್ವರವಚನ, ಕೊರವಂಜಿಪದಗಳು, ಮಂತ್ರಗೋಪ್ಯ, ಸಕೀಲಗಳು, ಸೃಷ್ಟಿವಚನಗಳನ್ನು ಮೊದಲಬಾರಿಗೆ ಶಾಸ್ತ್ರೀಯವಾಗಿ ಪರಿಷ್ಕರಿಸಿ ಒಂದೆಡೆ ಸಂಪಾದಿಸಿ ಕೊಡಲಾಗಿದೆ. "ಕನ್ನಡ ಜೈನ ಹಾಡುಗಳು" ಎಂಬ ಯೋಜನೆಯಲ್ಲಿ ಜೈನತೀರ್ಥಂಕರರು, ಯಕ್ಷ-ಯಕ್ಷಿಣಿಯರು, ಜೈನಧಾರ್ಮಿಕ ಕ್ಷೇತ್ರಗಳನ್ನು ಬಣ್ಣಿಸುವ ಹಾಡುಗಳನ್ನು ಹಸ್ತಪ್ರತಿ ಮೂಲದಿಂದ ಸಂಗ್ರಹಿಸಿಕೊಡಲಾಗಿದೆ. ೪೬೧ ಹಾಡುಗಳ ಸಂಗ್ರಹದ ಯೋಜನೆ 'ಜೈನರ ಹಾಡುಗಬ್ಬ' ಪರಂಪರೆಯನ್ನು ದಾಖಲಿಸಿದೆ. "ಗುಂಡಬ್ರಹ್ಮಯ್ಯಗಳ ಸಾಹಿತ್ಯ" ಎಂಬ ಯೋಜನೆ ಮರೆಹೊಕ್ಕವರ ಕೂಡುವುದಿಲ್ಲ ವ್ರತವನ್ನು ತೊಟ್ಟ ಧೀರ ಶರಣರ ಚರಿತ್ರೆ. ಇವರ ಚರಿತ್ರೆಯನ್ನು ನಿರೂಪಿಸುವ ಆರು ಕೃತಿಗಳನ್ನು ಒಂದೆಡೆ ಸಂಪಾದಿಸಿಕೊಡಲಾಗಿದೆ. ಕರ್ನಾಟಕಾಂಧ್ರ ಸಾಂಸ್ಕೃತಿಕ ಬಾಂಧವ್ಯದ ಪ್ರತಿನಿಧೀಕರಣದಂತೆ ಕಾಣಿಸಿಕೊಳ್ಳುವ ಗುಂಡಬ್ರಹ್ಮಯ್ಯಗಳ ಕುರಿತ ಆಚರಣೆ-ಸಂಪ್ರದಾಯಗಳು ಸಾಂಸ್ಕೃತಿಕ ಅನನ್ಯತೆಯ ದ್ಯೋತಕವೆಂಬುದನ್ನು ಈ ಯೋಜನೆ ನಿರೂಪಿಸುತ್ತದೆ.

"ಕನ್ನಡ ಟೀಕಾಸಾಹಿತ್ಯ" ಎಂಬ ಯೋಜನೆ ಉಪೇಕ್ಷಿತ ಕ್ಷೇತ್ರವೊಂದರ ಅಧ್ಯಯನವಾಗಿದೆ. ಒಂದು ಕಾವ್ಯದ ವಿಮರ್ಶಾತ್ಮಕ ಅಧ್ಯಯನವೆಂಬಂತೆ ಪ್ರಾಚೀನ ಕಾಲದಲ್ಲಿ ಟೀಕು, ವ್ಯಾಖ್ಯಾನ, ಭಾವಾರ್ಥಗಳನ್ನು ಬರೆಯುವ ಪರಂಪರೆಯಿರುವುದನ್ನು ಕಾಣುತ್ತೇವೆ. ಟೀಕುಗಳ ಅರ್ಥ, ಲಕ್ಷಣ, ಪ್ರಕಾರ ಹಾಗೂ ಜೈನ, ಲಿಂಗಾಯತ, ವೈದಿಕ ಟೀಕಾಕಾರರ ವಿಶ್ಲೇಷಣೆಯನ್ನು ಮಾಡಲಾಗಿದೆ. "ಉದ್ಧರಣೆ ಸಾಹಿತ್ಯ" ಎಂಬುದು ವೀರಶೈವ ತತ್ವಗಳು, ಸಿದ್ಧಾಂತಗಳನ್ನು ಚಿತ್ರ ಮತ್ತು ವಾಚ್ಯಗಳಲ್ಲಿ ವಿವರಿಸಿದ ಹಸ್ತಪ್ರತಿಗಳ ಮೂಲದಿಂದ ಶೋಧಿಸಿ-ಸಂಪಾದಿಸಿದ ಯೋಜನೆಯಾಗಿದೆ. "ಕನ್ನಡ ಕಾವ್ಯೋಕ್ತ ಕವಿಚರಿತೆ" ಹೆಸರಿನ ಯೋಜನೆಯಲ್ಲಿ ಒಬ್ಬ ಕವಿ ತನ್ನ ಕೃತಿಯಲ್ಲಿ ಸ್ಮರಣೆ ಮಾಡಿದ ಕವಿಗಳ ಉಲ್ಲೇಖ ಹಾಗೂ ಒಬ್ಬರ ಚರಿತ್ರೆಯನ್ನು ಮುಂದಿನ ಕವಿಗಳು ಬರೆದ ಕಾವ್ಯಗಳು ಹೀಗೆ ಕಾವ್ಯದ ಪೀಠಿಕಾ ಪ್ರಕರಣದಲ್ಲಿ ಕವಿ ಹೇಳಿಕೊಂಡ ಮಾಹಿತಿಯನ್ನು ಆಧರಿಸಿ ಕನ್ನಡ ಕಾವ್ಯೋಕ್ತ ಕವಿಚರಿತೆಯನ್ನು ಈ ಯೋಜನೆಯಲ್ಲಿ ಕಟ್ಟಿಕೊಡಲಾಗಿದೆ. ಕನ್ನಡ ಶಾಸ್ತ್ರೀಯ ಭಾಷಾ ಯೋಜನೆಯಡಿಯಲ್ಲಿ ತೆಗೆದುಕೊಂಡ ಯೋಜನೆ "ಹಸ್ತಪ್ರತಿಗಳು: ಕನ್ನಡಿಗರ ಬದುಕು". ಹಸ್ತಪ್ರತಿಗಳನ್ನು ಶಾಸ್ತ್ರ, ಕಾವ್ಯಗಳು ಹಾಗೂ ಅವುಗಳ ಪಠ್ಯಕೇಂದ್ರಿತ ಭಾಗವಾಗಿ ಅಧ್ಯಯನ

ಮಾಡಿರುವುದೇ ಹೆಚ್ಚು. ಕಾರಣ ಹಸ್ತಪ್ರತಿಗಳು ರಾಷ್ಟ್ರೀಯ ಸಂಪತ್ತು ಹಾಗೂ ಜನಬದುಕಿನ ಚಿತ್ರಣವನ್ನು ನೀಡುವ ಹಿನ್ನೆಲೆಯಲ್ಲಿ ಹಸ್ತಪ್ರತಿಗಳ ಪುಷ್ಪಿಕೆಗಳನ್ನಾಧರಿಸಿ ಕನ್ನಡಿಗರ ಬದುಕನ್ನು ಈ ಯೋಜನೆಯಲ್ಲಿ ನಿರೂಪಿಸಲಾಗಿದೆ. ಹಸ್ತಪ್ರತಿಗಳಿಗೆ ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ ಮುಖಗಳಿದ್ದಂತೆ ಚಾರಿತ್ರಿಕ ಮುಖವೂ ಅತ್ಯಂತ ಗಮನಾರ್ಹ ವಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಚರಿತ್ರೆಯ ವಿಷಯಗಳನ್ನು ನಿರೂಪಿಸಿರುವ ಹಸ್ತಪ್ರತಿಗಳ ಉಗಮ-ಬೆಳವಣಿಗೆಯೇ ಒಂದು ಚರಿತ್ರೆಯಾಗಿದೆ. ಈ ಉದ್ದೇಶದಿಂದ ಕೈಗೊಂಡ ಯೋಜನೆ "ಹಸ್ತಪ್ರತಿಗಳು: ಚಾರಿತ್ರಿಕ ಸಂಕಥನ". ಕನ್ನಡ ಸಂಶೋಧನೆಯಲ್ಲಿ 'ಆಕರಗಳು' ಪ್ರಧಾನ. ಈ ಹೊತ್ತು ಆಕರಗಳ ಅರ್ಥ, ಸಂಗ್ರಹ-ಸಂರಕ್ಷಣೆ ಹಾಗೂ ಬಳಕೆಯನ್ನು ಕುರಿತು ಡಾ. ಕೆ.ರವೀಂದ್ರನಾಥ ಅವರು "ಕನ್ನಡ ಆಕರಶಾಸ್ತ್ರ" ಎಂಬ ಯೋಜನೆಯಲ್ಲಿ ವಿಶ್ಲೇಷಿಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲೆ ಮಾನವಿ ತಾಲೂಕಿನ ಕಲ್ಲೂರಿನ "ಲಿಂಗಣ್ಣ ಕವಿಯ ವರರಮ್ಯರತ್ನಾಕರ" ಮತ್ತು ಕೆಳದಿರಾಣಿ "ಕಿತ್ತೂರು ರುದ್ರಮ್ಮನ ಕಥೆ" ಇವು ಹಸ್ತಪ್ರತಿಗಳನ್ನಾಧರಿಸಿ ಪರಿಷ್ಕರಿಸಿದ ಯೋಜನೆಗಳಾಗಿವೆ. "ಗ್ರಾಮ ಮ್ಯಾನುಯಲ್ಸ್" ಹೆಸರಿನ ಯೋಜನೆ ಗ್ರಾಮಜೀವನದ ಶಿಷ್ಟಾಚಾರಗಳನ್ನು, ಆಡಳಿತ ಕ್ರಮವನ್ನು ಪ್ರಶ್ನೋತ್ತರ ರೂಪದಲ್ಲಿ ನಿರೂಪಿಸಿದ ದಾಖಲಾತ್ಮಕ ಕೃತಿ. ಇದನ್ನು ಹಲವು ಕೈಬರಹದ ಪ್ರತಿಗಳ ಸಹಾಯದಿಂದ ಪರಿಷ್ಕರಿಸುವ ಯೋಜನೆಯನ್ನು ಪೂರೈಸಿದ್ದಾರೆ. "ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ" ಕೃತಿಯ ಪರಿಷ್ಕರಣ ಯೋಜನೆ, ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ಅಂಗವಾಗಿ ಕೈಗೊಂಡ "ಹಸ್ತಪ್ರತಿಶಾಸ್ತ್ರ" ಹೆಸರಿನ ಯೋಜನೆಗಳು ಡಾ. ಕೆ.ರವೀಂದ್ರನಾಥ ಅವರ ಬಹುಶಿಸ್ತೀಯ ಓದಿಗೆ ನಿದರ್ಶನಗಳಾಗಿವೆ. ಸಾಂಸ್ಥಿಕವಾಗಿ ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹ ಮತ್ತು ಸೂಚಿರಚನೆ ಯೋಜನೆಯಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

೪. ಎಸ್.ಎಸ್.ಅಂಗಡಿ

'ಸರಳ ಶಬ್ದಮಣಿದರ್ಪಣ(೨೦೦೫) ಸಂಪಾದನೆ' ಕೇಶಿರಾಜ ಶಬ್ದಮಣಿದರ್ಪಣ ಹಳಗನ್ನಡದ ಅಧಿಕೃತವಾದ ವ್ಯಾಕರಣ ಕೃತಿ. ಡಾ. ಎಸ್.ಎಸ್.ಅಂಗಡಿ ಅವರು ಶಬ್ದಮಣಿದರ್ಪಣ ಸೂತ್ರಗಳನ್ನು ಮೂಲಲಯಕ್ಕೆ ಧಕ್ಕೆ ಆಗದಂತೆ ಸೂತ್ರಗಳ ಕಂದದ ಬಿಗಿ ಬಂಧವನ್ನು ಸಡಿಲಿಸಿ ದರ್ಪಣದ ಪೂರ್ಣಪಾಠವನ್ನು ಅರ್ಥಾನುಗತವಾಗಿ ವಿಂಗಡಿಸಿದ್ದಾರೆ. ಪ್ರತಿಸೂತ್ರದ ತಿರುಳನ್ನು ಸೂತ್ರದ ಬದಿಯಲ್ಲಿ, ಪ್ರಯೋಗಗಳನ್ನು ಸೂತ್ರದ ಕೆಳಗೆ ನಿರೂಪಿಸಿದ್ದಾರೆ. ಇದರಿಂದ ಕೇಶಿರಾಜನ ವ್ಯಾಕರಣದ ಆಶಯ ಸುಲಭವಾಗಿ ವ್ಯಾಕರಣ ಪ್ರಿಯರಿಗೆ ಅರ್ಥವಾಗುತ್ತದೆ. ಆಧುನಿಕ ಭಾಷಾಶಾಸ್ತ್ರದ ನೆಲೆಯಲ್ಲಿ ಅಭ್ಯಾಸಪೂರ್ಣ ಪ್ರಸ್ತಾವನೆಯನ್ನು ಬರೆದಿದ್ದಾರೆ. ಪ್ರಾಚೀನ ಕನ್ನಡದ ವ್ಯಾಕರಣ ಕ್ಷೇತ್ರಕ್ಕೆ ಈ ಕೃತಿ ಮೌಲಿಕ ಕೊಡುಗೆಯಾಗಿದೆ. 'ಕನ್ನಡ ಹಸ್ತಪ್ರತಿರಚನೆ: ಭಾಷಿಕ ವಿವೇಚನೆ'(೨೦೦೬) ಹಸ್ತಪ್ರತಿಗಳಲ್ಲಿ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ವೈವಿಧ್ಯಪೂರ್ಣ ವಿವರಗಳಿವೆ. ಕನ್ನಡ ಭಾಷೆಯು ಹಸ್ತಪ್ರತಿಗಳಲ್ಲಿ ಸ್ಪಷ್ಟವಾದ ನೆಲೆಯನ್ನು ಕಂಡುಕೊಂಡದ್ದು, ಆಡುನುಡಿ ಹಾಗೂ ಆ ಕಾಲದ ಪ್ರಮಾಣ ಭಾಷೆಯನ್ನು ಗಟ್ಟಿಯಾಗಿ ತೋರಿಸಿದ್ದು ಮಹತ್ವದ ಅಂಶಗಳಾಗಿವೆ. ಡಾ. ಎಸ್.ಎಸ್.ಅಂಗಡಿ ಅವರು ಪ್ರಸ್ತುತ ಅಧ್ಯಯನದಲ್ಲಿ ಹಸ್ತಪ್ರತಿಗಳಲ್ಲಿ ಕಂಡುಬರುವ ವಿಶೇಷಣಗಳು, ವ್ಯಕ್ತಿನಾಮಗಳು, ಸ್ಥಳನಾಮಗಳು ಹಾಗೂ ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಲಿಪಿಕಾರರ ಭಾಷಿಕ ಸಂಕಥನ ಮುಂತಾದ ಸಾಮಾಜಿಕ ಮತ್ತು ಭಾಷಿಕ ಅಂಶಗಳ ವಿಶ್ಲೇಷಣೆಗೆ ಹೆಚ್ಚು ಗಮನ ನೀಡದ್ದಾರೆ. ಸಿದ್ಧನಂಜೇಶನ 'ರಾಘವಾಂಕ ಚರಿತೆ(೨೦೨೧) ಸಂಪಾದನೆ' ಸಿದ್ಧನಂಜೇಶನ ರಾಘವಾಂಕ ಚರಿತೆ ತುಂಬ ಮಹತ್ವದ ವೀರಶೈವ ಪುರಾಣವಾಗಿದೆ.ಅದು ೧೯ ಸಂಧಿಗಳುಳ್ಳ ವಾರ್ಧಕ ಷಟ್ಪದಿಯಲ್ಲಿರುವ ದೊಡ್ಡ ಕಾವ್ಯ.ರಾಘವಾಂಕನ ಜೀವನ,

ಸಾಧನೆ, ವ್ಯಕ್ತಿತ್ವವನ್ನು ಚಿತ್ರಿಸುವುದು ಈ ಕಾವ್ಯದ ವಿಷಯ. ಕಾವ್ಯವು ವಾರ್ಧಕ ಷಟ್ಪದಿಯಲ್ಲಿರುವುದರಿಂದ ತನ್ನ ಗೇಯತೆ ಮೂಲಕ ಜನಮನವನ್ನು ಸೆಳೆದಿದೆ. ಇತ್ತೀಚೆಗೆ ಗ್ರಂಥಸಂಪಾದನೆಯಲ್ಲಿ 'ಪರಿಷ್ಕರಣದ ಪರಿಷ್ಕರಣ' ಎಂಬ ಹೊಸ ವಿಧಾನ ರೂಢಿಯಲ್ಲಿದೆ. ಅಂದರೆ ಈಗಾಗಲೇ ಪ್ರಕಟವಾಗಿದ್ದ ಪ್ರಾಚೀನ ಪಠ್ಯಗಳಲ್ಲಿ ಗೊಂದಲಗಳಿದ್ದರೆ ಅವುಗಳನ್ನು ಪರಿಷ್ಕರಿಸಿ, ಸುಲಭ ವಾಚನ ಯೋಗ್ಯವಾದ ಜನಪ್ರಿಯ ಆವೃತ್ತಿ ಲಭ್ಯವಿರುವಂತೆ ಮಾಡುವುದು ಪರಿಷ್ಕರಣದ ಪರಿಷ್ಕರಣ ವಿಧಾನದ ಮುಖ್ಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗವು ಹೆಚ್ಚು ಚರ್ಚೆಗೆ ಒಳಗಾಗದ, ಸಾಂಸ್ಕೃತಿಕವಾದ ಮಹತ್ವ ಪಡೆದ ಪ್ರಾಚೀನ ಪಠ್ಯಗಳನ್ನು ಪರಿಷ್ಕರಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು. ಈ ಮಾಲಿಕೆಯಲ್ಲಿ ಡಾ. ಎಸ್.ಎಸ್.ಅಂಗಡಿ ಅವರು 'ರಾಘವಾಂಕ ಚರಿತೆ'ಯನ್ನು ಪರಿಷ್ಕರಿಸುವ ಯೋಜನೆಯನ್ನು ತೆಗೆದುಕೊಂಡಿದ್ದರು. ರಾಘವಾಂಕ ಚರಿತೆಯನ್ನು ೧೯೫೪ರಲ್ಲಿ ಪ್ರೊ. ಸ.ಸ.ಮಾಳವಾಡರು ಸಂಪಾದಿಸಿ, ಪ್ರಕಟಿಸಿದ್ದರು. ಡಾ. ಅಂಗಡಿ ಅವರು ಸಂಪಾದನೆಗೆ ಹೊಸ ಹಸ್ತಪ್ರತಿಗಳನ್ನು ಬಳಸಿಕೊಂಡಿಲ್ಲವಾದರೂ ಪ್ರೊ. ಮಾಳವಾಡ ಅವರ ಆವೃತ್ತಿಯ ಪಾಠವನ್ನು ಮುಖ್ಯವಾಗಿಟ್ಟುಕೊಂಡು ಇದ್ದುದರಲ್ಲಿಯೇ ಅವರ ಪಾಠವನ್ನು ಪರಿಷ್ಕರಿಸಿ, ಪಾಠಂತರಗಳ ಗೊಂದಲ ಇಲ್ಲದೆ ಪರಿಷ್ಕರಿಸಿ, ಸಂವಹನ ಪಾತಳಿಯ ನೆಲೆಯಲ್ಲಿ ಸುಲಭ ವಾಚನ ಯೋಗ್ಯವಾದ ಜನಪ್ರಿಯ ಆವೃತ್ತಿಯನ್ನು ಸಿದ್ಧಪಡಿಸಿದ್ದಾರೆ. 'ಆಂಡಯ್ಯನ ಸರಳ ಕಬ್ಬಿಗರ ಕಾವ(೨೦೨೧)ಸಂಪಾದನೆ' ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲ ಅಚ್ಚಕನ್ನಡ ಕಾವ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕಾವ್ಯ 'ಆಂಡಯ್ಯನ ಕಬ್ಬಿಗರಕಾವ'. ಅವನ ಅಭಿಪ್ರಾಯದಲ್ಲಿ ಅಚ್ಚಕನ್ನಡವೆಂದರೆ ದೇಶಿಯ ಪದಗಳ ಜೊತೆಗೆ ಕನ್ನಡದ ಜಾಯಮಾನಕ್ಕೆ ಹೊಂದಿಕೆಯಾಗುವ ತದ್ಭವಗಳೂ ಸೇರಿವೆ. ಈ ಕಾವ್ಯದ ವಸ್ತು ಹಳೆಯದಾದರೂ ಅಭಿವ್ಯಕ್ತಿಯ ವಿಧಾನ ನವೀನವಾಗಿದೆ. ಕನ್ನಡ ಭಾಷೆಯ ಸಾಂಸ್ಕೃತಿಕ ಆಯಾಮ ಮತ್ತು ಕನ್ನಡದ್ದೇ ಆದ ಕಾವ್ಯ ಭಾಷೆಯ ಚಿಂತನಕ್ರಮ ಈ ಕಾವ್ಯದಲ್ಲಿದೆ. ಈ ಕಾವ್ಯವನ್ನು ಡಾ. ಎಸ್.ಎಸ್.ಅಂಗಡಿ ಅವರು ಮೂಲ ಲಯಕ್ಕೆ ಧಕ್ಕೆ ಆಗದಂತೆ, ಛಂದಸ್ಸಿನ ಬಿಗಿಬಂಧವನ್ನು ಸಡಿಲಿಸಿ ಸಂವಹನ ಪಾತಳಿಯ ನೆಲೆಯಲ್ಲಿ ಅರ್ಥಾನುಗತವಾಗಿ ವಿಂಗಡಿಸಿ ಸರಳ ಆವೃತ್ತಿಯಾಗಿ ರೂಪಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಸೇರಿದಂತೆ ಆಸಕ್ತರು ಮತ್ತು ಸಾಮಾನ್ಯ ಓದುಗರಿಗೂ ಕಬ್ಬಿಗರ ಕಾವವನ್ನು ಸುಲಭವಾಗಿ ಓದಿ ಕಾವ್ಯದ ಆಶಯವನ್ನು ತಿಳಿದುಕೊಳ್ಳಬಹುದು.

೫. ಎಸ್.ಆರ್.ಚನ್ನವೀರಪ್ಪ

'ನಾಗಲಿಂಗಸ್ವಾಮಿ ತತ್ವಪದಗಳು' ಕನ್ನಡದ ಶ್ರೇಷ್ಠ ತತ್ವಪದಕಾರರಾದ ಸೊಂಡೂರು ಪರಿಸರದವರಾದ ನಾಗಲಿಂಗಸ್ವಾಮಿಯವರು ಹಲವಾರು ತತ್ವಪದಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಅವರ ತತ್ವಪದಗಳಿಗೆ ಚಾರಿತ್ರಿಕ ಮಹತ್ವವಿದೆ. ನಾಗಲಿಂಗಸ್ವಾಮಿಗಳು ಸಮುದಾಯದಲ್ಲಿ ಭೇದ ಭಾವ ಎಣಿಸದೆ ಜನಸಾಮಾನ್ಯರಲ್ಲಿ ಬೆರೆತು ಬದುಕಿನ ಕ್ರಿಯಾಶೀಲತೆಯ ಬಗ್ಗೆ ಜನತೆಗೆ ಬೋಧಿಸಿದರು. ಆ ಬೋಧನೆಯು ವಾಸ್ತವಿಕವಾಗಿತ್ತು, ಕೃತಕವಾಗಿರಲಿಲ್ಲ ಅವರ ತತ್ವಪದಗಳಲ್ಲಿ ಗುರು ಶಿಷ್ಯರ ಸಂಬಂಧ ಹಿಂದೂ ಮುಸ್ಲಿಂ ಸಾಮರಸ್ಯತೆ, ಮಹಿಳಾ ಸಮಾನತೆ ಇಂತಹ ವೈಚಾರಿಕ ನೆಲೆಯಲ್ಲಿ ಅವರ ರಚನೆಗಳು ನಿರೂಪಿತವಾಗಿವೆ. 'ಸ್ವರವಚನ ತರಂಗ ಸಂಪುಟ-೧' ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಸ್ವರವಚನಗಳು ಬಹುಮುಖ್ಯವಾಗಿವೆ. ವಚನಗಳಿಗಿಂತ ಇವು ರಾಗ ಸಂಯೋಜಿತವಾಗಿರುತ್ತವೆ. ಅಂದರೆ ಇಲ್ಲಿ ರಾಗ ತಾಳಗಳಿಗೆ ಮಹತ್ವದ ಸ್ಥಾನವಿರುತ್ತದೆ. ಸಾಮುದಾಯಿಕ ಕಳಕಳಿಯುಳ್ಳ ಸಮಾಜಮುಖಿ ಚಿಂತನೆಯುಳ್ಳ ಪರಿಪೂರ್ಣ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವ ಇವು ಇಲ್ಲಿಯ ಆಶಯವಾಗಿವೆ. ಈ ಕಾರಣಗಳಿಂದ ಸ್ವರವಚನಗಳು ಇಂದಿಗೂ ಪ್ರಸ್ತುತವಾಗಿವೆ. ಇಲ್ಲಿ ಸಂಗ್ರಹಿಸಿದ ೧೫೫೫

ಸ್ವರವಚನಗಳು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ದೊರೆತಂಥವು. ಕರ್ನಾಟಕದ ವಿವಿಧ ಪ್ರದೇಶ ಹಾಗೂ ಸಮುದಾಯಗಳಿಂದ ಸಂಗ್ರಹಿಸಿದ ಈ ರಚನೆಗಳಲ್ಲಿ ಸಹಜವಾಗಿ ವಿಭಿನ್ನತೆಯಿದೆ. ಇದರಿಂದ ಸ್ಥಳೀಯ ಸಮುದಾಯದ ಸಾಂಸ್ಕೃತಿಕ ಬದುಕನ್ನು ಅದರ ವೈವಿಧ್ಯತೆಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. 'ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರ ಸಂಗ್ರಹ' ದುರ್ಗಸಿಂಹನ ಪಂಚತಂತ್ರ ಸಾಮಾನ್ಯವಾಗಿ ಭಾರತದಲ್ಲಿ ಪ್ರಚಲಿತದಲ್ಲಿದೆ. ಆದರೆ ವಿಷ್ಣುಶರ್ಮನ ಪಂಚತಂತ್ರ ಕರ್ನಾಟಕದಲ್ಲಿ ದೊರೆತದ್ದು ವಿಶೇಷ. ಬಳ್ಳಾರಿ ಪರಿಸದಲ್ಲಿ ದೊರೆತ ಒಂದು ಹಸ್ತಪ್ರತಿಯನ್ನಾಧರಿಸಿ ವಿಭಾಗದ ಮತ್ತೊಬ್ಬ ಪ್ರಾಧ್ಯಾಪಕರಾದ ಡಾ. ವೀರೇಶ ಬಡಿಗೇರ ಅವರೊಂದಿಗೆ ಸಂಪಾದಿಸಿದ್ದಾರೆ. ದುರ್ಗಸಿಂಹನ ಪಂಚತಂತ್ರದಂತೆ ಇದೂ ಕೂಡ ಹಲವಾರು ಜನಪದ ಕತೆಗಳನ್ನು ಒಳಗೊಂಡಿದೆ. ವಿಶೇಷವೆಂದರೆ ಪ್ರಾದೇಶಿಕ ಭಾಷೆಯನ್ನು ಅಳವಡಿಸಿಕೊಂಡದ್ದು ಈ ಆವೃತ್ತಿಯ ಹೊಸತನವೆಂದು ಹೇಳಬೇಕು. ಕನ್ನಡ ವಿಶ್ವವಿದ್ಯಾಲಯವು ಈ ಕೃತಿಯನ್ನು ೨೦೧೫ರಲ್ಲಿ ಮರು ಮುದ್ರಿಸಿದೆ. 'ದಾಸರಾಯರ ಪದಗಳು' ಕನ್ನಡ ಅನುಭಾವ ಸಾಹಿತ್ಯದಲ್ಲಿ ವಚನ ಸಾಹಿತ್ಯವನ್ನು ಬಿಟ್ಟರೆ ಕಣ್ಣು ತುಂಬ ನಿಲ್ಲುವುದು ದಾಸ ಸಾಹಿತ್ಯ ಅಪಾರವಾದ ದಾಸ ಸಾಹಿತ್ಯ ರಾಶಿಯಲ್ಲಿ ಪ್ರಯೋಗವಾಗಿರುವ ವಿವಿಧ ಪ್ರಕಾರಗಳನ್ನು ಗೇಯ ಪ್ರಕಾರಗಳೆಂದು ಛಂದೋಬದ್ಧ ಹಾಡುಗಳೆಂದು ಎರಡು ಪ್ರಕಾರಗಳಲ್ಲಿ ವರ್ಗೀಕರಿಸಬಹುದು. ಇವುಗಳಲ್ಲಿ ಮೊದಲನೇ ವರ್ಗದಲ್ಲಿ ಸುಳಾದಿ, ಉಗಾಭೋಗ, ಕೀರ್ತನೆಗಳು ಸೇರುತ್ತದೆ. ಎರಡನೇ ವರ್ಗದಲ್ಲಿ ಸುವ್ವಿಹಾಡು, ವೃತ್ತನಾಮ, ಉದಯರಾಗ ಇವು ಸೇರುತ್ತವೆ. ಪ್ರಸ್ತುತ ದಾಸರಾಯರ ಪದಗಳಲ್ಲಿ ಈ ಎಲ್ಲ ಗೇಯ ರೂಪಗಳು ಸೇರಿವೆ. ವಿಶೇಷವಾಗಿ ಈ ಆವೃತ್ತಿಯ ಮುಖ್ಯಾಂಶವೆಂದರೆ ಇವೆಲ್ಲವೂ ಅಪ್ರಕಟಿತ ರಚನೆಗಳಾಗಿವೆ. ಬಸವಕಲ್ಪಧ್ರುವಂ: ಬಸವಣ್ಣನವರ ಚರಿತ್ರೆಯೇ ಈ ಕಾವ್ಯದ ಮೂಲ ಕಥಾವಸ್ತು. ಬಸವಣ್ಣನವರ ಜೊತೆಗಿದ್ದ ಸಿದ್ಧರಾಮ, ಮಡಿವಾಳಯ್ಯ, ಹರಳಯ್ಯ ಮುಂತಾದ ಶರಣರ ಬಗ್ಗೆಯೂ ಇಲ್ಲಿ ಕುತೂಹಲಕಾರಿ ಮಾಹಿತಿಗಳಿವೆ. ೧೭ನೇ ಶತಮಾನದ ಮಧ್ಯಭಾಗದಲ್ಲಿ ಕಾಣಿಸಿಕೊಳ್ಳುವ ಬಸವ ಎಂಬ ಕವಿಯಿಂದ ರಚಿಸಲ್ಪಟ್ಟ ಈ ವರ್ಣಕ ಕಾವ್ಯದಲ್ಲಿ ಬಸವಣ್ಣನವರನ್ನು ಇತರ ಶಿವಶರಣರೊಂದಿಗೆ ಸಮೀಕರಣ ಮಾಡುವುದರ ಮೂಲಕ ವೀರಶೈವ ಧರ್ಮದ ಅನನ್ಯತೆಯನ್ನು ಕಾಣಬಹುದು. ದಾವಣಗೆರೆ ಪರಿಸರದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ 'ಹೂವಿನಮಡು' ಎಂಬ ಗ್ರಾಮದಲ್ಲಿ ದೊರೆತ ಹಸ್ತಪ್ರತಿಯ ಆಧಾರದಿಂದ ಈ ಕೃತಿಯನ್ನು ಸಂಪಾದಿಸಲಾಗಿದೆ. ನೀತಿಕಥಾಸಾರ: ದುರ್ಗಸಿಂಹನ ಪಂಚತಂತ್ರ ಕಥೆಗಳ ಮಾದರಿಯಲ್ಲಿ ಇಲ್ಲಿನ ಕಥೆಗಳು ಅಬಾಲವೃದ್ಧರಾದಿಯಾಗಿ ಎಲ್ಲರನ್ನು ಆಕರ್ಷಿಸುತ್ತವೆಯಾದರೂ, ಪ್ರಮುಖವಾಗಿ ಮಕ್ಕಳ ನೈತಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅತ್ಯುತ್ತಮ ಪಠ್ಯ ಆಕರವೇ ಆಗಿವೆ ಎಂಬುದರಲ್ಲಿ ಅತಿಶಯೋಕ್ತಿಯೇನಿಲ್ಲ. ಬೆಳೆಯುವ ಮಕ್ಕಳಿಗೆ ಶೈಕ್ಷಣಿಕ ಶಿಕ್ಷಣ, ಶಾರೀರಿಕ ಶಿಕ್ಷಣ, ಯೋಗ ಶಿಕ್ಷಣ, ತಾಂತ್ರಿಕ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ಮುಂತಾದ ಶಿಕ್ಷಣಕ್ರಮಗಳು ಮುಖ್ಯವಾಗಿರುವಂತೆ ನೈತಿಕ ಶಿಕ್ಷಣವೂ ತುಂಬಾ ಮುಖ್ಯವಾಗಿದೆ. ಇಂದಿನ ಮಕ್ಕಳೇ ಮುಂದಿನ ನಾಯಕರಾಗುವ ಅವರಿಗೆ, ಆಡಳಿತ ಶಿಕ್ಷಣವನ್ನು ನೀಡಿ ಮೊದಲು ಶ್ರೇಷ್ಠ ನಾಗರಿಕರನ್ನಾಗಿ, ಸತ್ಪ್ರಜೆಗಳಾನ್ನಾಗಿ ರೂಪಿಸಬೇಕಾಗಿರುವುದು ನಮ್ಮೆಲ್ಲರ ಸಾಮಾಜಿಕ ಜವಾಬ್ದಾರಿಯಾಗಿದೆ. ಜಾಗತೀಕರಣದಂತಹ ಪ್ರಸ್ತುತ ಸಂದರ್ಭದಲ್ಲಿ ಮುಂದುವರಿದ ತಂತ್ರಜ್ಞಾನದ ಆವಿಷ್ಕಾರಗಳಿಂದ ಬದುಕು ವೇಗವನ್ನು ಹೆಚ್ಚಿಸಿಕೊಳ್ಳುತ್ತಿದೆಯಾದರೂ, ಮುನ್ನಡೆಯ ಮಾರ್ಗವನ್ನು ಕ್ರಮಿಸುತ್ತಿದೆಯಾದರೂ, ಒಂದು ಬಗೆಯ ಯಾಂತ್ರಿಕ ಜೀವನಕ್ರಿಯೆ ಅನಿವಾರ್ಯವೆನ್ನುವಂತಾಗಿದೆ. ಇಂತಹ ಸಂದರ್ಭದಲ್ಲಿ ಮಕ್ಕಳ ಮಾನಸಿಕ ಹಾಗೂ ಬೌದ್ಧಿಕ ತಿಳುವಳಿಕೆಯನ್ನು ಹೆಚ್ಚಿಸುವಂತಹ ಸಾಮರ್ಥ್ಯವನ್ನು ಕುದುರಿಸುವಂತಹ, ಮಾನವನ ವಿಕಾಸವನ್ನು ವೃದ್ಧಿಸುವಂತಹ ಜ್ಞಾನಸಾಮಾಗ್ರಿಗಳ ಅವಶ್ಯಕತೆ ಇದೆ. ಪರಂಪರೆಯಲ್ಲಿರುವ

ವೈಚಾರಿಕ ತಿಳುವಳಿಕೆಗಳನ್ನು, ಭಾವನಾತ್ಮಕ ಸಂಗತಿ ಹಾಗೂ ಮೌಲ್ಯಗಳನ್ನು, ಪರೋಪಕಾರ ಮನೋಭಾವವನ್ನು, ದಕ್ಷತೆಯನ್ನು ಮಕ್ಕಳ ಮನೋಭೂಮಿಕೆಯಲ್ಲಿ ಬಿತ್ತರಿಸಬೇಕಾಗಿದೆ ಮತ್ತು ವಿಸ್ತರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ನೀತಿಕಥಾಸಾರವೆಂಬ ಶೀರ್ಷಿಕೆಯ ಅಡಿಯಲ್ಲಿ ಇಲ್ಲಿ ಸಂಕಲಿತಗೊಂಡಿರುವ ಹದಿನೈದು ಕಥೆಗಳು ಅಂತಹ ನೈತಿಕ ಮೌಲ್ಯಗಳನ್ನು ಬಿತ್ತರಿಸುವಂತಹವುಗಳೇ ಆಗಿವೆ. ಹಾಗೂ ಯುವಪೀಳಿಗೆಯ ಜೀವನ ಮೌಲ್ಯಗಳನ್ನು ಕಟ್ಟಿಕೊಳ್ಳಲು ಪ್ರೇರಣೆಯನ್ನು ನೀಡಿ ಅವರ ವ್ಯಕ್ತಿತ್ವ ವಿಕಸನಕ್ಕೆ ದಾರಿದೀಪವಾಗಿವೆ.

ಯು.ಜಿ.ಸಿ., ಎಂ.ಆರ್.ಪಿ., ಎನ್.ಎಂ.ಎಂ. ಯೋಜನೆಗಳು

ವಿಶ್ವವಿದ್ಯಾಲಯ ಅನುದಾನದ ಜೊತೆಗೆ ಯುಜಿಸಿ, ಎಂಆರ್‌ಪಿ, ಎನ್‌ಎಮ್‌ಎಮ್ ಮತ್ತು ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಅನುದಾನ ಪಡೆದು ವಿಭಾಗದ ಪ್ರಾಧ್ಯಾಪಕರು ಹಲವು ರೀತಿಯ ಯೋಜನೆಗಳನ್ನು ನಿರ್ವಹಿಸಿದ್ದಾರೆ.

೧. ಎ.ವಿ.ನಾವಡ

೧. **ತುಳು ಪಾಡ್ದನಗಳ ಬಹುಮುಖಿ ದಾಖಲಾತಿ ಪಠ್ಯೀಕರಣ ಹಾಗೂ ಕನ್ನಡಕ್ಕೆ ಭಾಷಾಂತರ ಮತ್ತು ಉನ್ನತ ವಿಮರ್ಶೆ:** ಪ್ರೊ. ಎ.ವಿ.ನಾವಡ ಅವರು ಈ ಯೋಜನೆಯನ್ನು ೨೦೦೫ರಲ್ಲಿ ಪ್ರಧಾನ ಸಂಶೋಧನ ಯೋಜನೆ ಅಡಿಯಲ್ಲಿ (ಎಮ್‌ಆರ್‌ಪಿ) ನಿರ್ವಹಿಸಿದ್ದಾರೆ. ತುಳು ಸಂಸ್ಕೃತಿಯ ಅಧ್ಯಯನದ ಮೂಲ ಆಕರಗಳಾಗಿರುವ ಪಾಡ್ದನಗಳು ಪರವ, ಪಂಬದ, ನಲ್ಕೆ ಹಾಗೂ ನಾಟಿಗದ್ಯ ಮುಂತಾದ ಬುಡಕಟ್ಟು ಸ್ವರೂಪದ ಸಮುದಾಯಗಳಲ್ಲಿ ಪ್ರಚಲಿತವಾಗಿರುವುದನ್ನು ಗುರುತಿಸಿದ್ದಾರೆ. ಇದಕ್ಕಾಗಿ ರೂ. ೬,೫೭,೦೦೦ ಅನುದಾನವನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗ(ಯುಜಿಸಿ) ಮಂಜೂರು ಮಾಡಿತ್ತು.

೨. ವೀರೇಶ ಬಡಿಗೇರ

೧. **ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣ ಕೇಂದ್ರ**(ಎಂಆರ್‌ಸಿ/ಎಂಸಿಸಿ ೨೦೦೪ರಿಂದ ೨೦೧೨), ಡಾ. ವೀರೇಶ ಬಡಿಗೇರ ಅವರು ಈ ಯೋಜನೆಯ ಸಂಯೋಜನಾಧಿಕಾರಿಯಾಗಿ ನಿರ್ವಹಿಸಿದ್ದಾರೆ. ಕೇಂದ್ರ ಸರಕಾರದ ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರವು ೨೦೦೪ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರವನ್ನು ಹಸ್ತಪ್ರತಿ ಸಂರಕ್ಷಣಾ ಕೇಂದ್ರವನ್ನಾಗಿ ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಗುರುತಿಸಿತು. ಮೊದಲ ಕಂತಾಗಿ ೭.೭.೨೦೦೪ರಲ್ಲಿ ೩,೦೦,೦೦೦/- ಲಕ್ಷ ರೂಪಾಯಿಗಳನ್ನು ನೀಡಿತು. ನಂತರ ನಮ್ಮ ಕೆಲಸಗಳನ್ನು ಮೆಚ್ಚಿ 'ಹಸ್ತಪ್ರತಿ ಸಂರಕ್ಷಣಾ ಕೇಂದ್ರ'ವನ್ನು ೨೦೧೦ರಲ್ಲಿ ಮಂಜೂರು ಮಾಡಿ ೩,೦೦,೦೦೦/- ಅನುದಾನ ನೀಡಿದ್ದರು. ಎಂಅರ್‌ಸಿ/ಎಂಸಿಸಿಗಳ ಮೂಲಕ ನಡೆದ ಒಟ್ಟು ಕಾರ್ಯಕ್ರಮಗಳಿಗೆ ರೂ. ೪೪,೮೫,೦೦೦ ಗಳನ್ನು ನೀಡಿದ್ದರು. ಈ ಹಣ ಬಳಸಿ ಉತ್ತರ ಕರ್ನಾಟಕ ಹನ್ನೊಂದು ಜಿಲ್ಲೆಗಳನ್ನು ಪೈಲೆಟ್ ಹಾಗೂ ಡೋರ್ ಬೈ ಡೋರ್ ಸರ್ವೇ ಮಾಡಿ ಒಂದು ಲಕ್ಷ ಇಪ್ಪತ್ತು ಸಾವಿರ ಹಸ್ತಪ್ರತಿಗಳನ್ನು ಗುರುತಿಸಿ ಅವುಗಳನ್ನು ಮ್ಯಾನ್ಯುವಲ್ ಮತ್ತು ಗಣಿಕೀಕೃತ ರೂಪಗಳಲ್ಲಿ ಸಂಗ್ರಹಿಸಿ ಇಡಲಾಗಿದೆ. ಯೋಜನೆಯಲ್ಲಿ ಸಹಾಯಕರಾಗಿ ಡಾ. ಹಂದ್ರಾಳ ಗವಿಸಿದ್ದಪ್ಪ, ಎಂ.ಗೋವಿಂದ, ಈರಣ್ಣ ಹುರುಳಿ, ಡಾ. ಕೆ.ಆರ್.ಕೇಶವಮೂರ್ತಿ, ಗಣಕೀಕರಣ ಸಹಾಯಕರಾಗಿ ಸುರೇಂದ್ರ ಬಸುಪಟ್ಟದ ಕಾರ್ಯನಿರ್ವಹಿಸಿದ್ದಾರೆ.

೨. **ಕನ್ನಡ ಮತ್ತು ಮರಾಠಿ ಮೋಡಿ ದಾಖಲೆಗಳ ಗಣಕೀಕರಣ ಹಾಗೂ ಕನ್ನಡೀಕರಣ ಯೋಜನೆ:** ಡಾ. ವೀರೇಶ ಬಡಿಗೇರ ಅವರು ಈ ಯೋಜನೆಯನ್ನು ನಿರ್ವಹಿಸಿದ್ದಾರೆ. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯು ೨೫.೦೩.೨೦೧೨ರಲ್ಲಿ ರೂ. ೯,೧೧,೦೦೦/- ಅನುದಾನ ನೀಡಿತ್ತು.ಪ್ರಾಯೋಗಿಕವಾಗಿ ಮುಧೋಳ ತಾಲ್ಲೂಕಿನ ತಹಸೀಲ್ದಾರ ಕಛೇರಿಯಲ್ಲಿನ ೧೧೩ ಹಳ್ಳಿಗಳ ೧೪,೮೫೩ ಇನಾಂತೀನಿ(ಒಟ್ಟು ಪುಟಗಳು ೨೯,೭೦೬), ೯,೯೪೬ ಪಹಣಿ ದಾಖಲೆಗಳು(ಒಟ್ಟು ಪುಟಗಳನ್ನು ೧೮೪೮೨) ಅಂದರೆ ಒಟ್ಟು ೨೪,೭೯೯ ದಾಖಲೆಗಳ ೪೮,೫೪೮ ಪುಟಗಳನ್ನು ಸಮಾರು ಎರಡು ವರ್ಷದಲ್ಲಿ ಗಣಕೀಕರಣಗೊಳಿಸಲಾಯಿತು.

೩. ಎಫ್.ಟಿ.ಹಳ್ಳಿಕೇರಿ

೧. **ಕನ್ನಡ ಹಸ್ತಪ್ರತಿ ಲಿಪಿಕಾರರ ಚರಿತ್ರೆ:** ಈ ಯೋಜನೆಯ ಪ್ರಧಾನ ಸಂಶೋಧಕರಾದ ಡಾ. ಎಫ್.ಟಿ. ಹಳ್ಳಿಕೇರಿಯವರು ೨೦೦೩ರಿಂದ ೨೦೦೫ರ ಅವಧಿಯಲ್ಲಿ ನಿರ್ವಹಿಸಿದ್ದಾರೆ. ಲಿಪಿಕಾರನ ಇತಿವೃತ್ತ, ಗುರು ಪರಂಪರೆ, ಸ್ಥಳೀಯ ಇತಿಹಾಸ, ಆ ಕಾಲದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ವಿದ್ಯಮಾನಗಳನ್ನು ತಿಳಿದುಕೊಳ್ಳಲು ಹಸ್ತಪ್ರತಿ ಪ್ರಶಸ್ತಿಗಳು ಕೈದೀವಿಗೆಗಳಾಗಿವೆ. ಸುಮಾರು ೧,೫೭೦ ಲಿಪಿಕಾರರನ್ನು ಕನ್ನಡ ಸಾಹಿತ್ಯ ಚರಿತ್ರೆಗೆ ನಿಲುಕಿಸಿಕೊಟ್ಟಿದ್ದಾರೆ. ಈ ಯೋಜನೆಗೆ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗವು ಪ್ರಧಾನ ಸಂಶೋಧನ ಯೋಜನ ಅಡಿಯಲ್ಲಿ ರೂ ೩೦೫೧೪೦೧/- ರೂಪಾಯಿಗಳ ಅನುದಾನ ನೀಡಿತ್ತು. ಯೋಜನಾ ಸಹಾಯಕರಾಗಿ ಡಾ. ಜಾಜಿ ದೇವಿಂದ್ರಪ್ಪ ಅವರು ಕಾರ್ಯನಿರ್ವಹಿಸಿದ್ದಾರೆ.

೨. **ಕರ್ನಾಟಕ ಹಾಲುಮತ ಸಂಸ್ಕೃತಿ: ದಾಖಲೀಕರಣ ಮತ್ತು ವಿಶ್ಲೇಷಣೆ:** ಇದರ ಪ್ರಧಾನ ಸಂಶೋಧಕರು ಡಾ.ಎಫ್.ಟಿ. ಹಳ್ಳಿಕೇರಿ. ಯೋಜನ ಸಹಾಯಕರು ಡಾ. ಚಂದ್ರಪ್ಪ ಸೊಬಟಿ ಅವರು. ಹಾಲುಮತ ಸಮುದಾಯವು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಬಹುದೊಡ್ಡ ಸಮುದಾಯ. ಇದೊಂದು ಕ್ಷೇತ್ರಾಧ್ಯಯನವಾಗಿದೆ. ಕರ್ನಾಟಕ ಹಾಲುಮತ ಸಮುದಾಯದ ಇತಿಹಾಸ, ಗುರು ಪರಂಪರೆ ಸಾಂಸ್ಕೃತಿಕ ವೀರರು, ಧಾರ್ಮಿಕ ಕ್ಷೇತ್ರಗಳು, ಆಚರಣೆ, ಸಂಪ್ರದಾಯಗಳು, ಕಸುಬು, ಸಾಹಿತ್ಯ ಹೀಗೆ ವಿವಿಧ ಆಯಾಮಗಳ ಕುರಿತ ಅಧ್ಯಯನವಾಗಿದೆ. ಪ್ರಮುಖವಾಗಿ ಹಾಲುಮತ ಸಮುದಾಯವು ಮೂರು ಸಂಪ್ರದಾಯಗಳಲ್ಲಿ ಬೆಳೆದು ಬಂದಿದ್ದನ್ನು ಗುರುತಿಸಿದ್ದಾರೆ. ಪ್ರಧಾನ ಸಂಶೋಧನ ಯೋಜನೆ ಅಡಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ(ಯುಜಿಸಿ) ೬,೨೨,೬೦೦/- ರೂಗಳ ಅನುದಾನ ನೀಡಿದೆ. ಈ ಯೋಜನೆಯನ್ನು ೨೦೦೬ರಿಂದ ೨೦೦೯ರ ಅವಧಿಯಲ್ಲಿ ಪೂರೈಸಿದ್ದಾರೆ.

೪. ಕೆ.ರವೀಂದ್ರನಾಥ

ಬಳ್ಳಾರಿ ಜಿಲ್ಲಾ ಶಾಸನೋಕ್ತ ಸ್ಥಳನಾಮಗಳು: ಸಾಂಸ್ಕೃತಿಕ ಅಧ್ಯಯನ ಈ ಯೋಜನೆಯ ಪ್ರಧಾನ ಉದ್ದೇಶ. ಇದರ ಪ್ರಧಾನ ಸಂಶೋಧಕರು ಡಾ. ಕೆ.ರವೀಂದ್ರನಾಥ. ಯೋಜನಾ ಸಹಾಯಕರು ಡಾ. ಕಲ್ಲಯ್ಯ ಹಿರೇಮಠ. ಬಳ್ಳಾರಿ ಜಿಲ್ಲೆಯ ಭೌಗೋಳಿಕ, ಪ್ರಾಗೈತಿಹಾಸಿಕ ಚರಿತ್ರೆಯನ್ನು ಶಾಸನೋಕ್ತ ಸ್ಥಳನಾಮಗಳ ಮೂಲಕ ಗುರುತಿಸುವ ಮುಖ್ಯ ಉದ್ದೇಶ ಈ ಯೋಜನೆಯದ್ದಾಗಿದೆ. ಅದಕ್ಕಾಗಿ ಸುಮಾರು ೧,೧೦೦ ಶಾಸನಗಳನ್ನು ಅಧ್ಯಯನದ ಆಕರಗಳನ್ನಾಗಿ ಬಳಸಿಕೊಂಡಿದ್ದಾರೆ. ಜೊತೆಗೆ ಜನವಂದತಿ, ಐತಿಹ್ಯ, ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಜನವಸತಿ ಮತ್ತು ನಿರ್ವಸತಿ ಸ್ಥಳಗಳನ್ನು ಪೂರಕವಾಗಿ ಬಳಸಿ, ಬಳ್ಳಾರಿ ಜಿಲ್ಲೆಯ ಐತಿಹಾಸಿಕ ಮಹತ್ವವನ್ನು ನಿರೂಪಿಸಿದ್ದಾರೆ. ವಿಶ್ವವಿದ್ಯಾಲಯ ಧನಸಹಾಯ ಅಯೋಗವು(ಯುಜಿಸಿ) ೪,೨೪,೦೦೦/- ರೂಗಳ ಅನುದಾನ ನೀಡಿತ್ತು.

ವೀರೇಶ ಬಡಿಗೇರ

ಕ್ರಸಂ.	ಯೋಜನೆಯ ಶೀರ್ಷಿಕೆ	ವರ್ಷ
೧.	ಗುಳ್ಳವ್ವ; ಆಚರಣೆ ಮತ್ತು ವಿಶ್ಲೇಷಣೆ	೧೯೯೫-೯೬
೨.	ಬಸವರಾಜ ಕಟ್ಟೀಮನಿ	೧೯೯೬
೩.	ಗೃಹವಾಸ್ತು ಮತ್ತು ಶಿಲ್ಪಶಾಸ್ತ್ರ(ಸಂಪಾದನೆ)	೧೯೯೭
೪.	ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟವೇರ್ ತಂತ್ರಜ್ಞಾನ	೧೯೯೮
೫.	ಹಳೆಯ ಲಾವಣಿಗಳು(ಸಂಪಾದನೆ)	೧೯೯೯
೬.	ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರ ಸಂಗ್ರಹ	೨೦೦೦-೨೦೦೨
೭.	ಕನ್ನಡ ಹಸ್ತಪ್ರತಿಗಳ ಬಹುಪರ್ಯಾಯ ನೆಲೆಗಳು	೨೦೦೨-೨೦೦೪
೮.	ಬಾಚಿಕಾಯಕದ ಬಸವಯ್ಯನ ವೃತ್ತಿ ಮತ್ತು ತತ್ವ ಮೀಮಾಂಸೆ	೨೦೦೫-೨೦೦೬
೯.	ಕನ್ನಡ ಮೋಡಿಲಿಪಿ ಸಂರಚನೆ ಮತ್ತು ಸಂವರ್ಧನೆ	೨೦೦೭-೨೦೧೦
೧೦.	ಭದ್ರಕಾಳಿ ವಿವಾಹ(ಸಂಪಾದನೆ)	೨೦೧೧-೨೦೧೨
೧೧.	ಕನ್ನಡ ಹಸ್ತಪ್ರತಿಗಳ ಮೌಖಿಕ ಸಂಕಥನ	೨೦೧೩-೨೦೧೪
೧೨.	ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಶಿ ವಿವೇಕ	೨೦೧೫
೧೩.	ತತ್ವಕೊರವಂಜಿ	೨೦೧೬-೧೭
೧೪.	ಕರ್ನಾಟಕದ ಆಯಗಾರರು	೨೦೧೮-೧೯
೧೫.	ಮಳೆಯರಾಜ(ಕಾವ್ಯ ಸಂಪದಾನೆ)	೨೦೧೯-೨೦೨೦
೧೬.	ಕರ್ನಾಟಕ ಚರ್ಮವಾದ್ಯಗಳು	೨೦೨೧-೨೦೨೨

ಎಫ್.ಟಿ.ಹಳ್ಳಿಕೇರಿ

ಕ್ರಸಂ.	ಯೋಜನೆಯ ಶೀರ್ಷಿಕೆ	ವರ್ಷ
೧.	ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ: ಶೋಧ ಮತ್ತು ಪರಿಷ್ಕರಣೆ	೧೯೯೮
೨.	ಕರಸ್ಥಲ ಸಾಹಿತ್ಯ: ಪರಿಷ್ಕರಣ	೧೯೯೯
೩.	ಕನ್ನಡ ಜೈನ ಹಾಡುಗಳು: ಪರಿಷ್ಕರಣ	೨೦೦೦
೪.	ಹಿರಿಯಣ್ಣ ಕವಿಯ ಹಯರತ್ನಶ್ರೇಣಿ: ಪರಿಷ್ಕರಣ	೨೦೦೨
೫.	ಅಯ್ಯಪ್ಪ ಕವಿಯ ಚಿದಾನಂದಾವಧೂತ ಚಾರಿತ್ರ: ಪರಿಷ್ಕರಣ	೨೦೦೫
೬.	ಕನ್ನಡ ಲೌಕಿಕಶಾಸ್ತ್ರ ಸಾಹಿತ್ಯ	೨೦೧೩
೭.	ಮಲ್ಲಿಕಾರ್ಜುನ ಕವಿಯ ಹಾಲಸಿದ್ಧೇಶ್ವರ ಸಾಂಗತ್ಯ: ಪರಿಷ್ಕರಣ	೨೦೧೫
೮.	ಕನ್ನಡ ಹಸ್ತಪ್ರತಿ ಲಿಪಿಕಾರರ ಸಂಕಥನ	೨೦೧೬
೯.	ಕೋಳೂರು ಶಂಕರ ಕವಿಯ ಮಾಧವಾಂಕ ಚರಿತೆ	೨೦೧೭
೧೦.	ಮಲ್ಲಣ್ಣ ಕವಿಯ ಕೋಕಶಾಸ್ತ್ರ : ಪರಿಷ್ಕರಣ	೨೦೧೮
೧೧	ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ : ಪರಿಷ್ಕರಣ	೨೦೨೦

ಕೆ.ರವೀಂದ್ರನಾಥ

ಕ್ರಸಂ	ಯೋಜನೆಯ ಶೀರ್ಷಿಕೆ	ವರ್ಷ
೧.	ಕನ್ನಡ ದಾಖಲುಸಾಹಿತ್ಯ	೧೯೯೮-೧೯೯೯
೨.	ಬಸವಯುಗದ ವಚನೇತರ ಸಾಹಿತ್ಯ	೧೯೯೯-೨೦೦೦
೩.	ಗುಂಡಬ್ರಹ್ಮಯ್ಯಗಳ ಸಾಹಿತ್ಯ	೨೦೦೧-೨೦೦೨
೪.	ಕನ್ನಡ ಜೈನ ಹಾಡುಗಳು	೨೦೦೩-೨೦೦೪
೫.	ಕನ್ನಡ ಟೀಕಾಸಾಹಿತ್ಯ	೨೦೦೪-೨೦೦೫
೬.	ಉದ್ಧರಣೆ ಸಾಹಿತ್ಯ	೨೦೦೫-೨೦೦೬
೭.	ಕನ್ನಡ ಕಾವ್ಯೋಕ್ತ ಕವಿಚರಿತೆ	೨೦೦೬-೨೦೦೭
೮.	ಹಸ್ತಪ್ರತಿಗಳು: ಪ್ರಾಚೀನ ಕನ್ನಡಿಗರ ಬದುಕು	೨೦೦೭-೨೦೦೯
೯.	ಹಸ್ತಪ್ರತಿಗಳು: ಚಾರಿತ್ರಿಕ ಸಂಕಥನ	೨೦೧೦-೨೦೧೨
೧೦.	ಕನ್ನಡ ಆಕರಶಾಸ್ತ್ರ	೨೦೧೩-೨೦೧೫
೧೧.	ಲಿಂಗಣ್ಣ ಕವಿಯ ವರರಮ್ಯರತ್ನಾಕರ	೨೦೧೬-೨೦೧೮
೧೨.	ಕಿತ್ತೂರು ರುದ್ರಮ್ಮನ ಕಥೆ	೨೦೧೯-೨೦೨೦
೧೩.	ಗ್ರಾಮಮ್ಯಾನ್ಯುಯಲ್ಸ್	೨೦೨೦-೨೦೨೨
೧೪.	ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ	೨೦೨೨-೨೦೨೩
೧೫.	ಹಸ್ತಪ್ರತಿಶಾಸ್ತ್ರ	೨೦೨೨-೨೦೨೩

ಎಸ್.ಎಸ್.ಅಂಗಡಿ

ಕ್ರಸಂ	ಯೋಜನೆಯ ಶೀರ್ಷಿಕೆ	ವರ್ಷ
೧.	ಸರಳ ಶಬ್ದಮಣಿದರ್ಪಣ(ಸಂಪಾದನೆ)	೨೦೦೫
೨.	ಕನ್ನಡ ಹಸ್ತಪ್ರತಿರಚನೆಃ ಭಾಷಿಕ ವಿವೇಚನೆ	೨೦೦೬
೩.	ಸಿದ್ಧನಂಜೇಶನ ರಾಘವಾಂಕ ಚರಿತೆ(ಸಂಪಾದನೆ)	೨೦೨೧
೪.	ಆಂಡಯ್ಯನ ಸರಳ ಕಬ್ಬಿಗರ ಕಾವ(ಸಂಪಾದನೆ)	೨೦೨೧

ಎಸ್.ಆರ್.ಚನ್ನವೀರಪ್ಪ

ಕ್ರಸಂ	ಯೋಜನೆಯ ಶೀರ್ಷಿಕೆ	ವರ್ಷ
೧.	ನಾಗಲಿಂಗಸ್ವಾಮಿ ತತ್ವಪದಗಳು	೧೯೯೯
೨.	ಸ್ವರವಚನ ತರಂಗ ಸಂಪುಟ-೧	೨೦೦೦
೩.	ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರ ಸಂಗ್ರಹ	೨೦೦೨
೪.	ದಾಸರಾಯರ ಪದಗಳು	೨೦೦೭
೫.	ಬಸವಕಲ್ಪಧ್ರುವಂ	೨೦೧೫
೬.	ನೀತಿಕಥಾಸಾರ	೨೦೨೨

❑❑

೩

ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳು

ಎಫ್.ಟಿ. ಹಳ್ಳಿಕೇರಿ

ಕನ್ನಡ ಸಾಹಿತ್ಯ ಸಮಾಜ ಇತಿಹಾಸ ಮತ್ತು ಸಂಸ್ಕೃತಿ ಅಧ್ಯಯನದ ಆಕರಗಳಲ್ಲಿ ಹಸ್ತಪ್ರತಿಗಳು ಬಹುಮುಖ್ಯ ವೆನಿಸುತ್ತವೆ. ವಿಶೇಷವಾಗಿ ಆಧುನಿಕಪೂರ್ವದ ಕವಿಗಳು ರಚಿಸಿದ ಕಾವ್ಯ-ಪುರಾಣ-ಶಾಸ್ತ್ರಗ್ರಂಥಗಳು ತಾಡೋಲೆ-ಕೋರಿಕಾಗದ ರೂಪದ ಹಸ್ತಪ್ರತಿಗಳಲ್ಲಿ ಈಗಲೂ ಸಂರಕ್ಷಣೆಗೊಂಡಿವೆ. ಆ ಮೂಲಕ ಸಾಹಿತ್ಯ ಚರಿತ್ರೆಯ ರಚನೆಗೆ ಹಾಗೂ ಪುನಾರಚನೆಗೆ ಪ್ರಧಾನ ಆಕರ ಸಾಮಗ್ರಿಗಳಾಗಿ ಬಳಕೆಯಾಗುತ್ತಲಿವೆ. ರೆ.ಎಫ್.ಕಿಟ್ಟೆಲ್, ಹರ್ಮನ್ ಮೋಗ್ಲಿಂಗ್, ಆರ್.ನರಸಿಂಹಾಚಾರ್, ಫ.ಗು.ಹಳಕಟ್ಟಿ, ಶಿ.ಶಿ.ಬಸವನಾಳ, ಆರ್.ಸಿ.ಹಿರೇಮಠ, ಎಂ.ಎಂ.ಕಲಬುರ್ಗಿ, ಎಸ್.ಶಿವಣ್ಣ, ವೀರಣ್ಣ ರಾಜೂರ ಮೊದಲಾದ ವಿದ್ವಾಂಸರು ಹಸ್ತಪ್ರತಿಗಳ ನೆರವಿನಿಂದ ಕನ್ನಡ ಸಾಹಿತ್ಯ ಚರಿತ್ರೆಯ ಪುನಾರಚನೆಗೆ ಕಾರಣರಾಗಿದ್ದಾರೆ.

ಇಂಥ ಅಮೂಲ್ಯ ಆಕರ ಸಾಮಗ್ರಿಗಳಾದ ಹಸ್ತಪ್ರತಿಗಳನ್ನು ಸರ್ವೇಕ್ಷಣೆ-ಸಂಗ್ರಹ, ಸಂರಕ್ಷಣೆ-ಸೂಚೀರಚನೆ, ಪರಿಷ್ಕರಣೆ-ಪ್ರಕಟಣೆ ಹೀಗೆ ವಿವಿಧ ಆಯಾಮಗಳಿಂದ ಅವಲೋಕಿಸುವ ಕ್ರಮ ಕಳೆದ ಎರಡು ಶತಮಾನಗಳಿಂದಲೂ ಬೆಳೆದು ಬಂದಿದೆ. ಆದರೆ ಹಸ್ತಪ್ರತಿಗಳನ್ನು ವಿವಿಧ ನೆಲೆಗಳಿಂದ ಅಧ್ಯಯನಕ್ಕೊಳಪಡಿಸುವ ಪ್ರಕ್ರಿಯೆ ಆರಂಭವಾದುದು ಕಳೆದ ಶತಮಾನದ ಕೊನೆಯ ದಶಕಗಳಲ್ಲಿ. ಡಾ. ಆರ್.ಸಿ.ಹಿರೇಮಠ ಅವರು ೧೯೭೪ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಯೊಂದರ ಅಧ್ಯಕ್ಷೀಯ ಭಾಷಣದಲ್ಲಿ "ಹಸ್ತಪ್ರತಿಗಳ ಸಮಗ್ರ ಅಧ್ಯಯನಕ್ಕಾಗಿ ಹಸ್ತಪ್ರತಿಶಾಸ್ತ್ರ ಎಂಬ ಸ್ವತಂತ್ರ ಇಲಾಖೆಯೊಂದು ಸ್ಥಾಪನೆಯಾಗಬೇಕು" ಎಂದು ಹೇಳಿದರು. ಅದಕ್ಕನುಗುಣವಾಗಿ ಪರಿಷ್ಕರಣೆಗೆ ಮಾತ್ರ ಮೀಸಲಾಗಿದ್ದ ಹಸ್ತಪ್ರತಿಗಳು ಈಗ ಸಾಂಸ್ಥಿಕ ಮತ್ತು ವ್ಯಕ್ತಿಗತ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಲು ಆರಂಭಿಸಿದವು.

ಎಚ್.ದೇವೀರಪ್ಪ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಆಹ್ವಾನದ ಮೇರೆಗೆ ಕನ್ನಡ ಹಸ್ತಪ್ರತಿಗಳ ಇತಿಹಾಸ ಎಂಬ ವಿಶೇಷ ಉಪನ್ಯಾಸವನ್ನು ನೀಡಿದರು. ಒಂದರ್ಥದಲ್ಲಿ ಇದು ಹಸ್ತಪ್ರತಿ ಕುರಿತು ಪ್ರಕಟವಾದ ಮೊದಲ ತಾತ್ವಿಕ ಕೃತಿಯೆನ್ನಬಹುದು(೧೯೭೯). ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಹಸ್ತಪ್ರತಿಶಾಸ್ತ್ರ ಎಂಬ ವಿಚಾರ ಸಂಕಿರಣವನ್ನು ಆಯೋಜಿಸಿ, ಗ್ರಂಥವನ್ನು ಪ್ರಕಟಿಸಿತು(೧೯೮೫). ಹಾಗೆಯೇ ಬಿ.ಎಸ್.ಸಣ್ಣಯ್ಯ(ಕನ್ನಡ ಹಸ್ತಪ್ರತಿಶಾಸ್ತ್ರ ಪರಿಚಯ),

ಎಂ.ಎಂ.ಕಲಬುರ್ಗಿ(ಕನ್ನಡ ಹಸ್ತಪ್ರತಿಶಾಸ್ತ್ರ), ಬಿ.ಆರ್.ಹಿರೇಮಠ(ಹಸ್ತಪ್ರತಿ ಪ್ರಶಸ್ತಿಗಳು), ಎಸ್.ಶಿವಣ್ಣ(ವೀರಶೈವ ಹಸ್ತಪ್ರತಿ ಪ್ರಶಸ್ತಿಗಳು) ಮೊದಲಾದ ವಿದ್ವಾಂಸರು ಸಂಪ್ರಬಂಧ ಮತ್ತು ಗ್ರಂಥರಚನೆಯ ಮೂಲಕ ಹಸ್ತಪ್ರತಿಗಳ ವಿಷಯ ವಿಸ್ತಾರದ ವ್ಯಾಪ್ತಿಯನ್ನು ತೋರಿಸಿಕೊಟ್ಟರು.

ವಿದ್ವಾಂಸರು ಮತ್ತು ಸಂಸ್ಥೆಗಳು ಕೈಕೊಂಡ ಹಸ್ತಪ್ರತಿ ಅಧ್ಯಯನವನ್ನು ಇನ್ನೂ ವಿಸ್ತರಿಸಬೇಕು ಎಂಬಂತೆ ಹಂಪಿಯಲ್ಲಿ ಸ್ಥಾಪನೆ(೧೯೯೨)ಯಾದ ಕನ್ನಡ ವಿಶ್ವವಿದ್ಯಾಲಯವು "ಹಸ್ತಪ್ರತಿಶಾಸ್ತ್ರ ವಿಭಾಗ"ವನ್ನು ಆರಂಭಿಸಿತು(೧೯೯೫). ಸಂಗ್ರಹ-ಸಂರಕ್ಷಣೆ-ಪರಿಷ್ಕರಣೆ ಮತ್ತು ಪ್ರಕಟಣೆಯ ಜೊತೆಜೊತೆಗೆ ವಿಚಾರ ಸಂಕಿರಣ, ವಿಶೇಷ ಉಪನ್ಯಾಸ, ತರಬೇತಿ ಶಿಬಿರ ಹಾಗೂ ಸಮ್ಮೇಳನಗಳನ್ನು ಆಯೋಜಿಸುವುದರ ಮೂಲಕ ಹಸ್ತಪ್ರತಿಶಾಸ್ತ್ರವನ್ನು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುತ್ತ ಬರುತ್ತಲಿದೆ. ಇವುಗಳಲ್ಲಿ "ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ" ವಿಭಾಗದ ಬಹುಮುಖ್ಯ ವಾರ್ಷಿಕ ಕಾರ್ಯಕ್ರಮವಾಗಿದೆ. ಎರಡು ದಿನ ನಡೆಯುವ ಈ ಸಮ್ಮೇಳನವು ಉದ್ಘಾಟನೆ, ವಿಚಾರ ಗೋಷ್ಠಿಗಳು, ಸಮ್ಮೇಳನಾಧ್ಯಕ್ಷರ ಸಾಹಿತ್ಯ ಸಾಧನೆ ಬಗ್ಗೆ ಒಂದು ವಿಶೇಷ ಉಪನ್ಯಾಸ ಹಾಗೂ ಕೊನೆಯದಾಗಿ ಸಮಾರೋಪ ಸಮಾರಂಭ ಇರುತ್ತದೆ. ಹಸ್ತಪ್ರತಿ-ಗ್ರಂಥಸಂಪಾದನೆ-ಹಳಗನ್ನಡ-ನಡುಗನ್ನಡ ಸಾಹಿತ್ಯದಲ್ಲಿ ತಜ್ಞತೆಯನ್ನು ಹೊಂದಿದ ಒಬ್ಬ ವಿದ್ವಾಂಸರನ್ನು ಸಮ್ಮೇಳನದ ಸರ್ವಾಧ್ಯಕ್ಷರಾಗಿರುತ್ತಾರೆ. ಸಮ್ಮೇಳನದ ಉದ್ಘಾಟನ ಸಂದರ್ಭದಲ್ಲಿ ಹಸ್ತಪ್ರತಿ ವ್ಯಾಸಂಗ ಸಂಪುಟವು ಒಳಗೊಂಡಂತೆ ವಿಭಾಗದಿಂದ ಪ್ರಕಟವಾದ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಗುವುದು.

ಇನ್ನು ಈ ಸಮ್ಮೇಳನಗಳ ಸಾಮಾನ್ಯ ಉದ್ದೇಶಗಳು ಹೀಗಿವೆ:

೧. ನಮ್ಮ ಬರವಣಿಗೆಯ ಪ್ರಾಚೀನ ಸಾಮಗ್ರಿಗಳಾದ ತಾಡೋಲೆ-ಕೋರಿಕಾಗದ-ಕಡತಗಳಂಥ ದಾಖಲೆರೂಪದ ಸಾಮಗ್ರಿಗಳ ಬಗ್ಗೆ ವಿದ್ವಾಂಸರಲ್ಲಿ ಮಾತ್ರ ಕುತೂಹಲ ಆಸಕ್ತಿ ಇರುತ್ತಿತ್ತು. ಆದರೆ ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ, ಯುವ ಸಮುದಾಯಕ್ಕೆ ಇವುಗಳನ್ನು ಪರಿಚಯಿಸುವುದು ಮತ್ತು ಜಾಗೃತಿ ಮೂಡಿಸುವುದು.

೨. ಸಾಮಾನ್ಯವಾಗಿ ಯಾವುದೇ ಹಸ್ತಪ್ರತಿಯಲ್ಲಿ ಕೃತಿ ಮತ್ತು ಪ್ರತಿ ಎಂಬ ಎರಡು ಘಟಕಗಳನ್ನು ನಾವು ಕಾಣಬಹುದು. ಕವಿ ನಿರ್ಮಿತ ಕೃತಿಯ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿವೆ. ಆದರೆ ಲಿಪಿಕಾರ ನಿರ್ಮಿತ ಪ್ರತಿಯ ಬಗ್ಗೆ ತಲಸ್ಪರ್ಶಿಯಾದ ಅಧ್ಯಯನ ಮಾಡುವುದು.

೩. ಹಸ್ತಪ್ರತಿ ಕ್ಷೇತ್ರದಲ್ಲಿ ದುಡಿದ ವಿದ್ವಾಂಸರ ಸಮಗ್ರ ಸಾಹಿತ್ಯವನ್ನು ಚರ್ಚಿಸುವುದರ ಮೂಲಕ ಅವರ ಸಂಸ್ಮರಣೆ ಮಾಡುವುದು.

೪. ಸಮ್ಮೇಳನ ನಡೆಯುವ ಪರಿಸರ-ಪ್ರದೇಶ ಅಥವಾ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಕುರಿತು ಗೋಷ್ಠಿಯನ್ನು ಆಯೋಜಿಸಿ ಚರ್ಚಿಸುವುದು.

೫. ಲೌಕಿಕಶಾಸ್ತ್ರ ಕೃತಿಗಳು, ಪ್ರಾತಿನಿಧಿಕ ಕಾವ್ಯ-ಪುರಾಣಗಳ ಪರಿಷ್ಕರಣಗಳ ವೈಧಾನಿಕತೆ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ತಜ್ಞರಿಂದ ಗೋಷ್ಠಿಗಳನ್ನು ಏರ್ಪಡಿಸುವುದು.

೬. ಸಮ್ಮೇಳನಗಳಲ್ಲಿ ಮಂಡನೆಯಾದ ಸಂಪ್ರಬಂಧಗಳು, ವಿಶೇಷ ಉಪನ್ಯಾಸ, ಸಮ್ಮೇಳನಾಧ್ಯಕ್ಷರ ಭಾಷಣ, ಸಮಾರೋಪ ಭಾಷಣ ಮೊದಲಾದವುಗಳನ್ನು ಹಸ್ತಪ್ರತಿ ವ್ಯಾಸಂಗ ಹೆಸರಿನಲ್ಲಿ ಸಂಪಾದಿಸಿ ಪ್ರಕಟಿಸುವುದು.

ಈಗ ಈವರೆಗೆ ನಡೆದ ಹದಿನೆಂಟು ಹಸ್ತಪ್ರತಿ ಸಮ್ಮೇಳನಗಳ ಸ್ವರೂಪವನ್ನು ಈ ಕೆಳಗಿನಂತೆ ಸ್ಥೂಲವಾಗಿ ಅವಲೋಕನ ಮಾಡಬಹುದು.

೧. ಹಸ್ತಪ್ರತಿ ತಜ್ಞರ ಸಾಹಿತ್ಯ ಸಂಸ್ಮರಣೆ

ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನದ ಪ್ರಮುಖ ಭಾಗ ಇದಾಗಿದೆ. ಹಸ್ತಪ್ರತಿ-ಗ್ರಂಥಸಂಪಾದನೆ-ಪ್ರಾಚೀನ ಸಾಹಿತ್ಯದಲ್ಲಿ ಗಮನಾರ್ಹ ಸಾಧನೆ ಮಾಡಿದ ವಿದ್ವಾಂಸರ ಸಮಗ್ರ ಸಾಹಿತ್ಯ ಕುರಿತು ತಜ್ಞರಿಂದ ಸಂಪ್ರಬಂಧಗಳ ಮಂಡನೆ, ಚರ್ಚೆ ಸಂವಾದ ನಡೆಸಲಾಗುವುದು. ಈವರೆಗೆ ಹರ್ಮನ್ ಮೋಗ್ಲಿಂಗ್, ಕೆ.ಜಿ.ಕುಂದಣಗಾರ, ಫ.ಗು.ಹಳಕಟ್ಟಿ, ಆರ್. ನರಸಿಂಹಾಚಾರ್, ಗೊರೇಬಾಳ ಹನುಮಂತರಾವ್, ಶಿ.ಶಿ.ಬಸವನಾಳ, ಶಿ.ಚ.ನಂದೀಮಠ, ಚನ್ನಮಲ್ಲಿಕಾರ್ಜುನರು, ಬಿ.ಎಸ್.ಗದ್ದಗಿಮಠ, ಎನ್.ಅನಂತರಂಗಾಚಾರ್, ಎರ್ತೂರು ಶಾಂತಿರಾಜಶಾಸ್ತ್ರೀ, ಎಂ.ಎಸ್.ಸುಂಕಾಪುರ, ಎಸ್.ಶಿವಣ್ಣ, ಆರ್.ಸಿ.ಹಿರೇಮಠ, ಎಂ.ಮರಿಯಪ್ಪಭಟ್ಟ, ರೆ.ಎಫ್.ಕಿಟ್ಟೆಲ್ ಅವರ ಸಾಹಿತ್ಯವನ್ನು ಅವಲೋಕನ ಮಾಡಲಾಗಿದೆ. ಈ ಎಲ್ಲ ವಿದ್ವಾಂಸರ ಸಾಹಿತ್ಯ ಸಾಧನೆಯನ್ನು ಗಮನಿಸಿದಾಗ ಪಂಪನಿಂದ ಹಿಡಿದು ಮುದ್ದಣ್ಣನವರೆಗಿನ ಕವಿಗಳು ರಚನೆ ಮಾಡಿದ ಕಾವ್ಯ, ಪುರಾಣ, ಶಾಸ್ತ್ರ ಕೃತಿಗಳನ್ನು ಶೋಧಿಸಿ ಪರಿಷ್ಕರಿಸಿರುವುದು ಗೊತ್ತಾಗುತ್ತದೆ. ವಿವಿಧ ಮೂಲಗಳಿಂದ ತಾಡೋಲೆ-ಕೋರಿಕಾಗದರೂಪದ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದು, ಕೂಲಂಕಷವಾಗಿ ಪರಿಶೀಲಿಸಿ ಪರಿಷ್ಕರಣ ಕಾರ್ಯ ಕೈಕೊಂಡಿದ್ದು ಈ ಎಲ್ಲ ವಿದ್ವಾಂಸರ ಸಂಪಾದನ ಗ್ರಂಥಗಳಲ್ಲಿ ನಾವು ಕಾಣಬಹುದು. ಅಷ್ಟೇ ಏಕೆ, ಕವಿಕಾವ್ಯ ಕುರಿತು ಪ್ರಸ್ತಾವನೆಯಲ್ಲಿ ಸುದೀರ್ಘವಾಗಿ ಚರ್ಚಿಸಿರುವುದು ಮನದಟ್ಟಾಗುತ್ತದೆ. ಆರ್.ಸಿ.ಹಿರೇಮಠ ಅವರ ಷಡಕ್ಷರಕವಿಯ ರಾಜಶೇಖರ ವಿಳಾಸ, ಭೀಮಕವಿಯ ಬಸವಪುರಾಣ ಪ್ರಸ್ತಾವನೆಗಳು ಅಧ್ಯಯನಪೂರ್ಣವಾಗಿವೆ. ಗ್ರಂಥ ಪರಿಷ್ಕರಣೆಯ ಜೊತೆಗೆ ಕಾವ್ಯ, ಕಥೆ, ಕಾದಂಬರಿ, ಪ್ರಬಂಧ, ನಾಟಕ –ಹೀಗೆ ಇನ್ನಿತರೆ ಕ್ಷೇತ್ರಗಳಲ್ಲಿಯೂ ಮಾಡಿದ ಸಾಹಿತ್ಯ ಕೃಷಿಯನ್ನೂ ಸಹ ಅವಲೋಕಿಸಲಾಗಿದೆ. ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗೆ ಅಪಾರವಾದ ಕೊಡುಗೆ ನೀಡಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ರೇ.ಎಫ್.ಕಿಟ್ಟೆಲ್ ಒಬ್ಬರು. ನಿಘಂಟು-ವ್ಯಾಕರಣ, ಗ್ರಂಥಸಂಪಾದನೆ-ಪಠ್ಯಪುಸ್ತಕ ರಚನೆ, ಧರ್ಮ, ಸಾಹಿತ್ಯ ಚರಿತ್ರೆ –ಹೀಗೆ ವಿವಿಧ ಕ್ಷೇತ್ರಗಳಲ್ಲಿ ಅಧ್ಯಯನ ಮಾಡಿ ಗ್ರಂಥಗಳನ್ನು ರಚನೆ ಮಡಿದವರು. ಆ ಎಲ್ಲ ಗ್ರಂಥಗಳ ವಿವೇಚನೆಯನ್ನು ವಿದ್ವಾಂಸರು ಮಾಡಿದ್ದಾರೆ. ಹೀಗೆ ವಿದ್ವಾಂಸರ ಸಂಸ್ಮರಣೆಯ ನೆಪದಲ್ಲಿ ಅವರ ಸಾಹಿತ್ಯವನ್ನು ಅವಲೋಕಿಸಿರುವುದು ಈ ಸಮ್ಮೇಳನಗಳ ಬಹುಮುಖ್ಯ ಆಶಯವಾಗಿದೆ.

೨. ಹಸ್ತಪ್ರತಿಗಳ ಸರ್ವೇಕ್ಷಣೆ ಮತ್ತು ಅವುಗಳ ಅನನ್ಯತೆ

"ಹಸ್ತಪ್ರತಿಗಳ ಸಂಪತ್ತು" ಎಂಬ ಗೋಷ್ಠಿಯನ್ನು ಆಯೋಜಿಸಿರುವುದು ಈ ಸಮ್ಮೇಳನಗಳ ಮತ್ತೊಂದು ವಿಶೇಷತೆ. ಸಮ್ಮೇಳನ ನಡೆದ ಜಿಲ್ಲೆ ಅಥವಾ ಪರಿಸರ-ಪ್ರದೇಶಗಳಲ್ಲಿನ ಹಸ್ತಪ್ರತಿಗಳನ್ನು ವಿದ್ವಾಂಸರಿಂದ ಸರ್ವೇಕ್ಷಣೆ ಕಾರ್ಯ ನಡೆಸಿ, ಅವುಗಳ ಅನನ್ಯತೆಯನ್ನು ಗುರುತಿಸುವಂಥ ಕಾರ್ಯ ನಿರಂತರವಾಗಿ ನಡೆದಿದೆ. ಉಡುಪಿ ಮತ್ತು ಮಂಗಳೂರು ಭಾಗದಲ್ಲಿ ಯಕ್ಷಗಾನ ಹಸ್ತಪ್ರತಿಗಳು, ಉತ್ತರ ಕರ್ನಾಟಕದಲ್ಲಿ ಶಿವಶರಣರ ಹಸ್ತಪ್ರತಿಗಳು, ಕಲ್ಯಾಣ ಕರ್ನಾಟಕದಲ್ಲಿ ಬಯಲಾಟದ ಹಸ್ತಪ್ರತಿಗಳು ಯಥೇಚ್ಛವಾಗಿ ದೊರೆತಿವೆ ಎಂಬುದು ಇದರಿಂದ ತಿಳಿದು ಬರುವ ಸಂಗತಿ. ಅಷ್ಟೇ ಏಕೆ, ಮನೆಮಠಗಳಲ್ಲಿದ್ದ ಹಸ್ತಪ್ರತಿಗಳ ಮಾಹಿತಿಯೂ ಇದರಿಂದ ಲಭ್ಯವಾದಂತಾಗಿದೆ. ಬಹುಹಿಂದಿನಿಂದಲೂ ಸ್ಥಾಪನೆಗೊಂಡ ಹಸ್ತಪ್ರತಿ ಭಂಡಾರಗಳು, ಅಲ್ಲಿನ ಹಸ್ತಪ್ರತಿಗಳ ಸಂರಕ್ಷಣ ವಿಧಾನ, ವಿಷಯ ವೈವಿಧ್ಯತೆಯನ್ನು ಗುರುತಿಸಲು ಈ ಗೋಷ್ಠಿಗಳ ಮುಖಾಂತರ ಸಾಧ್ಯವಾಗಿದೆ.

ಉದಾಹರಣೆಗಾಗಿ ಗದಗ ಜಿಲ್ಲೆಯಲ್ಲಿ ಹಸ್ತಪ್ರತಿ ನೆಲೆಗಳು ಯಾವುವು? ಅಲ್ಲಿರುವ ಹಸ್ತಪ್ರತಿಗಳ ಸ್ವರೂಪ, ವಿಷಯವೈವಿಧ್ಯ, ಉಕ್ತಗೊಂಡ ಹಸ್ತಪ್ರತಿ ಲಿಪಿಕಾರರ ವಿವರಗಳು, ಗದದ ನಗರದ ಶ್ರೀ ತೋಂಟದಾರ್ಯ ಮಠದಲ್ಲಿರುವ ಅಪೂರ್ವವಾದ ಹಸ್ತಪ್ರತಿ ಭಂಡಾರ, ಅಲ್ಲಿರುವ ಹಸ್ತಪ್ರತಿಗಳ ವೈವಿಧ್ಯತೆ, ವಿಶೇಷವಾಗಿ ಶಿವಶರಣರ, ಶಿವಕವಿಗಳ ವಚನಗಳು, ಕಾವ್ಯ-ಪುರಾಣಗಳು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಗುರುತಿಸಲಾಗಿದೆ.

೩. ಲೌಕಿಕಶಾಸ್ತ್ರ ಸಾಹಿತ್ಯದ ಅವಲೋಕನ

ಆಧುನಿಕಪೂರ್ವದಲ್ಲಿ ಕಾವ್ಯ-ಪುರಾಣಗಳಂತೆ ಲೌಕಿಕಶಾಸ್ತ್ರ ಕೃತಿಗಳು ನಮ್ಮಲ್ಲಿ ರಚನೆಗೊಂಡಿವೆ. ಆ ಕೃತಿಗಳು ಹಸ್ತಪ್ರತಿರೂಪದಲ್ಲಿಯೇ ಇನ್ನೂ ನಮಗೆ ಅಪಾರ ಪ್ರಮಾಣದಲ್ಲಿದೆ. ಹೀಗಾಗಿ ಇವುಗಳನ್ನು ಶೋಧಿಸಿ ಪರಿಷ್ಕರಿಸಿ ಪ್ರಕಟಿಸುವುದು ಜರೂರಾಗಿ ನಡೆಯಬೇಕಾದ ಕೆಲಸವಾಗಿದೆ. ಈ ಕೆಲಸದ ಒಂದು ಭಾಗವಾಗಿ ಬಹುತೇಕ ಭಾಗ ಇನ್ನೂ ಈ ಕೃತಿಗಳ ಸೂಪ, ಅಶ್ವ, ಗಜ, ಕಾಮ, ಖಡ್ಗ, ಸಮಾಧಿ, ಜ್ಯೋತಿಷ್ಯ, ಯೋಗ. ವೈದ್ಯ, ಕೃಷಿ, ಕುರುಬರ ರಟ್ಟಮತ ಮೊದಲಾದ ಲೌಕಿಕಶಾಸ್ತ್ರ ಸಾಹಿತ್ಯ ಕುರಿತು ಈ ಸಮ್ಮೇಳನಗಳಲ್ಲಿ ಚರ್ಚೆಗೊಳಪಡಿಸಲಾಗಿದೆ.

ಯೋಗ ಸಾಹಿತ್ಯವನ್ನು ಕುರಿತು ಹೇಳುವುದಾದರೆ ಕನ್ನಡ ಕಾವ್ಯ ಪರಂಪರೆಯಲ್ಲಿ ಈ ಶಾಸ್ತ್ರವನ್ನು ಕುರಿತು ಪಂಪ ಕವಿಯಿಂದ ಹಿಡಿದು ಅನೇಕ ಕವಿಗಳು ಪ್ರಸ್ತಾಪ ಮಾಡಿರುವುದನ್ನು ಕಾಣಬಹುದು. ಅಕ್ಕಮಹಾದೇವಿ ಯೋಗಾಂಗ ತ್ರಿವಿಧಿ ಎಂಬ ಲಘು ಕೃತಿಯನ್ನೇ ರಚನೆ ಮಾಡಿದ್ದಾಳೆ. ಸಪ್ತಕಾವ್ಯದ ಗುರುಬಸವನು ಶಿವಯೋಗಾಂಗ ವಿಭೂಷಣ, ಶಾಂತಕವಿಯ ಯೋಗ ರತ್ನಾಕರ -ಹೀಗೆ ಕನ್ನಡದಲ್ಲಿ ಇನ್ನೂ ಅನೇಕ ಕವಿಗಳು ಯೋಗಶಾಸ್ತ್ರದ ಬಗ್ಗೆ ಕಾವ್ಯಗಳನ್ನು ರಚಿಸಿದ್ದಾರೆ. ಇಂಥ ಮೂವತ್ತಕ್ಕೂ ಹೆಚ್ಚು ಲೌಕಿಕಶಾಸ್ತ್ರ ಪ್ರಕಾರಗಳ ಕುರಿತು ಹಸ್ತಪ್ರತಿ ಸಮ್ಮೇಳನಗಳಲ್ಲಿ ವಿದ್ವಾಂಸರು ಸಂಪ್ರಬಂಧ ಮಂಡಿಸಿದ್ದಾರೆ. ಈ ಸಂಪ್ರಬಂಧಗಳ ಆಧಾರದಿಂದ ಒಂದೊಂದು ಶಾಸ್ತ್ರದ ಬಗ್ಗೆ ಸಂಶೋಧನ ವಿದ್ಯಾರ್ಥಿಗಳು ಪಿಎಚ್.ಡಿ. ಅಧ್ಯಯನವನ್ನು ಕೈಕೊಂಡಿರುವುದುಂಟು. ಹೀಗೆಯೇ ವೈದ್ಯಶಾಸ್ತ್ರ ಕುರಿತು ನಮ್ಮಲ್ಲಿ ಅನೇಕ ಕೃತಿಗಳು ಹಸ್ತಪ್ರತಿ ರೂಪದಲ್ಲಿವೆ. ಅವುಗಳನ್ನು ಪ್ರಕಟಿಸಬೇಕಾದ ಅಗತ್ಯತೆಯಿದೆ.

೪. ಕಾವ್ಯ ಪರಿಷ್ಕರಣಗಳ ಸ್ವರೂಪ ಮತ್ತು ಇತಿಹಾಸ

ಕನ್ನಡದ ಕಾವ್ಯಗಳಾದ ಕವಿರಾಜಮಾರ್ಗ, ಪಂಪ ಕವಿಯ ವಿಕ್ರಮಾರ್ಜುನ ವಿಜಯ, ಆದಿಪುರಾಣ, ರನ್ನನ ಗದಾಯುದ್ಧ, ಅನಂತನಾಥ ಚರಿತೆ, ಬಸವಣ್ಣನವರ ವಚನಗಳು, ಅಕ್ಕಮಹಾದೇವಿಯ ವಚನಗಳು, ಹರಿಹರನ ಗಿರಿಜಾ ಕಲ್ಯಾಣ, ಭೀಮಕವಿಯ ಬಸವಪುರಾಣ, ಷಡಕ್ಷರ ಕವಿಯ ರಾಜಶೇಖರ ವಿಳಾಸ ಇತ್ಯಾದಿ ಕಾವ್ಯಗಳ ಪರಿಷ್ಕರಣ ಸ್ವರೂಪ ಮತ್ತು ಅವುಗಳನ್ನು ಪರಿಷ್ಕರಿಸಿದ ಸಂದರ್ಭಗಳನ್ನು ಅವಲೋಕಿಸುವ ಗೋಷ್ಠಿಯನ್ನು ಸಮ್ಮೇಳನಗಳಲ್ಲಿ ಆಯೋಜಿಸಿಕೊಂಡು ಬರಲಾಗುತ್ತಿದೆ. ಒಂದು ಕಾವ್ಯ ಎಷ್ಟು ಸಲ ಪರಿಷ್ಕರಣಗೊಂಡಿದೆ? ಪರಿಷ್ಕರಿಸಿದ ವಿಧಾನವೇನು?, ಅವುಗಳ ತೌಲನಿಕ ವಿವೇಚನೆ ಮೊದಲಾದ ಸಂಗತಿಗಳ ಬಗ್ಗೆ ಗಮನಹರಿಸಲಾಗಿದೆ. ಉದಾಹರಣೆಗಾಗಿ ಬಸವಣ್ಣನವರ ವಚನಗಳ ಪರಿಷ್ಕರಣೆಗೆ ಒಂದು ನೂರಾ ಇಪ್ಪತ್ತು ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ಮರಿಶಂಕರದೇವರು, ಫ.ಗು.ಹಳಕಟ್ಟಿ, ಶಿ.ಶಿ.ಬಸವನಾಳ, ಆರ್.ಸಿ.ಹಿರೇಮತ, ಎಂ.ಎಂ.ಕಲಬುರ್ಗಿ ಮೊದಲಾದ ವಿದ್ವಾಂಸರು ಪರಿಷ್ಕರಣ ಕಾರ್ಯವನ್ನು ಕೈಗೆತ್ತಿಕೊಂಡಿದ್ದರು. ಹೀಗೆ ಅನೇಕ ಕಾವ್ಯಗಳ ಪರಿಷ್ಕರಣದ ವೈಧಾನಿಕತೆಯನ್ನು ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಆ ಮೂಲಕ ಆ ಪರಿಷ್ಕರಣಗಳ ವಿಶೇಷತೆಗಳೇನು? ಬಳಸಿಕೊಂಡ ಹಸ್ತಪ್ರತಿಗಳ ಸಂಖ್ಯೆ, ಅವುಗಳ ಸ್ವರೂಪ, ಪರಿಷ್ಕರಣದ ವಿಧಾನ -ಹೀಗೆ ಅನೇಕ ಸಂಗತಿಗಳತ್ತ ಇಲ್ಲಿ ಗಮನಹರಿಸಿದ್ದನ್ನು ಕಾಣುತ್ತೇವೆ.

೫. ಸಮ್ಮೇಳನಾಧ್ಯಕ್ಷರ ಸಾಹಿತ್ಯದ ಅವಲೋಕನ

ಹಸ್ತಪ್ರತಿ ಸಮ್ಮೇಳನಾಧ್ಯಕ್ಷರ ಸಾಹಿತ್ಯ ಕೃಷಿಯನ್ನು ಕುರಿತು ಒಂದು ವಿಶೇಷ ಉಪನ್ಯಾಸವನ್ನು ಏರ್ಪಡಿಸುತ್ತ ಬಂದಿರುವುದು ಈ ಸಮ್ಮೇಳನಗಳಲ್ಲಿ ಕಾಣುತ್ತೇವೆ. ಈವರೆಗೆ ಟಿ.ವಿ.ವೆಂಕಟಾಚಲಶಾಸ್ತ್ರೀ, ಎನ್.ಬಸವಾರಾಧ್ಯ, ಎಂ.ಎಂ.ಕಲಬುರ್ಗಿ, ಬಿ.ಎಸ್.ಸಣ್ಣಯ್ಯ, ಬಿ.ವಿ.ಮಲ್ಲಾಪುರ, ಸಿ.ಮಹದೇವಪ್ಪ, ಬಿ.ವಿ.ಶಿರೂರ, ಗೌ.ಮ.ಉಮಾಪತಿಶಾಸ್ತ್ರೀ,

ಬಿ.ಕೆ.ಹಿರೇಮಠ, ಚಂದ್ರಶೇಖರ ಕಂಬಾರ, ದೇ.ಜವರೇಗೌಡ, ವೀರಣ್ಣ ರಾಜೂರ, ಎಂ.ಪಿ.ಮಂಜಪ್ಪಶೆಟ್ಟಿ, ಹಂಪಾ ನಾಗರಾಜಯ್ಯ, ಟಿ.ಎನ್.ನಾಗರತ್ನ, ವೈ.ಸಿ.ಭಾನುಮತಿ, ಎಸ್.ಆರ್.ಗುಂಜಾಳ, ಎ.ವಿ.ನಾವಡ ಅವರು ಹಸ್ತಪ್ರತಿ ಸಮ್ಮೇಳನಾಧ್ಯಕ್ಷರಾಗಿದ್ದರು. ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು, ವಿಶೇಷವಾಗಿ ಹಸ್ತಪ್ರತಿ-ಗ್ರಂಥಸಂಪಾದನ ಶಾಸ್ತ್ರದಲ್ಲಿ ಅವರು ಮಾಡಿದ ಕಾರ್ಯ ಸಾಧನೆಯನ್ನು ದಾಖಲಿಸುವ ಪ್ರಯತ್ನ ಈ ವಿಶೇಷ ಉಪನ್ಯಾಸದ ಮೂಲಕ ಮಾಡಲಾಗಿದೆ. ಉದಾಹರಣೆಗಾಗಿ ಬಿ.ಎಸ್.ಸಣ್ಣಯ್ಯ, ಗೌ.ಮ.ಉಮಾಪತಿಶಾಸ್ತ್ರೀ ಅವರು ಜೀವನದುದ್ದಕ್ಕೂ ಹಸ್ತಪ್ರತಿಗಳ ಜೊತೆಗೆ ಒಡನಾಟವನ್ನು ಹೊಂದಿದವರು. ಅವರು ಹಸ್ತಪ್ರತಿಗಳ ಶೋಧ ಸರ್ವೇಕ್ಷಣೆ, ಸಂಗ್ರಹ-ಸಂರಕ್ಷಣೆ, ಸೂಚೀಕರಣ-ಪರಿಷ್ಕರಣ ಕಾರ್ಯದಲ್ಲಿ ಮಹತ್ವದ ಕಾರ್ಯವನ್ನು ಮಾಡಿದ್ದಾರೆ. ಜೊತೆಗೆ ಹಸ್ತಪ್ರತಿಗಳ ಒಡಲಲ್ಲಿರುವ ಅನೇಕ ಮಾಹಿತಿಗಳನ್ನು ಹೊರತೆಗೆದು ಅವುಗಳ ವಿಶಿಷ್ಟತೆಯನ್ನು ಗುರುತಿಸಿದ್ದಾರೆ. ಇಂಥ ಎಲ್ಲ ಸಂಗತಿಗಳನ್ನು ಈ ಉಪನ್ಯಾಸದಲ್ಲಿ ವಿದ್ವಾಂಸರು ಗಮನಿಸಿದ್ದಾರೆ. ಒಂದರ್ಥದಲ್ಲಿ ಸಮ್ಮೇಳನಾಧ್ಯಕ್ಷರ ಸಾಹಿತ್ಯ ಕೃಷಿಯನ್ನು ಅವಲೋಕನ ಮಾಡಲು ಇಂಥ ಸಮ್ಮೇಳನಗಳು ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿವೆ.

ಇನ್ನು ಸಮ್ಮೇಳನಗಳ ಉದ್ಘಾಟನ ಸಮಾರಂಭದಲ್ಲಿ ಹಿಂದಿನ ವರ್ಷದಲ್ಲಿ ಮಂಡನೆಯಾದ ಸಂಪ್ರಬಂಧಗಳನ್ನು ಸಂಗ್ರಹಿಸಿ ಹಸ್ತಪ್ರತಿ ವ್ಯಾಸಂಗ ಹೆಸರಿನ ಸಂಪುಟದ ಮೂಲಕ ಪ್ರಕಟಿಸಿ ಗಣ್ಯಮಾನ್ಯರಿಂದ ಹಾಗೂ ವಿದ್ವಾಂಸರಿಂದ ಲೋಕಾರ್ಪಣೆ ಮಾಡಾವುದು ರೂಢಿಗತ. ಈಗಾಗಲೇ ಪ್ರಕಟವಾದ ಇಪ್ಪತ್ತೆರಡು ಸಂಪುಟಗಳು ಹಸ್ತಪ್ರತಿ-ಗ್ರಂಥ ಸಂಪಾದನಶಾಸ್ತ್ರಗಳ ಎಲ್ಲೆಯನ್ನು ವಿಸ್ತರಿಸುವ ಆಕರಸಾಮಗ್ರಿಗಳಾಗಿ ಬಳಕೆಯಾಗುತ್ತಿವೆ. ಇನ್ನು ಈ ಕ್ಷೇತ್ರದಲ್ಲಿ ಎಲೆಮರೆಯ ಕಾಯಿಯಂತೆ ಸೇವೆಸಲ್ಲಿಸುತ್ತಿರುವ ಹಸ್ತಪ್ರತಿ ತಜ್ಞರನ್ನು ಸನ್ಮಾನಿಸಿ ಗೌರವಿಸುವ ಪರಿಪಾಠವನ್ನಿಟ್ಟು ಕೊಂಡಿರುವುದು ಈ ಸಮ್ಮೇಳನಗಳ ಮತ್ತೊಂದು ವಿಶೇಷತೆ. ಈಗಾಗಲೇ ಗೌ.ಮ.ಉಮಾಪತಿಶಾಸ್ತ್ರೀ(ಧರ್ಮಸ್ಥಳ), ವೈ.ಸಿ.ಭಾನುಮತಿ, ಮೈಸೂರು, ಬಸವರಾಜ ಹೂಗಾರ, ಧಾರವಾಡ, ಎಸ್.ಆರ್.ವಿಘ್ನರಾಜ, ಧರ್ಮಸ್ಥಳ, ಬೆನೆಟ್, ಮಂಗಳೂರು ಮೊದಲಾದವರನ್ನು ಸನ್ಮಾನಿಸಿ ಗೌರವಿಸಲಾಗಿದೆ.

ಯುವ ಸಂಶೋಧನ ವಿದ್ಯಾರ್ಥಿಗಳಿಗೂ ಸಂಪ್ರಬಂಧ ಮಂಡಿಸಲು ಅವಕಾಶವನ್ನು ಕಲ್ಪಿಸಿರುವುದು ಹಸ್ತಪ್ರತಿ ಸಮ್ಮೇಳನಗಳ ಮತ್ತೊಂದು ವಿಶೇಷತೆಯಾಗಿದೆ. ಇದರಿಂದಾಗಿ ಯುವ ಸಂಶೋಧಕರು ಗ್ರಂಥ ಸಂಪಾದನೆ, ಹಸ್ತಪ್ರತಿ, ಶಾಸ್ತ್ರ ಸಾಹಿತ್ಯಗಳತ್ತ ಆಸಕ್ತಿ ತಳೆಯಲು ಕಾರಣವಾಗಿದೆ. ಹೀಗೆ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳ ಮೂಲಕ ಆಧುನಿಕಪೂರ್ವ ಕನ್ನಡ ಸಾಹಿತ್ಯದ ವಿವಿಧ ನೆಲೆಗಳನ್ನು ಗುರುತಿಸಲು ಸಾಧ್ಯವಾಗಿದೆ.

ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳ ವಿವರಗಳು

ಕ್ರಸಂ. ಸಹಯೋಗ / ದಿನಾಂಕ / ಸಮ್ಮೇಳನಾಧ್ಯಕ್ಷರು / ಸಾಹಿತ್ಯ ಸಂಸ್ಮರಣೆ / ನಿರ್ದೇಶಕರು

೧. ಕರ್ನಾಟಕ ಥಿಯಾಲಾಜಿಕಲ್ ಶಿಕ್ಷಣ ಸಂಸ್ಥೆ, ಮಂಗಳೂರು
೧೩-೧೪, ನವಂಬರ ೨೦೦೩,
ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ, ಮೈಸೂರು
ಹರ್ಮನ್ ಮೋಗ್ಲಿಂಗ್ — ಡಾ. ವೀರೇಶ ಬಡಿಗೇರ

೨. ಶ್ರೀ ಶಿವರುದ್ರೇಶ್ವರ ಕಲಾ ಮತ್ತು ಪಟ್ಟಣ ಪಂಚಾಯತ ವಿಜ್ಞಾನ ಕಾಲೇಜು, ಸಂಕೇಶ್ವರ
೪-೫, ಅಕ್ಟೋಬರ ೨೦೦೪, ಪ್ರೊ. ಎನ್.ಬಸವಾರಾಧ್ಯ, ಬೆಂಗಳೂರು
ಪ್ರೊ. ಕೆ.ಜಿ.ಕುಂದಣಗಾರ — ಡಾ. ವೀರೇಶ ಬಡಿಗೇರ

೩. ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ
೧೬-೧೭, ಸಪ್ಟಂಬರ್ ೨೦೦೫
ಡಾ. ಎಂ.ಎಂ.ಕಲಬುರ್ಗಿ, ಧಾರವಾಡ
ಫ.ಗು.ಹಳಕಟ್ಟಿ ಡಾ. ಎಫ್.ಟಿ.ಹಳ್ಳಿಕೇರಿ

೪. ಶ್ರೀ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜು, ತುಮಕೂರು
೨೭-೨೮ ಸಪ್ಟಂಬರ್ ೨೦೦೬, ಪ್ರೊ. ಬಿ.ಎಸ್.ಸಣ್ಣಯ್ಯ, ಮೈಸೂರು
ಆರ್.ನರಸಿಂಹಾಚಾರ್ ಡಾ. ಎಫ್.ಟಿ.ಹಳ್ಳಿಕೇರಿ

೫. ನೃಪತುಂಗ ಪ್ರಥಮ ದರ್ಜೆ ಕಾಲೇಜು, ಸೇಡಂ
೨೯-೩೦, ಡಿಸೆಂಬರ್ ೨೦೦೭, ಡಾ. ಬಿ.ವಿ.ಮಲ್ಲಾಪುರ, ಧಾರವಾಡ
ಗೊರೇಬಾಳ ಹನಮಂತರಾವ್ ಡಾ.ಎಸ್.ಎಸ್.ಅಂಗಡಿ

೬. ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಸವನ ಬಾಗೇವಾಡಿ
೨೩-೨೪, ಫೆಬ್ರವರಿ ೨೦೧೦, ಪ್ರೊ. ಸಿ.ಮಹಾದೇವಪ್ಪ, ಬೆಂಗಳೂರು
ಶಿ.ಶಿ.ಬಸವನಾಳ ಡಾ. ಎಸ್.ಆರ್.ಚನ್ನವೀರಪ್ಪ

೭. ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆ, ಸುತ್ತೂರು
೧-೨, ಎಪ್ರಿಲ್ ೨೦೧೧, ಡಾ. ಬಿ.ವಿ.ಶಿರೂರ, ಹುಬ್ಬಳ್ಳಿ
ಶಿ.ಚ.ನಂದೀಮಠ ಡಾ. ಕೆ.ರವೀಂದರನಾಥ

೮. ಗುರುಬಸವ ಅಧ್ಯಯನ ಪೀಠ, ಬೆಕ್ಕಿನ ಕಲ್ಮಠ, ಶಿವಮೊಗ್ಗ
೧-೨, ಫೆಬ್ರವರಿ ೨೦೧೨, ಪ್ರೊ. ಗೌ.ಮ.ಉಮಾಪತಿಶಾಸ್ತ್ರೀ
ಚನ್ನಮಲ್ಲಿಕಾರ್ಜುನರು ಡಾ. ಕೆ. ರವೀಂದ್ರನಾಥ

೯. ಬಾಗಲಕೋಟ ಜಿಲ್ಲಾ ಜಾನಪದ ಸಾಹಿತ್ಯ ಪರಿಷತ್ತು, ಕೆರೂರ
೧೬-೧೭, ಫೆಬ್ರವರಿ ೨೦೧೩, ಡಾ. ಬಿ.ಕೆ.ಹಿರೇಮಠ, ಬಾಗಲಕೋಟ
ಬಿ.ಎಸ್. ಗದ್ದಗಿಮಠ ಡಾ. ವೀರೇಶ ಬಡಿಗೇರ

೧೦. ಜೆ.ಎಸ್.ಎಸ್. ಕಾಲೇಜು, ಧಾರವಾಡ
೪-೫, ಫೆಬ್ರವರಿ, ೨೦೧೪, ಡಾ. ಚಂದ್ರಶೇಖರ ಕಂಬಾರ, ಬೆಂಗಳೂರು
– ಡಾ. ವೀರೇಶ ಬಡಿಗೇರ

೧೧. ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
೩೦-೩೧, ಅಕ್ಟೋಬರ ೨೦೧೪, ಡಾ. ದೇ.ಜವರೇಗೌಡ, ಮೈಸೂರು
ಎನ್.ಅನಂತರಂಗಾಚಾರ್ ಡಾ. ವೀರೇಶ ಬಡಿಗೇರ

೧೨. ಎಸ್.ಡಿ.ಎಂ. ಕಾಲೇಜು, ಉಜಿರೆ(ದ.ಕ.ಜಿಲ್ಲೆ)
೪-೫, ಡಿಸೆಂಬರ್, ೨೦೧೫, ಡಾ. ವೀರಣ್ಣ ರಾಜೂರ, ಧಾರವಾಡ
ಎತ್ತೂರ ಶಾಂತಿರಾಜಶಾಸ್ತ್ರೀ — ಡಾ. ಎಫ್.ಟಿ.ಹಳ್ಳಿಕೇರಿ

೧೩. ಜಗದ್ಗುರು ತೋಂಟದಾರ್ಯ ಕಾಲೇಜು ಗದಗ
೭-೮, ಅಕ್ಟೋಬರ ೨೦೧೬, ಡಾ. ವೈ.ಸಿ.ಭಾನುಮತಿ, ಮೈಸೂರು
ಎಂ.ಎಸ್.ಸುಂಕಾಪುರ — ಡಾ. ಎಫ್.ಟಿ.ಹಳ್ಳಿಕೇರಿ

೧೪. ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
೨೩-೨೪, ಮಾರ್ಚ, ೨೦೧೭, ಡಾ. ಮಂಜಪ್ಪಶೆಟ್ಟಿ ಮಸಗಲಿ, ಮೈಸೂರು
ಎಸ್. ಶಿವಣ್ಣ — ಡಾ. ಕೆ. ರವೀಂದ್ರನಾಥ

೧೫. ಶ್ರೀ ಭರತೇಶ ಶಿಕ್ಷಣ ಸಂಸ್ಥೆ, ಬೆಳಗಾವಿ
೧೩-೧೪ ಅಕ್ಟೋಬರ್ ೨೦೧೮, ಡಾ. ಹಂಪ ನಾಗರಾಜಯ್ಯ, ಬೆಂಗಳೂರು
ವಿವಿಧ ವಿದ್ವಾಂಸರು — ಡಾ. ಕೆ. ರವೀಂದ್ರನಾಥ

೧೬. ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
೨೫-೨೬, ಫೆಬ್ರವರಿ, ೨೦೨೦, ಡಾ. ಟಿ.ಎನ್.ನಾಗರತ್ನ, ಮೈಸೂರು
ಡಾ. ಆರ್.ಸಿ.ಹಿರೇಮಠ — ಡಾ. ವೀರೇಶ ಬಡಿಗೇರ

೧೭. ಸರಕಾರಿ ಪ್ರಥಮ ದರ್ಜೆ ಕಾಲೇಜು, ಗದಗ-ಬೆಟಗೇರಿ
೪-೫, ನವಂಬರ್, ೨೦೨೦, ಡಾ.ಎಸ್.ಆರ್.ಗುಂಜಾಳ, ಧಾರವಾಡ
ಪ್ರೊ. ಎಂ.ಮರಿಯಪ್ಪ ಭಟ್ಟ — ಡಾ. ವೀರೇಶ ಬಡಿಗೇರ

೧೮. ಸುದಾನ-ಕಿಟ್ಟೆಲ್ ಸೆಂಟರ್, ಪುತ್ತೂರು
೫-೬, ಮಾರ್ಚ, ೨೦೨೨, ಪ್ರೊ.ಎ.ವಿ.ನಾವಡ
ರೆವೆ.ಎಫ್.ಕಿಟ್ಟೆಲ್ — ಡಾ. ಎಫ್.ಟಿ.ಹಳ್ಳಿಕೇರಿ

೧೯. ಬ.ವಿ.ವಿ.ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಕರ್ನಾಟಕ ಸಾಹಿತ್ಯ ಸಂಘ, ಬಾಗಲಕೋಟೆ
೧೮-೧೯, ಅಕ್ಟೊಬರ್, ೨೦೨೨, ಪ್ರೊ. ಲಕ್ಷ್ಮಣ್ ತೆಲಗಾವಿ, ಧಾರವಾಡ
ಡಾ. ಬಿ.ಆರ್.ಹಿರೇಮಠ — ಡಾ. ಎಫ್.ಟಿ.ಹಳ್ಳಿಕೇರಿ

❑❑

೪

ವಿಚಾರ ಸಂಕಿರಣಗಳು

ಎಸ್.ಎಸ್. ಅಂಗಡಿ

ಆಧುನಿಕಪೂರ್ವ ಸಾಹಿತ್ಯ ಅಧ್ಯಯನದಲ್ಲಿ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯು ಬಹು ಮುಖ್ಯ ಪಾತ್ರ ವಹಿಸುತ್ತದೆ. ಅವುಗಳ ಅಧ್ಯಯನ ವಿಧಾನಗಳನ್ನು ಕುರಿತು ಹೊಸ ತತ್ವಸಿದ್ಧಾಂತಗಳು ಕಾಲಕಾಲಕ್ಕೆ ರೂಪಿತವಾಗಿರುತ್ತವೆ. ಹಸ್ತಪ್ರತಿಶಾಸ್ತ್ರ ವಿಭಾಗವು ಅಂತಹ ಪ್ರಯೋಗಗಳನ್ನು ಮಾಡುತ್ತ ಬಂದಿದೆ. ಈ ನಿಟ್ಟಿನಲ್ಲಿ ಹಲವಾರು ವಿಚಾರ ಸಂಕಿರಣಗಳನ್ನು ಕಳೆದ ಇಪ್ಪತ್ತೈದು ವರ್ಷಗಳಿಂದ ವಿಭಾಗವು ನಾಡಿನಾದ್ಯಂತ ಹಲವು ಸಂಸ್ಥೆಗಳ ಸಹಯೋಗದಲ್ಲಿ ನಡೆಸಿದೆ. ಅವುಗಳ ಸ್ವರೂಪವನ್ನು ಕುರಿತು ಸ್ಥೂಲವಾಗಿ ಈ ಲೇಖನದಲ್ಲಿ ವಿವರಿಸಲಾಗಿದೆ.

ಹಸ್ತಪ್ರತಿಶಾಸ್ತ್ರ ವಿಭಾಗವು ೧೬, ೧೭ ಡಿಸೆಂಬರ್ ೧೯೯೮ರಲ್ಲಿ ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ಸಹಯೋಗದಲ್ಲಿ ಗ್ರಂಥಸಂಪಾದನೆ ವಿಧಿ-ವಿಧಾನಗಳು ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲಿ ಮಾರ್ಗಸಾಹಿತ್ಯ, ದೇಶಿಸಾಹಿತ್ಯ, ಮೌಖಿಕಸಾಹಿತ್ಯ ಮತ್ತು ಶಾಸನಸಾಹಿತ್ಯ ಸಂಪಾದನೆಯ ತತ್ವಸಿದ್ಧಾಂತಗಳನ್ನು ಕುರಿತು ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಿದರು. ಎ.ವಿ.ನಾವಡರು ಈ ವಿಚಾರ ಸಂಕಿರಣದ ನಿರ್ದೇಶಕರಾಗಿದ್ದರು. ವಿಭಾಗವು ೩೦-೩೧ ಡಿಸೆಂಬರ್ ೨೦೧೨ ರಂದು ಸಂಸ್ಕೃತ ಸಂಶೋಧನ ಪ್ರತಿಷ್ಠಾನ, ಮೇಲುಕೋಟೆಯಲ್ಲಿ ಕನ್ನಡ ಹಸ್ತಪ್ರತಿ ಭಂಡಾರಗಳು ಎಂಬ ವಿಷಯ ಕುರಿತು ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತು. ಹಸ್ತಪ್ರತಿಗಳ ಸಂಗ್ರಹದಷ್ಟೇ ಅವುಗಳನ್ನು ಹಸ್ತಪ್ರತಿ ಭಂಡಾರದಲ್ಲಿ ಸುರಕ್ಷಿತವಾಗಿಡುವುದು ಅಷ್ಟೇ ಮುಖ್ಯವಾಗಿದೆ. ಕರ್ನಾಟಕದಲ್ಲಿ ಹಲವಾರು ಹಸ್ತಪ್ರತಿ ಭಂಡಾರಗಳಿವೆಅವುಗಳ ಸ್ವರೂಪ ಕುರಿತು ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಿದರು. ಈ ವಿಚಾರ ಸಂಕಿರಣದ ನೇತೃತ್ವವನ್ನು ಎಫ್.ಟಿ.ಹಳ್ಳಿಕೇರಿ ಮತ್ತು ಕೆ.ರವೀಂದ್ರನಾಥ ಅವರು ವಹಿಸಿದ್ದರು. ಅದೇ ಸುಮಾರಿನಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಹಸ್ತಪ್ರತಿಗಳ ಸಂರಕ್ಷಣೆಯ ಆಧುನಿಕ ವಿಧಾನಗಳು ಹಾಗೂ ಅವುಗಳ ಅಧ್ಯಯನ ಹೊಸ ಸಾಧ್ಯತೆಗಳು ಮುಖ್ಯವಾಗಿದೆ. ಗಣಕಯಂತ್ರದ ಮೂಲಕ ಹಸ್ತಪ್ರತಿಗಳನ್ನು ಸಂರಕ್ಷಿಸಬೇಕಾಗಿದೆ. ಅದರಿಂದ ಶ್ರಮ, ಸಮಯ ಉಳಿತಾಯವಾಗುತ್ತದೆ. ಆ ಕುರಿತು ಹಲವು ವಿದ್ವಾಂಸರು ಪ್ರಬಂಧ ಮಂಡಿಸಿದರು. ವೀರೇಶ ಬಡಿಗೇರ ಮತ್ತು ಎಸ್.ಆರ್.ಚನ್ನವೀರಪ್ಪ ಅವರು ಈ ವಿಚಾರ ಸಂಕಿರಣದ

ನೇತೃತ್ವವನ್ನು ವಹಿಸಿದ್ದರು. ಪ್ರತಿಯೊಂದು ವಿಚಾರ ಸಂಕಿರಣದ ನಂತರ ಪ್ರಬಂಧ ಮಂಡನೆಯಾದ ಮೇಲೆ ಮೌಲಿಕ ಚರ್ಚೆಗಳು ಸಂವಾದಗಳು ನಡೆಯುತ್ತಿದ್ದವು ಈ ವಿಚಾರ ಸಂಕಿರಣಗಳು ಹಸ್ತಪ್ರತಿಶಾಸ್ತ್ರದ ಎಲ್ಲೆಯನ್ನು ವಿಸ್ತರಿಸುವಲ್ಲಿ ತುಂಬ ನೆರವಾದವು

ವಿಭಾಗವು ೧೧-೧೨ ನವಂಬರ್ ೨೦೦೫ರಂದು ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರುಇವುಗಳ ಸಹಯೋಗದಲ್ಲಿ ಕನ್ನಡದ ಶ್ರೇಷ್ಠ ವಿದ್ವಾಂಸರಾಗಿದ್ದ ಮತ್ತು ಹಸ್ತಪ್ರತಿ-ಗ್ರಂಥಸಂಪಾದನ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದ ಡಿ.ಎಲ್.ನರಸಿಂಹಾಚಾರ್ ಅವರ ಶತಮಾನ ಸ್ಮರಣೆ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿತು. ಡಿ.ಎಲ್.ಎನ್. ಅವರ ವ್ಯಕ್ತಿತ್ವ ಸಾಹಿತ್ಯ ಸಾಧನೆ ಈ ಕುರಿತು ಹಿರಿಯ ಮತ್ತು ಯುವ ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಿದರು. ಎಫ್.ಟಿ.ಹಳ್ಳಿಕೇರಿ ಅವರು ಈ ವಿಚಾರ ಸಂಕಿರಣದ ನಿರ್ದೇಶಕರಾಗಿದ್ದರು.

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ವಿದ್ಯಾರಣ್ಯ ಆವರಣದಲ್ಲಿ ದಿನಾಂಕ: ೧೭-೧೮ ಮಾರ್ಚ್ ೨೦೦೬ರಂದು ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಹಸ್ತಪ್ರತಿಶಾಸ್ತ್ರ ವಿಭಾಗವು ೧೯೯೬ರಲ್ಲಿ ಸ್ಥಾಪನೆಗೊಂಡು ಹತ್ತು ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ಅದರ ಅಂಗವಾಗಿ ದಶಮಾನೋತ್ಸವ ಸಮಾರಂಭವನ್ನು ಆಚರಿಸುತ್ತಿರುವುದು ಅಭಿಮಾನದ ಸಂಗತಿಯಾಗಿದೆ. ಆ ಸಮಾರಂಭದ ಅಂಗವಾಗಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತು. ಆ ವಿಚಾರ ಸಂಕಿರಣದಲ್ಲಿ ಭಾರತೀಯ ಗ್ರಂಥಸಂಪಾದನೆ: ತಾತ್ವಿಕತೆ ಎಂಬ ಒಂದನೆಯ ಗೋಷ್ಠಿಯಲ್ಲಿ ವೀರೇಶ ಬಡಿಗೇರ ಅವರು ಭಾರತೀಯ ಗ್ರಂಥಸಂಪಾದನೆ: ಸ್ವರೂಪ ಮತ್ತು ಇತಿಹಾಸ, ವೈ.ಸಿ.ಭಾನುಮತಿ ಅವರು ಗ್ರಂಥಸಂಪಾದನೆ: ಇತ್ತೀಚಿನ ಪ್ರವೃತ್ತಿಗಳು, ಕೆ.ರವೀಂದ್ರನಾಥ ಅವರು ಗ್ರಂಥಸಂಪಾದನೆ: ಮುಂದಿನ ಹೆಜ್ಜೆಗಳು ಈ ಕುರಿತು ಪ್ರಬಂಧಗಳನ್ನು ಮಂಡಿಸಿದರು. ಹಿರಿಯ ವಿದ್ವಾಂಸರಾದ ಬಿ.ಎಸ್.ಸಣ್ಣಯ್ಯ ಅವರು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ದಕ್ಷಿಣ ಭಾರತೀಯ ಗ್ರಂಥಸಂಪಾದನೆ-೧ ಎಂಬ ಎರಡನೆಯ ಗೋಷ್ಠಿಯಲ್ಲಿ ತೆಲುಗಿನಲ್ಲಿ, ತಮಿಳನಲ್ಲಿ, ಮಲಯಾಳಂದಲ್ಲಿ ಗ್ರಂಥಸಂಪಾದನೆಯನ್ನು ಕುರಿತು ಕ್ರಮವಾಗಿ ಆರ್ವಿಯಸ್ ಸುಂದರಂ, ಹರಿಕೃಷ್ಣ ಭಟ್ಟ, ಪಿ.ವಿಶಾಲಾಕ್ಷಿ ಅವರು ಪ್ರಬಂಧಗಳನ್ನು ಮಂಡಿಸಿದರು. ಹಿರಿಯ ವಿದ್ವಾಂಸರಾದ ಜಿ.ಜಿ.ಮಂಜುನಾಥನ್ ಅವರು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ದಕ್ಷಿಣ ಭಾರತೀಯ ಗ್ರಂಥಸಂಪಾದನೆ-೨ ಮೂರನೆಯ ಗೋಷ್ಠಿಯಲ್ಲಿ ಮರಾಠಿಯಲ್ಲಿ, ತುಳುವಿನಲ್ಲಿ, ಸಂಸ್ಕೃತದಲ್ಲಿ ಗ್ರಂಥಸಂಪಾದನೆ ಕುರಿತು ಕ್ರಮವಾಗಿ ವಿಠಲರಾವ್ ಗಾಯಕ್ವಾಡ್, ಎಸ್.ಆರ್.ವಿಘ್ನರಾಜು, ಸಿ.ಶಿವಕುಮಾರಸ್ವಾಮಿ, ಅವರು ಪ್ರಬಂಧಗಳನ್ನು ಮಂಡಿಸಿದರು. ಹಿರಿಯ ವಿದ್ವಾಂಸರಾದ ಎ.ವಿ.ನಾವಡ ಅವರು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಗ್ರಂಥಸಂಪಾದನೆ ಎಂಬ ಮೂರನೆಯ ಗೋಷ್ಠಿಯಲ್ಲಿ ಪಂಡಿತ ಆವೃತ್ತಿಗಳು, ಜನಪ್ರಿಯ ಆವೃತ್ತಿಗಳು ಮತ್ತು ಸಂಗ್ರಹ ಆವೃತ್ತಿಗಳು ಕುರಿತು ಕ್ರಮವಾಗಿ ಎಸ್.ಎಸ್.ಅಂಗಡಿ, ಎಸ್.ಆರ್.ಚನ್ನವೀರಪ್ಪ, ಸಿ.ನಾಗಭೂಷಣ ಅವರು ಪ್ರಬಂಧಗಳನ್ನು ಮಂಡಿಸಿದರು. ದಶಮಾನೋತ್ಸವದ ಅಂಗವಾಗಿ ಪ್ರಸಾರಾಂಗದಿಂದ ವಿಭಾಗದ ಹತ್ತು ಪುಸ್ತಕಗಳು ಬಿಡುಗಡೆಯಾದವು. ಅದರಂತೆ ಹಸ್ತಪ್ರತಿ-ಗ್ರಂಥಸಂಪಾದನೆಯನ್ನು ಸಾಧನೆ ಮಾಡಿದ ಜಿ.ಬ್ರಹ್ಮಪ್ಪ, ಎನ್.ಬಸವಾರಾಧ್ಯ,ಗೌ.ಮ.ಉಮಾಪತಿಶಾಸ್ತ್ರೀ, ಎಂ.ಎಸ್.ಲಠ್ಠೆ, ಬಿ.ಎಸ್.ಸಣ್ಣಯ್ಯ, ಜಿ.ಜಿ.ಮಂಜುನಾಥನ್, ಎಸ್.ಉಮಾಪತಿ, ಟಿ.ಎನ್.ನಾಗರತ್ನ, ಎಸ್.ಶಿವಣ್ಣ, ಬಿ.ವಿ.ಶಿರೂರ ಅವರನ್ನು ಸನ್ಮಾನಿಸಲಾಯಿತು. ಜೊತೆಗೆ ಡಿ.ಎಲ್.ನರಸಿಂಹಾಚಾರ್, ಕೆ.ಜಿ.ಕುಂದಣಗಾರ, ಫ.ಗು.ಹಳಕಟ್ಟಿ, ಆರ್.ನರಸಿಂಹಾಚಾರ್, ಶಿ.ಶಿ.ಬಸವನಾಳ,

ಆರ್.ಸಿ.ಹಿರೇಮಠ ಇಂತಹ ಹತ್ತು ಜನ ಹಸ್ತಪ್ರತಿ ವಿದ್ವಾಂಸರ ಭಾವಚಿತ್ರಗಳನ್ನು ಅನಾವರಣ ಮಾಡಲಾಯಿತು. ಒಟ್ಟಿನಲ್ಲಿ, ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ಸಮಾರಂಭವು ತುಂಬ ಅರ್ಥ ಪೂರ್ಣವಾಗಿ ನಡೆಯಿತು. ಈ ದಶಮಾನೋತ್ಸವದ ನೆನಪಿಗಾಗಿ ವಿಭಾಗವು ಕವಳಿಗೆಎಂಬ ನೆನಪಿನ ಸಂಪುಟವನ್ನು ತರಲಾಯಿತು. ಆಸಂಪುಟದ ಸಂಪಾದಕರು ಎ.ವಿ.ನಾವಡ ಮತ್ತು ಕೆ.ರವೀಂದ್ರನಾಥ ಅವರು. ಈ ದಶಮಾನೋತ್ಸವದ ನೇತೃತ್ವವನ್ನು ಎಫ್.ಟಿ.ಹಳ್ಳಿಕೇರಿ ಅವರು ವಹಿಸಿದ್ದರು.

ಹಸ್ತಪ್ರತಿ ಕಾರ್ಯಾಗಾರ: ರಾಷ್ಟ್ರೀಯ ವಿಚಾರ ಸಂಕಿರಣವನ್ನು ಡಿಸೆಂಬರ್ ೩೦-೩೧, ೨೦೦೩ರಲ್ಲಿ ವಿದ್ಯಾರಣ್ಯ ಆವರಣದಲ್ಲಿ ನಡೆಯಿತು. ರಾಜ್ಯ, ರಾಷ್ಟ್ರಮಟ್ಟದ ವಿದ್ವಾಂಸರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದರು. ಹಸ್ತಪ್ರತಿ ಹೊಸ ಸಾಧ್ಯತೆಗಳ, ಹೊಸ ಆಲೋಚನೆಗಳ, ಆಧುನಿಕ ಸಂಕಲನ ವಿಧಾನಗಳನ್ನು ಮುಂತಾದ ಅಂಶಗಳನ್ನು ಕುರಿತು ಈ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು. ವೀರೇಶ ಬಡಿಗೇರ ಅವರು ಈ ಕಾರ್ಯಾಗಾರದ ನಿರ್ದೇಶಕರಾಗಿದ್ದರು. ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗದ ಸಹಯೋಗದಲ್ಲಿ ತಾಳಿಕೋಟೆಯಲ್ಲಿ ರಾಷ್ಟ್ರೀಯ ಹಸ್ತಪ್ರತಿ ದಿನ ಎಂಬ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಆ ಹಸ್ತಪ್ರತಿ ಅಧ್ಯಯನ ಕ್ಷೇತ್ರದಲ್ಲಿ ಹೊಸ ಆಲೋಚನೆ ಕ್ರಮ ಕುರಿತು ಆ ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು. ವೀರೇಶ ಬಡಿಗೇರ ಅವರು ಆ ಕಾರ್ಯಕ್ರಮದ ನಿರ್ದೇಶಕರಾಗಿದ್ದರು. ಡಿಸೆಂಬರ್ ೧೮-೧೯, ೨೦೦೯ರಂದು ಎನ್.ಎಂ.ಎಂ. ನವದೆಹಲಿ ಇದರ ಸಹಯೋಗದಲ್ಲಿ ವಿದ್ಯಾರಣ್ಯ ಆವರಣದಲ್ಲಿ ಕನ್ನಡ ಮೋಡಿಲಿಪಿ ಸಂರಚನೆ ಮತ್ತು ಸಂವರ್ಧನೆ ಎಂಬ ವಿಷಯ ಕುರಿತು ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಮೋಡಿಲಿಪಿಯ ಅರ್ಥ, ಸ್ವರೂಪ, ಮಹತ್ವ ಈ ಕುರಿತು ನಾಡಿನ ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಿದರು. ವೀರೇಶ ಬಡಿಗೇರ ಅವರು ಈ ವಿಚಾರ ಸಂಕಿರಣದ ನಿರ್ದೇಶಕರಾಗಿದ್ದರು. ಅದೇ ವರ್ಷ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಹಸ್ತಪ್ರತಿಗಳನ್ನು ನೀಡಿದ ಹಸ್ತಪ್ರತಿ ದಾನಿಗಳ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತು. ಹಸ್ತಪ್ರತಿ ದಾನಿಗಳಿಗೆ ಸನ್ಮಾನ ಏರ್ಪಡಿಸಲಾಗಿತು. ವೀರೇಶ ಬಡಿಗೇರ ಅವರು ಈ ಸಮಾವೇಶದ ನೇತೃತ್ವ ವಹಿಸಿಕೊಂಡಿದ್ದರು.

ಗ್ರಂಥಸಂಪಾದನೆ ಶ್ರಮ ಸಾಧ್ಯವಾದ ಕಾರ್ಯ. ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳೈಯಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳು, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳು, ಕಾಲ, ದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದುಬಿಡುತ್ತಿದ್ದುದೂ ಉಂಟು. ಕಾಲಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿ ಬಿಡುತ್ತಿದ್ದುದೂ ಸಹಜವೇ. ಪ್ರತಿಭಾವಂತರೂ, ವ್ಯುತ್ಪನ್ನಮತಿಗಳೂ ಕಾವ್ಯರಚನಾ ಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ ಅರ್ಥ ಸೌಲಭ್ಯಕ್ಕಾಗಿ ಅರ್ಥವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಿ ಮೂಲಧಾಟಿಗೆ ಭಂಗ ಬರದಂತೆ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿ ಬಿಟ್ಟಿರುವುದುಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು. ಒಟ್ಟಿನಲ್ಲಿ ಅನಾವಶ್ಯಕ ವಿಸ್ತರಣಕ್ಕೆ ಕಾರಣವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿದೂರಿದಂತೆ ಅಥವಾ ಸೂಕ್ತ ಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ ತಿದ್ದುಪಡಿಗಳನ್ನು ತಂದು ಬಿಡುತ್ತಿದ್ದುದುಂಟು. ಅಂತಹ ಅನೇಕ ಕಾರಣಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠ ವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದು ಪ್ರತಿಗಳು ದೊರಕ್ಕಿದ್ದು ಅದು ಪ್ರಕಟಿತವಾಗಿರು

ವಂತಹ ಸಂದರ್ಭದಲ್ಲಿ ಮೂಲಪ್ರತಿಯ ಪಾಠವನ್ನು ಪುನರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೆ ನಡೆದು ಹೋಗುತ್ತದೆ. ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮ, ಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿಯೂ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಈಗ ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿಯೇ ಬೆಳೆದುಬಂದಿದೆ.

ಈ ಹಿನ್ನೆಲೆಯಲ್ಲಿ, ಹಸ್ತಪ್ರತಿಶಾಸ್ತ್ರ ವಿಭಾಗವು ಹಸ್ತಪ್ರತಿ ಗ್ರಂಥಸಂಪಾದನ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಐದು ಜನ ಶ್ರೇಷ್ಠ ವಿದ್ವಾಂಸರ ಜೀವನ-ಪರಿಸರ ಹಾಗೂ ಅವರ ಸಾಹಿತ್ಯ ಸಾಧನೆ ಕುರಿತು ವಿಚಾರ ಸಂಕಿರಣಗಳನ್ನು ಕಮ್ಮಿಕೊಂಡಿತು. ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಥಮ ಪ್ರಾಧ್ಯಾಪಕರಾದ ಎ.ವಿ.ನಾವಡ ಅವರ ಸಾಹಿತ್ಯ ಸಾಧನೆಯನ್ನು ಕುರಿತು ವಿಚಾರ ಸಂಕಿರಣ ೧೨ ಏಪ್ರಿಲ್ ೨೦೦೬ರಂದು ವಿದ್ಯಾರಣ್ಯ ಆವರಣದಲ್ಲಿ ನಡೆಯಿತು. ನಾವಡರ ಜೀವನ-ಪರಿಸರ, ಸಂಪಾದನೆ, ದಾಸ ಸಾಹಿತ್ಯ ಸಂಶೋಧನೆ ಈ ವಿಷಯಗಳನ್ನು ಕುರಿತು ವಿಭಾಗದ ಪ್ರಾಧ್ಯಾಪಕರು ಪ್ರಬಂಧ ಮಂಡಿಸಿದರು. ಎಫ್.ಟಿ.ಹಳ್ಳಿಕೇರಿ ಅವರು ಈ ವಿಚಾರ ಸಂಕಿರಣ ನಿರ್ದೇಶಕರಾಗಿದ್ದರು ದಿನಾಂಕ ೧೯ ಆಗಸ್ಟ್ ೨೦೧೭ರಂದು ಕನ್ನಡ ಸಾಹಿತ್ಯ ಪರಿಷತ್ತು ಕುಷ್ಟಗಿ ಹಾಗೂ ಸರಕಾರಿ ಪ್ರಥಮದರ್ಜೆ ಕಾಲೇಜು, ಕುಷ್ಟಗಿ ಇವುಗಳ ಸಹಯೋಗದಲ್ಲಿ ವಿಭಾಗದ ಪ್ರಾಧ್ಯಾಪಕರಾದ ಡಾ. ವೀರೇಶ ಬಡಿಗೇರ ಅವರ ನಿರ್ದೇಶನದಲ್ಲಿ ಎನ್.ಬಸವಾರಾಧ್ಯ: ಜೀವನ-ಸಾಹಿತ್ಯ ಕುರಿತು ಕುಷ್ಟಗಿಯಲ್ಲಿ ಹಮ್ಮಿಕೊಳ್ಳಲಾಗಿತ್ತುಬಸವಾರಾಧ್ಯಜೀವನ ಪರಿಸರ, ಗ್ರಂಥಸಂಪಾದನೆ, ಕೋಶರಚನೆ- ಈ ಕುರಿತು ವಿದ್ವಾಂಸರು ಪ್ರಬಂಧ ಮಂಡಿಸಿದರು. ದಿನಾಂಕ: ೪ ಅಕ್ಟೋಬರ್ ೨೦೧೭ರಂದು ಎಸ್.ಎಂ.ಎಸ್.ಎಫ್. ಕಾಲೇಜು, ಹೊನ್ನಾಳಿ ಹಾಗೂ ಎಚ್.ದೇವಿರಪ್ಪ ಪ್ರತಿಷ್ಠಾನ ಇವುಗಳ ಸಹಯೋಗದಲ್ಲಿ ಎಚ್.ದೇವಿರಪ್ಪ: ಜೀವನ-ಸಾಹಿತ್ಯ ಎಂಬ ವಿಷಯ ಕುರಿತು ವಿಚಾರ ಸಂಕಿರಣ ಏರ್ಪಡಿಸಿತ್ತು. ಆ ವಿಚಾರಸಂಕಿರಣದಲ್ಲಿ ಚೆನ್ನೇಶ ಹೊನ್ನಾಳಿ ಅವರು ದೇವಿರಪ್ಪ ಅವರ ಜೀವನ ಸಾಧನೆ, ರುದ್ರೇಶ ಅದರಂಗಿ ಅವರು ಹಸ್ತಪ್ರತಿ ತಜ್ಞರಾಗಿ ದೇವಿರಪ್ಪ ಅವರು, ವೈ.ಸಿ.ಭಾನುಮತಿ ಅವರು ಗ್ರಂಥಸಂಪಾದನೆ, ಎಸ್.ಎಸ್.ಅಂಗಡಿ ಅವರು ಸಂಶೋಧನೆ, ನೆಲ್ಲಿಕಟ್ಟೆ ಎಸ್. ಸಿದ್ದೇಶ್ ಅವರು ಸೃಜನ ಸಾಹಿತ್ಯ ಕುರಿತು ಪ್ರಬಂಧಗಳನ್ನು ಮಂಡಿಸಿದರು. ಎಫ್.ಟಿ.ಹಳ್ಳಿಕೇರಿ ಅವರು ವಿಚಾರ ಸಂಕಿರಣದ ನಿರ್ದೇಶಕರಾಗಿದ್ದರು.

ವಚನ ಪಿತಾಮಹ ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ ವಿಜಯಪುರದಲ್ಲಿ ದಿನಾಂಕ ೨೪ ಅಕ್ಟೋಬರ್ ೨೦೧೭ರಂದು ಜಿ.ಜಿ.ಮಂಜುನಾಥನ್: ಜೀವನ-ಸಾಹಿತ್ಯ ಎಂಬ ವಿಷಯ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಹಿರಿಯ ವಿದ್ವಾಂಸರಾದ ಬಿ.ವಿ.ಶಿರೂರ ಅವರು ಆಶಯ ಭಾಷಣ ಮಾಡಿದರು. ಎಂ.ನಾಗರಾಜ ಅವರು ಜೀವನ ಮತ್ತು ಪರಿಸರ, ಎಸ್.ಕೆ.ಕೊಪ್ಪ ಅವರು ಸಂಶೋಧನೆ, ಪಂಡಿತ ಕೆ.ರಾಠೋಡ ಅವರು ಕಾವ್ಯ ಸಾಹಿತ್ಯ ಸಂಪಾದನೆ, ಎಫ್.ಟಿ.ಹಳ್ಳಿಕೇರಿ ಅವರು ಶಾಸ್ತ್ರ ಸಾಹಿತ್ಯ ಸಂಪಾದನೆ ಕುರಿತು ಪ್ರಬಂಧಗಳನ್ನು ಮಂಡಿಸಿದರು. ಎಸ್.ಎಸ್.ಅಂಗಡಿ ಅವರು ಈ ವಿಚಾರ ಸಂಕಿರಣದ ನಿರ್ದೇಶಕರಾಗಿದ್ದರು. ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ, ಶ್ರೀಧವಳ ಕ್ಷೇತ್ರ, ಶ್ರವಣಬೆಳಗೊಳದಲ್ಲಿ ೨೨ ಡಿಸೆಂಬರ್ ೨೦೧೭ ರಂದು ಬಿ.ಎಸ್.ಸಣ್ಣಯ್ಯ: ಜೀವನ-ಸಾಹಿತ್ಯ ಕುರಿತು ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಹಿರಿಯ ವಿದ್ವಾಂಸರಾದ ರಾಗೌ (ರಾಮೇಗೌಡ) ಅವರು ಆಶಯ ಭಾಷಣ ಮಾಡಿದರು. ಎ.ಆರ್.ಮದನಕುಮಾರ್ ಅವರು ಜೀವನ-ಪರಿಸರ, ವೀರೇಶ ಬಡಿಗೇರ ಅವರು ಚಂಪೂ-ಷಟ್ಪದಿ ಸಾಹಿತ್ಯ ಸಂಪಾದನೆ, ವಿಜಯಕುಮಾರಿ ಕರಿಕಲ್ ಅವರು ವಚನ-ಸಾಂಗತ್ಯ ಮತ್ತು ಗದ್ಯಸಾಹಿತ್ಯ ಸಂಪಾದನೆ, ಸಿ.ನಾಗಭೂಷಣ ಅವರು ಸಂಶೋಧನೆ ಎಂಬ ವಿಷಯಗಳನ್ನು

ಕುರಿತು ಪ್ರಬಂಧಗಳನ್ನು ಮಂಡಿಸಿದರು. ಕೆ.ರವೀಂದ್ರನಾಥ ಅವರು ವಿಚಾರ ಸಂಕಿರಣದ ನಿರ್ದೇಶಕರಾಗಿದ್ದು. ಪ್ರತಿಯೊಂದು ವಿಚಾರ ಸಂಕಿರಣಗಳು ಪ್ರಬಂಧಗಳ ಮಂಡನೆಯ ನಂತರ ಚರ್ಚೆಗಳು, ಸಂವಾದಗಳು ನಡೆದವು.

ಹೀಗೆ, ಹಸ್ತಪ್ರತಿಶಾಸ್ತ್ರ ವಿಭಾಗದ ಕಳೆದ ಇಪ್ಪತ್ತೈದು ವರ್ಷಗಳಿಂದ ವೈವಿಧ್ಯಮಯವಾದ, ರಚನಾತ್ಮಕವಾದ ವಿಚಾರ ಸಂಕಿರಣಗಳನ್ನು ಸಂಯೋಜಿಸಿಕೊಂಡು ಬೆಳೆಯುತ್ತಿದೆ. ವಿಭಾಗವು ಆಧುನಿಕ ವಾಗ್ವಾದಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಆಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳಿಗೆ ನಾಂದಿ ಹಾಡಿದೆ.

ವಿಚಾರ ಸಂಕಿರಣಗಳು(೨೦೦೩–೨೦೨೧)

ಕ್ರ.ಸಂ.	ವಿಚಾರ ಸಂಕಿರಣದ ವಿಷಯ ಸಹಯೋಗ \ ಸ್ಥಳ ದಿನಾಂಕ	ನಿರ್ದೇಶಕರು
೧	**ಗ್ರಂಥ ಸಂಪಾದನೆಯ ವಿಧಿವಿಧಾನಗಳು** ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಧರ್ಮಸ್ಥಳ ೧೯–೧೭, ಡಿಸೆಂಬರ್, ೧೯೯೮	ಪ್ರೊ. ಎ.ವಿ.ನಾವಡ
೨	**ಕನ್ನಡ ಹಸ್ತಪ್ರತಿ ಭಂಡಾರಗಳು** ಸಂಸ್ಕೃತ ಸಂಶೋಧನ ಪ್ರತಿಷ್ಠಾನ, ಮೇಲುಕೋಟೆ ೧೧ ಮಾರ್ಚ, ೨೦೦೦	ಎಫ್.ಟಿ.ಹಳ್ಳಿಕೇರಿ ಕೆ.ರವೀಂದ್ರನಾಥ
೩	**ರಾಷ್ಟ್ರಮಟ್ಟದ ಹಸ್ತಪ್ರತಿ ಕಾರ್ಯಾಗಾರ** ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ ಭುವನ ವಿಜಯ, ವಿದ್ಯಾರಣ್ಯ ೩೦–೩೧ ಡಿಸೆಂಬರ್ ೨೦೦೨	ಡಾ. ವೀರೇಶ ಬಡಿಗೇರ
೩	**ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ** ಭುವನ ವಿಜಯ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ	ಡಾ. ವೀರೇಶ ಬಡಿಗೇರ
೪	**ಹಸ್ತಪ್ರತಿ ಕಾರ್ಯಾಗಾರ: ರಾಷ್ಟ್ರೀಯ ವಿಚಾರ ಸಂಕಿರಣ** ಭುವನ ವಿಜಯ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ ೩೦–೩೧ ಡಿಸೆಂಬರ್, ೨೦೦೩	ಡಾ. ವೀರೇಶ ಬಡಿಗೇರ
೫	**ರಾಷ್ಟ್ರೀಯ ಹಸ್ತಪ್ರತಿ ದಿನ** ಶ್ರೀ ಖಾಸ್ಗತೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತಾಳಿಕೋಟೆ ೧೯–೨೨, ಫೆಬ್ರುವರಿ, ೨೦೦೫	ಡಾ. ವೀರೇಶ ಬಡಿಗೇರ
೫	**ಡಿ.ಎಲ್.ನರಸಿಂಹಾಚಾರ್: ಶತಮಾನ ಸ್ಮರಣೆ** ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಹಾಗೂ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ೧೧–೧೨ ನವಂಬರ್, ೨೦೦೫	ಡಾ. ಎಫ್.ಟಿ.ಹಳ್ಳಿಕೇರಿ
೭	**ತಾಡೋಲೆ**	

೬ ೧. **ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ಕಾರ್ಯಕ್ರಮ**
೨. ದಕ್ಷಿಣ ಭಾರತೀಯಗ್ರಂಥಸಂಪಾದನೆ: ರಾಷ್ಟ್ರೀಯ ವಿಚಾರ ಸಂಕಿರಣ
೩. ಹತ್ತು ಪುಸ್ತಕಗಳ ಬಿಡುಗಡೆ
೪. ಹಸ್ತಪ್ರತಿತಜ್ಞರ ಬಾವಚಿತ್ರ ಅನಾವರಣ
೫. ಹಸ್ತಪ್ರತಿ ತಜ್ಞರ ಸನ್ಮಾನ, ಭುವನ ವಿಜಯ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
೧೭-೧೮, ಮಾರ್ಚ ೨೦೦೬ ಡಾ. ಎಫ್.ಟಿ.ಹಳ್ಳಿಕೇರಿ

೭ **ಪ್ರೊ. ಎ.ವಿ.ನಾವಡ ಅವರ ಸಾಹಿತ್ಯ ಸಾಧನೆ ಮತ್ತು ಸನ್ಮಾನ**
ಪಂಪ ಸಭಾಂಗಣ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ
೧೨, ಎಪ್ರಿಲ್ ೨೦೦೬ ಡಾ. ಎಫ್.ಟಿ.ಹಳ್ಳಿಕೇರಿ
ಕನ್ನಡ ಮೋಡಿಲಿಪಿ ಸಂರಚನೆ ಮತ್ತು ಸಂವರ್ಧನೆ
ಎನ್.ಎಂ.ಎಂ. ನವದೆಹಲಿ
೧೮-೧೯ ಡಿಸೆಂಬರ್, ೨೦೦೯ ಡಾ. ವೀರೇಶ ಬಡಿಗೇರ

೮ **ಹಸ್ತಪ್ರತಿ ದಾನಿಗಳ ಸಮಾವೇಶ** ಡಾ. ವೀರೇಶ ಬಡಿಗೇರ

೯ **ಕನ್ನಡ ಗ್ರಂಥ ಸಂಪಾದಕರ ಸಾಧನೆ ಮಾಲೆ-ವಿಚಾರ ಸಂಕಿರಣ: ೧**
ಎನ್. ಬಸವಾರಾಧ್ಯ: ಜೀವನ-ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು ಕುಷ್ಟಗಿ
ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜು ಕುಷ್ಟಗಿ,
೧೯ ಆಗಸ್ಟ್, ೨೦೧೭ ಡಾ. ವೀರೇಶ ಬಡಿಗೇರ

೧೦ **ಕನ್ನಡ ಗ್ರಂಥಸಂಪಾದಕರ ಸಾಧನೆ ಮಾಲೆ-ವಿಚಾರ ಸಂಕಿರಣ: ೨**
ಎಚ್.ದೇವೀರಪ್ಪ: ಜೀವನ-ಸಾಹಿತ್ಯ, ಎಸ್.ಎಂ.ಎಸ್.ಎಫ್. ಕಾಲೇಜು ಹೊನ್ನಾಳಿ
ಹಾಗೂ ಎಚ್. ದೇವೀರಪ್ಪ ಪ್ರತಿಷ್ಠಾನ, ಹೊನ್ನಾಳಿ, ೪, ಅಕ್ಟೋಬರ ೨೦೧೭ ಡಾ. ಎಫ್.ಟಿ.ಹಳ್ಳಿಕೇರಿ

೧೧ **ಕನ್ನಡ ಗ್ರಂಥಸಂಪಾದಕರ ಸಾಧನೆ ಮಾಲೆ-ವಿಚಾರ ಸಂಕಿರಣ: ೩**
ಜಿ.ಜಿ.ಮಂಜುನಾಥನ್: ಜೀವನ-ಸಾಹಿತ್ಯ, ವಚನ ಪಿತಾಮಹ ಫ.ಗು.ಹಳಕಟ್ಟಿ
ಸಂಶೋಧನ ಕೇಂದ್ರ, ವಿಜಯಪುರ, ೨೪ ಅಕ್ಟೋಬರ ೨೦೧೭ಡಾ. ಎಸ್.ಎಸ್. ಅಂಗಡಿ

೧೨ **ಕನ್ನಡ ಗ್ರಂಥ ಸಂಪಾದಕರ ಸಾಧನೆ ಮಾಲೆ-ವಿಚಾರ ಸಂಕಿರಣ: ೪**
ಬಿ.ಎಸ್.ಸಣ್ಣಯ್ಯ: ಜೀವನ-ಸಾಹಿತ್ಯ, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ,
ಶ್ರೀ ಧವಳ ಕ್ಷೇತ್ರ, ಶ್ರವಣಬೆಳಗೊಳ, ೨೨ ಡಿಸೆಂಬರ್, ೨೦೧೭ ಡಾ. ಕೆ.ರವೀಂದ್ರನಾಥ

೫

ವಿಶೇಷ ಉಪನ್ಯಾಸ ಕಾರ್ಯಕ್ರಮಗಳು

ಎಸ್.ಎಸ್. ಅಂಗಡಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ೧೯೯೬ರಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗವು ಆರಂಭವಾಯಿತು. ಹಸ್ತಪ್ರತಿ ಅಧ್ಯಯನಕ್ಕೆಂದೇ ವಿಶ್ವವಿದ್ಯಾಲಯ ಮಟ್ಟದಲ್ಲಿ ಆರಂಭವಾದ ಮೊಟ್ಟ ಮೊದಲ ವಿಭಾಗವಾಗಿದೆ. ಹಸ್ತಪ್ರತಿಗಳ ಸಂಗ್ರಹ, ಸಂಪಾದನೆ, ಅಧ್ಯಯನ ಮತ್ತು ಪ್ರಕಟಣೆ ಈ ನಾಲ್ಕು ಹಂತಗಳ ಕಾರ್ಯ ಚಟುವಟಿಕೆಯನ್ನು ವಿಭಾಗವು ಒಳಗೊಂಡಿದೆ. ಆಧುನಿಕಪೂರ್ವ ಸಾಂಸ್ಕೃತಿಕ ಚರಿತ್ರೆಯನ್ನು ಹಸ್ತಪ್ರತಿಗಳ ಮೂಲಕ ಪುನಾರಚಿಸುವುದು ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಮುಖ ಉದ್ದೇಶವಾಗಿದೆ. ಕಳೆದ ಇಪ್ಪತ್ತೈದು ವರ್ಷಗಳಿಂದ ವಿಭಾಗವು ಕೈಕೊಂಡ ವಿಶೇಷ ಉಪನ್ಯಾಸಗಳ ಸಿಂಹಾವಲೋಕನ ಹೀಗಿದೆ. ಈ ಲೇಖನದಲ್ಲಿ ಕೆಲವು ಮಾದರಿಗಳನ್ನು ಹಿನ್ನೆಲೆಯನ್ನಾಗಿಟ್ಟುಕೊಂಡು ವಿಶೇಷ ಉಪನ್ಯಾಸಗಳ ಸ್ವರೂಪವನ್ನು ಕುರಿತು ಸ್ಥೂಲವಾಗಿ ವಿವೇಚಿಸಲಾಗಿದೆ.

ಕನ್ನಡದ ಶ್ರೇಷ್ಠ ಹಸ್ತಪ್ರತಿ ತಜ್ಞರಾದ ಡಾ. ಬಿ.ಆರ್.ಹಿರೇಮಠ ಅವರು ೧೯೯೭ರಲ್ಲಿ 'ಹಸ್ತಪ್ರತಿಶಾಸ್ತ್ರದ ಪ್ರಸ್ತುತತೆ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ಅವರು ತಮ್ಮ ಉಪನ್ಯಾಸದಲ್ಲಿ ಹಸ್ತಪ್ರತಿಶಾಸ್ತ್ರದ ಅರ್ಥ, ಸ್ವರೂಪ, ಮಹತ್ವ, ಸೂಚೀ ರಚನೆ, ಹಸ್ತಪ್ರತಿ ಭಂಡಾರಗಳು, ಹಸ್ತಪ್ರತಿಗಳ ಸಂರಕ್ಷಣೆ, ಹಸ್ತಪ್ರತಿ ಲಿಪಿಕಾರರು ಮತ್ತು ಅವರ ಮನೋಧರ್ಮ ಮುಂತಾದ ವಿಷಯಗಳನ್ನು ಕುರಿತು ಸುದೀರ್ಘವಾದ ತಮ್ಮ ಉಪನ್ಯಾಸದಲ್ಲಿ ನೀಡಿದರು. ಉದ್ದಕ್ಕೂ ಹಲವಾರು ಉದಾಹರಣೆಗಳ ಮೂಲಕ ಹಸ್ತಪ್ರತಿಶಾಸ್ತ್ರದ ಪ್ರಸ್ತುತತೆಯನ್ನು ತಿಳಿಸಿದರು ಅವರ ಉಪನ್ಯಾಸದ ಒಟ್ಟು ತಿರುಳು ಹೀಗಿದೆ:

ಹಸ್ತಪ್ರತಿಗಳು ನಾಡಿನ ಅಮೂಲ್ಯ ಸಾಂಸ್ಕೃತಿಕ ಆಸ್ತಿ. ಆಧುನಿಕಪೂರ್ವ ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ, ಐತಿಹಾಸಿಕ ಮುಂತಾದ ಸಾಂಸ್ಕೃತಿಕ ಸಂಗತಿಗಳನ್ನು ಅರಿಯುವಲ್ಲಿ ಹಲವು ಆಕರಗಳನ್ನು ನೆರವಾಗುತ್ತವೆ. ಅಂತಹುಗಳಲ್ಲಿ ಹಸ್ತಪ್ರತಿಗಳು ಪ್ರಮುಖವಾಗಿವೆ. ಸಾಮಾನ್ಯವಾಗಿ ಹಸ್ತಪ್ರತಿಯೆಂದರೆ ಕೈಯಿಂದ ರೂಪು ಪಡೆದ ಬರವಣಿಗೆಯೆಂದು ಕರೆಯುತ್ತೇವೆ. ವಿಶೇಷವಾಗಿ ಆಧುನಿಕ ಪೂರ್ವಕಾಲದ ಗ್ರಂಥಗಳು ಮಾತ್ರ ಹಸ್ತಪ್ರತಿಯೆನಿಸಿ ಕೊಳ್ಳುತ್ತವೆ. ಹಸ್ತಪ್ರತಿಗಳಲ್ಲಿ ತಾಳೆಗರಿ, ಕೋರಿಕಾಗದಗಳಲ್ಲದೆ ಕಡತ, ಕೈಫಿಯತ್ತು, ನಾಮೆ, ಬಖೈರು, ನಿರೂಪ ಮುಂತಾದ ದಾಖಲೆಗಳು ಸಹಿತ ಸಮಾವೇಶಗೊಳ್ಳುತ್ತವೆ. ಆಧುನಿಕ ಪೂರ್ವ ಸಾಹಿತ್ಯ, ಸಂಸ್ಕೃತಿಯ ಪುನಾರಚನೆಯ

ಅಧ್ಯಯನಕ್ಕೆ ಹಸ್ತಪ್ರತಿಗಳು ಹೇಗೆ ನೆರವಾಗುತ್ತವೆ? ,ಎಂಬ ಪ್ರಶ್ನೆಯನ್ನು ಹಾಕಿಕೊಂಡು ಅವರ ಉಪನ್ಯಾಸ ನಡೆಯಿತು. ಅವರ ಉಪನ್ಯಾಸದ ಸ್ಥೂಲ ಸ್ವರೂಪವನ್ನು ಹೀಗೆ ಕಲೆ ಹಾಕಬಹುದು.

ಹಸ್ತಪ್ರತಿಗಳಲ್ಲಿ ಸಾಮಾನ್ಯವಾಗಿ ಕವಿಪಾಠ, ಲಿಪಿಕಾರರ ಪಾಠಗಳಿರುತ್ತವೆ. ಲಿಪಿಕಾರರ ಪಾಠಗಳನ್ನು ಪ್ರಶಸ್ತಿ ಅಥವಾ ಪುಷ್ಟಿಕೆ ಎಂದು ಕರೆಯುತ್ತಾರೆ. ಲಿಪಿಕಾರರ ಪಾಠಗಳು ಹಸ್ತಪ್ರತಿಯ ಆದಿ ಮತ್ತು ಅಂತ್ಯ ಭಾಗಗಳಲ್ಲಿ ಕಂಡುಬರುತ್ತವೆ. ಲಿಪಿಕಾರರ ಪಾಠಗಳಲ್ಲಿ ಲಿಪಿಕಾರರ ಹೆಸರು, ಪ್ರದೇಶ, ಕಾಲ, ಗುರುಪರಂಪರೆ, ಇಷ್ಟದೈವ ಇವೆಲ್ಲವೂ ಸಮಾವೇಶಗೊಂಡಿರುತ್ತವೆ. ಅವುಗಳಲ್ಲಿ ಲಿಪಿಕಾರರು ತಮ್ಮ ಚರಿತ್ರೆಯನ್ನು ಹೇಳುವುದರೊಂದಿಗೆ ನಾಡು-ನುಡಿಗೆ ಸಂಬಂಧಿಸಿದ ಹಲವಾರು ಮಹತ್ವದ ಸಂಗತಿಗಳನ್ನು ಹೇಳಿರಿರುತ್ತಾರೆ. ಒಂದು ಕಾಲಘಟ್ಟ ಜನಜೀವನ ಅರಿಯಲು ಹಸ್ತಪ್ರತಿ ಪ್ರಶಸ್ತಿಗಳು ಮಹತ್ವದ ಆಕರಗಳಾಗಿವೆ. ಲಿಪಿಕಾರರ ಅನುಭವ ಹಾಗೂ ಭಾಷಾ ಸಾಮರ್ಥ್ಯಕ್ಕೆ ನಿದರ್ಶನವಾಗಿ ನೂರಾರು ಹಸ್ತಪ್ರತಿ ಪ್ರಶಸ್ತಿಗಳನ್ನು ನೋಡಬಹುದು. ಅವು ಅವರು ಬದುಕಿ ಬಾಳುತ್ತಿರುವ ಸಂಸ್ಕೃತಿಯ ಸ್ವರೂಪವನ್ನು ನಿಚ್ಚಳವಾಗಿ ಗುರುತಿಸಿಕೊಡಬಲ್ಲವು. ಪ್ರತಿ ಮಾಡಿದ ಲಿಪಿಕಾರರನ್ನು ಆಗಿನ ಜನ ಸಮುದಾಯದ ಪ್ರೀತಿ, ವಿಶ್ವಾಸ ಹಾಗೂ ಗೌರವದಿಂದ ಕಾಣುತ್ತಿದ್ದರು.

ಪ್ರತಿಲಿಪಿಕಾರರು ತಮ್ಮ ಚರಿತ್ರೆ ಹೇಳುವ ನೆಪದಲ್ಲಿ ಆಯಾ ಪ್ರದೇಶ, ಕಾಲಗಳ ಚರಿತ್ರೆಯನ್ನೇ ಬರೆದಿದ್ದಾರೆ. ಇಲ್ಲಿಯ ಚರಿತ್ರೆಯ ಎಳೆಗಳನ್ನು ಹೊರತೆಗೆದು ಆ ಪ್ರದೇಶದ ಇತಿಹಾಸ ರಚಿಸಬಹುದಾಗಿದೆ. ಚಾರಿತ್ರಿಕ ಸಂಗತಿಗಳನ್ನು ಅರಿಯಲು ಹಸ್ತಪ್ರತಿ ಪ್ರಶಸ್ತಿಗಳು ಪೂರಕ ಆಕರಗಳಾಗುತ್ತವೆ. ಹಸ್ತಪ್ರತಿಗಳಲ್ಲಿಯ ಉಪಲಬ್ಧ ಪ್ರಶಸ್ತಿಗಳು ೧೪ನೆಯ ಶತಮಾನದಿಂದ ೧೯ನೆಯ ಶತಮಾನದ ವರೆಗೆ ಅನೇಕ ಐತಿಹಾಸಿಕ ಸಂಗತಿಗಳನ್ನು ತಿಳಿಸಿಕೊಡುತ್ತವೆ. ಹಸ್ತಪ್ರತಿ ಪ್ರಶಸ್ತಿಗಳನ್ನು ಚರಿತ್ರೆ, ಭಾಷಾಶಾಸ್ತ್ರ, ಸಮಾಜಶಾಸ್ತ್ರ ಇವುಗಳ ಅಧ್ಯಯನದ ನೆಲೆಯಲ್ಲಿ ಅಂದರೆ ಅಂತರ್‌ಶಿಸ್ತೀಯ ನೆಲೆಯಲ್ಲಿ ಅಭ್ಯಸಿಸಬೇಕು. ಆಗ ಕರ್ನಾಟಕ ಸಂಸ್ಕೃತಿಗೆ ಸಂಬಂಧಿಸಿದಂತೆ ಸ್ವಾರಸ್ಯಕರವಾದ ಸಂಗತಿಗಳನ್ನು ಗುರುತಿಸಬಹುದಾಗಿದೆ.

ಕನ್ನಡ ಸಾಹಿತ್ಯದ ಸಾತತ್ಯವನ್ನು ಗುರುತಿಸಲು, ಕನ್ನಡ ವಿದ್ವತ್ ಕ್ಷೇತ್ರಕ್ಕೆ ಕಾಲಾನುಕ್ರಮಣಿಕೆಯ ಭದ್ರ ಬುನಾದಿ ಹಾಕಲು, ಲಿಪಿಕಾರರ ಮನೋಧರ್ಮದ ಹಿನ್ನೆಲೆಯಲ್ಲಿ ಕರ್ನಾಟಕದ ಜನಜೀವನವನ್ನು ಅರಿಯಲು, ಕನ್ನಡ ಭಾಷೆ ಮತ್ತು ಲಿಪಿಯ ವಿಕಾಸಕ್ರಮ ತಿಳಿದುಕೊಳ್ಳಲು, ಕರ್ನಾಟಕ ಚಿತ್ರಕಲಾ ಇತಿಹಾಸವನ್ನು ಪುನಾರಚಿಸಲು, ಸ್ಥಳನಾಮ-ವ್ಯಕ್ತಿನಾಮಗಳನ್ನು ವಿಶ್ಲೇಷಿಸಲು, ಸ್ಥಳೀಯ ಇತಿಹಾಸವನ್ನು ವಿವೇಚಿಸಲು ಆ ಮೂಲಕ ಕರ್ನಾಟಕತ್ವವನ್ನು ಶೋಧಿಸಲು ಹಸ್ತಪ್ರತಿಗಳು ಬಹುಮುಖ್ಯ ಆಕರ ಸಾಮಗ್ರಿಗಳಾಗಿ ಅಧ್ಯಯನಕಾರರಿಗೆ ನೆರವಾಗುತ್ತವೆ.

ಹೀಗೆ, ಡಾ. ಬಿ.ಆರ್.ಹಿರೇಮಠ ಅವರು ತಮ್ಮ ಉಪನ್ಯಾಸದಲ್ಲಿ ಹಸ್ತಪ್ರತಿಗಳ ಉಗಮ-ವಿಕಾಸ ಮೊದಲಗೊಂಡು ಅವುಗಳ ಸಾಂಸ್ಕೃತಿಕ ಮಹತ್ವ, ಹೊಸ ಕಾಲದಲ್ಲಿ ಅವುಗಳ ಬಳಕೆಯ ವಿಧಾನ, ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವಿಕೆಯಲ್ಲಿ ಆಕರಗಳಾಗಿ ಹಸ್ತಪ್ರತಿಗಳ ಪಾತ್ರ ಈ ಕುರಿತು ಅರ್ಥಪೂರ್ಣವಾಗಿ ಉಪನ್ಯಾಸ ನೀಡಿದರು. ಉಪನ್ಯಾಸದ ನಂತರ ಉಪಯುಕ್ತವಾದ ಸಂವಾದ ನಡೆಯಿತು. ವಿದ್ಯಾರ್ಥಿಗಳು, ಅಧ್ಯಾಪಕರು, ವಿದ್ವಾಂಸರು ಹಸ್ತಪ್ರತಿಗಳ ಕುರಿತು ತಮ್ಮ ಜ್ಞಾನ ಕ್ಷಿತಿಜವನ್ನು ವಿಸ್ತರಿಸಿಕೊಂಡರು.

ಹಳಗನ್ನಡ ಭಾಷೆ, ಸಾಹಿತ್ಯಸಂಸ್ಕೃತಿ, ಶಾಸನಸಾಹಿತ್ಯ, ವ್ಯಾಕರಣ, ಛಂದಸ್ಸು, ನಘಂಟು ಮುಂತಾದ ಕ್ಷೇತ್ರಗಳಲ್ಲಿ ಅಪಾರವಾದ ಕೆಲಸ ಮಾಡಿದ ಹಿರಿಯ ವಿದ್ವಾಂಸರಾದ ಡಾ. ಎನ್.ಎಸ್.ತಾರಾನಾಥ ಅವರು ೧೯೯೮ರಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಆಗಮಿಸಿ 'ಕನ್ನಡ ಲೌಕಿಕಶಾಸ್ತ್ರ ಕಾವ್ಯಗಳು' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ಅವರ ಉಪನ್ಯಾಸದ ಒಟ್ಟು ತಿರುಳು ಹೀಗಿದೆ:

ಕನ್ನಡ ಶಾಸ್ತ್ರ ಸಾಹಿತ್ಯವನ್ನು ಸ್ಥೂಲವಾಗಿ ಎರಡು ರೀತಿಯಾಗಿ ವರ್ಗೀಕರಿಸಬಹುದು.

೧. ಲೌಕಿಕಶಾಸ್ತ್ರ ಕಾವ್ಯಗಳು

೨. ಅಲೌಕಿಕಶಾಸ್ತ್ರ ಕೃತಿಗಳು

ಇವುಗಳಲ್ಲಿ ಲೌಕಿಕಶಾಸ್ತ್ರ ಕಾವ್ಯಗಳು ನೇರವಾಗಿ ಕನ್ನಡಿಗರ ಬದುಕಿಗೆ ಅಂದರೆ ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟವುಗಳಾಗಿವೆ. ಇಲ್ಲಿ ಬದುಕಿಗೆ ಸಂಬಂಧಪಟ್ಟಂತಹ ಅರ್ಥ, ಕಾಮ, ಫಲಸಿದ್ಧಿಗಳು ಸಮಾವೇಶ ಗೊಳ್ಳುತ್ತವೆ. ಈ ಲೌಕಿಕಶಾಸ್ತ್ರ ಕಾವ್ಯಗಳ ವ್ಯಾಪ್ತಿ ವಿಶಾಲವಾದುದು **ವೈದ್ಯಶಾಸ್ತ್ರ**–ಅದರಲ್ಲಿ ಸಾಮಾನ್ಯ ವೈಧ್ಯ, ವಿಷವೈದ್ಯ, **ಸೂಪಶಾಸ್ತ್ರ** ಎಂದರೆ ಪಾಕಶಾಸ್ತ್ರ ಈ ಕ್ಷೇತ್ರದಲ್ಲಿ ಇಬ್ಬರು ಮೂವರು ಈ ವಿಷಯವಾಗಿ ಗ್ರಂಥರಚನೆ ಮಾಡಿದ್ದಾರೆ. ಚಾವುಂಡರಾಯಣ 'ಲೋಕೋಪಕಾರ'ದಲ್ಲಿ ಪಾಕಶಾಸ್ತ್ರ ಅಧ್ಯಾಯವಿದೆ. ಪ್ರಸಿದ್ಧವಾದರು ಮೂರನೆ ಮಂಗರಸನ ಸೂಪಶಾಸ್ತ್ರ. ಅದರಂತೆ **ಗಣಿತಶಾಸ್ತ್ರ, ಜ್ಯೋತಿಷಶಾಸ್ತ್ರ, ಪ್ರಶ್ನಶಾಸ್ತ್ರ, ಗಜಶಾಸ್ತ್ರ, ಅಶ್ವಶಾಸ್ತ್ರ, ಕಾಮಶಾಸ್ತ್ರ, ಸಮಾಧಿಕ್ರಿಯಾಶಾಸ್ತ್ರ, ಶಕುನಶಾಸ್ತ್ರ, ಸಾಮುದ್ರಿಕಶಾಸ್ತ್ರ, ನಾಡೀಶಾಸ್ತ್ರ** –ಇಂತಹ ಕಾವ್ಯಗಳು ಪ್ರಾಚೀನ ಕರ್ನಾಟಕದ ಸಾಮಾಜಿಕ ಜನಜೀವನವನ್ನು ಅರ್ಥಮಾಡಿಕೊಳ್ಳಲಿಕ್ಕೆ ತುಂಬ ನೇರವಾಗುತ್ತವೆ. ಎಂಬುದನ್ನು ಡಾ. ಎನ್.ಎಸ್.ತಾರಾನಾಥ ಅವರು ಅರ್ಥಪೂರ್ಣವಾಗಿ ವಿವರಿಸಿದರು. ತಮ್ಮ ಉಪನ್ಯಾಸದಲ್ಲಿ ಅವರು ಪ್ರಾಚೀನ ಕರ್ನಾಟಕದಲ್ಲಿ ಅಶ್ವಶಾಸ್ತ್ರ ಕುರಿತು ಒತ್ತು ನೀಡಿದರು.

ಕನ್ನಡ ಲೌಕಿಕಶಾಸ್ತ್ರ ಸಾಹಿತ್ಯದಲ್ಲಿ ಅಶ್ವಶಾಸ್ತ್ರ ಕುರಿತು ಪ್ರಾಚೀನ ಸಾಹಿತ್ಯದಲ್ಲಿ ಬಂದಿರುವ ಉಲ್ಲೇಖಗಳನ್ನು, ಸಾಹಿತ್ಯ ಕೃತಿಗಳನ್ನು ವಿವರಿಸಿದರು. ಕುದುರೆಗೆ ಸಂಬಂಧಿಸಿದ ಹಲವಾರು ಸಂಗತಿಗಳನ್ನು ಸರ್ವರಿಗೂ ಅರ್ಥವಾಗುವಂತೆ ತಿಳಿಯಪಡಿಸಿರುವುದು ಹಾಗೂ ಅವುಗಳ ಸತ್ಯಾಸತ್ಯತೆಯನ್ನು ಆದಷ್ಟು ಮಟ್ಟಿಗೆ ವೈಜ್ಞಾನಿಕ ದೃಷ್ಟಿಯಿಂದ ಪರಿಶೀಲಿಸುವುದು ಅವರ ಉಪನ್ಯಾಸದ ಮುಖ್ಯ ಉದ್ದೇಶವಾಗಿತ್ತು. ಉಳಿದ ಲೌಕಿಕಶಾಸ್ತ್ರ ಸಾಹಿತ್ಯವನ್ನು ಈ ಬಗೆಯ ಅಧ್ಯಯನದ ಸೌಲಭ್ಯಕ್ಕೂ ಈ ಕ್ರಮ ಅನಿವಾರ್ಯವಾಗಿದೆ. ನಮ್ಮ ಪ್ರಾಚೀನರು ಅಶ್ವಶಾಸ್ತ್ರದ ಬಗೆಗೆ ಹೊಂದಿದ್ದ ಅಭೂತಪೂರ್ವ ಜ್ಞಾನದ ದಿಗ್ದರ್ಶನವಾಗುತ್ತದೆ. ಪ್ರಾಚೀನ ಕರ್ನಾಟಕದ ಜನಜೀವನದ ಆಚಾರ ವಿಚಾರಗಳನ್ನು ತಿಳಿಯುವ ದೃಷ್ಟಿಯಿಂದಲೂ ಅಶ್ವಶಾಸ್ತ್ರಕ್ಕೆ ಸಾಂಸ್ಕೃತಿಕ ಮಹತ್ವವಿದೆ. ಕುದುರೆಯ ಲಕ್ಷಣಗಳು, ಪ್ರಕಾರಗಳು, ರೋಗಗಳು ಮತ್ತು ಅವುಗಳ ಚಿಕಿತ್ಸಾ ವಿಧಾನಗಳು ಈ ಪ್ರಕರಣಗಳಲ್ಲಿ ಜಾನಪದದ ಪರಿವೇಷವಿದೆ. ಈ ದೃಷ್ಟಿಯಿಂದ ಅಶ್ವಶಾಸ್ತ್ರವನ್ನು ಜಾನಪದೀಯ ಅಧ್ಯಯನಕ್ಕೊಳಪಡಿಸುವುದು ಅಗತ್ಯವಾಗಿದೆ.

ಅಶ್ವಶಾಸ್ತ್ರದಲ್ಲಿ ಇಂದಿಗೂ ಪ್ರಸ್ತುತವೆನ್ನಬಹುದಾದ ಅನೇಕ ವಿಷಯಗಳಿವೆ. ಆಧುನಿಕ ಪಶುವಿಜ್ಞಾನಕ್ಕೆ ಆಧಾರವಾಗುವ, ಸಹಾಯಕವಾಗುವ ಅಂಶಗಳೂ ಅವರ ಉಪನ್ಯಾಸದಲ್ಲಿ ಅಡಗಿದ್ದವು. ಅಭಿನವಚಂದ್ರನ ಅಶ್ವಶಾಸ್ತ್ರವನ್ನು ಹಿನ್ನೆಲೆಯಾಗಿಟ್ಟುಕೊಂಡು ಅವರ ಉಪನ್ಯಾಸ ನಡೆಯಿತು. ಉದಾ. ಹೊಟ್ಟೆನೋವಿನ ಉಪಶಮನಕ್ಕೆ ಶುಂಠಿ ದಿವ್ಯ ಔಷಧ. ಜಠರ ಮತ್ತು ಕರುಳಿನ ಸಂಬಂಧದ ದೋಷಗಳು, ಅಜೀರ್ಣ, ವಾಂತಿ, ಆಮಶಂಕೆ ರೋಗಗಳಿಗೆ ಶುಂಠಿ ಪರಿಣಾಮಕಾರಿ. ಮೂರ್ತವರ್ಧಕ ಗುಣವುಳ್ಳ ನೆಲ್ಲಿಕಾಯಿ ದೇಹವನ್ನು ತಂಪುಗೊಳಿಸುತ್ತದೆ. ಪಚನ ವಿಕಾರಗಳಿಗೆ ಇದು ಒಳ್ಳೆಯ ಔಷಧ. ಆಯುರ್ವೇದದಲ್ಲಿ ತುಂಬ ಹಿಂದಿನ ಕಾಲದಿಂದಲೂ ಬಳಸುತ್ತಿರುವ ಅಗಸೆ, ಗಿಡಮೂಲಿಕೆ, ಪಿತ್ತ ಕಫಗಳಿಗೆ ಒಳ್ಳೆಯದು. ಕಣ್ಣಿಗೆ ಸಂಬಂಧಿಸಿದ ಅನೇಕ ರೋಗಗಳಿಗೆ ಅಗಸೆ ಬೀಜದ ದ್ರಾವಕವು ಅತ್ಯುತ್ತಮ. ಅಂದ ಮಾತ್ರಕ್ಕೆ ಅಭಿನವಚಂದ್ರನು ಹೇಳಿದ ಈ ಎಲ್ಲ ವಿಚಾರಗಳು ವೈಜ್ಞಾನಿಕವಾಗಿವೆ ಎಂದು ಭಾವಿಸಬೇಕಾಗಿಲ್ಲ. ಅಭಿನವ ಚಂದ್ರನು ಔಷಧಗಳನ್ನು ಹೇಳಿದರೂ ಬಳಕೆಯ ಶಾಸ್ತ್ರೀಯ ಕ್ರಮಗಳನ್ನು ಪ್ರತಿಪಾದಿಸಿಲ್ಲ. ಅಂದರೆ

ಆಯಾ ರೋಗಕ್ಕೆ ಸೂಚಿತವಾದ ಔಷಧವನ್ನು ಎಷ್ಟು ಪ್ರಮಾಣದಲ್ಲಿ, ಎಷ್ಟು ಕಾಲಾವಧಿಗೆ ಸೇವಿಸಬೇಕೆಂಬ ನಿಯಮಗಳನ್ನು ಹೇಳುವುದ ಮೂಲಕ ಅಶ್ವಶಾಸ್ತ್ರದ ಮಹತ್ವವನ್ನು ಹೇಳಿದರು. ಪರಂಪರಾಗತವಾದ ಶಾಸ್ತ್ರ ಕೃತಿಗಳಿಗೆ ಈ ಬಗೆಯ ಅಂಶಗಳು ಸಹಜವಾಗಿವೆ.

ಆಧುನಿಕ ಅಶ್ವವೈದ್ಯ ವಿಜ್ಞಾನದ ಸ್ವರೂಪ ಮತ್ತು ಚಿಕಿತ್ಸಾ ಕ್ರಮಗಳನ್ನು ಅಶ್ವಶಾಸ್ತ್ರದ ವಿವರಗಳೊಡನೆ ತೌಲನಿಕವಾಗಿ ಮತ್ತು ಪ್ರಾಯೋಗಿಕವಾಗಿ ವಿಶ್ಲೇಷಿಸಿ ನೋಡುವುದು ಅಗತ್ಯವಾಗಿದೆ ಎಂಬ ತಾರಾನಾಥರ ನಿಲುವು ಸರಿಯಾಗಿದೆ. ಅದರಂತೆ ಉಳಿದ ಲೌಕಿಕಶಾಸ್ತ್ರ ಕೃತಿಗಳನ್ನು ಅವರ ಪ್ರಾಸಂಗಿಕವಾಗಿ ಉಲ್ಲೇಖಿಸಿ, ಪ್ರಸ್ತಾಪಿಸಿದರು. ಅದರಂತೆ ಪ್ರಾಚೀನ ಕಾವ್ಯಗಳಲ್ಲಿ ಕುದುರೆಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಕಲೆ ಹಾಕಿ ವಿವರಿಸಿದರು. ಅದು ಸಾಧ್ಯವಾದರೆ ಪರಂಪರಾಗತ ಜ್ಞಾನದಿಂದ ಆಧುನಿಕ ಬದುಕಿಗೆ ಸಂದಾಯವಾಗಬಹುದಾದ ಅನೇಕ ಉಪಯುಕ್ತ ಅಂಶಗಳ ಪ್ರಮಾಣ ಹೆಚ್ಚುತ್ತದೆ. ಅಶ್ವಶಾಸ್ತ್ರ ಆದಿಯಾಗಿ ಪ್ರಾಚೀನ ಲೌಕಿಕ ಶಾಸ್ತ್ರ ಕೃತಿಗಳು ವರ್ತಮಾನಕ್ಕೆ ಸ್ಪಂದಿಸುವಂತೆ, ಹೊಸಸಾಧ್ಯತೆಗಳ ಕಡೆಗೆ ಮುಖಾಮುಖಿಯಾಗಬೇಕಾಗಿದೆ. ಪಂಪಾದಿ ಕವಿಗಳು ಯುದ್ಧ, ವಿಹಾರ ಇತ್ಯಾದಿ ಸಂದರ್ಭದಲ್ಲಿ ಬಳಸಿದ ಅಶ್ವಕ್ಕೆ ಸಂಬಂಧಿಸಿದ ಸಂಗತಿಗಳನ್ನು ಹಾಗೂ ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ ಶಾಸ್ತ್ರ ಕೃತಿಗಳನ್ನು ಕಲೆಹಾಕಿ ಸಂಶೋಧನೆಯ ದೃಷ್ಟಿಯಿಂದ ಪರಾಮರ್ಶೆ ಮಾಡಬೇಕಾಗಿದೆ. ಅಂತಹ ವಿಸ್ತಾರವಾದ ಅಧ್ಯಯನಕ್ಕೆ ಅವರ ಉಪನ್ಯಾಸ ಪ್ರೇರಣೆ ನೀಡಿತು.

ಹೀಗೆ, ಡಾ. ಎನ್.ಎಸ್.ತಾರಾನಾಥ ಅವರು ತಮ್ಮ ಉಪನ್ಯಾಸದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ರಚನೆಯಾದ ಕನ್ನಡಿಗರ ಬದುಕಿಗೆ ನೇರವಾಗಿ ಸಂಬಂಧಿಸಿದ ಲೌಕಿಕ ಶಾಸ್ತ್ರ ಕೃತಿಗಳನ್ನು ಕುರಿತು ಅಧ್ಯಯನ ಪೂರ್ಣವಾಗಿ ಉಪನ್ಯಾಸ ನೀಡಿದರು. ಅವರ ವಿಸ್ತಾರವಾದ ಓದು, ವಿಶ್ಲೇಷಣೆಯ ರೀತಿ ಮನೋಜ್ಞವಾಗಿತ್ತು. ಲೌಕಿಕ ಶಾಸ್ತ್ರ ಕೃತಿಗಳ ಸಾಂಸ್ಕೃತಿಕ ಮಹತ್ವ ಹೊಸ ಕಾಲದಲ್ಲಿ ಅವುಗಳ ಬಳಕೆಯ ವಿಧಾನ, ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವಿಕೆಯಲ್ಲಿ ಆಕರಗಳಾಗಿ ಲೌಕಿಕ ಶಾಸ್ತ್ರ ಕಾವ್ಯಗಳ ಪಾತ್ರ ಈ ಕುರಿತು ಅರ್ಥಪೂರ್ಣವಾಗಿ ಉಪನ್ಯಾಸ ನೀಡಿದರು. ಉಪನ್ಯಾಸದ ನಂತರ ಉಪಯುಕ್ತವಾದ ಸಂವಾದ ನಡೆಯಿತು. ವಿದ್ಯಾರ್ಥಿಗಳು, ಅಧ್ಯಾಪಕರು, ವಿದ್ವಾಂಸರು ಲೌಕಿಕ ಶಾಸ್ತ್ರ ಕಾವ್ಯಗಳ ಕುರಿತು ತಮ್ಮ ಅರಿವಿನ ಎಲ್ಲೆಯನ್ನು ವಿಸ್ತರಿಸಿಕೊಂಡರು.

ಇದರಂತೆ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯನ್ನು ಕೇಂದ್ರವಾಗಿಟ್ಟುಕೊಂಡು ನಾಡಿನ ಹಲವು ವಿದ್ವಾಂಸರು ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಆಗಮಿಸಿ ಹಳೆಗನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ದಾಖಲು ಸಾಹಿತ್ಯ, ಆ ಕ್ಷೇತ್ರದಲ್ಲಿ ಕೆಲಸ ಮಾಡಿದ ವಿದ್ವಾಂಸರ ಸಾಹಿತ್ಯ ಸಾಧನೆ ಮುಂತಾದ ವಿಷಯಗಳ ಕುರಿತು ವಿಶೇಷ ಉಪನ್ಯಾಸಗಳನ್ನು ನೀಡಿದರು. ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಆ ಮೂಲಕ ವಿಭಾಗದ ಅರಿವಿನ ಎಲ್ಲೆ ವಿಸ್ತಾರಗೊಂಡಿತು.

ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ವಿಶೇಷ ಉಪನ್ಯಾಸಗಳಂತೆ **ಪಿಎಚ್.ಡಿ ಆನ್‌ಲೈನ್ ಸಂವಾದ ಕಾರ್ಯಕ್ರಮಗಳು** ನಡೆದವು. ಅವುಗಳಲ್ಲಿ ಕನ್ನಡ ಸಂಶೋಧನೆಯ ತಾತ್ವಿಕತೆ ಮತ್ತು ಪ್ರಾಯೋಗಿಕತೆಯನ್ನು ಕುರಿತು ಸುಮಾರು ಹತ್ತು ಸಂವಾದ ಕಾರ್ಯಕ್ರಮಗಳು ನಡೆದವು. ಅವುಗಳಲ್ಲಿ ಸಂಶೋಧನೆಯ ಕುರಿತು ವಿದ್ವಾಂಸರ ಅನುಭವ, ಸಂಶೋಧನೆಯಲ್ಲಿ ಇರಬೇಕಾದ ಒಳನೋಟಗಳು, ಆಧುನಿಕ ತಂತ್ರಜ್ಞಾನ, ಹೊಸ ಕಾಲದ ಅಗತ್ಯತೆಗಳು, ಪಾಶ್ಚಾತ್ಯ ಗ್ರಹಿಕೆಗಳು, ದೇಸಿ ನೆಲೆಗಳು. ಸಂಶೋಧನೆಯ ಪರಿಭಾಷೆಗಳು, ಆಕರಗಳ ಬಳಕೆ, ಹಳಗನ್ನಡ ಕಾವ್ಯಗಳ ಅನ್ಯಶಿಸ್ತುಗಳ ಮೂಲಕ ವ್ಯಾಸಂಗ ಮಾಡುವ ರೀತಿ, ಯುವಕರನ್ನು ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಸಜ್ಜುಗೊಳಿಸುವ ಪರಿ ಈ ಕುರಿತು ನಾಡಿನ ಹಲವು ವಿದ್ವಾಂಸರಿಂದ ಚರ್ಚೆ ಸಂವಾದ ನಡೆಯಿತು, ಇದೆ ಮಾಲಿಕೆಯಲ್ಲಿ ಸುಮಾರು ಹದಿನಾಲ್ಕು

ಆನ್‌ಲೈನ್ ಕಾರ್ಯಕ್ರಮಗಳು ವಿಭಾಗವು ಏರ್ಪಡಿಸಿತು. ಹಸ್ತಪ್ರತಿಶಾಸ್ತ್ರ ವಿಭಾಗವು **ರಜತ ಮಹೋತ್ಸವದ ಅಂಗವಾಗಿ ಆನ್‌ಲೈನ್ ಕಾರ್ಯಕ್ರಗಳ** ಮೂಲಕ ಇಪ್ಪತ್ತೈದು ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿತು. ಆ ಉಪನ್ಯಾಸಗಳು ಪ್ರಾಚೀನ ಸಾಹಿತ್ಯ, ಹಸ್ತಪ್ರತಿ-ಗ್ರಂಥಸಂಪಾದನೆ, ಸಂಸ್ಕೃತಿ ಅಧ್ಯಯನ ವ್ಯಾಪ್ತಿಯಲ್ಲಿ ಏರ್ಪಟ್ಟವು. ಮೇಲೆ ವಿವರಿಸಿದ, ದಾಖಲಿಸಿದ ವಿಶೇಷ ಉಪನ್ಯಾಸ, ಆನ್‌ಲೈನ್ ಉಪನ್ಯಾಸ, ರಜತ ಮಹೋತ್ಸವದ ಉಪನ್ಯಾಸ ಅವುಗಳ ಪಟ್ಟಿಯನ್ನು ಅನುಬಂಧಗಳಲ್ಲಿ ಕೊಡಲಾಗಿದೆ. ಹೀಗೆ ವಿಭಾಗವು ಹಸ್ತಪ್ರತಿ-ಗ್ರಂಥಸಂಪಾದನೆ ಕ್ಷೇತ್ರಗಳನ್ನು ಕೇಂದ್ರವಾಗಿಟ್ಟುಕೊಂಡು ಆಧುನಿಕ ಪೂರ್ವ ಸಾಹಿತ್ಯದ ಅಧ್ಯಯನಕ್ಕೆ ಬಹು ದೊಡ್ಡ ಆಕರ ಸಾಹಿತ್ಯವನ್ನು ಒದಗಿಸಿಕೊಟ್ಟಿದೆ.

೧. ವಿಶೇಷ ಉಪನ್ಯಾಸ ಕಾರ್ಯಕ್ರಮಗಳು

ಕ್ರಸಂ. ಉಪನ್ಯಾಸಗಳ ವಿಷಯ / ಉಪನ್ಯಾಸಕರು / ಸಹಯೋಗ/ಸ್ಥಳ / ದಿನಾಂಕ / ನಿರ್ದೇಶಕರು

೧. **ಹಸ್ತಪ್ರತಿಶಾಸ್ತ್ರದ ಪ್ರಸ್ತುತತೆ**
ಡಾ. ಬಿ.ಆರ್.ಹಿರೇಮಠ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. **ಕನ್ನಡ ಲೌಕಿಕಶಾಸ್ತ್ರ ಕಾವ್ಯಗಳು**
ಡಾ. ಎನ್.ಎಸ್.ತಾರಾನಾಥ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. **ಪ್ರೊ. ಸ.ಸ.ಮಾಳವಾಡ: ಶತಮಾನ ಸ್ಮರಣೆ**
ಪ್ರೊ. ಬಿ.ವಿ.ಗುಂಜೆಟ್ಟಿ
ಕನ್ನಡ ವಿಶ್ವವಿದ್ಯಾಲಯ, ೧೭.೧.೨೦೧೧ ಡಾ. ಎಫ್.ಟಿ.ಹಳ್ಳಿಕೇರಿ

೪. **ಶ್ರೀ ಜೋಳದರಾಶಿ ದೊಡ್ಡನಗೌಡ: ಶತಮಾನ ಸ್ಮರಣೆ**
ಡಾ. ಎಸ್. ಶಿವಾನಂದ
ಕನ್ನಡ ವಿಶ್ವವಿದ್ಯಾಲಯ
೧೭.೧.೨೦೧೧ ಡಾ. ಎಫ್.ಟಿ.ಹಳ್ಳಿಕೇರಿ

೫ **ಹಸ್ತಪ್ರತಿಗಳು: ಡಿಜಿಟಲ್ ಸಂಗ್ರಹಣಾ ತಂತ್ರಜ್ಞಾನ**
ಡಾ. ಎ.ಸತ್ಯನಾರಾಯಣ
ಕನ್ನಡ ವಿಶ್ವವಿದ್ಯಾಲಯ
೨೧.೨.೨೦೧೪ ಡಾ. ವೀರೇಶ ಬಡಿಗೇರ

೬ **ಕೆ.ಬಿ.ಪಾಠಕ್: ಸಾಹಿತ್ಯ ಸಾಧನೆ**
ಡಾ. ಸೀತಾರಾಮ ಜಾಗೀರದಾರ
ಪಂಪ ಸಭಾಂಗಣ, ವಿದ್ಯಾರಣ್ಯ

೧೬ ಅಕ್ಟೋಬರ ೨೦೧೪ ಡಾ. ವೀರೇಶ ಬಡಿಗೇರ

೭ **ಬಿ.ಕೆ.ಕುಲಕರ್ಣಿ: ಸಾಹಿತ್ಯ ಸಾಧನೆ**
ಡಾ. ಪಿ.ಜಿ.ಕೆಂಪಣ್ಣವರ
ಜೆ.ಎಸ್.ಎಸ್.ಶಿಕ್ಷಣ ಸಂಸ್ಥೆಯ ಡಾ. ವೀರೇಂದ್ರ ಹೆಗ್ಗಡೆ ಸಂಶೊಧನ ಕೇಂದ್ರ, ಧಾರವಾಡ
೩೧ ಜನವರಿ ೨೦೧೬ ಡಾ. ಎಫ್.ಟಿ.ಹಳ್ಳಿಕೇರಿ

೮ **ಕನ್ನಡದಲ್ಲಿ ಜೈನ ರಾಮಾಯಣಗಳು**
ಡಾ. ಶಾಂತಿನಾಥ ದಿಬ್ಬದ
ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆಯ ಡಾ. ವೀರೇಂದ್ರ ಹೆಗ್ಗಡೆ ಸಂಶೊಧನ ಕೇಂದ್ರ, ಧಾರವಾಡ
೩೧ ಜನವರಿ ೨೦೧೬ ಡಾ. ಎಫ್.ಟಿ.ಹಳ್ಳಿಕೇರಿ

೯ **ಕನ್ನಡ ಆಯುರ್ವೇದ ಸಾಹಿತ್ಯ**
ಡಾ. ಬಿ.ನಂಜುಂಡಸ್ವಾಮಿ ಮಂಟಪ ಸಭಾಂಗಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩೦, ಡಿಸೆಂಬರ್ ೨೦೧೬ ಡಾ. ಕೆ.ರವೀಂದ್ರನಾಥ

೧೨ **ಕೈಫಿಯತ್ತುಗಳಲ್ಲಿ ಕನ್ನಡ ಮತ್ತು ಕರ್ನಾಟಕದ ಪರಿಕಲ್ಪನೆ**
ಪ್ರೊ. ಪುರುಷೋತ್ತಮ ಬಿಳಿಮಲೆ(ಜೂಮ್ ಮೀಟಿಂಗ್)(ಆನಲೈನ್)
೨೩ ಡಿಸೆಂಬರ್ ೨೦೨೦ ಡಾ. ವೀರೇಶ ಬಡಿಗೇರ

೧೩ **ನಿರೂಪಗಳು**
ಡಾ. ಬಿ.ರಾಜಶೇಖರಪ್ಪ(ಜೂಮ್ ಮೀಟಿಂಗ್)(ಆನಲೈನ್)
೩೦ ಡಿಸೆಂಬರ್ ೨೦೨೦ ಡಾ. ಎಫ್.ಟಿ.ಹಳ್ಳಿಕೇರಿ

೧೪ **ಬಖೈರುಗಳು**
ಡಾ. ಕೆಳದಿ ವೆಂಕಟೇಶ(ಜೂಮ್ ಮೀಟಿಂಗ್)(ಆನಲೈನ್) ೧೧ ಜನವರಿ ೨೦೨೧
ಡಾ. ಕೆ.ರವೀಂದ್ರನಾಥ

೨. ಪಿಎಚ್.ಡಿ. ಆನ್‌ಲೈನ್ ಸಂವಾದ ಕಾರ್ಯಕ್ರಮ (೧.೬.೨೦೨೦ರಿಂದ ೩೦.೬.೨೦೨೦ರ ವರೆಗೆ)

ಕ್ರಸಂ. ದಿನಾಂಕ / ವಿಷಯ / ವಿದ್ವಾಂಸರ ಹೆಸರು ಮತ್ತು ವಿಳಾಸ

೦೧ ೧.೬.೨೦೨೦ ಸೋಮವಾರ
ಸಂಶೋಧನೆ: ನನ್ನ ಅನುಭವ
ಡಾ. ಎ.ಮುರಿಗೆಪ್ಪ, ವಿಶ್ರಾಂತ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೨ ೪.೬.೨೦೨೦ ಗುರುವಾರ

ಸಂಶೋಧನೆ: ಹೊಸ ನೋಟಗಳು ಮತ್ತು ಸಂವಾದ

ಡಾ. ಡಿ.ಡೋಮಿನಿಕ್, ಪ್ರಾಧ್ಯಾಪಕರು ಕನ್ನಡ ವಿಭಾಗ,
ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

೦೩ ೬.೬.೨೦೨೦ ಶನಿವಾರ

ಸಂಶೋಧನೆ ಮತ್ತು ಆಧುನಿಕ ತಂತ್ರಜ್ಞಾನ

ಡಾ. ವೀರೇಶ ಬಡಿಗೇರ, ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು
ಗುಲಬರ್ಗಾ ವಿಶ್ವವಿದ್ಯಾನಿಲಯ, ಗುಲಬರ್ಗಾ

೦೪ ೦೮.೬.೨೦೨೦ ಸೋಮವಾರ

ಕಲೆ: ಸಂಶೋಧನೆ ಮತ್ತು ಬದ್ಧತೆ, ಸಂವಾದ

ಡಾ. ಶ್ರೀಧರ್ ಖ್ಯಾತ ಚಲನಚಿತ್ರ ನಟರು, ಬೆಂಗಳೂರು

೦೫ ೧೧.೬.೨೦೨೦ ಗುರುವಾರ

ಓದು ಮತ್ತು ಹೊಸ ಕಾಲದ ಗ್ರಹಿಕೆಗಳು

ಶ್ರೀ ಡಿ. ಉಮಾಪತಿ, ಹಿರಿಯ ಪತ್ರಕರ್ತರು ನವದೆಹಲಿ

೦೬ ೧೫.೬.೨೦೨೦ ಸೋಮವಾರ

ಸಂಶೋಧನೆ: ಪಾಶ್ಚಾತ್ಯ ಗ್ರಹಿಕೆಗಳು

ಡಾ. ಗುರುನಾಥ ಬಡಿಗೇರ, ಸಹ ಪ್ರಾಧ್ಯಾಪಕರು,
ಸರಕಾರಿ ಕಲಾ ಮಹಾವಿದ್ಯಾಲಯ, ಧಾರವಾಡ

೦೭ ೧೮.೬.೨೦೨೦ ಗುರುವಾರ

ಸಂಶೋಧನೆ ತಾಂತ್ರಿಕ ಸಂಗತಿಗಳು

ಡಾ. ಬಿ.ಜಿ.ಚನ್ನೇಶ್ ಹೊನ್ನಾಳಿ ಮುಖ್ಯಸ್ಥರು, ಕನ್ನಡ ವಿಭಾಗ,
ಸರಕಾರಿ ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ ಮತ್ತು
ಬಾಹ್ಯ ಸಂಪನ್ಮೂಲ ವಿದ್ವಾಂಸರು ಹಸ್ತಪ್ರತಿಶಾಸ್ತ್ರ ವಿಭಾಗ

೦೮ ೨೨.೬.೨೦೨೦ ಸೋಮವಾರ

ಸಂವಾದ

ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಹಸ್ತಪ್ರತಿಶಾಸ್ತ್ರ ವಿಭಾಗ, ಕ.ವಿ.ಹಂ.,

೦೯ ೨೫.೬.೨೦೨೦ ಗುರುವಾರ

ಯುವಜನತೆ ಮತ್ತು ಸಂಶೋಧನೆ

ಡಾ. ರಾಜಶೇಖರ ಮಠಪತಿ (ರಾಗಂ)

ಸಹ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು,

ವಿಜಯನಗರ, ಬೆಂಗಳೂರು

೧೦ ೩೦.೬.೨೦೨೦ ಮಂಗಳವಾರ

ಸಂಶೋಧನೆ: ದೇಸಿ ನೆಲೆಗಳು

ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು

ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಆನ್‌ಲೈನ್ ಕಾರ್ಯಕ್ರಮದ ವಿವರಗಳು

(೪.೫..೨೦೨೦ರಿಂದ ೩೦.೫..೨೦೨೦ರ ವರೆಗೆ)

ಕ್ರಸಂ. ದಿನಾಂಕ / ಸಮಯ / ವಿಷಯ / ಅಧ್ಯಾಪಕರ ಹೆಸರು ಮತ್ತು ವಿಳಾಸ

೦೧. ೪.೫.೨೦೨೦ಸೋಮವಾರ ೧೦.೩೦ರಿಂದ ೧೧.೩೦

ಸಾಮಾನ್ಯ ಚರ್ಚೆ

ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೨. ೬.೫.೨೦೨೦ ಬುಧವಾರ ೮.೩೦ರಿಂದ ೧೧.೩೦

ಅಧ್ಯಯನದ ಪ್ರಗತಿ ಕುರಿತು ಚರ್ಚೆ

ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೩. ೮.೫.೨೦೨೦ಶುಕ್ರವಾರ ೧೧.೦೦ರಿಂದ ೧೨.೩೦

ಸಂವಾದ

ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೪. ೧೧.೫.೨೦೨೦ಸೋಮವಾರ ೧೦.೦೦ ರಿಂದ ೧೧.೩೦

ಹಳಗನ್ನಡ ಕಾವ್ಯದ ಕುರಿತ ಚರ್ಚೆ

ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,

ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೫. ೧೩.೫.೨೦೨೦ ಬುಧವಾರ ೯.೦೦ ರಿಂದ ೧೦.೩೦
ಕಾವ್ಯ ಮತ್ತು ಮನಶಾಸ್ತ್ರ
ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೬ ೧೪.೫.೨೦೨೦ ಗುರುವಾರ, ೧೦.೩೦ರಿಂದ ೧೧.೩೦
ಆಕರಗಳ ವಿಶ್ಲೇಷಣೆ
ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೭ ೧೬.೫.೨೦೨೦ ಶನಿವಾರ, ೩.೩೦ರಿಂದ ೪.೩೦
ಸಂವಾದ
ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ, ಕ.ವಿ.ಹಂ., ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೮ ೧೮.೦೫.೨೦೨೦ ಸೋಮವಾರ, ೩.೩೦ರಿಂದ ೪.೩೦
ಉಳ್ಳವರು ಶಿವಾಲಯ ಮಾಡುವರು ವಚನದ ವಿಶ್ಲೇಷಣೆ
ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ, ಕ.ವಿ.ಹಂ., ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೯ ೨೦.೫.೨೦೨೦ ಬುಧವಾರ, ೧೧.೦೦ರಿಂದ ೧೨.೩೦
ಕೊರೋನಾ ಕಲಿಸಿದ ಪಾಠ ಸಂವಾದ
ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦ ೨೨.೫.೨೦೨೦ ಶುಕ್ರವಾರ, ೧೧.೦೦ರಿಂದ ೧೨.೩೦
ಕೊರೋನಾ ಕಲಿಸಿದ ಪಾಠ ವಿದ್ಯಾರ್ಥಿಗಳಿಂದ ಅನಿಸಿಕೆ
ಡಾ. ವೀರೇಶ ಬಡಿಗೇರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ, ಕ.ವಿ.ಹಂ., ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧ ೨೪.೫.೨೦೨೦ ಭಾನುವಾರ, ೧೦.೦೦ರಿಂದ ೧೧.೦೦
ಸಂಶೋಧನಾ ಪರಿಭಾಷೆಗಳು
ಡಾ. ಪಿ.ಕೆ.ರಾಠೋಡ, ಸಹಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨ ೨೬.೫.೨೦೨೦ ಮಂಗಳವಾರ, ೧೦.೦೦ರಿಂದ ೧೧.೦೦

ಸಂಶೋಧನೆಯಲ್ಲಿ ಆಕರಗಳ ಬಳಕೆ ಮತ್ತು ಸಂವಾದ

ಡಾ. ಶಿವಾನಂದ ಕೆಳಗಿನಮನಿ, ಸಹಪ್ರಾಧ್ಯಾಪಕರು

ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ

೧೩ ೨೮.೫.೨೦೨೦ ಗುರುವಾರ, ೧೦.೦೦ರಿಂದ ೧೧.೦೦

ಸಂಶೋಧನೆಯಲ್ಲಿ ಆಕರಗಳ ಮಹತ್ವ

ಡಾ. ಕೆ.ರವೀಂದ್ರನಾಥ, ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪ ೩೦.೫.೨೦೨೦ ಶನಿವಾರ, ೧೦.೦೦ರಿಂದ ೧೧.೦೦

ಸಂಶೋಧನಾ ಬರವಣಿಗೆ

ಡಾ. ಎಫ್.ಟಿ.ಹಳ್ಳಿಕೇರಿ, ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ಅಂಗವಾಗಿ ಆನಲೈನ್ ಮೂಲಕ ಪ್ರತಿ ಸೋಮವಾರ ಮತ್ತು ಗುರುವಾರ ಏರ್ಪಡಿಸಿದ ೨೫ ವಿಶೇಷ ಉಪನ್ಯಾಸಗಳ ವಿವರಗಳು

ಕ್ರಸಂ.	ಉಪನ್ಯಾಸದ ವಿಷಯ	ವಿದ್ವಾಂಸರು	ದಿನಾಂಕ
೧.	ಸಾಂಸ್ಕೃತಿಕ ಸಂಶೋಧನ	ಡಾ. ವೀರೇಶ ಬಡಿಗೇರ	೧೭.೫.೨೦೨೧
೨.	ಕರ್ನಾಟಕದ ಅವಧೂತ ಪರಂಪರೆ	ಡಾ. ಕರಿಯಪ್ಪ ಮಾಳಗಿ	೨೦.೫.೨೦೨೧
೩.	ಕನ್ನಡ ಸಂಶೋಧನೆ: ನಡೆದು ಬಂದದಾರಿ	ಡಾ. ಕೆ.ರವೀಂದ್ರನಾಥ	೨೪.೫.೨೦೨೧
೪.	ಸ್ಥಳೀಯ ಚರಿತ್ರೆಯ ಆಕರಗಳು	ಡಾ. ಡಿ.ಎನ್.ಯೋಗೀಶ್ವರಪ್ಪ	೨೭.೫.೨೦೨೧
೫.	ಕನ್ನಡ ಜನಪದ ಲಯಗಳು	ಡಾ. ಸಿದ್ಧಣ್ಣ ಎಫ್. ಜಕಬಾಳ	೩೧.೫.೨೦೨೧
೬.	ಸಂಶೋಧನೆಯಲ್ಲಿ ಆಕರಗಳ ಬಳಕೆ ಮತ್ತು ನಿರ್ವಹಣೆ	ಡಾ. ಚಿತ್ತಯ್ಯ ಪೂಜಾರ	೩.೬.೨೦೨೧
೭.	ಕನ್ನಡ ಸಂಶೋಧನೆ ಮತ್ತು ಡಾ. ಎಂ.ಚಿದಾನಂದಮೂರ್ತಿ	ಡಾ. ಎಸ್.ಎಸ್.ಅಂಗಡಿ	೭.೬.೨೦೨೧
೮.	ಪ್ರಾಚೀನ ಕನ್ನಡ ಭಾಷೆ-ಸಾಹಿತ್ಯ-ಶಾಸನ ಅಂತರ್‌ಸಂಬಂಧ: ಇತ್ತೀಚಿನ ಅಧ್ಯಯನಗಳು	ಡಾ. ಸಿ.ನಾಗಭೂಷಣ	೧೦.೬.೨೦೨೧
೯.	ಕನ್ನಡ ಸಂಶೋಧನೆ ಮತ್ತು ಎಸ್. ವಿದ್ಯಾಶಂಕರ	ಡಾ. ಡಿ.ಪರಮಶಿವಮೂರ್ತಿ	೧೪.೬.೨೦೨೧
೧೦.	ಸಂತ ಶಿಶುನಾಳ ಷರೀಫರಗುರುಪರಂಪರೆ	ಡಾ. ಎ.ಸಿ.ವಾಲಿ	೧೭.೬.೨೦೨೧
೧೧.	ಸರ್ವದರ್ಶನ ತೀರ್ಥ ವೈ. ನಾಗೇಶಶಾಸ್ತ್ರೀ	ಡಾ. ಮೃತ್ಯುಂಜಯ ರುಮಾಲೆ	೨೧.೬.೨೦೨೧

೧೨.	ಅಧ್ಯಯನದ ಆಕರ ಕೇಂದ್ರಗಳಾಗಿ ಮಠಮಾನ್ಯಗಳು	ಡಾ. ರಾಜಶೇಖರ ಬಸುಪಟ್ಟದ	೨೪.೬.೨೦೨೧
೧೩.	ಸಂಶೋಧನೆಯಲ್ಲಿಕ್ಷೇತ್ರಕಾರ್ಯದ ಮಹತ್ವ	ಡಾ. ಸಣ್ಣವೀರಪ್ಪ ದೊಡ್ಡಮನಿ	೨೮.೬.೨೦೨೧
೧೪.	ಬಸವಕಲ್ಪದ್ರುವಂ: ಒಂದು ಅವಲೋಕನ	ಡಾ. ಎಸ್.ಆರ್.ಚನ್ನವೀರಪ್ಪ	೧.೭.೨೦೨೧
೧೫.	ಹರಿಹರನ ರಗಳೆಗಳಲ್ಲಿ ವೈಚಾರಿಕ ಆಕೃತಿ	ಡಾ. ಗುರುಪಾದ ಮರೆಗುದ್ದಿ	೫.೭.೨೦೨೧
೧೬	ಡಾ. ಬಿ.ಆರ್.ಹಿರೇಮಠ ಅವರ ಸಮಗ್ರ ಸಾಹಿತ್ಯ	ಡಾ. ವೈ.ಎಂ.ಯಾಕೊಳ್ಳಿ	೮.೭.೨೦೨೧
೧೭.	ಹಸ್ತಪ್ರತಿಶಾಸ್ತ್ರ: ಎಂ.ವಿ.ಸೀತಾರಾಮಯ್ಯ ಅವರ ಸಾಧನೆ	ಡಾ. ನಾ.ಗೀತಾಚಾರ್ಯ	೧೨.೭.೨೦೨೧
೧೮.	ಕನ್ನಡದಲ್ಲಿ ಸತ್ಯೇಂದ್ರಚೋಳನ ಕಥೆಯ ಆಯಾಮಗಳು	ಡಾ. ರಮೇಶ ಕಲ್ಲನಗೌಡರ	೧೫.೭.೨೦೨೧
೧೯.	ಕರ್ನಾಟಕದಲ್ಲಿ ಐರೋಪ್ಯರ ಆರಂಭಿಕ ಸಂಶೋಧನೆಗಳು ಮತ್ತು ಐತಿಹಾಸಿಕ ಆಕರಗಳ ಸಂಗ್ರಹ	ಡಾ. ಎಸ್.ಕೆ.ಅರುಣ	೧೯.೭.೨೦೨೧
೨೦.	ಹಸ್ತಪ್ರತಿ–ಗ್ರಂಥಸಂಪಾದನೆ ಕುರಿತು ಎಚ್.ದೇವೀರಪ್ಪ ಅವರ ಸಂಶೋಧನೆಗಳು	ಡಾ. ಚನ್ನೇಶ ಹೊನ್ನಾಳಿ	೨೨.೭.೨೦೨೧
೨೧.	ವಚನ ಪಿತಾಮಹ ಫ.ಗು.ಹಳಕಟ್ಟಿ	ಡಾ. ಎಂ.ಎಸ್.ಮದಭಾವಿ	೨೬.೭.೨೦೨೧
೨೨.	ಮೌಖಿಕ ಸಾಹಿತ್ಯ ಸಂಪಾದನೆ	ಪ್ರೊ. ಎ.ವಿ. ನಾವಡ	೨೯.೭.೨೦೨೧
೨೩.	ಕನ್ನಡ ಗ್ರಂಥಸಂಪಾದನೆ ಮತ್ತು ಪಿ.ಆರ್.ಕರಿಬಸವಶಾಸ್ತ್ರಿಗಳು	ಡಾ. ಬಿ.ನಂಜುಂಡಸ್ವಾಮಿ	೨.೮.೨೦೨೧
೨೪.	ಕನ್ನಡ ಹಸ್ತಪ್ರತಿಶಾಸ್ತ್ರ ಮತ್ತು ಎಂ.ಎಂ.ಕಲಬುರ್ಗಿ	ಡಾ. ಎಫ್.ಟಿ. ಹಳ್ಳಿಕೇರಿ	೫.೮.೨೦೨೧
೨೫.	ಕನ್ನಡ ಗ್ರಂಥಸಂಪಾದನ ಶಾಸ್ತ್ರ ಮತ್ತು ಆರ್.ಸಿ.ಹಿರೇಮಠ	ಡಾ. ವೀರಣ್ಣ ರಾಜೂರ	೯.೮.೨೦೨೧

❑❑

೬

ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರಗಳು

ಎಸ್.ಆರ್. ಚನ್ನವೀರಪ್ಪ

ಕನ್ನಡ ವಿಶ್ವವಿದ್ಯಾಲಯದಲ್ಲಿ ೧೯೯೬ರಲ್ಲಿ ಮೊಟ್ಟಮೊದಲ ಬಾರಿಗೆ ಆರಂಭವಾದ ಹಸ್ತಪ್ರತಿಶಾಸ್ತ್ರ ವಿಭಾಗವು ನಮ್ಮ ಸಾಂಸ್ಕೃತಿಕ ಆಕರಗಳಾದ ಹಸ್ತಪ್ರತಿಗಳ ಅನ್ವೇಷಣೆ, ಸಂಗ್ರಹ, ಸಂಪಾದನೆ ಹಾಗೂ ಅಧ್ಯಯನವನ್ನು ತನ್ನ ವಿಭಾಗದ ಶೈಕ್ಷಣಿಕ ಚಟುವಟಿಕೆಯ ಕೇಂದ್ರಬಿಂದುವನ್ನಾಗಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ವಿಭಾಗದ ಎಲ್ಲಾ ಅಧ್ಯಾಪಕರೂ ಕರ್ನಾಟಕದಾದ್ಯಂತ ಮೂಲೆ ಮೂಲೆಗೂ ಕ್ಷೇತ್ರಕಾರ್ಯವನ್ನು ಕೈಗೆತ್ತಿಕೊಂಡು ಸಂಗ್ರಹಿಸಿ ತಂದ ಓಲೆಗರಿ ಹಾಗೂ ಕಾಗದದ ಹಸ್ತಪ್ರತಿಗಳನ್ನು ವಿಭಾಗದೊಳಗೆ ಶುಚಿಗೊಳಿಸಿ, ಗರಿ ಅಥವಾ ಪುಟಗಳನ್ನು ಸರಿಯಾಗಿ ಹೊಂದಿಸಿ, ಅವುಗಳನ್ನು ಶೈಕ್ಷಣಿಕ ಶಿಸ್ತಿಗೆ ಅವಳಡಿಸಿಕೊಂಡು ಸೂಚೀಕರಣಗೊಳಿಸಿ, ಅಧ್ಯಯನ ಪ್ರವೃತ್ತರಾಗುವುದು ವಿಭಾಗದ ಅಕಾಡೆಮಿಕ್ ಕಾರ್ಯವೈಖರಿಯ ಒಂದು ಮಾದರಿಯಾಗಿದೆ.ಇಂತಹ ಕಾರ್ಯವೈಖರಿಯಿಂದುಂಟಾದ ಫಲಾನುಭವವನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ವಲಯದಿಂದಾಚೆಯೂ ಬಿತ್ತರಿಸುವುದು ವಿಭಾಗದ ಪ್ರಮುಖ ಆಸಕ್ತಿಯಾಗಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯದಿಂದಾಚೆಯೂ ವಿಭಾಗವನ್ನು ಪ್ರತಿನಿಧಿಸುವ ಮೂಲಕ ವಿದ್ಯಾರ್ಥಿಗಳಿಂದ ವಿದ್ವಾಂಸರವರೆಗೂ ಉಪಯುಕ್ತವೆನಿಸುವ ಕೆಲವು ಜನಮುಖಿ ಸಂಪರ್ಕ ಕಾರ್ಯಕ್ರಮಗಳನ್ನು ವಿಭಾಗವು ಹಮ್ಮಿಕೊಂಡಿತು. ಈ ಸದಾಶಯದ ಫಲಿತವಾಗಿ "ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ" ಕಾರ್ಯಕ್ರಮವನ್ನು ವಿಭಾಗವು ರೂಪಿಸಿಕೊಂಡು, ಪ್ರತಿವರ್ಷವೂ ಆಯೋಜಿಸುತ್ತಾ ಬಂದಿದೆ. ವಿಭಾಗವು ತನ್ನ ಆರಂಭದ ಕಾಲದಿಂದಲೂ ಪ್ರಸ್ತುತದವರೆಗೆ ಆಯೋಜಿಸಿಕೊಂಡು ಬಂದಿರುವ "ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರ"ಗಳ ಉದ್ದೇಶ ಹಾಗೂ ಸ್ವರೂಪವನ್ನು ಸ್ಥೂಲವಾಗಿ ಪರಿಚಯಿಸಿ ಕೊಡುವುದೇ ಇಲ್ಲಿಯ ಪ್ರಮುಖ ಆಶಯವಾಗಿದೆ.

ಪ್ರಾಚೀನ ಕರ್ನಾಟಕ ಕಾಲದಲ್ಲಿ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಇನ್ನೂ ಮುಂತಾದ ಸಾಂಸ್ಕೃತಿಕ ಘಟನೆಗಳನ್ನು ತಿಳಿದುಕೊಳ್ಳುವಲ್ಲಿ ನಮಗೆ ಅನೇಕ ಆಕರಗಳು, ಪರಿಕರಗಳು ಮತ್ತು ಕುರುಹುಗಳು ಸಹಾಯಕಾರಿಯಾಗುತ್ತವೆ. ಅವುಗಳಲ್ಲಿ ಭಾಷೆ ಪ್ರಧಾನವಾದ ಅಂಶ, ಅವುಗಳಲ್ಲಿ ಹಸ್ತಪ್ರತಿಗಳು ಮುಖ್ಯವಾದವುಗಳು. ಸಾಮಾನ್ಯವಾಗಿ ಹಸ್ತಪ್ರತಿಗಳು ಎಂದರೆ ಕೈಯಿಂದ ಬರೆದ ಬರವಣಿಗೆ ಎಂದು ಹೇಳಲಾಗಿದೆ. ಈ ಅರ್ಥದಲ್ಲಿ ಕೈಯಿಂದ ಬರೆದ ಪ್ರಾಚೀನ ಕಾಲದ ಗ್ರಂಥ, ದಾಖಲೆ, ಮುದ್ರಣಕ್ಕಾಗಿ ಸಿದ್ಧಪಡಿಸಿದ ಈಗಿನ ಯಾವುದೇ ಬರವಣಿಗೆಗಳು

ಹಸ್ತಪ್ರತಿಗಳಾಗಿವೆ. ಇವುಗಳಲ್ಲಿ ಪ್ರಾಚೀನ ಕೈಬರಹದ ಗ್ರಂಥಗಳನ್ನು ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. 'ಹಸ್ತಪ್ರತಿ' ಪದ ಪರಿಚಯವಾಗುವ ಮೊದಲು ಓಲೆಕಟ್ಟು, ಹೊತ್ತಿಗೆ, ಗ್ರಂಥ, ಶಾಸ್ತ್ರ, ನೀಲಿ ಹೊತ್ತಿಗೆ ಎಂಬ ಶಬ್ದಗಳೂ ರೂಢಿಯಲ್ಲಿದ್ದವು. ಕನ್ನಡ ಪ್ರಾಚೀನ ಗ್ರಂಥಗಳಲ್ಲಿಯೂ ಇವುಗಳಿಗೆ ಪೊತ್ತಗೆ, ಕಳವಳಿಗೆ, ಪುಸ್ತಕ, ಕಟ್ಟು, ವಹಿ ಎಂದು ಕರೆಯಾಗಿದೆ. ಇಂಗ್ಲೀಷ್‌ನಲ್ಲಿ ಈ ಪದಕ್ಕೆ ಮ್ಯಾನ್ಯುಸ್ಕ್ರಿಪ್ಟ್(Manuscript) ಎಂದು ಕರೆಯುತ್ತಾರೆ. "ಮೃದುವಾದ ಮರದ ತೊಗಟೆಗಳು, ಹದಮಾಡಿದ ಚರ್ಮ, ತಾಳೆಗರಿ ಮತ್ತು ಕಾಗದ ಮುಂತಾದ ಸಾಮಗ್ರಿಗಳ ಮೇಲೆ ಬಣ್ಣವನ್ನು ಉಪಯೋಗಿಸಿಕೊಂಡು ಕಂಟ, ಲೇಖನಿ ಅಥವಾ ಗಲಗಿನಿಂದ ಬರೆಯಲಾಗುತ್ತಿತ್ತು ಅಂಥವುಗಳಿಗೆ 'ಹಸ್ತಪ್ರತಿ'ಗಳೆಂದು ಕರೆಯುತ್ತಾರೆ. ಆದಾಗ್ಯೂ ತಾಳೆಗರಿ, ಕೋರಿಕಾಗದ, ಸಾಮಾನ್ಯ ಕಾಗದಗಳ ಮೇಲೆ ಬರೆದ ಹಸ್ತಪ್ರತಿಗಳನ್ನು ಮಾತ್ರ ಹಸ್ತಪ್ರತಿಶಾಸ್ತ್ರ ಎಂಬ ಹೆಸರಿನಿಂದ ಗಂಭೀರ ಅಧ್ಯಯನ ಮಾಡಲಾಗುತ್ತಿದೆ. ಹಸ್ತಪ್ರತಿಗಳು ತಾಳೆಗರಿ, ಕೋರಿಕಾಗದ ಸಾಮಾನ್ಯ ಕಾಗದ ಮತ್ತು ಕಡತಗಳ ರೂಪದಲ್ಲಿ ಸಿಗುತ್ತವೆ. ತಾಳೆಗರಿಯ ಮೇಲೆ ಬರೆಯಲು ಕಂಟವನ್ನು, ಕಾಗದದ ಮೇಲೆ ಬರೆಯಲು ಲಾಳದಕಡ್ಡಿ, ಬಿದಿರಿನಗಲಗು, ನವಿಲುಗರಿಯ ಕಡ್ಡಿ, ಟಾಕು ಮೊದಲಾದ ಲೇಖನಿ ಸಾಮಗ್ರಿಗಳಿಂದ ಮಸಿಯನ್ನು ತಯಾರಿಸಿಕೊಂಡು ಬರೆಯುತ್ತಿದ್ದರು.

ಹಸ್ತಪ್ರತಿ ಸಂಗ್ರಹ ಕ್ಷೇತ್ರಕಾರ್ಯವನ್ನು 'ಪರೋಕ್ಷ' ಹಾಗೂ ಪ್ರತ್ಯಕ್ಷ ಎಂಬ ಎರಡು ಪ್ರಕಾರಗಳಲ್ಲಿ ಕೈಕೊಳ್ಳಬಹುದು.

೧. **ಪರೋಕ್ಷ ಕ್ಷೇತ್ರಕಾರ್ಯ:** ಹಸ್ತಪ್ರತಿಗಳು ನಿರ್ದಿಷ್ಟವಾದ ಸ್ಥಳ(ಗ್ರಾಮ, ಮನೆ, ಮಠ, ಮಂದಿರ)ಗಳಲ್ಲಿ ಇದ್ದ ಬಗೆಗೆ ನಮಗೆ ಪೂರ್ಣ ಮಾಹಿತಿ ಇದ್ದರೆ ಅವುಗಳನ್ನು ಅಂಚೆ ಮೂಲಕ ಮತ್ತು ಬೇರೆ ವ್ಯಕ್ತಿಗಳ ಸಹಾಯದಿಂದ ತರಿಸಿಕೊಳ್ಳುವುದು ಪರೋಕ್ಷ ಕ್ಷೇತ್ರಕಾರ್ಯವಾಗುತ್ತವೆ.

೨. **ಪ್ರತ್ಯಕ್ಷ ಕ್ಷೇತ್ರಕಾರ್ಯ:** ಇಲ್ಲಿ ಎಲ್ಲ ಅಂಶಗಳು ಅಡಕವಾಗಿರುತ್ತವೆ. ಉದಾಹರಣೆಗೆ: ಹಸ್ತಪ್ರತಿಗಳು ಕುರಿತು ಸೈದ್ಧಾಂತಿಕ ಜ್ಞಾನ, ಪ್ರಾಯೋಗಿಕ ಪರಿಜ್ಞಾನ, ವಿದ್ವಾಂಸರೊಡನೆ ಸತತ ಸಂಪರ್ಕ, ಹಸ್ತಪ್ರತಿ ಒಡೆಯನೊಂದಿಗೆ ಸಮಯೋಚಿತವಾಗಿ ಮಾತನಾಡುವುದು ಮೊದಲಾದವುಗಳು ಎಂದು ಹೇಳಬಹುದು. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಈ ಎರಡು ನೆಲೆಯಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಕೈಗೊಂಡು ಬಹಳಷ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸೂಕ್ತ ರೀತಿಯಲ್ಲಿ ಸಂರಕ್ಷಿಸಿ ಅಧ್ಯಯನ ಮಾಡುತ್ತಿದೆ.

ತಾಳಗರಿ ಅಥವಾ ಓಲೆಗರಿ ಹಸ್ತಪ್ರತಿಗಳು ದಕ್ಷಿಣ ಭಾರತದೆಲ್ಲೆಡೆ ವ್ಯಾಪಿಸಿವೆ. ತಾಳೆಗರಿಗಳನ್ನು ಕತ್ತರಿಸಿ, ಹಸಿಯಾಗಿರುವಾಗಲೆ ಶುದ್ಧೀಕರಿಸಿ ನೀರಿನಲ್ಲಿ ಬೇಯಿಸಿ, ಅವುಗಳನ್ನು ನೆರಳಿನಲ್ಲಿ ಒಣಗಿಸಿ ಒಂದು ಆಕಾರಕ್ಕೆ ಕತ್ತರಿಸಿ ಬರೆಯಲು ಸಿದ್ಧಪಡಿಸುತ್ತಿದ್ದರೆಂದು ತಿಳಿದುಬರುತ್ತದೆ. ಆ ತಾಳೆಗರಿಯ ಮೇಲೆ ಕಬ್ಬಿಣದ ತೆಳುವಾದ ಸಲಾಕೆಯಂತೆ ಚೂಪಾಗಿ ತಯಾರಿಸಿದ ಕಂಟದಿಂದ ಅಕ್ಷರಗಳನ್ನು ಕೊರೆದು, ಅಕ್ಷರಗಳು ಸ್ಫೂಟವಾಗಿ ಕಾಣಲು ಮಸಿಯನ್ನು ಹಚ್ಚುತ್ತಿದ್ದರು. ಈ ಮಸಿಯನ್ನು ರಾಗಿ, ಅಳಲೆಕಾಯಿ, ಅನ್ನಭೇದಿ ಮೊದಲಾದ ವಸ್ತುಗಳಿಂದ, ಧಾನ್ಯಗಳಿಂದ ತಯಾರಿಸುತ್ತಿದ್ದರೆಂದು ತಿಳಿದುಬರುತ್ತದೆ.

ಕಡತ ಇದು ಪ್ರಾಚೀನ ಕಾಲದ ಬರವಣಿಗೆಯ ಒಂದು ವಿಶೇಷ ಮಾಧ್ಯಮ. ಇದನ್ನು ಹತ್ತಿಬಟ್ಟೆಯ ಎರಡೂ ಬದಿಗೆ ಹುಣಸೆಬೀಜದ ಸರಿಯನ್ನು ಸವರಿ ತಯಾರಿಸಿ, ಒಂದು ನಿರ್ದಿಷ್ಟ ಅಗಲ ಹಾಗೂ ಉದ್ದವಾಗಿರುವ ಅಳತೆಗೆ ತಕ್ಕಂತೆ ಮಡಿಕೆಗಳನ್ನುಳ್ಳ ಪುಸ್ತಕದಂತಿರುವ ಒಂದು ಬರವಣಿಗೆ ಸಾಧನ. ಎರಡೂ ಬದಿಗಳಲ್ಲಿ ಬರೆಯಬಹುದಾದಂತಹ ಅನುಕೂಲವಿರುತ್ತದೆ. ಮಾಧ್ಯಮ ಬಳಪದಿಂದ ಅದರ ಮೇಲೆ ಬರೆಯಲಾಗುತ್ತಿತ್ತು. ಇಂತಹ ಕಡತಗಳನ್ನು ಅರಮನೆ-ಗುರುಮನೆಗಳಲ್ಲಿ ದೈನಂದಿನ ಲೆಕ್ಕಪತ್ರಗಳನ್ನು ಬರೆದಿಡಲು, ಸ್ಥಿತಿವಂತರ ಮನೆಗಳಲ್ಲಿ, ವ್ಯವಹಾರಿಕ ಅಂಗಡಿಗಳಲ್ಲಿ ವ್ಯವಹಾರಿಕ ಲೆಕ್ಕ ವಹಿವಾಟುಗಳನ್ನು ಬರೆದಿಡಲು ಹೆಚ್ಚಾಗಿ ಬಳಸುತ್ತಿದ್ದರು.

ಕೋರಿಕಾಗದ ಇದು ಮಧ್ಯಕಾಲೀನ ಬರವಣಿಗೆಯ್ಯ ಒಂದು ಮಾಧ್ಯಮ ಕೋರಿ ಎಂದರೆ ಹತ್ತಿ ಅಥವಾ ಹತ್ತಿಬಟ್ಟೆ ಎಂದಾಗುತ್ತದೆ. ಹತ್ತಿಬಟ್ಟೆಯ ಚೂರುಗಳಿಂದ ಈ ದಪ್ಪನೆಯ ಕಾಗದವನ್ನು ನಮ್ಮಲ್ಲಿಯೇ ತಯಾರು ಮಾಡುತ್ತಿದ್ದರು. ಮಸಿಯನ್ನು ಬಳಸಿ, ಮುಳ್ಳುಹಂದಿಯ ಮುಳ್ಳು, ನವಿಲು ಗರಿ, ಟಾಕು ಮೊದಲಾದವುಗಳಿಂದ ಅಕ್ಷರಗಳನ್ನು ಮೂಡಿಸುತ್ತಿದ್ದರು. ನಂತರ ಯಂತ್ರದಿಂದ ತಯಾರಾದ ತೆಳುವಾದ ಸಾಮಾನ್ಯ ಕಾಗದದ ಮೇಲೆ ಬರೆಯುವ ಪದ್ಧತಿಯು ರೂಢಿಯಾಯಿತು.ಆ ಬಗೆಯ ಎಷ್ಟೋ ಗುಡಿಕೈಗಾರಿಕೆಗಳು ನಮ್ಮಲ್ಲಿದ್ದವು. ಬಡಿಗ, ಕುಂಬಾರ, ವಸ್ತ್ರಗಾರ, ಚಿತ್ರಗಾರ ಮೊದಲಾದ ಕುಶಲಕರ್ಮಿ ಜನವರ್ಗಗಳು ಈ ಹಸ್ತಪ್ರತಿ ಬರವಣಿಗೆ ಹಾಗೂ ಹಸ್ತಪ್ರತಿ ಕಟ್ಟುಗಳ ತಯಾರಿಕೆಯಲ್ಲಿ ದುಡಿದಿವೆ.

ಇಂತಹ ಹಸ್ತಪ್ರತಿಗಳ ಮೇಲೆ ಬರೆಯುವವರನ್ನು ಲಿಪಿಕಾರರು ಅಥವಾ ಪ್ರತಿಕಾರರು ಎಂದು ಕರೆಯುತ್ತಾರೆ. ಸ್ವತಃ ಕವಿಗಳೇ ತಮ್ಮ ಒಂದೊಂದು ಪ್ರತಿಗೆ ಲಿಪಿಕಾರರಾಗಿರುವುದುಂಟು, ಆದರೆ ನೇರವಾಗಿ ಕವಿಯಿಂದಲೇ ಪ್ರತಿಮಾಡಿದ ಹಸ್ತಪ್ರತಿಗಳು ನಮಗೆ ಸಿಗುವುದಿಲ್ಲ. ಏಕೆಂದರೆ ಕಾಲಮಾನದ ದೃಷ್ಟಿಯಿಂದ ಅವು ತುಂಬಾ ಪ್ರಾಚೀನವಾದುವುಗಳು, ಕಾಲದ ಹೊಡೆತಕ್ಕೆ ಸಿಕ್ಕು ಅವು ನಶಿಸಿಹೋಗಿವೆ. ಆದರೆ ಕಾಲದಿಂದ ಕಾಲಕ್ಕೆ ಲಿಪಿಕಾರರು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಪ್ರತಿಮಾಡಿಕೊಂಡು ಬಂದ ಹಸ್ತಪ್ರತಿಗಳೇ ನಮ್ಮ ಪ್ರಾಚೀನ ಸನಾತನ ಪರಂಪರೆಯ ಅಧ್ಯಯನದ ಆಕರಗಳಾಗಿವೆ. ಇಂತಹ ಲಿಪಿಕಾರರನ್ನು ಮುಖ್ಯವಾಗಿ ಎರಡು ಪ್ರಕಾರಗಳಲ್ಲಿ ಅಧ್ಯಯನ ಮಾಡಲಾಗಿದೆ. ಹವ್ಯಾಸಿ ಲಿಪಿಕಾರರು, ವೃತ್ತಿನಿರತ ಲಿಪಿಕಾರರೆಂದು ಅವರನ್ನು ಗುರುತಿಸಲಾಗಿದೆ. ಅಭ್ಯಾಸ ಅಥವಾ ಅಧ್ಯಯನದ ಆಸಕ್ತಿಯಿಂದ, ವಾಚನಾಭಿರುಚಿಗಾಗಿ ಒಂದು ಹಸ್ತಪ್ರತಿಯನ್ನು ನೋಡಿ ತಮಗೆ ತಾವೇ ಅದರ ಮತ್ತೊಂದು ಹಾಗೂ ಮೊಗದೊಂದು ಪ್ರತಿಯನ್ನು ಲಿಪಿಮಾಡಿಕೊಳ್ಳುವವರು ಹವ್ಯಾಸಿ ಲಿಪಿಕಾರರು. ವೃತ್ತಿನಿರತ ಲಿಪಿಕಾರರೆಂದರೆ, ಹಸ್ತಪ್ರತಿ ಲಿಪೀಕರಣವನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದವರು. ತಾವು ಹಸ್ತಪ್ರತಿಯನ್ನು ಲಿಪಿಮಾಡಿ ಕೊಟ್ಟಿದ್ದರ ಪ್ರತಿಫಲವಾಗಿ ಧವಸ ಧಾನ್ಯಗಳನ್ನೋ, ಹಣ, ಅರಿವೆಗಳನ್ನೋ ಸಂಭಾವನೆಯಾಗಿ ಪಡೆದು ಹಸ್ತಪ್ರತಿಗಳನ್ನು ಲಿಪಿಮಾಡಿಕೊಟ್ಟಿರುವಂಥವರು. ಅಗತ್ಯಕ್ಕನುಗುಣವಾಗಿ ಹಸ್ತಪ್ರತಿಗಳಲ್ಲಿ ರೇಖಾಚಿತ್ರಗಳನ್ನು ಅಥವಾ ವರ್ಣಚಿತ್ರಗಳನ್ನು ಬರೆಯುತ್ತಿದ್ದವರನ್ನು ಚಿತ್ರಗಾರರೆಂದು ಕರೆಯಲಾಗುತ್ತದೆ. ಹೀಗೆ ತಯಾರಾದ ಹಸ್ತಪ್ರತಿ ಕಟ್ಟುಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸಿ ಇಡಲು ಅಥವಾ ಕಾಪಾಡಲು ವಸ್ತ್ರಗಾರರು ತಯಾರಿಸಿದ ವಸ್ತ್ರಗಳನ್ನು ಬಳಸುತ್ತಿದ್ದರು.

ಈಗ ನಮಗೆ ದೊರೆತಿರುವ ಪ್ರಾಚೀನ ಕೃತಿಗಳ ಹಸ್ತಪ್ರತಿಗಳು ಈಗಲೂ ಉಳಿದುಕೊಂಡು ಬಂದಿದ್ದರೆ, ಅದರ ಶ್ರೇಯಸ್ಸು ಉಕ್ಕಿನ ಕಂಟವನ್ನು ಮುಷ್ಟಿಯಿಂದ ಬಲವಾಗಿ ಹಿಡಿದು ಬೆನ್ನನ್ನು ಬಗ್ಗಿಸಿ, ಕೊರಳನ್ನು ಕುಗ್ಗಿಸಿ, ಕಣ್ಣನ್ನು ಅರಳಿಸಿ, ಮುಖವನ್ನು ತಗ್ಗಿಸಿ ಬಹುಕಷ್ಟದಿಂದ ತಾಳಿಗರಿಗಳ ಮೇಲೆ ಬರೆದ ಲಿಪಿಕಾರರಿಗೆ, ಅವರಿಂದ ಬರೆಸಿದ ಅಭಿಮಾನಿಗಳಿಗೆ, ಪೋಷಕರಿಗೆ ಸಲ್ಲುತ್ತದೆ. ಈ ಮಾತು ಕಾಗದದ ಹಸ್ತಪ್ರತಿಗಳ ಮೇಲೆ ಲಿಪಿಮಾಡಿದ ಲಿಪಿಕಾರರಿಗೂ ಅನ್ವಯಿಸುತ್ತದೆ. ಕರ್ನಾಟಕದಲ್ಲಿ ಕಾಗದದ ಮೇಲೆ ಬರೆಯುವಿಕೆ ಪ್ರಾರಂಭವಾದದ್ದು ೧೫ನೇ ಶತಮಾನದಿಂದ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಅಲ್ಲಿಯವರೆಗೂ ಶಾಸ್ತ್ರ-ಕಾವ್ಯ ಇತ್ಯಾದಿಗಳ ಬರವಣಿಗೆ ವ್ಯಾಪಕವಾಗಿ ತಾಳೆಗರಿಗಳ ಮೇಲೆ ನಡೆಯುತ್ತಿತ್ತು. ತಾಳೆಗರಿಹಸ್ತಪ್ರತಿಗಳು ಸುಮಾರು ಒಂದು ಸಾವಿರ ವರ್ಷಗಳವರೆಗೆ ತಾಳಿಕೆ ಬರುತ್ತವೆ. ಇದರಿಂದಾಗಿ ೧೯ನೇ ಶತಮಾನದಲ್ಲಿಯೂ ಕೂಡ ಕೆಲವು ಮುಖ್ಯ ಶಾಸ್ತ್ರ ಗ್ರಂಥಗಳನ್ನು ಪಂಚಾಗ, ಜಾತಕಗಳನ್ನು ತಾಳೆಗರಿಯ ಮೇಲೆ ಬರೆದಿಟ್ಟಂಥಹ ಉದಾಹರಣೆಗಳಿವೆ. ಏಕೆಂದರೆ ತಾಳೆಗರಿಯ ಮೇಲೆ ಬರೆಯುವುದು ಅತ್ಯಂತ ಪವಿತ್ರವಾದುದೆಂಬ ಭಾವನೆ ನಮ್ಮವರಲ್ಲಿತ್ತು. ಅಂತೆಯೇ ಮೊದಲಿನ ಕಾಲದಲ್ಲಿ ಸ್ವಂತ ವ್ಯಾಸಂಗಕ್ಕಾಗಿ,

ಮಕ್ಕಳು-ಮೊಮ್ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಗುರುಗಳು ಶಿಷ್ಯರಿಗೆ ಕಲಿಸುವುದಕ್ಕಾಗಿ, ಅಂದರೆ ಪಾಠಮಾಡಲು, ಹಸ್ತಪ್ರತಿಗಳನ್ನು ಸ್ವತಃ ಬರೆದಿಟ್ಟುಕೊಳ್ಳುತ್ತಿದ್ದರು. ಇಲ್ಲವೆ ಬರೆಯುವ ಕಲೆಯಲ್ಲಿ ನೈಪುಣ್ಯತೆ ಹೊಂದಿದ್ದ ಲಿಪಿಕಾರರಿಂದ ಪ್ರತಿಮಾಡಿಸಿ ಬೇಕಾದ ಗ್ರಂಥಗಳನ್ನು ದೊರಕಿಸಿಕೊಳ್ಳುತ್ತಿದ್ದರು. ಅಲ್ಲದೆ ಕೆಲವು ಧಾರ್ಮಿಕ ಗ್ರಂಥಗಳನ್ನು ತಾವೇ ಪ್ರತಿಮಾಡಿಯೋ, ಮಾಡಿಸಿಯೋ ಪಾತ್ರರಾದವರಿಗೆ ದಾನಮಾಡುತ್ತಿದ್ದರು.ಇದನ್ನೇ 'ಶಾಸ್ತ್ರದಾನ' ಎಂದು ನಮ್ಮ ಹಿರಿಯರು ಕರೆದಿದ್ದಾರೆ. ಇಂತಹ ಕನ್ನಡ ಸಾಹಿತ್ಯ ರಾಶಿಯಲ್ಲಿ ಧಾರ್ಮಿಕ ಗ್ರಂಥಗಳ ಪಾಲೇ ಅತಿಹೆಚ್ಚಾಗಿರುವುದೊಂದು ವಿಶೇಷವಾದ ಸಂಗತಿ. ಸಾಹಿತ್ಯಾಭಿಮಾನಿಗಳಾದ ರಾಜರುಗಳು ವಿದ್ವಾಂಸರಿಗೂ, ಕವಿಗಳಿಗೂ, ಲಿಪಿಕಾರರಿಗೂ ಆಶ್ರಯ ನೀಡಿದ್ದರಿಂದ ಅರಮನೆಗಳು, ಗುರುಮನೆಗಳು(ಮಠ-ಮಾನ್ಯಗಳು) ಅಕ್ಷರಶಃ ಸರಸ್ವತಿ ಭಂಡಾರಗಳಾಗಿದ್ದವು. ಇಂದು ವಿಶ್ವವಿದ್ಯಾಲಯಗಳು, ಕೆಲ ಆಸಕ್ತ ಅರೆ ಸರ್ಕಾರಿ ಸಂಸ್ಥೆಗಳು, ಹಸ್ತಪ್ರತಿಗಳನ್ನು ಹಸ್ತಪ್ರತಿ ಭಂಡಾರಗಳಲ್ಲಿ ಸಂರಕ್ಷಣೆ ಮಾಡಿ ಅವುಗಳ ಅಧ್ಯಯನವನ್ನು ಮಾಡಲಾರಂಭಿಸಿ ಬಹುದಿನಗಳೇ ಆಗಿವೆ. ಅಂಥವುಗಳಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಹಸ್ತಪ್ರತಿ ಭಂಡಾರ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರ, ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರ, ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಗದಗಿನ ತೊಂಟಾರ್ಯ ಮಠದ ಹಸ್ತಪ್ರತಿ ಭಂಡಾರ ಮುಂತಾದವುಗಳನ್ನು ಉದಾಹರಣೆಗಾಗಿ ಹೆಸರಿಸಬಹುದಾಗಿದೆ. ಪ್ರಸ್ತುತದಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದಲ್ಲಿರುವ ಹಸ್ತಪ್ರತಿ ಭಂಡಾರಕ್ಕೆ ಈಗ ಇಪ್ಪತ್ತೈದು ವರ್ಷಗಳು ತುಂಬಿವೆ. ಈಗಲೂ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಹಸ್ತಪ್ರತಿಗಳ, ಸೂಚಿಕರಣ, ಅಪ್ರಕಟಿತ ಕೃತಿಗಳ ಪ್ರಕಟಣೆ ಹಾಗೂ ಪಿಎಚ್.ಡಿ ಅಧ್ಯಯನ ಇವೇ ಮುಂತಾದ ಶೈಕ್ಷಣಿಕ ಕಾರ್ಯಗಳು ಅವ್ಯಾಹತವಾಗಿ ನಡೆಯುತ್ತಾ ಬಂದಿವೆ.

ಹೀಗೆ ನಮ್ಮ ಪೂರ್ವದ ಕವಿ ಹಾಗೂ ಲಿಪಿಕಾರರ ಪರಿಶ್ರಮದಿಂದ ನಮಗೆ ಲಭ್ಯವಾದ ಹಸ್ತಪ್ರತಿಗಳನ್ನು ನಮ್ಮ ಪೂರ್ವಿಕರು ಅತ್ಯಂತ ಜಾಗರೂಕತೆಯಿಂದ ಅವುಗಳನ್ನು ಕಾಯ್ದುಕೊಂಡು ಕಾಪಾಡಿಕೊಂಡು ಬಂದಿದ್ದಾರೆ ಅವುಗಳನ್ನು ಸಂರಕ್ಷಿಸುವ ಮುಂದಿನ ಹೊಣೆಯನ್ನು ಇಂದಿನ ಪೀಳಿಗೆಗೆ ವರ್ಗಾಯಿಸಿದ್ದಾರೆ. ಅವರ ಸಂರಕ್ಷಣೆಯ ಕಳಕಳಿ ಹೇಗಿತ್ತೆಂದರೆ 'ಕಷ್ಟೇನ ಲಿಖಿತಂ ಯತ್ನೇನ ಪರಿಪಾಲಯತ್' ಎಂಬ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ತಾಳೆಗರಿಯ ಕಟ್ಟುಗಳ ಗರಿಗಳು ಮುರಿದುಹೋಗದಂತೆ ಎರಡೂ ಕಡೆಯೂ ಇದ್ದ ಮರದ ಫಲಕಗಳು ಗರಿಗಳಿಗೆ ರಕ್ಷಣೆ ನೀಡುತ್ತಿದ್ದವು. ಗರಿಗಳಿಗೂ ಫಲಕಗಳಿಗೂ ಸಮನಾಗಿ ಎರಡು ರಂಧ್ರಗಳಿದ್ದು ಈ ರಂಧ್ರಗಳ ಮೂಲಕ ದಪ್ಪ ದಾರಗಳನ್ನು ಬಳಸಿ, ಗರಿಗಳನ್ನು ಹಿಂದೆ-ಮುಂದೆ ತಿರುವಿ ಗ್ರಂಥಗಳನ್ನು ಓದುವುದಕ್ಕೂ ಕಟ್ಟಿಡುವುದಕ್ಕೂ ಅವಕಾಶವನ್ನು ಕಲ್ಪಿಸಿದ್ದರು. ಈ ಪ್ರಕ್ರಿಯೆ ಹಸ್ತಪ್ರತಿಯೊಂದು ರಚನೆಯಾದ ನಂತರ ಆಗಬೇಕಾದ ಪ್ರಾಥಮಿಕ ಸಂರಕ್ಷಣೆ ನಂತರ ಅವುಗಳನ್ನು ಬಹುಕಾಲ ಸಂರಕ್ಷಿಸಿ ಇಡಬೇಕಾದ ಉದ್ದೇಶದಿಂದ ಜಿರಲೆಗಳು, ಇಲಿಗಳು, ಹಲ್ಲಿ ಮುಂತಾದ ಹುಳು-ಹುಪ್ಪಡಿಗಳು ಪ್ರವೇಶ ಮಾಡದಂಥ ಸಂದು ಬಿಡದ ಮುಚ್ಚಳವಿರುವ ಮರದ ಪೆಟ್ಟಿಗೆಗಳಲ್ಲಿ ಅಥವಾ ಪೆಟಾರಿಗಳಲ್ಲಿ ಹಸ್ತಪ್ರತಿಗಳನ್ನು ಅಂದರೆ ಪ್ರತಿಯೊಂದು ಕೃತಿಯ ಕಟ್ಟನ್ನು ಹಳದಿ ಇಲ್ಲವೆ ಕೆಂಪು ಬಣ್ಣದ ರೇಶಿಮೆ ವಸ್ತ್ರಗಳಿಂದ ಸುತ್ತಿ, ವ್ಯವಸ್ಥಿತವಾಗಿ ಇಡುತ್ತಿದ್ದರು. ಈ ಕೆಂಪು ಹಾಗೂ ಹಳದಿ ಬಣ್ಣದ ವಸ್ತ್ರಗಳು ನುಸಿಹುಳು, ಮುಂತಾದ ಕ್ರಿಮಿ-ಕೀಟಗಳನ್ನು ದೂರವಿಡುತ್ತವೆ ಎಂದು ನಮ್ಮ ಹಿರಿಯರು ಕಂಡುಕೊಂಡಿದ್ದರು. ಬಟ್ಟೆಯ ಒಳಗಡೆ ಕಟ್ಟುಗಳ ಸುತ್ತಲು ಒಣಗಿದ ಹೊಂಗೆಯ ಅಥವಾ ಬೇವಿನ ಎಲೆಯ ಪುಡಿಯನ್ನು ಉದುರಿಸುತ್ತಿದ್ದರು. ಪ್ರತಿವರ್ಷ ಸರಸ್ವತಿ ಹಬ್ಬ ಅಥವಾ ವಿಜಯದಶಮಿಯಲ್ಲಿ ತಾಳೇಗರಿಯ ಕಟ್ಟುಗಳನ್ನು ಪೆಟ್ಟಿಗೆಯಿಂದ ಪ್ರತಿ ಕಟ್ಟನ್ನು

ಸೂಕ್ಷ್ಮವಾಗಿ ಅತ್ಯಂತ ಜಾಗರೂಕತೆಯಿಂದ ಹೊರತೆಗೆದು ಕಟ್ಟನ್ನು ಸಡಿಲಿಸಿ, ಬಿಚ್ಚಿ, ಶುಭ್ರವಾದ ಮೃದುವಾದ ಬಟ್ಟೆಯಿಂದ ಒರೆಸಿ, ಕ್ರಿಮಿನಾಶಕ ತೈಲವನ್ನು ಲೇಪಿಸಿ(ಈಗ ಸಿಟ್ರನಲ್ ಆಯಿಲ್ ಎಂಬ ಕ್ರಿಮಿನಾಶಕವನ್ನು ಹಸ್ತಪ್ರತಿ ಭಂಡಾರಗಳಲ್ಲಿರುವ ತಾಳೆಗರಿ ಹಸ್ತಪ್ರತಿಗಳಿಗೆ ಲೇಪನ ಮಾಡುಲಾಗುತ್ತದೆ) ಕಟ್ಟುಗಳನ್ನು ಯಥಾಸ್ಥಿತಿಯಲ್ಲಿರಿಸಿ ಗ್ರಂಥಸರಸ್ವತಿ ಎಂದು ಭಾವಿಸಿ, ಧೂಪ–ದೀಪ ನೈವೇದ್ಯಾದಿಗಳಿಂದ ಪೂಜಿಸಿ, ಅವುಗಳನ್ನು ಪುನಃ ಯಥಾಸ್ಥಿತಿಯಲ್ಲಿರಿಸಿ ಜತನದಿಂದ ಕಾಪಾಡಿಕೊಂಡು ಬಂದಿದ್ದಾರೆ. ಕೆಲವು ಅತಿಮೂಢನಂಬಿಕೆಯುಳ್ಳವರಿಂದ, ಅಜ್ಞಾನಿಗಳಿಂದ, ಅವಿವೇಕಿಗಳಿಂದ ಎಷ್ಟೋ ಹಸ್ತಪ್ರತಿಗಳು, ನೀರಿಗೆ, ಬೆಂಕಿಗೆ ಆಹುತಿಯಾಗಿ ಹೋಗಿವೆ. ಅಂತಹವರ ಕೈಯಿಂದ ಹಸ್ತಪ್ರತಿಗಳನ್ನು ಕಾಪಾಡಿ ಮುಂದಿನ ಪೀಳಿಗೆಗೆ ಅವುಗಳಲ್ಲಿರುವ ಜ್ಞಾನವನ್ನು ಬಿತ್ತಿರಿಸುವುದು ಈ ಹೊತ್ತಿನ ಸಂದರ್ಭದಲ್ಲಿ ಜರೂರಾಗಿದೆ.

ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ ಎಂಬ ಈ ಕಾರ್ಯಕ್ರಮವು ವಿಶೇಷವಾಗಿ ವಿದ್ಯಾರ್ಥಿಗಳು ಹಾಗೂ ಆಸಕ್ತರನ್ನು ಗಮನದಲ್ಲಿರಿಸಿಕೊಂಡಿರುವಂಥದ್ದು. ಪ್ರತಿವರ್ಷ ಒಂದೊಂದು ಜಿಲ್ಲೆಯನ್ನು ಆಯ್ದುಕೊಂಡು ಆ ಜಿಲ್ಲಾ ವ್ಯಾಪ್ತಿಯಲ್ಲಿ ಒಳಗೊಳ್ಳುವ ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳ ಸುಮಾರು ೪೦ರಿಂದ ೫೦ ವಿದ್ಯಾರ್ಥಿಗಳನ್ನು ಒಂದು ನಿಗದಿತ ಸ್ಥಳದಲ್ಲಿ ಸೇರಿಸಿ, ನಾಲ್ಕು ದಿನಗಳ ಕಾಲ ಹಸ್ತಪ್ರತಿ ಕ್ಷೇತ್ರವನ್ನು ಪರಿಚಯಿಸಲಾಗುತ್ತದೆ. ಈ ತರಬೇತಿಯ ಅವಧಿಯಲ್ಲಿ ಶಿಬಿರಾರ್ಥಿಗಳಿಗೆ ಹಸ್ತಪ್ರತಿಯನ್ನು ಭೌತಿಕವಾಗಿ ಪರಿಚಯಿಸುವ ಹಾಗೂ ಬೌದ್ಧಿಕವಾಗಿ ವಿವರಿಸುವ ಈ ಎರಡು ಪ್ರಧಾನ ಪ್ರಕ್ರಿಯೆಗಳು ಏಕಕಾಲದಲ್ಲಿ ಜರುಗುತ್ತವೆ. ಅಂದರೆ ಹಸ್ತಪ್ರತಿಯ ಅರ್ಥ, ಸ್ವರೂಪ, ಸಂಗ್ರಹ ಹಾಗೂ ಅವುಗಳ ಸಂರಕ್ಷಣೆಯ ವೈಧಾನಿಕತೆ, ವೈಜ್ಞಾನಿಕತೆ ಹಾಗೂ ವೈಚಾರಿಕತೆ, ಹಸ್ತಪ್ರತಿಗಳನ್ನು ಓದುವ ಕ್ರಮ ಹಾಗೂ ಅವುಗಳನ್ನು ಲಿಪೀಕರಿಸಿವ ಕ್ರಿಯೆಯೇ ಹಿಂದಿನ ಶ್ರಮಸಂಸ್ಕೃತಿ, ಹಸ್ತಪ್ರತಿಗಳಲ್ಲಿ ಬಳಲಾಗಿರುವ ಭಾಷೆ, ಲಿಪಿಯ ಸ್ವರೂಪ, ವಿಷಯ ವಸ್ತು, ಬಳಸಲಾಗುತ್ತಿದ್ದ ಲೇಖನ ಸಾಮಗ್ರಿಗಳು, ಅಪರೂಪದ ರೇಖಾಚಿತ್ರಗಳು, ವರ್ಣಚಿತ್ರಗಳ ವೈಶಿಷ್ಟ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಅಧ್ಯಯನ ಕುರಿತು ಯುವ ಪೀಳಿಗೆಯಲ್ಲಿ ಆಸಕ್ತಿ ಹಾಗೂ ಜಾಗೃತಿಯನ್ನುಂಟು ಮಾಡುವುದು, ಪ್ರಾಯೋಗಿಕ ವಿಧಾನಗಳ ಮೂಲಕ ಹಸ್ತಪ್ರತಿಗಳನ್ನು ಪರಿಚಯಿಸುವುದು. ಈ ಹಿನ್ನೆಲೆಯಲ್ಲಿ ಅವುಗಳನ್ನು ಅರ್ಥೈಸಿಕೊಂಡು ಅಧ್ಯಯನಿಸಬಹುದಾದ ಸಾಧ್ಯತೆ ಹಾಗೂ ಕ್ರಮಗಳನ್ನು ಕುರಿತಂತೆ ಸೈದ್ಧಾಂತಿಕವಾಗಿ ಹಾಗೂ ಪ್ರಾಯೋಗಿಕವಾಗಿ ಹಸ್ತಪ್ರತಿಶಾಸ್ತ್ರ ವಿಭಾಗದ ಎಲ್ಲಾ ಅಧ್ಯಾಪಕರೂ ಸೇರಿದಂತೆ ನುರಿತ ಹೊರಗಿನ ವಿದ್ವಾಂಸರಿಂದಲೂ ಉಪನ್ಯಾಸಗಳನ್ನು ನೀಡಲಾಗುತ್ತದೆ.

ಶಿಬಿರದಲ್ಲಿ ಜರಗುವ ಇಂತಹ ಪ್ರಕ್ರಿಯೆಗಳು ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಹಸ್ತಪ್ರತಿಗಳ ಬಗ್ಗೆ ಕುತೂಹಲ ಹಾಗೂ ಆಸಕ್ತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿವೆ. ಹಾಗೆಯೇ ಆಸಕ್ತ ಸಾರ್ವಜನಿಕರಲ್ಲಿ ಹಸ್ತಪ್ರತಿಗಳ ಬಗ್ಗೆ ಸಹಜವಾಗಿ ಮನೆಮಾಡಿರಬಹುದಾದ ಅಂಧಶ್ರದ್ಧೆಗಳನ್ನು ಕಳೆಯುವಲ್ಲಿಯೂ ಯಶಸ್ವಿಯಾಗಿವೆ. ಇದರಿಂದ ಭವಿಷ್ಯದಲ್ಲಿ ಹಸ್ತಪ್ರತಿ ಸಂಸ್ಕೃತಿಯ ಬಗ್ಗೆ ನಾಗರೀಕ ಪ್ರಜ್ಞೆಯೊಂದು ಜಾಗೃತಗೊಳ್ಳುವಲ್ಲಿ ಈ ಶಿಬಿರಗಳು ತುಂಬಾ ಉತ್ತೇಜನಕಾರಿ ಯಾದವುಗಳಾಗಿವೆ. ಅಷ್ಟೇ ಫಲಪ್ರದವೂ ಆಗಿವೆ.

ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರದಲ್ಲಿ ಭಾಗವಹಿಸಿದ, ಕೆಲವು ಶಿಬಿರಾರ್ಥಿಗಳ ಅನಿಸಿಕೆಗಳು

೧. **ಎಸ್.ಆರ್.ಪಾಟೀಲ, ಬಸವೇಶ್ವರ ಮಹಾವಿದ್ಯಾಲಯ, ಗದಗ**

ಈ ಶಿಬಿರದ ಮೂಲಕ ಕಂಡುಕೊಂಡಂತಹ ಬೆಳಕು ಎಂದರೆ ಹಸ್ತಪ್ರತಿಯ ಸಂಪೂರ್ಣವಾದ ಜ್ಞಾನಜ್ಯೋತಿಯ ಬೆಳಕು ನನ್ನ ತೇಜಸ್ಸಿಗೆ ಕಾರಣೀಭೂತವಾಗಿದೆ. ನಾನು ಈ ಶಿಬಿರದ ಮೂಲಕ ತಿಳಿದುಕೊಂಡಂತಹ ವಿಷಯಗಳು ಹಲವಾರು ಅವುಗಳನ್ನು ನೋಡುವುದಾದರೆ ಹಸ್ತಪ್ರತಿ ಎಂದರೇನು, ಹಸ್ತಪ್ರತಿ ಸ್ವರೂಪ ಮತ್ತು ಪ್ರಕಾರ ಹಾಗೂ ಹಸ್ತಪ್ರತಿಯ ಸಂರಕ್ಷಣೆ ಬಗ್ಗೆ ಸಂಪೂರ್ಣವಾಗಿ ಜ್ಞಾನ ಕೊಟ್ಟಂತಹ ಉಪನ್ಯಾಸಕರಿಗೆ ನನ್ನ ವಂದನೆಗಳು.

೨. **ಸಂತೋಷಿಮಾತಾ ಹಿರೇಮಠ, ಜಗದ್ಗುರು ತೋಂಟದಾರ್ಯ, ಮಹಾವಿದ್ಯಾಲಯ, ಗದಗ**

ನಮ್ಮ ಇತಿಹಾಸವನ್ನು ತಿಳಿಯಲು "ಹಸ್ತಪ್ರತಿ" ಅಧ್ಯಯನ ಅತ್ಯಂತ ಅವಶ್ಯವಾದುದು. ನಮ್ಮ ಇತಿಹಾಸದ ಆಧಾರಗಳಲ್ಲಿ ಪ್ರಮುಖವಾದ ಹಸ್ತಪ್ರತಿಗಳ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರೆಯುವುದು ಕಠಿಣವಾದಂತಹ ಸಮಯದಲ್ಲಿ ನಮಗೆ ಈ "ಹಸ್ತಪ್ರತಿ ತರಬೇತಿ" ಕಾರ್ಯಕ್ರಮ ಅತ್ಯಂತ ಉಪಕಾರಿಯಾಯಿತು. ಕೇವಲ ಪುಸ್ತಕಗಳಲ್ಲಿ ಅವುಗಳ ಬಗ್ಗೆ ಓದುತ್ತಿದ್ದ ದೂರದಿಂದ ಮಾತ್ರ ನೋಡುತ್ತಿದ್ದ ನಮಗೆ ಅವುಗಳನ್ನು ಕೈಯಿಂದ ಸ್ಪರ್ಶಿಸುವ, ಸ್ವತಃ ಓದಲು ಪ್ರಯತ್ನಿಸುವ ಅಪೂರ್ವವಾದಂತಹ ಅವಕಾಶ ಸಿಕ್ಕಿದ್ದು, ತುಂಬಾ ವಿಷಯಗಳು ನಮಗೆ ಈ ತರಬೇತಿಯಲ್ಲಿ ತಿಳಿದುಬಂದವು. ಇಂಥ ತರಬೇತಿ ಪ್ರತಿ ವರ್ಷವು ನಡೆಯಬೇಕು ಇದರಿಂದ ವಿದ್ಯಾರ್ಥಿಗಳಿಗೆ ಮುಂಬರುವ ಪೀಳಿಗೆಗೆ ಅತ್ಯಂತ ಸಹಾಯಕಾರಿಯಾಗುತ್ತದೆ ಎಂದು ನನ್ನ ಅನಿಸಿಕೆ.

೩. **ಜಿ.ಬಿ. ಹಳ್ಳಿಕೇರಿ ಕೆ.ಆರ್. ಬೆಲ್ಲದ ಮಹಾವಿದ್ಯಾಲಯ, ಮುಂಡರಗಿ**

ಹಸ್ತಪ್ರತಿಗಳು ನಮ್ಮ ಸಂಸ್ಕೃತಿಯ ನಿಧಿಯೂ ಹೌದು ಮತ್ತು ಪ್ರತಿನಿಧಿಯೂ ಹೌದು. ರಾಜ್ಯದ ಒಳಹೊರಗಿನ ಅನೇಕ ಮಠಮಂದಿರಗಳಲ್ಲಿ ಮತ್ತು ಅಭ್ಯಾಸಾಸಕ್ತರಲ್ಲಿ ಹಸ್ತಪ್ರತಿಗಳು ಇವೆ. ಇಷ್ಟೇ ಅಲ್ಲದೆ ನಮ್ಮ ನಿಧಿಗಳು ಇಂದು ದೇವರ ಜಗಲಿಯ ಮೇಲೆ ಪೂಜಾವಸ್ತುಗಳಾಗಿದ್ದು, ಅವು ನೀರು ಗಂಧಗಳಿಂದ ಕೊಳೆಯುತ್ತಲಿವೆ. ಇಂತಹ ಹಸ್ತಪ್ರತಿಗಳ ರಕ್ಷಣೆ ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ. ಇಂದು ನಮಗೆ ಸಾಹಿತ್ಯ, ಶಾಸ್ತ್ರ, ತತ್ವ ಮುಂತಾದವುಗಳಿಗೆ ಸಂಬಂದಪಟ್ಟಂತೆ ಈ ಹಸ್ತಪ್ರತಿಗಳು ವೈವಿಧ್ಯವಾಗಿವೆ ಮತ್ತು ಅನನ್ಯತೆ ಹೊಂದಿವೆ. ಯಶಸ್ಸಿನ ತಳಹದಿ, ಏಕೆಂದರೆ ನಮ್ಮ ಹಿಂದಿನ ಪೂರ್ವಜರ ಅನುಭವ ವಿಚಾರ ಆಚಾರ ಸಂಸ್ಕೃತಿ, ಸಂಪ್ರದಾಯ ನಡೆ-ನುಡಿ ಇನ್ನೂ ಮುಂತಾದುವುಗಳ ಬಗ್ಗೆ ನಾವು ಅನುಭವ ಪಡೆದೆವು. ಆದ್ದರಿಂದ ಇಂತಹ ಶಿಬಿರಕ್ಕೆ ತೊಂಟದಾರ್ಯ ಮಠದಲ್ಲಿದ್ದ ನಾನು ಪ್ರಾಮಾಣಿಕನಾಗಿ ಒಳ್ಳೆ ಶ್ರದ್ಧೆಯಿಂದ ಈ ಶಿಬಿರದಿಂದ ನನಗೆ ತಿಳಿದಿದ್ದನ್ನು ಇನ್ನೊಬ್ಬರಿಗೆ ಹೇಳುವಷ್ಟು ಸಮರ್ಥನಾಗಿದ್ದೇನೆ. ಮತ್ತು ಇನ್ನು ಇಂತಹ ಹಸ್ತಪ್ರತಿಗಳು ಸಿಕ್ಕರೆ ಅವುಗಳನ್ನು ಸಂಬಂಧಪಟ್ಟವರಿಗೆ ಒಪ್ಪಿಸುತ್ತೇನೆ, ಇದು ನನ್ನ ಆತ್ಮಸಾಕ್ಷಿಯಾಗಿದೆ.

೪. **ಪ್ರದೀಪಕುಮಾರ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಅಳವಂಡಿ**

ನಾಲ್ಕು ದಿನಗಳ ಕಾಲ ಶ್ರೀ ಗವಿಸಿದ್ದೇಶ್ವರ ಕಾಲೇಜಿನಲ್ಲಿ ಆಯೋಜಿಸಿದ್ದ ಹಸ್ತಪ್ರತಿ ಜಾಗೃತಿ ಮತ್ತು ತರಬೇತಿ ಶಿಬಿರದಲ್ಲಿ ಕನ್ನಡ ಸಂಸ್ಕೃತಿ ಸಾಹಿತ್ಯ ಅಧ್ಯಯನ ದೃಷ್ಟಿಯಿಂದ ವಿವಿಧ ರೀತಿಯ ಪ್ರಾಚೀನ ಕಾಲದ ಹಸ್ತಪ್ರತಿಗಳಾದ ಕೋರಿಕಾಗದ, ತಾಡೋಲೆ, ಕಡತಗಳಂತಹ ಮಹತ್ವಯುತ ಆಕರಗಳ ಬಗ್ಗೆ ವಿವಿಧ ವಿದ್ವಾಂಸರಿಂದ ಉಪನ್ಯಾಸ

ನೀಡಿದರು. ಅಲ್ಲದೆ ಶಿಬಿರದಲ್ಲಿ ಹಲವಾರು ಮಹತ್ವದ ವಿಷಯಗಳನ್ನು ಪ್ರಸ್ತಾಪಿಸಿದರು. ಓದು ಕ್ರಮದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿಕೊಟ್ಟಿದ್ದಾರೆ. ಭಾಷೆಯ ಸ್ವರೂಪ, ಲಿಪಿಕಾರರ ಬಗ್ಗೆ ಮತ್ತು ಹಸ್ತಪ್ರತಿ ಸಂರಕ್ಷಣೆಯನ್ನು ಮಾಡುವುದು ಹೇಗೆ ಅದರ ಹಿಂದಿನ ರಹಸ್ಯಮಯವಾದ ವಿಷಯಗಳನ್ನು ತಿಳಿಸಿಕೊಟ್ಟಿದ್ದಾರೆ. ನನ್ನ ಕಡೆಯಿಂದ ಹಾಗೂ ನನ್ನ ಗುರುಗಳ ಕಡೆಯಿಂದ ಮತ್ತು ಸರಕಾರಿ ಪ್ರಥಮ ದರ್ಜೆ ಕಾಲೇಜು ಅಳವಂಡಿ ವತಿಯಿಂದ ಕನ್ನಡ ವಿಶ್ವವಿದ್ಯಾಲಯಕ್ಕೆ ನಾನು ಅಭಾರಿಯಾಗಿದ್ದೇನೆ.

೫. **ಎಂ.ಎಚ್.ಹಾಲವರ, ಶ್ರೀ ಶಂಕರ ಮಹಾವಿದ್ಯಾಲಯ, ನವಲಗುಂದ**

ನಾನು ಈ ಹಸ್ತಪ್ರತಿ ಶಿಬಿರದಲ್ಲಿ ಪಾಲ್ಗೊಂಡಿದ್ದು ನನ್ನ ಪುಣ್ಯ ಅನಸುತ್ತದೆ. ಏಕೆಂದರೆ ಈ ಮೊದಲು ನನಗೆ ಹಸ್ತಪ್ರತಿ ಎಂದರೆ ಏನು? ಅದರ ಮಹತ್ವವೇನು? ಅದು ಹೇಗೆ ಇರುತ್ತದೆ? ಹೀಗೆ ಅದರ ಬಗ್ಗೆ ತಿಳಿದೇ ಇರಲಿಲ್ಲ. ಈ ಶಿಬಿರದಲ್ಲಿ ಪಾಲ್ಗೊಂಡು ಹಸ್ತಪ್ರತಿ ಎಂದರೇನು ಎಂಬುದನ್ನು ಈ ಶಿಬಿರದ ಮುಖಾಂತರ ತಿಳಿದುಕೊಂಡೆನು. ಅಷ್ಟೇ ಅಲ್ಲದೇ ಹಸ್ತಪ್ರತಿಗಳನ್ನು ಕೈಯಾರ ಮುಟ್ಟಿ ಅವುಗಳನ್ನು ಸ್ವಚ್ಚಗೊಳಿಸಿದ್ದು ನನ್ನ ಪುಣ್ಯ ಅಂದುಕೊಂಡಿದ್ದೇನೆ. ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಹಾಗೂ ಆಶ್ರಯ ನೀಡಿದಂತಹ ವೀರಶೈವ ಅಧ್ಯಯನ ಸಂಸ್ಥೆಗೆ ನಾವು ಚಿರಋಣಿಗಳು ಎಂದು ಹೇಳಬಯಸುತ್ತೇನೆ. ಅದೇರೀತಿಯಾಗಿ ಈ ನಾಲ್ಕು ದಿನಗಳ ಶಿಬಿರದಲ್ಲಿ ಉಪನ್ಯಾಸ ನೀಡಿದ ಎಲ್ಲಾ ಉಪನ್ಯಾಸಕರು ಹಸ್ತಪ್ರತಿಯ ಬಗ್ಗೆ ನಮಗೆ ತಿಳಿವಳಿಕೆ ನೀಡಿದ್ದಾರೆ.

೬. **ಬಿ.ಎಸ್.ಹಿರೇಮಠ, ಕೆ.ಎಸ್.ಎಸ್. ಕಲಾ ಮಹಾವಿದ್ಯಾಲಯ, ಮುಳಗುಂದ**

ಈ ಹಸ್ತಪ್ರತಿ ಬಗ್ಗೆ ನಾವು ತಿಳಿದುಕೊಳ್ಳುವಾಗ ನನಗೆ ತುಂಬಾ ಸಂತೋಷವಾಯಿತು. ಕಾರಣ ಇವುಗಳಲ್ಲಿ ನಮಗೆ ಈವರೆಗೆ ಕೆಲವೊಂದು ಕವಿಯ ಕೃತಿಗಳು ಲಭ್ಯವಾಗಿಲ್ಲ. ಇಲ್ಲಿ ನಾವು ಹಸ್ತಪ್ರತಿಯನ್ನು ಸಂಗ್ರಹಿಸುವುದರಿಂದ ನಮಗೆ ಆ ಕೃತಿಗಳು ಲಭ್ಯವಾಗುವ ಆಶಾಕಿರಣಗಳಿವೆ. ಹಸ್ತಪ್ರತಿಶಾಸ್ತ್ರ ವಿಭಾಗದ ವತಿಯಿಂದ ನಡೆದ ಈ ಶಿಬಿರ ಯಶಸ್ವಿಯಾಗಿ ನಡೆಯಿತು. ನಮ್ಮ ಪ್ರಾಚೀನ ಕೃತಿಗಳ ಬಹುಪಾಲು ಹಸ್ತಪ್ರತಿಯಲ್ಲಿ ಕಂಡುಬಂದಿವೆ. ಇವುಗಳ ಸಂರಕ್ಷಣೆ ನಮ್ಮ ಪ್ರಾಚೀನ ಕೃತಿಗಳ ಸಂರಕ್ಷಣೆ, ಹಸ್ತಪ್ರತಿಗಳಿಲ್ಲದೆ ನಮ್ಮ ಚರಿತ್ರೆ ರಚಿಸಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಈ ಶಿಬಿರದಿಂದ ನಾವೆಲ್ಲರೂ ಹಸ್ತಪ್ರತಿ ಎಂದರೇನು? ಅದರ ಸ್ವರೂಪ, ಪ್ರಕಾರ, ಪ್ರಾಚೀನ ಮತ್ತು ಆಧುನಕ ರೀತಿಯಲ್ಲಿ ಅವುಗಳ ಸಂರಕ್ಷಣಾ ವಿಧಾನ ಮತ್ತು ಲಿಪಿಗಳ ಸ್ವರೂಪ ಅವುಗಳ ವೀಕ್ಷಣೆಯನ್ನು ಪಡೆದೆವು. ನನ್ನ ಅಭಿಪ್ರಾಯದಲ್ಲಿ ಶಿಬಿರ ಯಶಸ್ವಿಯಾಗಿದೆ. ಇದನ್ನು ಸಂಘಟಿಸಿದ ಮತ್ತು ಅದಕ್ಕೆ ಅನುವು ಮಾಡಿಕೊಟ್ಟು ಮತ್ತು ಅದರಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

೭. **ಯು.ಕೆ.ಕೋಟೇಶ, ಹರಪನಹಳ್ಳಿ, ವಿಜಯನಗರ ಜಿಲ್ಲೆ**

ತಾಳೆಯೋಲೆ ಪ್ರತಿಗಳು, ಭೂರ್ಜ್ವಪತ್ರಗಳು, ಹೈದರ ನಾಮೆಗಳು ಹಾಗೂ ಲಿಪಿಗಳ ಬಗ್ಗೆ ಸಂರಕ್ಷಣೆಗಳ ಬಗ್ಗೆ ಬಹಳ ಒಳ್ಳೆಯ ಉತ್ತಮ ವಿಚಾರಗಳು ಇವರುಗಳಿಂದ ತಿಳಿದು ಬಂದವು. ಇದು ನನ್ನ ಮಟ್ಟಿಗೆ (ಗ್ರಂಥಪಾಲಕನಾಗಿರುವುದರಿಂದ) ಒಳ್ಳೆಯ ಅಂಶ ತಿಳಿದಂತೆ ಆಯಿತು. ಹಾಗೂ ಮುಂದೆ ಬರುವ ವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯಾರ್ಜನೆ ದೊರೆತಂತಾಯಿತು.

೮. **ಡಾ. ಕೆ.ಆರ್.ಸಿದ್ಧಗಂಗಮ್ಮ, ಉಪನ್ಯಾಸಕಿ, ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ**

ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಲಿಂಗಾಯತ ಸಂಶೋಧನಾ ಕೇಂದ್ರ, ಗ್ರಂಥಾಲಯ ನಾಗನೂರು ಶ್ರೀ ರುದ್ರಾಕ್ಷಿಮಠ ಬೆಳಗಾವಿ ಇವೆರಡರ ಸಂಯುಕ್ತಾಶ್ರಯದಲ್ಲಿ ನಡೆದ ಹಸ್ತಪ್ರತಿ ತರಬೇತಿ ಶಿಬಿರ ಕುರಿತು ನನ್ನ ಕೆಲವು ಅಭಿಪ್ರಾಯಗಳು.

೧. ಇಂತಹ ತರಬೇತಿ ಶಿಬಿರಗಳು ಮತ್ತೆ ಮತ್ತೆ ನಡೆಯಬೇಕು. ಅವು ಹಳ್ಳಿಗಳಲ್ಲಿ ಮತ್ತು ಮಠಗಳಲ್ಲಿ ನಡೆದರೆ ಒಳ್ಳೆಯದು.

೨. ಹಸ್ತಪ್ರತಿಗಳ ಗ್ರಂಥಾಲಯಗಳು ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ನಡೆಯುವಂತಾಗಬೇಕು. ಅದಕ್ಕಾಗಿ ಸರಕಾರ ಮತ್ತು ಮಠಗಳು ಮತ್ತು ಸ್ವಯಂಸೇವಾಸಂಸ್ಥೆಗಳು ನೆರವಾಗಿ ನಿಲ್ಲಬೇಕು.

೩. ಹಸ್ತಪ್ರತಿಗಳನ್ನು ಸಂಸ್ಕೃತಿ ಆಸ್ತಿಯೆಂದು ಪೋಷಿಸಿ ಕಾಪಾಡಬೇಕು. ಅದಕ್ಕಾಗಿ ಇಂತಹ ಶಿಬಿರಗಳು ಪ್ರತಿ ಕಾಲೇಜಿನಲ್ಲಿ ವರ್ಷಕ್ಕೆ ಒಮ್ಮೆಯಾದರೂ ನಡೆದರೆ ವಿದ್ಯಾರ್ಥಿಗಳು ಪ್ರೀತಿಯಿಂದ ಹಸ್ತಪ್ರತಿ ಸಂಗ್ರಹ ಮಾಡುತ್ತಾರೆ.

ಇಪ್ಪತ್ತೈದು ವರ್ಷಗಳ ಈ ರಜತ ಮಹೋತ್ಸವದ ಸಂದರ್ಭದಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗವು ಇಂತಹ ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರಗಳನ್ನು ನಡೆಸಿಕೊಂಡು ಬಂದಿರುವಂತಹ, ಸಂಕ್ಷಿಪ್ತ ವಿವರಗಳ ಪಕ್ಷಿನೋಟವನ್ನು ಪರಿಚಯಾತ್ಮಕವಾಗಿ ಈ ಕೆಳಗೆ ಅವಲೋಕಿಸಬಹುದಾಗಿದೆ.

ಈವರೆಗೆ ನಡೆದ ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರಗಳ ವಿವರಗಳು(೨೦೦೨-೨೦೨೧)

ಕ್ರಸಂ. ಸಹಯೋಗ / ಸ್ಥಳ / ದಿನಾಂಕ / ನಿರ್ದೇಶಕರು

೧. ಲಿಂಗಾಯತ ಸಂಶೋಧನ ಕೇಂದ್ರ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ,
೨೫-೨೮, ಸಪ್ಟಂಬರ್, ೨೦೦೨
ಡಾ. ಎಫ್.ಟಿ.ಹಳ್ಳಿಕೇರಿ

೨. ಲಿಂಗಾಯತ ಅಧ್ಯಯನ ಸಂಸ್ಥೆ, ಜಗದ್ಗುರು ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ
೬-೯, ಅಕ್ಟೋಬರ್, ೨೦೦೩
ಡಾ. ಕೆ.ರವೀಂದ್ರನಾಥ

೩. ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್ಸ್, ನವದೆಹಲಿ ಹಾಗೂ
ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆ, ಶಿವಯೋಗ ಮಂದಿರ, (ಬಾಗಲಕೋಟೆ ಜಿಲ್ಲೆ)
೧-೪, ಸಪ್ಟಂಬರ್, ೨೦೦೪
ಡಾ. ಎಸ್.ಎಸ್.ಅಂಗಡಿ

೪. ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್ಸ್, ನವದೆಹಲಿ ಹಾಗೂ
ಶ್ರೀ ಖಾಸ್ಗತೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತಾಳಿಕೋಟೆ(ಬಿಜಾಪುರ ಜಿಲ್ಲೆ)
೧೯-೨೨ ಫೆಬ್ರವರಿ, ೨೦೦೫
ಡಾ. ಕೆ.ರವೀಂದ್ರನಾಥ

೫. ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ, ಬೀದರ
೩೧ ಆಗಷ್ಟ -೩ ಸಪ್ಟಂಬರ ೨೦೦೫
ಡಾ. ಎಸ್.ಆರ್.ಚನ್ನವೀರಪ್ಪ

೬. ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್ಸ್, ನವದೆಹಲಿ ಹಾಗೂ
ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೪-೭ ಸಪ್ಟಂಬರ್, ೨೦೦೬
ಡಾ. ವೀರೇಶ ಬಡಿಗೇರ

೭. ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ
೨೩-೨೫, ಮಾರ್ಚ, ೨೦೦೮
ಡಾ. ಎಫ್.ಟಿ.ಹಳ್ಳಿಕೇರಿ

೮. ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್ಸ್, ನವದೆಹಲಿ ಹಾಗೂ
ಶಾಂತವೀರ ಕಲಾ ಮಹಾವಿದ್ಯಾಲಯ, ಬಬಲೇಶ್ವರ
೫-೮ ಫೆಬ್ರವರಿ, ೨೦೦೯
ಡಾ. ವೀರೇಶ ಬಡಿಗೇರ

೯. ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ
೮-೧೦, ಫೆಬ್ರವರಿ, ೨೦೧೦
ಡಾ. ಎಫ್.ಟಿ.ಹಳ್ಳಿಕೇರಿ

೧೦. ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ ಹಾಗೂ
ಕೂಡಲಸಂಗಮ ಅಭಿವೃದ್ಧಿ ಮಂಡಳಿ, ಕೂಡಲಸಂಗಮ
೨೬-೨೮, ಫೆಬ್ರವರಿ, ೨೦೧೦
ಡಾ. ಎಸ್.ಎಸ್. ಅಂಗಡಿ

೧೧. ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್ಸ್, ನವದೆಹಲಿ ಹಾಗೂ
ಪಿ.ಇ.ಟಿ.ಯ ಭಂಡಾರಿ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು, ಗುಳೇದಗುಡ್ಡ
೯-೧೧, ಆಗಷ್ಟ್, ೨೦೧೧
ಡಾ. ವೀರೇಶ ಬಡಿಗೇರ

೧೨. ಕರ್ನಾಟಕ ಸಂಘ ಮಂಡ್ಯ ಹಾಗೂ ಮಹಿಳಾ ಸರಕಾರಿ ಪದವಿ ಕಾಲೇಜು, ಮಂಡ್ಯ
೨೫-೨೭, ಎಪ್ರಿಲ್, ೨೦೧೩
ಡಾ. ಎಫ್.ಟಿ.ಹಳ್ಳಿಕೇರಿ

೧೩. ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ, ಶ್ರವಣಬೆಳಗೊಳ
೨೪-೨೬, ನವಂಬರ್, ೨೦೧೩
ಡಾ. ಕೆ.ರವೀಂದ್ರನಾಥ

೧೪. ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗ ವಿಶ್ವವಿದ್ಯಾಲಯ, ಕಲಬುರ್ಗಿ
೨೭-೩೦, ಸಪ್ಟಂಬರ್, ೨೦೧೪
ಡಾ. ಎಸ್.ಆರ್.ಚನ್ನವೀರಪ್ಪ

೧೫. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ
೩-೬, ಫೆಬ್ರವರಿ, ೨೦೧೬
ಡಾ. ಎಸ್.ಎಸ್.ಅಂಗಡಿ

೧೬. ಶ್ರೀ ವಿಜಯ ಮಹಾಂತೇಶ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಇಳಕಲ್ಲ
೧೭-೨೦, ಅಕ್ಟೊಬರ, ೨೦೧೬
ಡಾ. ಕೆ.ರವೀಂದ್ರನಾಥ

೧೭. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
೨೦-೨೩, ಸಪ್ಟಂಬರ್ ೨೦೧೭
ಡಾ. ಎಫ್.ಟಿ.ಹಳ್ಳಿಕೇರಿ

೧೮. ಡಿ.ವಿ.ಜಿ. ಕನ್ನಡ ಅಧ್ಯಯನಕೇಂದ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು
೨೫-೨೮, ಸಪ್ಟಂಬರ್, ೨೦೧೮
ಡಾ. ವೀರೇಶ ಬಡಿಗೇರ

೧೯. ಶ್ರೀ ಗವಿಸಿದ್ಧೇಶ್ವರ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕೊಪ್ಪಳ
೩-೬, ಅಕ್ಟೋಬರ, ೨೦೧೯
ಡಾ. ಎಫ್.ಟಿ.ಹಳ್ಳಿಕೇರಿ

೨೦. ವಿಜಯನಗರ ಕಾಲೇಜು, ಹೊಸಪೇಟೆ
೨೭-೩೦, ಜನವರಿ, ೨೦೨೧
ಡಾ. ಕೆ.ರವೀಂದ್ರನಾಥ

೨೧. ಸಿ.ಎಂ.ಮಾಮನಿ ಸರಕಾರಿ ಪ್ರಥಮದರ್ಜೆ ಕಾಲೇಜು, ಯರಗಟ್ಟಿ
೨೪-೨೭ ಆಗಸ್ಟ್, ೨೦೨೧
ಡಾ. ವೀರೇಶ ಬಡಿಗೇರ

೭

ಹಳಗನ್ನಡ ಸಾಹಿತ್ಯ ಬೋಧನ ತರಬೇತಿ ಶಿಬಿರಗಳು

ಎಸ್.ಎಸ್. ಅಂಗಡಿ

ಯಾವುದೇ ಸಾಹಿತ್ಯ ಜೀವಂತವಾಗಿರಬೇಕಾದರೆ ಅದು ಬೆಳೆಯಬೇಕು, ಹೊಸ ಹೊಸ ದಿಕ್ಕುಗಳತ್ತ ಮುಖ ಮಾಡಬೇಕು. ಹೊಸ ಹೊಸ ಪ್ರಯೋಗಗಳಿಗೆ ಕೈ ಹಾಕಬೇಕು. ನಮ್ಮ ಹಿಂದಿನ ಸಾಹಿತ್ಯ ಸಂಪಾದನೆಯಾಗಿ ಪುಸ್ತಕಗಳಲ್ಲಿ ಉಳಿದುಕೊಳ್ಳುತ್ತಿದೆ. ಅದು ಈಗ ಓದುಗರ ಅಧ್ಯಯನದ ವಸ್ತುವಾಗಿ ಉಳಿಯುತ್ತಿಲ್ಲ ಮತ್ತು ಅದನ್ನು ಓದಬೇಕಾದವರು ಆ ಬಗ್ಗೆ ಅನಾದಾರವನ್ನು ತೋರುತ್ತಿದ್ದಾರೆ. ಪಶ್ಚಿಮದ ನಾಗರಿಕತೆಯ ನಮ್ಮ ಜೀವನದ ಎಲ್ಲ ಮುಖಗಳನ್ನೂ ವ್ಯಾಪಿಸಿರುವಂತೆ ಅಲ್ಲಿನ ಸಾಹಿತ್ಯವೂ ನಮ್ಮ ಜನರ ಕಣ್ಣು ಕೋರೈಸುವಷ್ಟು ನಮ್ಮ ಶ್ರೀಮಂತ ಸಾಹಿತ್ಯಕ ಪರಂಪರೆಯನ್ನು ಕುರುಡರನ್ನಾಗಿ ಮಾಡುವಷ್ಟು ಪ್ರಮುಖವಾಗಿ ನಿಂತಿದೆ. ಪಾಶ್ಚಾತ್ಯ ಸಾಹಿತ್ಯವನ್ನು ಓದಿಕೊಂಡು ಕನ್ನಡ ಆಧುನಿಕ ಕೃತಿಗಳ ಅಧ್ಯಯನದಿಂದ ಭಾಷೆಯನ್ನು ರೂಪಿಸಿಕೊಂಡರೆ ಸಾಕು, ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡಲು ಸಾಧ್ಯವೆಂಬ ನಂಬಿಕೆ ಹಲವರಲ್ಲಿ ಉಂಟು. ಅಂತಹವರ ಬರೆಹ ನಮ್ಮ ಜನಕ್ಕೆ ಶ್ರೇಷ್ಠವಾಗಿಯೂ ಕಾಣಬಹುದು. ಯಾವುದಾದರೂ ಭಾಷೆಯಲ್ಲಿ ಅದರ ಹಿಂದಿನ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸದೆ ಸಾಹಿತ್ಯವನ್ನು ಕೃಷಿ ಮಾಡಲು ಸಾಧ್ಯವಿಲ್ಲ.

ಕನ್ನಡದ ಸಂದರ್ಭವನ್ನು ಅನುಲಕ್ಷಿಸಿ ಹೇಳುವುದಾದರೆ ನಮ್ಮ ಹಿಂದಿನ ಸಾಹಿತ್ಯದಲ್ಲಿ ಸಾಕಷ್ಟು ಸಂಖ್ಯೆಯ ಸತ್ವಪೂರ್ಣ ಕೃತಿಗಳಿವೆಯೆಂಬ ಬಗ್ಗೆ ಅನುಮಾನವಿಲ್ಲ. ಕನ್ನಡ ಸಾಹಿತ್ಯಕ್ಕೆ ಬಹುದೊಡ್ಡ ಪರಂಪರೆಯಿದೆ. ಇಂದಿನ ಅನೇಕ ಸಾಹಿತಿಗಳು ಪಂಪ, ರನ್ನ, ಜನ್ನ, ನಾಗಚಂದ್ರ, ಬಸವ, ಅಲ್ಲಮ, ಹರಿಹರ, ಚಾಮರಸ, ಕುಮಾರವಾಸ, ಲಕ್ಷ್ಮೀಶರನ್ನು ಅಭ್ಯಸಿಸುವುದಾದರೆ ಅವರ ಭಾಷಿಕ ಸಂವೇದನೆ ಇನ್ನೂ ಆಳವಾಗುತ್ತದೆಂಬಲ್ಲಿ ಸಂದೇಹವಿಲ್ಲ ಮತ್ತು ಅವರು ತಮ್ಮ ಪರಂಪರೆಯನ್ನು ಕನ್ನಡ ಕವಿಗಳಲ್ಲಿ ಕಂಡುಕೊಳ್ಳುವಂತಹ ಕಾಲ ಬರಬೇಕಾಗಿದೆ. ಅದಕ್ಕೆ ಸಂವಹನ ಪಾತಳಿಯ ನೆಲೆಯಲ್ಲಿ ಪ್ರಾಚೀನ ಪಠ್ಯಗಳನ್ನು ಪಾಠಮಾಡುವ ವಿಧಾನದಲ್ಲಿ ಬದಲಾವಣೆಯನ್ನು ತರಬೇಕಾಗಿದೆ.

ನಮ್ಮ ಹಿಂದಿನ ಸಾಹಿತ್ಯದಕಡೆಗೆ ವಿದ್ಯಾರ್ಥಿಗಳನ್ನು, ಆಸಕ್ತರನ್ನು, ಓದುಗರನ್ನು, ಉಪಾಧ್ಯಾಯರನ್ನು ಸಜ್ಜುಗೊಳಿಸಬೇಕಾದರೆ ಹಾಗೂ ಅವರ ಅರಿವಿನ ಎಲ್ಲೆಯನ್ನು ವಿಸ್ತರಿಸಬೇಕಾದರೆ ಮುದ್ರಿತ ಪಾಠಗಳಲ್ಲಿರುವ

ಕೊರತೆಗಳನ್ನು ಸರಿಪಡಿಸಿ ಮೂಲಲಯಕ್ಕೆ ಧಕ್ಕೆ ಆಗದಂತೆ ಪದ್ಯಗಳನ್ನು ಸಂಧಿ, ಸಮಸ್ತ ಪದಗಳನ್ನು ಅರ್ಥಾನುಗತವಾಗಿ ವಿಂಗಡಿಸಿ ಉಚಿತ್ತಕ್ಕೆ ತಕ್ಕಂತೆ ಟಿಪ್ಪಣಿಗಳನು ಸಿದ್ಧಪಡಿಸಿ ಉಪನ್ಯಾಸ ಪದ್ಧತಿಯ ಜೊತೆ ಚರ್ಚಾ ಪದ್ಧತಿಯೂ ಸಹಿತ ತುಂಬ ಅಗತ್ಯವಾಗಿದೆ. ಕಾವ್ಯದ ಆಶಯ, ಕವಿಯ ಭಾವನೆ, ಅಭಿವ್ಯಕ್ತಿಸುವ ರೀತಿ, ಕಾವ್ಯದ ಭಾಷೆ, ಶೈಲಿ, ಅಲಂಕಾರ, ಛಂದೋವೈವಿಧ್ಯವನ್ನು ಕಾವ್ಯದ ರಸಘಟ್ಟಗಳ ನೆಲೆಯನ್ನು ಸಮೀಕರಿಸಿ ಪಾಠಮಾಡಿದರೆ. ಹಳಗನ್ನಡ ಪಠ್ಯಗಳು ಆಸಕ್ತಿಯುತವಾಗುತ್ತವೆ. ಹಳಗನ್ನಡ ಪದ್ಯಗಳು ಆಯಾ ಕವಿಯ ಅನುಭವಜನ್ಯವಾದುದು ಪಂಪನಂತಹ ಕವಿಗಳು ತಮ್ಮ ಕಾವ್ಯದಲ್ಲಿ ಪುರವರ್ಣನೆ ಮಾಡುವಾಗ ಹಾಗೂ ತಮ್ಮಕಾಲದ ದುಕಿನ ಚಿತ್ರಣವನ್ನು ಕೊಡುವಾಗ ಸ್ವಭಾವೋಕ್ತಿ ಅಲಂಕಾರದಲ್ಲಿ ಅಭಿವ್ಯಕ್ತಿಸುತ್ತಾರೆ. ಅದನ್ನು ಪಾಠ ಮಾಡುವಾಗ ಉಪಾದ್ಯಾಯರು ಕವಿಯ ಮನಸ್ಸನ್ನು ಹೊಕ್ಕು ವಿದ್ಯಾರ್ಥಿಗಳಿಗೆ ಮನಗಾಣುವಂತೆ ಪಾಠ ಮಾಡಿದರೆ ಕಾವ್ಯದ ಮುಖ್ಯ ಆಶಯವಾದ ರಸಾನಂದ ಉಂಟಾಗುತ್ತದೆ.

ಹಸ್ತಪ್ರತಿಶಾಸ್ತ್ರ ವಿಭಾಗವು ಪ್ರತಿವರ್ಷ ಹಳಗನ್ನಡ ಸಾಹಿತ್ಯ ಬೋಧನ ಶಿಬಿರಗಳನ್ನು ಏರ್ಪಡಿಸುತ್ತದೆ. ಶಿಬಿರದಲ್ಲಿಯ ಹಳಗನ್ನಡ ಪಾಠಬೋಧನೆಯ ಸ್ವರೂಪ ಹೀಗಿದೆ: ಒಂದು ಉದಾಹರಣೆ ಮೂಲಕ ಅದನ್ನು ಸ್ಪಷ್ಟ ಪಡಿಸಬಹುದು. ಜನ್ನನ ಯಶೋಧರಚರಿತೆಯ ಒಂದು ಮುಖ್ಯವಾದ ಪ್ರಸಂಗ ಬರುತ್ತದೆ. ಅಮೃತಮತಿಯು ಅಷ್ಟವಂಕನ ಸಂಗೀತಕ್ಕೆ ಮಾರುಹೋಗಿ ಅವನನ್ನು ಪ್ರೀತಿಸಲು ಯತ್ನಿಸುತ್ತಾಳೆ. ಆಕೆಯ ಸೇವಕಿಯರು ಬೇಡವೆಂದರೂ ಅಮೃತಮತಿ ಕೇಳುವುದಿಲ್ಲ ಆಗ ಬರುವ ಪದ್ಯ ಹೀಗಿದೆ:

ಕರಿದಾದೊಡೆಕತ್ತುರಿಯಂ
ಮುರುಡಾದೊಡೆ ಮಲಯ ಜಂಗಳಂ ಕೊಂಕಿದೋಡೇಂ
ಸ್ಮರಚಾಪಮನಿಳಿಕಯ್ವರೆ
ಮರುಳೇ ಪೊಲ್ಲಮೆಯ ಲೇಸು ನಲ್ಲರ ಮೆಯ್ಯಾಳ್ –(೨–೨೪)

ಈ ಪದ್ಯವನ್ನುಅರ್ಥಾನುಗತವಾಗಿ ವಿಂಗಡಿಸಿದಾಗ

ಕರಿದಾದೊಡೆ;
ಕತ್ತುರಿಯಂ;
ಮುರುಡಾದೊಡೆ;
ಮಲಯಜಂಗಳಂ;
ಕೊಂಕಿದೊಡೆಏಂ;
ಸ್ಮರಚಾಪಮನ್;
ಇಳಿಕಯ್ವರೆ ಮರುಳೇ;
ಪೊಲ್ಲಮೆಲೇಸು;
ನಲ್ಲರ ಮೇಯ್ಯೊಳ್;

ಈ ಪದ್ಯದ ಪದಶಃ ಅರ್ಥ ಹೇಳಿದಾಗ

ಕರಿದಾದೊಡೆ-ಕಪ್ಪಾಗಿದ್ದರೂ, ಕತ್ತುರಿಯಂ-ಕಸ್ತೂರಿ(ಸಂ)ಯನ್ನು, ಮುರುದಾದೊಡೆ-ವಕ್ರ, ಸೊಟ್ಟು, ಒರಟಾಗಿ ಮಲಯಜಂಗಳಂ ಶ್ರೀಗಂಧವನ್ನು(ಕೊರಡುಗಳನ್ನು), ಕೊಂಕಿದೊಡೆ+ಏಂ-ವಕ್ರವಾಗಿದ್ದರೆಏನಾಯಿತು? ಸ್ಮರಚಾಪಮನ್-(ಸ್ಮರನ-ಮನ್ಮಥನ, ಚಾಪ-ಬಿಲ್ಲು), ಕಾಮನ ಬಿಲ್ಲು, ಇಳಿಕಯ್ವರೆ-ತಿರಸ್ಕರಿಸುವರೇ?(ಇಲ್ಲ ಎಂದು ಅರ್ಥ). ಆದ್ದರಿಂದ, ಮರುಳೇ=ಹುಚ್ಚಿ, ಪ್ರೇಮವೊಂದಿದ್ದರೆ, ನಲ್ಲರ-ಪ್ರಿಯರ, ಮೆಯ್ಯೊಳ್-ದೇಹದಲ್ಲಿರುವ, ಪೊಲ್ಲಮೆಯೆ, ದೋಷವೇ, ಲೇಸು-ಗುಣ(ವಾಗಿ ಪರಿಣಮಿಸುವುದು).

ಪದ್ಯದ ಪದಶಃ ಅರ್ಥ ಹೇಳಿದ ನಂತರ ಅದರ ಸಾರಾಂಶವನ್ನು ಹೇಳಲಾಗುತ್ತದೆ; "ಕಸ್ತೂರಿಯ ಬಣ್ಣ ಕಪ್ಪು ಅದನ್ನು ಆ ಬಣ್ಣದಿಂದಾಗಿ ಕಡೆಗಾಣಿಸುವವರಿದ್ದಾರೆಯೇ? ಗಂಟುಗಂಟಾಗಿ ಇದೆಯೆಂದು ಗಂಧದ ಕೊರಡನ್ನು ತಿರಸ್ಕರಿಸುತ್ತಾರೆಯೇ? ಕಾಮನಬಿಲ್ಲು ಕೊಂಕಾಗಿದ್ದರೂ ಅದನ್ನು ಯಾರು ಹೀನಯಿಸುವುದಿಲ್ಲ! ಮರುಳೇ ನಮ್ಮ ಮೆಚ್ಚಿನವರ ಮೆಯ್ಯಲ್ಲಿ ದೋಷವಿದ್ದರೆ ಅದೇ ಅವರ ಮೇಲ್ಮೆಯೆನಿಸುತ್ತದೆ" ನಂತರ ಉಪಾಧ್ಯಾಯ ಆ ಪದ್ಯದ ಸಂದೇಶ ಹೇಳಬೇಕು. ಪ್ರೇಮಕ್ಕೆ ಮುಖ್ಯವಾದುದು ರೂಪವಲ್ಲ; ಮನಸ್ಸು, ಪ್ರೀತಿಯೊಂದಿದ್ದರೆ ರೂಪದಿಂದೇನು ಇನ್ನೂ ಮುಂದೆ ಹೋಗಿ ಅಮೃತಮತಿ ಹೇಳುವ ಮಾತು ತುಂಬ ಮಾರ್ಮಿಕವಾಗಿದೆ.

> ಒಲವಾದೊಡೆರೂಪಿನಕೋ
> ಟಲೆಯೇವುದೊಕಾರ್ಯಮಾಗೆಕಾರಣದಿಂದಂ
> ಫಲಮೇನಿಂದೆನಗಾತನೆ
> ಕುಲದೈವಂಕಾಮದೇವನಿಂದ್ರಚಂದ್ರಂ -(೨-೪೩)

ಪದ್ಯವನ್ನು ಅರ್ಥಾನುಗತವಾಗಿ ವಿಂಗಡಿಸಿದಾಗ

> ಒಲವಾದೊಡೆರೂಪಿನ;
> ಕೋಟಲೆಏವುದೊ;
> ಕಾರ್ಯಂಆಗೆ;
> ಕಾರಣದಿಂದಂ;
> ಫಲಮೇದ್?;
> ಇಂದು ಎನಗೆ
> ಆತನೆಕುಲದೈವಂ;
> ಕಾಮದೇವಂ
> ಇಂದ್ರಚಂದ್ರಂ

ನಂತರ ಉಪಾಧ್ಯಾಯರು ಆ ಪದ್ಯದ ಪದಶಃ ಅರ್ಥ ಹೇಳಬೇಕು.

ಮೇಲಾಗಿ ಒಲವಾದೊಡೆ-ಪ್ರೀತಿಯುಂಟಾದರೆ ಸಾಕು, ರೂಪಿನ ಸೌಂದರ್ಯದ, ಚೆಲುವಿನ. ಕೋಟಲೆ-ಕಾಟ, ಚಿಂತೆ, ಏವುದೊ-ಏನು ಮಾಡುವುದು? ಕಾರ್ಯಂ+ಆಗ-ನಾವು ಬಯಸಿದ ಕೆಲಸವು ಕೈಗೂಡಲಾಗಿ, ಕಾರಣದಿಂದ-ಆ ಕಾರ್ಯ ಕೈಗೂಡಲು ಮೂಲಭೂತವಾದ ಕಾರಣದಿಂದ, ಫಲಮೇನ್-ಫಲವೇನು? ಎಂದರೆ ಏನು ಉಪಯೋಗ ಎಂದು ಅರ್ಥ(ನನಗೂ ಮಾವಟಿಗನಿಗೂ ಸಂಪರ್ಕವುಂಟಾಗಿ ಅವನಿಂದ ಸುಖ ದೊರಕಿದರೆ ಸಾಕು. ಮಿಕ್ಕ

ವಿಷಯಗಳಿಂದೇನು ಪ್ರಯೋಜನ?). ಹೀಗಿರುವ, ಇಂದು-ಈ ಸಮಯದಲ್ಲಿ, ಎ(ನ)ನಗೆ, ಆ ಅಪ್ಷಾವಂಕನೆ, ಕುಲದೈವಂ-ಕುಲದೇವತೆಯಂತೆ ಆರಾಧನೆಗೆ ಅರ್ಹನಾದವನು, ಕಾಮದೇವಂ-ನನ್ನ ಭಾಗದ ಮನ್ಮಥ, ಇಂದ್ರಂ-ಇಂದ್ರನಂತೆ ಭೋಗಪ್ರದನಾದವನು, ಹಾಗೂ ಚಂದ್ರಂ-ಚಂದ್ರನಂತೆ ಹಿತಕರನಾದವನು.

ಆ ಪದ್ಯದ ಸಾರಾಂಶ ಮತ್ತು ಸಂದೇಶವನ್ನು ಹೊಸಗನ್ನಡದಲ್ಲಿ ವಿವರಿಸಬೇಕು. ಪ್ರೀತಿಯೊಂದಿಗೆ ರೂಪದಿಂದೇನು? ಬಯಸಿದ ಕಾರ್ಯ ಕೈಗೂಡಿ ಫಲಕೊಟ್ಟಾಗ ಆ ಕಾರ್ಯದ ಕಾರಣವನ್ನು ಹುಡುಕಿ ಫಲವೇನು? ಈ ಸಮಯದಲ್ಲಿ ಆ ಅಪ್ಷವಂಕನೆ, ನನಗೆ ಕುಲದೈವ, ಕಾಮದೇವ, ಇಂದ್ರಚಂದ್ರ, ಕಾಮಕ್ಕೆ ಕಣ್ಣಿಲ್ಲ ಮನಸಿಗೆ ಮಾತ್ರ ಸಾಧ್ಯರೂಪ ಮುಖ್ಯವಲ್ಲ ಎಂಬುದು ಜನ್ನನ ಸಂದೇಶವಾಗಿದೆ.

ಈ ಮಾದರಿಯಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗವು ಸುಮಾರು ೧೮ ವರ್ಷಗಳಿಂದ ಹಳಗನ್ನಡ ಬೋಧನ ತರಬೇತಿ ಶಿಬಿರ ನಡೆಸಿದೆ. ಪ್ರಮುಖ ಹಳಗನ್ನಡ ಕೃತಿಗಳಾದ ವಡ್ಡಾರಾಧನೆ, ಕವಿರಾಜಮಾರ್ಗ, ಆದಿಪುರಾಣ, ಪಂಪಭಾರತ, ಗದಾಯುದ್ಧ, ನಡುಗನ್ನಡ ರಸವತ್ತಾದ ಪದ್ಯ ಮತ್ತು ಗದ್ಯಭಾಗಗಳು ವ್ಯಾಕರಣ, ಛಂದಸ್ಸು, ಅಲಂಕಾರ ಮುಂತಾದ ಭಾಷಾ ವೈಶಿಷ್ಟ್ಯಗಳನ್ನು ಹಾಗೂ ಅವುಗಳ ಆಧುನಿಕ ವಿಚಾರಧಾರೆಗಳನ್ನು -ಈ ಎಲ್ಲ ಅಂಶಗಳನ್ನು ತಜ್ಞರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ದಶಮಾನೋತ್ಸವ ಮತ್ತು ಕನ್ನಡ ನಾಡಿನಶ್ರೇಷ್ಠ ವಿದ್ವಾಂಸರಾದ ಡಾ. ಡಿ.ಎಲ್. ನರಸಿಂಹಾಚಾರ್ ಅವರ ಜನ್ಮ ಶತಮಾನೋತ್ಸವವನ್ನು ಆಚರಿಸಲಾಯಿತು(೨೦೦೬). ಆ ಸಂದರ್ಭದಲ್ಲಿ ಡಿ.ಎಲ್.ನರಸಿಂಹಾಚಾರರ್ಯರ ಕುಟುಂಬ ವರ್ಗದವರು ಡಿ.ಎಲ್.ಎನ್. ಹೆಸರಿನಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ಒಂದು ಲಕ್ಷನಿಧಿಯನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಿದರು. ಆ ದತ್ತಿನಿಧಿಯನ್ನು ಡಿ.ಎಲ್.ಎನ್. ಅವರ ಕಾರ್ಯಕ್ಷೇತ್ರವಾಗಿದ್ದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಂಯೋಜನೆ ಮಾಡಲಾಯಿತು. ವಿಭಾಗವು ಪ್ರತಿ ವರ್ಷ ಡಿ.ಎಲ್.ಎನ್ ಅವರ ಕಾರ್ಯಕ್ಷೇತ್ರಗಳಾದ ಹಸ್ತಪ್ರತಿ, ಗ್ರಂಥಸಂಪಾದನೆ, ಹಳಗನ್ನಡ ಸಾಹಿತ್ಯ ಈ ವಿಷಯಗಳನ್ನು ಕುರಿತು ಶಿಬಿರಗಳನ್ನು ಕರ್ನಾಟಕದ ಬೇರೆ ಬೇರೆ ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ ಅರ್ಥಪೂರ್ಣವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಆರಂಭದಲ್ಲಿ ಕಾಲೇಜು ಕನ್ನಡ ಉಪನ್ಯಾಸಕರಿಗೆ, ಕ್ರಮೇಣ ಕಾಲೇಜು ಉಪನ್ಯಾಸಕರ ಜೊತೆಗೆ ಮಾಧ್ಯಮಿಕ ಶಾಲೆಯಲ್ಲಿ ಕನ್ನಡವನ್ನು ಬೋಧಿಸುವ ಶಿಕ್ಷಕರಿಗೆ ಹಳಗನ್ನಡ ಸಾಹಿತ್ಯವನ್ನು ಯಾವರೀತಿ ಬೋಧಿಸಬೇಕು ಎಂಬುದರ ಬಗ್ಗೆ ತಜ್ಞರಿಂದ ಉಪನ್ಯಾಸ ಕಾರ್ಯಕ್ರಮವನ್ನು ಏಪಡಿಲಾಗುತ್ತಿತ್ತು. ಒಂದು ವಾರದ ನಾಲ್ಕು ದಿವಸಗಳ ಕಾಲ ನಿರಂತರವಾಗಿ ಈ ಶಿಬಿರ ನಡೆಯುತ್ತದೆ. ಈ ಶಿಬಿರದ ಫಲವಾಗಿ ವಿದ್ಯಾರ್ಥಿಗಳಿಗೆ, ಉಪಾಧ್ಯಾಯರಿಗೆ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ, ಅಭಿರುಚಿ ಮೂಡಿತು, ಪದ್ಯದಲ್ಲಿ ಬರುವಜೀವನ ಮೌಲ್ಯಗಳ ಬಗ್ಗೆ ತಿಳಿಯುವಂತಾಯಿತು. ಪದ್ಯಗಳ ಛಂದೋಲಾಲಿತ್ಯ, ಭಾಷಾವಿಶೇಷತೆ, ಓದುವ ವೈಖರಿ ತಿಳಿಯಿತು. ಒಟ್ಟಾರೆ ಈ ಶಿಬಿರಗಳು ತುಂಬ ಪರಿಣಾಮಕಾರಿಯಾಗಿ ನಡೆಯುತ್ತವೆ. ಹಸ್ತಪ್ರತಿಸಾಸ್ತ್ರ ವಿಭಾಗದ ಪ್ರಾಧ್ಯಾಪಕರು ಪ್ರತಿವರ್ಷ ಒಬ್ಬೊಬ್ಬರು ಶಿಬಿರದ ನಿರ್ದೇಶಕರಾಗಿರುತ್ತಾರೆ. ಆ ಶಿಬಿರಗಳು ನಡೆದ ಸ್ಥಳ, ಶಿಬಿರದ ನಿರ್ದೇಶಕರು ವಿವರ ಹೀಗಿದೆ.

ಹಳಗನ್ನಡ ಸಾಹಿತ್ಯ ಬೋಧನ ತರಬೇತಿ ಶಿಬಿರಗಳ ವಿವರಗಳು ೨೦೦೩-೨೦೨೧

ಕ್ರಸಂ	ಸಹಯೋಗ/ಸ್ಥಳ	ದಿನಾಂಕ	ನಿರ್ದೇಶಕರು
೧	ಹಾ.ಮಾ.ನಾಯಕ ಸಂಶೋಧನ ಕೇಂದ್ರ, ಎಸ್.ಡಿ.ಎಂ. ಕಾಲೇಜು ಉಜಿರೆ	೩-೬ ಮಾರ್ಚ್ ೨೦೦೭	ಡಾ. ಎಫ್.ಟಿ.ಹಳ್ಳಿಕೇರಿ
೨	ಬಿ.ಆರ್.ದರೂರ ಸಂಶೋಧನ ಕೇಂದ್ರ, ಹಾರೂಗೇರಿ		ಡಾ. ಎಸ್.ಆರ್.ಚನ್ನವೀರಪ್ಪ
೩	ಅಂಜುಮನ್ ಪದವಿ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಭಟ್ಕಳ	೭-೯, ಏಪ್ರಿಲ್, ೨೦೦೯	ಡಾ. ಎಫ್.ಟಿ.ಹಳ್ಳಿಕೇರಿ
೪	ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ, ಬಾಗಲಕೋಟ	೨೯-೩೧, ಜನವರಿ, ೨೦೧೦	ಡಾ. ಕೆ.ರವೀಂದ್ರನಾಥ
೫	ಡಾ. ವೀರೇಂದ್ರ ಹೆಗ್ಗಡೆ ಸಂಶೋಧನ ಕೇಂದ್ರ, ಜೆ.ಎಸ್.ಎಸ್. ಕಾಲೇಜು, ಧಾರವಾಡ	೨೬-೨೮, ಮಾರ್ಚ್ ೨೦೧೧	ಡಾ. ಎಫ್.ಟಿ.ಹಳ್ಳಿಕೇರಿ
೬	ಕೆ.ಆರ್.ಬೆಲ್ಲದ ಪದವಿ ಮಹಾವಿದ್ಯಾಲಯ, ಮುಂಡರಗಿ	೨೬-೨೭, ಸಪ್ಟಂಬರ್, ೨೦೧೨	ಡಾ. ಎಸ್.ಆರ್.ಚನ್ನವೀರಪ್ಪ
೭.	ಬಸವೇಶ್ವರ ಕಾಲೇಜು, ಬಸವನಬಾಗೇವಾಡಿ	೧-೪ ಫೆಬ್ರವರಿ, ೨೦೧೩	ಡಾ. ಎಸ್.ಎಸ್.ಅಂಗಡಿ
೮.	ಎಸ್.ಜೆ.ಪಿ.ಎನ್. ಟ್ರಸ್ಟ್‌ನ ಕಮ್ಯುನಿಟಿ ಪಾಲಿಟೆಕ್ನಿಕ್ ಹಾಗೂ ಇತರ ಅಂಗಸಂಸ್ಥೆಗಳು, ನಿಡಸೋಸಿ	೨-೪ ಅಕ್ಟೋಬರ್ ೨೦೧೩	ಡಾ. ವೀರೇಶ ಬಡಿಗೇರ
೯.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಧಾರವಾಡ ಹಾಗೂ ಡಾ. ಎಚ್.ಎಫ್.ಕಟ್ಟೀಮನಿ ಪ್ರೌಢ ಶಿಕ್ಷಣ ಪ್ರತಿಷ್ಠಾನ, ಕನ್ನಡ ಸಮೂಹ ಕೇಂದ್ರ ಸಮಿತಿ, ಧಾರವಾಡ	೫-೮, ಆಗಸ್ಟ್ ೨೦೧೪	ಡಾ. ಎಸ್.ಎಸ್.ಅಂಗಡಿ
೧೦.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಹಾಗೂ ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿಮಿಟೆಡ್, ತೋರಣಗಲ್ಲು	೫-೮ ಆಗಸ್ಟ್ ೨೦೧೫	ಡಾ. ವೀರೇಶ ಬಡಿಗೇರ

೧೧. ರನ್ನ ಪ್ರತಿಷ್ಠಾನ. ಮುಧೋಳ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬಾಗಲಕೋಟ,
ಕನ್ನಡ ಜಾನಪದ ಪರಿಷತ್ತು ಜಿಲ್ಲಾ ಘಟಕ, ಬಾಗಲಕೋಟ
ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕ ಮುಧೋಳ
೨೦-೨೩, ಸಪ್ಟಂಬರ್, ೨೦೧೬ ಡಾ. ವೀರೇಶ ಬಡಿಗೇರ

೧೨ ಕೇಂದ್ರಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು,
ಬಾಗಲಕೋಟ ಹಾಗೂ ಸಾರ್ವಜನಕ ಶಿಕ್ಷಣ ಇಲಾಖೆ, ಬಾಗಲಕೋಟ
೨೭-೩೦ ಡಿಸೆಂಬರ್, ೨೦೧೭ ಡಾ. ವೀರೇಶ ಬಡಿಗೇರ

೧೩ ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ,
ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಹೊಸಪೇಟೆ
ಹಾಗೂ ಕನ್ನಡ ಭಾಷಾ ಶಿಕ್ಷಕರ ಸಂಘ, ಬಳ್ಳಾರಿ
ಮತ್ತು ಸರಕಾರಿ ಪ್ರೌಢ ಶಾಲೆ ರಾಮಸಾಗರ (ಕಂಪ್ಲಿ ತಾಲೂಕ)
೮-೧೧ ಜನವರಿ, ೨೦೧೯ ಡಾ. ಎಫ್.ಟಿ.ಹಳ್ಳಿಕೇರಿ

೧೪ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆ, ಕಲ್ಲೋಳಿ,
(ಮೂಡಲಗಿ ತಾಲೂಕ, ಬೆಳಗಾವಿ ಜಿಲ್ಲೆ)
೧೪-೧೭ ಅಕ್ಟೋಬರ, ೨೦೧೯ ಡಾ. ಕೆ.ರವೀಂದ್ರನಾಥ

೧೫ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಗಂಗಾವತಿ
ಹಾಗೂ ಕನ್ನಡ ಭಾಷಾ ಬೋಧಕರ ವೇದಿಕೆ, ಗಂಗಾವತಿ
೫-೮ ಜನವರಿ ೨೦೨೧ ಡಾ. ಎಫ್.ಟಿ.ಹಳ್ಳಿಕೇರಿ

೧೬ ಶಿವಾನಂದ ಮಹಾವಿದ್ಯಾಲಯ, ಕಾಗವಾಡ
೬-೯ ಸಪ್ಟಂಬರ್, ೨೦೨೧ ಡಾ. ಕೆ.ರವೀಂದ್ರನಾಥ

❑❑

೮

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ

ಎಸ್.ಆರ್. ಚನ್ನವೀರಪ್ಪ

ಈ ಕಾರ್ಯಕ್ರಮಕ್ಕೆ ಮೊದಲ ಬಾರಿಗೆ ಅಧಿಕೃತವಾಗಿ ಚಾಲನೆ ನೀಡಿದವರೆಂದರೆ ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು. ಈ ಸಪ್ತಾಹ ಕಾರ್ಯಕ್ರಮದ ಆಶಯವೇನೆಂದರೆ, ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಕುರುಹುಗಳನ್ನು ಸಂರಕ್ಷಿಸಿಕೊಂಡು ಬರುವುದಲ್ಲದೆ ಅಂತಹ ಚಾರಿತ್ರಿಕ ಕುರುಹುಗಳಿಂದ ಭವಿಷ್ಯದ ಚಾರಿತ್ರಿಕ ಕರ್ನಾಟಕವನ್ನು ಕಟ್ಟಲು ಆಕರಗಳಾಗಿ ನೇರವಾಗಬಲ್ಲ ಪ್ರಾಚೀನ ಕೋಟೆಗಳು, ಕಟ್ಟಡಗಳು, ದೇವಾಲಯಗಳು, ಮಸೀದಿಗಳು, ಚರ್ಚ್‌ಗಳು, ಕೆರೆಗಳು, ಶಾಸನಗಳು, ವೀರಗಲ್ಲುಗಳು ಮುಂತಾದ ಸ್ಮಾರಕ ಶಿಲೆಗಳು, ತಾಮ್ರಪಟಗಳು, ಹಸ್ತಪ್ರತಿ ಗ್ರಂಥಗಳು, ಐತಿಹಾಸಿಕ ದಾಖಲೆಗಳಾಗಬಲ್ಲ ಕಾಗದ ಪತ್ರಗಳು, ನಾಣ್ಯಗಳು, ಶಿಲ್ಪ, ಕರಕುಶಲತೆಯ ವಸ್ತುಗಳು, ಕಲಾಕೃತಿಗಳು, ವರ್ಣಚಿತ್ರಗಳು, ಆಯುಧಗಳು ಮುಂತಾದ ಪ್ರಾಚೀನ ವಸ್ತುಗಳ ರಕ್ಷಣೆಗಾಗಿ ಸಂಕಲ್ಪ ಮಾಡಿ ಪ್ರಚಾರ ಮಾಡುವುದು ಈ ಅಭಿಯಾನದ ಉದ್ದೇಶವಾಗಿದೆ.

ನಾಡಿನ ಜನರಲ್ಲಿ ಅದರಲ್ಲಿಯೂ ಗ್ರಾಮೀಣ ಹಾಗೂ ನಗರ ಪರಿಸರದಲ್ಲಿ ಇರುವ ವಿದ್ಯಾರ್ಥಿಗಳಲ್ಲಿ, ಯುವ ಪೀಳಿಗೆಯಲ್ಲಿ ಚಾರಿತ್ರಿಕ ಪ್ರಜ್ಞೆಯನ್ನು ಮೂಡಿಸಿ ಅವರಲ್ಲಿ ನಮ್ಮ ಪರಂಪರೆಯ ಪಳೆಯುಳಿಕೆಗಳ ಹಿರಿಮೆಯನ್ನು ಕಾಪಾಡಿಕೊಂಡು ಬರಬೇಕೆಂಬ ಜಾಗೃತಿಯನ್ನು ಉಂಟುಮಾಡುವುದಾಗಿದೆ. ಕಾರ್ಯಕ್ರಮದ ಸಂಕಲ್ಪಿತ ಮುಖ್ಯಾಂಶಗಳನ್ನು ಕುರಿತು ಹೇಳಬಹುದಾದರೆ,

೧. ಪ್ರಾಚೀನ ವಸ್ತು ಮತ್ತು ಕಲಾಕೃತಿಗಳ(ಆ್ಯಂಟಿಕ್ವಿಟೀಸ್) ನೋಂದಾವಣೆಗೆ ಪ್ರೇರಣೆ ನೀಡುವುದು.

೨. ಪ್ರಾಚೀನ ಶಾಸನ, ಪ್ರತಿಮೆ, ಸ್ಮಾರಕ ಶಿಲೆಗಳ ರಕ್ಷಣೆಯ ಆವಶ್ಯಕತೆಯ ಬಗೆಗೆ ಅವುಗಳ ಪರಿಸರದ ಬಗೆಗೆ ಜನರಿಗೆ ತಿಳಿವಳಿಕೆ ನೀಡುವುದು.

೩. ಪ್ರಾಚೀನ ಕಟ್ಟಡಗಳ ನಾಶ, ದುರುಪಯೋಗ, ಅವುಗಳ ಪರಿಸರದ ಮೇಲೆ ಒತ್ತುವರಿ ನಡೆಸುವುದರ ವಿರುದ್ಧ ಧ್ವನಿ ಎತ್ತುವುದು(ಪ್ರಚಾರ, ಸರಕಾರಕ್ಕೆ ಬರೆಯುವುದು, ಪತ್ರಿಕೆಗಳಿಗೆ ಬರೆಯುವುದು).

೪. ಪ್ರಾಚೀನ ಕೆರೆಗಳ ರಕ್ಷಣೆಯ ಪರವಾಗಿ ಹಾಗೂ ಕೆರೆಗಳನ್ನು ಕೃಷಿ, ಗೃಹನಿರ್ಮಾಣಕ್ಕೆ ಬಳಸುವುದರ ವಿರುದ್ಧ ಪ್ರಚಾರ ಮಾಡುವುದು.

೫. ಓಲೆಗರಿಗಳ ಆಸ್ತಿತ್ವದ ಬಗೆಗೆ ಅಧಿಕೃತ ಸಂಗ್ರಹಕಾರರಿಗೆ(ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾಲಯಗಳ ಸಂಬಂಧಿಸಿದ ಶಾಖೆಗಳು) ಮಾಹಿತಿ ನೀಡುವುದು. ಐತಿಹಾಸಿಕ ಮಹತ್ವದಕಾಗದ ಪತ್ರಗಳ ಬಗೆಗೆ ರಾಜ್ಯ ಪತ್ರಾಗಾರ ಇಲಾಖೆಗೆ ಮಾಹಿತಿ ನೀಡುವುದು.

ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಒಂದು ಶೈಕ್ಷಣಿಕ ಶಿಸ್ತಿನ ರೂಪದಲ್ಲಿ ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿದೆ. ಒಂದು ವಾರದವರೆಗೆ ನಾಡಿನ ಶಾಲೆ, ಕಾಲೇಜು, ಸ್ಥಳೀಯ ಸಾಂಸ್ಕೃತಿಕ ಸಂಘಟನೆಗಳ ಆಶ್ರಯದಲ್ಲಿ ವಿಶೇಷವಾಗಿ ಗ್ರಾಮೀಣ ಪರಿಸರದಲ್ಲಿಯೂ ಪ್ರತಿವರ್ಷ ಈ ಕಾರ್ಯಕ್ರಮವನ್ನು ಆಯೋಜಿಸುತ್ತಾ ಯಶಸ್ವಿಯಾಗಿ ಮುನ್ನಡೆಸಿತು, ಸಮಯಾವಕಾಶದ ಕೊರತೆಯಾದಾಗ ಮೂರು ಅಥವಾ ನಾಲ್ಕು ದಿನಗಳಲ್ಲಿ ಏಳು ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಈ ಸಪ್ತಾಹ ಕಾರ್ಯಕ್ರಮವನ್ನು ಆಗುಮಾಡುತ್ತಾ ಬಂದಿತು. ಪ್ರಥಮ ದಿನದ ಉಪನ್ಯಾಸ ಕಾರ್ಯಕ್ರಮವನ್ನು ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಉದ್ಘಾಟಿಸಿ ಚಾಲನೆಯನ್ನು ನೀಡಿದ ನಂತರ, ನಾಡಿನ ಹಿರಿಯ ವಿದ್ವಾಂಸರಿಂದ, ಹಸ್ತಪ್ರತಿಶಾಸ್ತ್ರ ವಿಭಾಗದ ಅಧ್ಯಾಪಕರಿಂದ, ಸಂಘ-ಸಂಸ್ಥೆಗಳ ಮುಖ್ಯಸ್ಥರಿಂದ ಆಯಾ ದಿನದ ಉಪನ್ಯಾಸಗಳನ್ನು ಮಾಡಿಸಲಾಗುತ್ತದೆ. ಆಯಾ ಕಾಲೇಜಿನ ಪ್ರಾಂಶುಪಾಲರು, ಅಥವಾ ಆಡಳಿತ ಮಂಡಳಿ ಮುಖ್ಯಸ್ಥರು, ಅಥವಾ ಸಂಘ-ಸಂಸ್ಥೆಗಳ ಮುಖ್ಯಸ್ಥರು ಆಯಾ ದಿನದ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುತ್ತಾರೆ. ಒಟ್ಟಾರೆ ಏಳು ದಿನಗಳ ಸಪ್ತಾಹ ಕಾರ್ಯಕ್ರಮದ ನಿರ್ವಹಣೆಯ ಸಂಚಾಲಕತ್ವನ್ನು ಪ್ರತಿ ವರ್ಷ ಹಸ್ತಪ್ರತಿಶಾಸ್ತ್ರ ವಿಭಾಗದ ಅಧ್ಯಾಪಕರೊಬ್ಬರು ನಿರ್ವಹಿಸುತ್ತಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರೈಸುತ್ತಾ ಬಂದಿದ್ದಾರೆ. ಹೀಗೆ ನಡೆಸಲಾದ ಕಾರ್ಯಕ್ರಮದಲ್ಲಿ ಶಾಲಾ-ಕಾಲೇಜಿನ ವಿದ್ಯಾರ್ಥಿಗಳಲ್ಲದೆ ಸ್ಥಳೀಯ ನಾಗರೀಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಅದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಕೆಲವಡೆ ಈ ಕಾರ್ಯಕ್ರಮದ ಸ್ಫೂರ್ತಿಯಿಂದ ಹಸ್ತಪ್ರತಿಗಳು ವಿಭಾಗಕ್ಕೆ ಲಭಿಸಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು.

ಕೂ.ಸ.ಅಪರ್ಣ ಅವರು ರಚಿಸಿರುವ ಲಾವಣಿಯು ಇಲ್ಲಿ ಸಂದರ್ಭೋಚಿತವಾಗಿದೆ.

'ಐತಿಹಾಸಿಕ ಪರಂಪರೆ ಉಳಿಸಿ' ಲಾವಣಿ

ಇತಿಹಾಸವೆಂದು ಮೂಗು ಮುರಿಯದೆ
ಬನ್ನಿರಿ ಕೇಳಿರಿ ನೀವೆಲ್ಲ ।
ಎಲ್ಲ ನಾಡುನುಡಿ ಎಲ್ಲ ವಸ್ತುವಿಗು
ಇತಿಹಾಸವೆಂಬುದು ಇದೆಯಲ್ಲ ॥ಪ॥

ಗತವೈಭವವನು ನೆನೆಯಲಿಕೆಂದೇ
ಇತಿಹಾಸವನು ಬರೆದಿಲ್ಲ ।
ಭವಿಷ್ಯದುತ್ತಮ ಮಾರ್ಗವ ತಿಳಿಯಲು
ಇತಿಹಾಸ ನಮಗೆ ಬೇಕಲ್ಲ ॥

ಶಿಲಾಶಾಸನಗಳಲಡಗಿಹುದು
ರಾಜಾಧಿರಾಜರ ವಿಜಯಗಳು ।
ಅಂದಿನ ಜನರಜೀವನ ಹೇಳುತ
ಮಾದರಿ ಹಾಕುವ ಕುರುಹುಗಳು ॥

ತಾಮ್ರದ ಶಾಸನ ಪೂರ್ವದ ಕಾಲದಿ
ರಾಜರು ನೀಡಿದ ಪತ್ರಗಳು ।
ಅದರಲ್ಲಿಹುದು ನಮ್ಮ ಹಿರಿಯರ
ಮಾನ ಸನ್ಮಾನದ ವಿವರಗಳು ॥

ಹಿರಿಯರ ಜ್ಞಾನದ ದೀಪವೆ ಆಗಿದೆ
ತಾಳೆಯೋಲೆಗರಿ ಕಡತಗಳು ।
ಕಾವ್ಯ ವ್ಯಾಕರಣ ಶಾಸ್ತ್ರಗಳೆಲ್ಲಕು
ಕೋಟೆಕೊತ್ತಲ ಶಸ್ತ್ರಾಸ್ತ್ರಗಳು
ಶತ್ರು ನಿಗ್ರಹದ ಸಂಜ್ಞೆಗಳು
ನಮ್ಮಯ ಭೂಮಿ ನಮ್ಮ ಜನರನು
ರಕ್ಷಿಸುತ್ತಿದ್ದ ಗೋಡೆಗಳು ॥

ಅರಮನೆ ಗುರುಮನೆ ಸಮಾಧಿ ಎಲ್ಲವೂ
ಹಿರಿಯ ಪರಂಪರೆಯ ಹೊಳಹುಗಳು ।
ವೀರ ಮಾಸ್ತಿ ನಿಶಿಧಿಯಾ ಸ್ಮಾರಕ
ಹಿಂದಿನ ಮೌಲ್ಯದ ರೂಪಗಳು ॥

ಹಳೆಯ ಕೆರೆಗಳು ಹಳೆಯ ನಾಣ್ಯಗಳು
ಸಿರಿಸಂಪತ್ತಿನ ಸೂಚಿಗಳು ।
ಎಲ್ಲರ ಒಳಿತನು ಬಯಸುವ ಜನತೆಯ
ಸಂಘ ಜೀವನಕೆ ಸಾಕ್ಷಿಗಳು ॥

ಪರಂಪರೆಯ ದಾಖಲೆಗಳನ್ನೆಲ್ಲವ
ಸಂಗ್ರಹಿಸಲು ನೀವ್ ಮುಂದಾಗಿ ।
ನಮ್ಮ ಪರಂಪರೆ ಸಂರಕ್ಷಿಸಲು
ಬನ್ನಿರಿ ಎಲ್ಲರು ಒಂದಾಗಿ ॥
ಅಂದಿನ ಬರಹದ ವಸ್ತುಗಳು ॥

ಹಳೆಯ ದೇಗುಲ ಶಿಲ್ಪಚಿತ್ರ ಮಠ
ಇಗರ್ಜಿ ಮಸೀದಿ ಬಸದಿಗಳು ।
ಧರ್ಮ ಭಕ್ತಿ ಕಲೆಗಳ ಸಂಕೇತ
ಊರಿನಕೇಂದ್ರ ಸ್ಥಾನಗಳು ।

'ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಘೋಷಣೆಗಳು'

ಮನುಷ್ಯನಿಗೆ ನೆನಪು ಹೇಗೋ
ದೇಶಕ್ಕೆ ಇತಿಹಾಸ ಹಾಗೆ

ನೆನಪು ನಮಗೆ ದಾರಿತೋರ್ವ ಉರಿಯುವಾ ಬತ್ತಿ
ಇತಿಹಾಸವು ನೆನಪಿನಂತೆ ನಾಡಿಗೊಂದು ಬತ್ತಿ

ಇತಿಹಾಸದ ಸಂಶೋಧನೆ
ನಮ್ಮ ತಿಳಿವಿನ ವರ್ಧನೆ

ತಾಳೆ ಹೊತ್ತಗೆಯ ರಕ್ಷಣೆ
ಹಳೆಯ ಪರಂಪರೆಗೆ ಪೋಷಣೆ

ಹಳೆಯ ಕೋಟೆ ಹಳೆ ದೇಗುಲ ಹಳೆ ಕಾಗದ ಕಡತ
ಹೇಳುವುದು ನಮಗೆಲ್ಲ ಪ್ರಾಚೀನರ ತುಡಿತ

ಪ್ರಾಚೀನ ಶಾಸನಗಳ ನಾಶ
ಇತಿಹಾಸ ಪುರುಷನಿಗೆ ಪಾಶ

ಪ್ರಾಚೀನದೇಗುಲ, ಶಿಲ್ಪ, ಮೂರ್ತಿ
ನಮ್ಮ ಹಿರಿಯರ ಕಲೆಯ ಕೀರ್ತಿ

ಪ್ರಾಚೀನಇಗರ್ಜಿ ಮಸೀದಿ ಗುಡಿ
ನಮ್ಮ ಪರಂಪರೆಯ ಭವ್ಯ ಮುಡಿ

ಕೋಟೆಕೊತ್ತಲದ ಕಲ್ಲು ಕಿತ್ತರೆ
ಪ್ರಾಚೀನ ಪರಂಪರೆಯ ಪಂಚಾಂಗ ಕಿತ್ತಂಗೆ

ಹಳೆಯ ಕೆರೆಗಳ ನಿರ್ಲಕ್ಷ
ತಂದಿತೆಮಗೆ ದುರ್ಭಿಕ್ಷ

ಇದುವರೆಗೆ ಹಸ್ತಪ್ರತಿಶಾಸ್ತ್ರ ವಿಭಾಗವು ಒಟ್ಟು ೧೪ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮಗಳನ್ನು ನಾಡಿನ ವಿವಿದೆಡೆ ನಡೆಸಿದೆ. ಆ ವಿವರಗಳನ್ನು ಪರಿಚಯಾತ್ಮಕವಾಗಿ ಇಲ್ಲಿ ನೀಡಲಾಗಿದೆ.

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮಗಳ ವಿವರಗಳು(೧೯೯೯–೨೦೧೬)

ಸಪ್ತಾಹ ೧

ಡಾ. ಎಫ್.ಟಿ.ಹಳ್ಳಿಕೇರಿ, ಡಾ. ಕೆ.ರವೀಂದ್ರನಾಥ

೧. ಸರಕಾರಿ ಪದವಿಪೂರ್ವ ಕಾಲೇಜು, ಮರಿಯಮ್ಮನಹಳ್ಳಿ ೧೭.೮.೧೯೯೯
೨. ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೂಡ್ಲಿಗಿ ೧೮.೮.೧೯೯೯
೩. ಶ್ರೀ ಕೊಟ್ಟೂರೇಶ್ವರ ಕಾಲೇಜು, ಕೊಟ್ಟೂರು ೧೯.೮.೧೯೯೯
೪. ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಗರಿಬೊಮ್ಮನಹಳ್ಳಿ ೧೯.೮.೧೯೯೯
೫. ಶ್ರೀಮತಿ ಸೊಪ್ಪಿನ ಕಾಳಮ್ಮನವರ ಪದವಿಪೂರ್ವ ಕಾಲೇಜು, ಹೂವಿನಹಡಗಲಿ ೨೦.೮.೧೯೯೯
೬. ಸರಕಾರಿ ಪ್ರೌಢಶಾಲೆ, ಕಮಲಾಪುರ(ಹೊಸಪೇಟೆ ತಾ) ೨೧.೮.೧೯೯೯
೭. ಭಾರತಿ ಶಿಶು ಕೇಂದ್ರ, ಕಂಪ್ಲಿ ೨೨.೮.೧೯೯೯

ಸಪ್ತಾಹ ೨

ಡಾ. ಎಫ್.ಟಿ.ಹಳ್ಳಿಕೇರಿ, ಡಾ. ಕೆ.ರವೀಂದ್ರನಾಥ

೮. ಶ್ರೀಮತಿ ಅಕ್ಕಿ ಬಸಮ್ಮ ತೋಟಪ್ಪ ಪದವಿ ಪೂರ್ವ ಕಾಲೇಜು, ತಂಬ್ರಳ್ಳಿ(ಹ.ಬೊ.ಹಳ್ಳಿ ತಾ.) ೧೬.೮.೨೦೦೦
೯. ಶ್ರೀ ಕೌದಿ ಮಹಾಂತೇಶ್ವರ ಪ್ರೌಢಶಾಲೆ, ಬಾಚಿಗೊಂಡನಹಳ್ಳಿ(ಹ.ಬೊ.ಹಳ್ಳಿ ತಾ) ೧೭.೮.೨೦೦೦
೧೦. ಹಿಂದಿ ಮಾಧ್ಯಮ ಬಿ.ಇಡಿ. ಕಾಲೇಜು, ಕೊಪ್ಪಳ, ೧೮.೮.೨೦೦೦
೧೧. ಸರಕಾರಿ ಪದವಿ ಕಾಲೇಜು, ಶಿರಗುಪ್ಪ, ೧೯.೮.೨೦೦೦
೧೨. ಪಂ.ಶ್ರೀ ಪಂಚಾಕ್ಷರಿ ಗವಾಯಿಗಳ ಸಾಹಿತ್ಯ ಸಂಗೀತ ವೇದಿಕೆ, ಕೋಗಳಿ(ಹ.ಬೊ.ಹಳ್ಳಿ ತಾ) ೨೦.೮.೨೦೦೦
೧೩. ಎಸ್.ಇ.ಎಸ್. ಪದವಿ ಕಾಲೇಜು, ಸಂಡೂರು, ೨೧.೮.೨೦೦೦
೧೪. ಹಾನಗಲ್ಲ ಕುಮಾರೇಶ್ವರ ಶಿವಾನುಭವ ಮಂಟಪ, ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ ೨೨.೮.೨೦೦೦

ಸಪ್ತಾಹ ೩

ಡಾ. ಎಫ್.ಟಿ.ಹಳ್ಳಿಕೇರಿ, ಡಾ. ಕೆ.ರವೀಂದ್ರನಾಥ

೧೫. ಶ್ರೀ ಕಲ್ಮೇಶ್ವರ ದೇವಸ್ಥಾನ ಟ್ರಸ್ಟ್, ಅಂಬಳಿ(ಹ.ಬೊ.ಹಳ್ಳಿ ತಾ), ೧೯.೮.೨೦೦೧

೧೬. ಸ್ಮಯೋರ ವ್ಯಾಸಪುರಿ ಸಂಯುಕ್ತ ಪದವಿಪೂರ್ವ ಕಾಲೇಜು, ವ್ಯಾಸನಕೆರೆ(ಹೊಸಪೇಟೆತಾ) ೨೦.೮.೨೦೦೧

೧೭ ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ, ೨೧.೮.೨೦೦೧

೧೮ ಸಂಯುಕ್ತ ಪದವಿಪೂರ್ವ ಕಾಲೇಜು, ಮುನಿರಾಬಾದ(ಕೊಪ್ಪಳ ಜಿ), ೨೩.೮.೨೦೦೧

೧೯ ಸರಕಾರಿ ಪ್ರೌಢಶಾಲೆ, ಮೊರಗೇರಿ(ಹ.ಬೊ.ಹಳ್ಳಿ ತಾ), ೨೪.೮.೨೦೦೧

೨೦ ಹರಗಿನಡೋಣಿ ಬಸನಗೌಡ ಸಂಯುಕ್ತ ಪದವಿ ಪೂರ್ವ ಕಾಲೇಜು, ಕುಡುತಿನಿ(ಬಳ್ಳಾರಿ ತಾ), ೨೫.೮.೨೦೦೧

೨೧. ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆ, ೨೭.೮.೨೦೦೧

ಸಪ್ತಾಹ ೪

ಡಾ. ಕೆ.ರವೀಂದ್ರನಾಥ

೨೨. ಶ್ರೀ ಕೊಟ್ಟೂರೇಶ್ವರ ವಿದ್ಯಾವರ್ಧಕ ಸಂಘ, ಗಂಗಾವತಿ, ೧೩.೧.೨೦೦೩

೨೩. ಸ್ಮಯೋರ ಪದವಿಪೂರ್ವ ಕಾಲೇಜು, ವ್ಯಾಸನಕೆರೆ, ೧೪.೧.೨೦೦೩

೨೪. ಎಸ್.ಯು.ಜೆ.ಎಂ. ಪದವಿ ಕಾಲೇಜು, ಹರಪನಹಳ್ಳಿ, ೧೬.೧.೨೦೦೩

೨೫. ಥಿಯಾಸಾಫಿಕಲ್ ಮಹಿಳಾ ಕಾಲೇಜು, ಹೊಸಪೇಟೆ, ೧೭.೧.೨೦೦೩

೨೬. ಗುಡನ್ಯೂಜ್ ಪದವಿ ಕಾಲೇಜು, ಕಲಘಟಗಿ(ಧಾರವಾಡ ಜಿ), ೧೮.೧.೨೦೦೩

೨೭. ಶ್ರೀಮತಿ ಅಲ್ಲಂ ಸುಮಂಗಳಮ್ಮ ಮಹಿಳಾ ಕಾಲೇಜು, ಬಳ್ಳಾರಿ, ೨೦.೧.೨೦೦೩

೨೮. ಶ್ರೀ ಸಿದ್ಧಲಿಂಗೇಶ್ವರ ಕಾಲೇಜು, ಕಾನಾಮಡಗು(ಕೂಡ್ಲಿಗಿ ತಾ) ೨೧.೧.೨೦೦೩

ಸಪ್ತಾಹ ೫

ಡಾ. ಎಸ್.ಎಸ್.ಅಂಗಡಿ

೨೯. ಸರಕಾರಿ ಶಿಕ್ಷಣ ಮಹಾವಿದ್ಯಾಲಯ, ಜಮಖಂಡಿ(ಬಿಜಾಪುರ ಜಿಲ್ಲೆ) ೨೫.೮.೨೦೦೩

೩೦. ಎಸ್.ಎಂ. ಪದವಿಪೂರ್ವ ಕಾಲೇಜು, ತೊದಲಬಾಗಿ(ಹುನಗುಂದ ತಾ), ೨೬.೮.೨೦೦೩

೩೧. ಪದವಿಪೂರ್ವ ಮಹಾವಿದ್ಯಾಲಯ, ಹುನ್ನೂರು, ೨೭.೮.೨೦೦೩

೩೨. ಎಸ್.ಪಿ. ಪದವಿಪೂರ್ವ ಕಾಲೇಜು, ತೇರದಾಳ, ೨೮.೮.೨೦೦೩

೩೩. ಎಂ.ವಿ.ಪಟ್ಟಣ ಪದವಿಪೂರ್ವ ಮಹಾವಿದ್ಯಾಲಯ, ರಬಕವಿ, ೨೯.೮.೨೦೦೩

೩೪. ಸರಕಾರಿ ಪದವಿಪೂರ್ವ ಕಾಲೇಜು, ೩೦.೮.೨೦೦೩

೩೫. ಎಸ್.ಪಿ.ಪದವಿ ಕಾಲೇಜು, ಮಹಾಲಿಂಗಪುರ, ೧.೯.೨೦೦೩

ಸಪ್ತಾಹ ೬

ಡಾ. ಎಸ್.ಆರ್.ಚನ್ನವೀರಪ್ಪ

೩೬. ಶಂಕ್ರಪ್ಪ ಸಕ್ರಿ ಕಲಾ ವಾಣಿಜ್ಯ ಹಾಗೂ ರಂಗರಾವ ದೊಡ್ಡಿಹಾಳ ಪದವಿಪೂರ್ವ ಕಾಲೇಜು, ಬಾಗಲಕೋಟ ೨೪.೮.೨೦೦೪

೩೭. ಸರಕಾರಿ ಪ್ರೌಢಶಾಲೆ ತೆಳಗಿಹಾಳ, ೨೫.೮.೨೦೦೪

೩೮. ಪಿ.ಎಂ.ನಾಡಗೌಡ ಪದವಿಪೂರ್ವ ಕಾಲೇಜು, ಬಾಗಲಕೋಟ, ೨೬.೮.೨೦೦೪

೩೯. ಶ್ರೀ ಪರಪ್ಪ ಸಂಗಪ್ಪ ಸಜ್ಜನ ಮಹಾವಿದ್ಯಾಲಯ, ಬೇವೂರ, ೨೭.೮.೨೦೦೪

೪೦. ಶ್ರೀ ಸಂಗಮೇಶ್ವರ ಪದವಿಪೂರ್ವ ಕಾಲೇಜು, ಕೂಡಲಸಂಗಮ, ೨೮.೮.೨೦೦೪

೪೧. ಬಾಲಕಿಯರ ಸರಕಾರಿ ಪದವಿಪೂರ್ವ ಕಾಲೇಜು, ಗುಳೇದಗುಡ್ಡ, ೨೯.೮.೨೦೦೪

೪೨. ಶ್ರೀ ವಿಜಯ ಮಹಾಂತೇಶ್ವರ ಕಲೆ ವಾಣಿಜ್ಯ ಮತ್ತು ವಿಜ್ಞಾನ ಪದವಿ ಕಾಲೇಜು, ಇಳಕಲ್ಲ, ೩೦.೮.೨೦೦೪

ಸಪ್ತಾಹ ೭

ಡಾ. ಕೆ. ರವೀಂದ್ರನಾಥ

೪೩. ಎಲ್.ವಿ.ಡಿ. ಕಾಲೇಜು, ರಾಯಚೂರು, ೧೬.೮.೨೦೦೫

೪೪. ಸರಕಾರಿ ಪ್ರಥಮದರ್ಜೆ ಕಾಲೇಜು, ದೇವದುರ್ಗ, ೧೭.೮.೨೦೦೫

೪೫. ಒಳಬಳ್ಳಾರಿ ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆಯ ಪದವಿ ಕಾಲೇಜು, ಲಿಂಗಸೂಗೂರು, ೧೮.೮.೨೦೦೫

೪೬. ಸರಕಾರಿ ಪ್ರಥಮದರ್ಜೆ ಕಾಲೇಜು, ಮಸ್ಕಿ, ೧೯.೮.೨೦೦೫

೪೭. ಶ್ರೀ ಜಗದ್ಗುರು ತೋಂಟದಾರ್ಯ ಶಿಕ್ಷಣ ಸಂಸ್ಥೆಯ ಮಲ್ಲಿಕಾರ್ಜುನ ನಾಗಪ್ಪ ಪದವಿ ಕಾಲೇಜು, ಕಾರಟಗಿ ೨೦.೮.೨೦೦೫

೪೮. ಶ್ರೀ.ಪಂ.ವಿ.ಸಂ. ಪದವಿಪೂರ್ವ ಕಾಲೇಜು, ಮಾನ್ವಿ, ೨೨.೮.೨೦೦೫

೪೯. ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ರಾಯಚೂರು, ೨೩.೮.೨೦೦೫

ಸಪ್ತಾಹ ೮

ಡಾ. ಎಸ್.ಎಸ್.ಅಂಗಡಿ

೫೦. ಜಗದ್ಗುರು ತೋಂಟದಾರ್ಯ ಪದವಿ ಕಾಲೇಜು, ಗದಗ, ೧೬.೮.೨೦೦೬

೫೧. ಜಗದ್ಗುರು ತೋಂಟದಾರ್ಯ ಪದವಿಪೂರ್ವ ಕಾಲೇಜು, ಡಂಬಳ, ೧೭.೮.೨೦೦೬

೫೨. ಮುನ್ಸಿಪಲ್ ಪದವಿ ಕಾಲೇಜು, ಲಕ್ಷ್ಮೇಶ್ವರ, ೧೮.೮.೨೦೦೬

೫೩. ಕೆ.ಆರ್.ಬೆಲ್ಲದ ಪದವಿ ಮಹಾವಿದ್ಯಾಲಯ, ಮುಂಡರಗಿ, ೧೯.೮.೨೦೦೬

೫೪. ಶ್ರೀ ಶಂಕರ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪದವಿ ಮಹಾವಿದ್ಯಾಲಯ, ನವಲಗುಂದ, ೨೨.೮.೨೦೦೬

೫೫. ಶ್ರೀ ಅಮೃತೇಶ್ವರ ಪದವಿ ಕಾಲೇಜು, ಅಣ್ಣಿಗೇರಿ, ೨೩.೮.೨೦೦೬

೫೬. ಕೆ.ಎಸ್.ಎಸ್. ಪದವಿ ಕಾಲೇಜು, ಗದಗ, ೨೪.೮.೨೦೦೬

ಸಪ್ತಾಹ ೯

ಡಾ. ಎಫ್.ಟಿ.ಹಳ್ಳಿಕೇರಿ ಡಾ. ಕೆ.ರವೀಂದ್ರನಾಥ

೫೭. ಜಿಲ್ಲಾ ಹೆರಿಟೇಜ್ ಕ್ಲಬ್, ತುಮಕೂರು ಹಾಗೂ ಶ್ರೀ ಸಿದ್ಧಗಂಗಾ ಕಲೆ ವಾಣಿಜ್ಯ ಮತ್ತು ವಿಜ್ಞಾನ ಪದವಿ ಕಾಲೇಜು, ತುಮಕೂರು, ೧೭.೮.೨೦೦೯

೫೮. ಎಸ್.ಎಂ.ಆರ್. ಪದವಿಪೂರ್ವ ಕಾಲೇಜು, ಕಳ್ಳಂಬೆಳ್ಳ(ಶಿರಾ ತಾ), ೧೮.೮.೨೦೦೯

೫೯. ನವೋದಯ ಪದವಿ ಕಾಲೇಜು, ಚಿಕ್ಕನಾಯ್ಕನಹಳ್ಳಿ, ೧೯.೮.೨೦೦೯

೬೦. ಸಿದ್ಧಾರ್ಥ ಪದವಿ ಕಾಲೇಜು, ತುಮಕೂರು, ೨೦.೮.೨೦೦೯

೬೧. ಶ್ರೀದೇವಿ ಪದವಿ ಕಾಲೇಜು, ತುಮಕೂರು, ೨೦.೮.೨೦೦೯

೬೨. ಸರಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ, ೨೧.೮.೨೦೦೯

೬೩. ಸಿದ್ಧಗಂಗಾ ಮಹಿಳಾ ಪದವಿ ಕಾಲೇಜು, ತುಮಕೂರು, ೨೨.೮.೨೦೦೯

ಸಪ್ತಾಹ ೧೦

ಡಾ. ಕೆ.ರವೀಂದ್ರನಾಥ

೬೪. ಎಸ್.ಬಿ.ಸಿ. ಮಹಿಳಾ ಕಾಲೇಜು, ದಾವಣಗೆರೆ ೧೬.೮.೨೦೧೦

೬೫. ಸರ್ಕಾರಿ ಪ್ರಥಮದರ್ಜೆ ಕಾಲೇಜು, ದಾವಣಗೆರೆ, ೧೭.೮.೨೦೧೦

೬೬. ಎಸ್.ಎಂ.ಎಸ್. ಪ್ರಥಮದರ್ಜೆ ಕಾಲೇಜು, ಹೊನ್ನಾಳಿ, ೧೮.೮.೨೦೧೦

೬೭. ಸರಕಾರಿ ಪ್ರಥಮದರ್ಜೆ ಕಾಲೇಜು, ಚನ್ನಗಿರಿ, ೧೯.೮.೨೦೧೦

೬೮. ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ಜಗಳೂರು, ೨೦.೮.೨೦೧೦

೬೯. ಶ್ರೀಮತಿ ಗಿರಿಜಮ್ಮ ಆರ್. ಕಾಂತಪ್ಪ ಶ್ರೇಷ್ಠ ಪದವಿ ಕಾಲೇಜು, ಹರಿಹರ, ೨೧.೮.೨೦೧೦

೭೦. ಎ.ಡಿ.ಬಿ. ಕಾಲೇಜು, ಹರಪನಹಳ್ಳಿ, ೨೩.೮.೨೦೧೦

ಸಪ್ತಾಹ ೧೧

೭೧. ಕರ್ನಾಟಕರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ, ೧೬.೮.೨೦೧೧

ಡಾ. ಎಸ್.ಎಸ್.ಅಂಗಡಿ

೭೨. ಶ್ರೀ ಶಾಂತವೀರ ಪದವಿ ಕಾಲೇಜು, ಬಬಲೇಶ್ವರ, ೧೭.೮.೨೦೧೧

೭೩. ಜಿ.ಆರ್.ಜಿ. ಕಲಾ ಮತ್ತು ವೈ.ಎ.ಪಿ. ವಾಣಿಜ್ಯ ಮಹಾವಿದ್ಯಾಲಯ, ಇಂಡಿ, ೧೮.೮.೨೦೧೧

೭೪ ಶ್ರೀ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಸವನಬಾಗೇವಾಡಿ, ೧೯.೮.೨೦೧೧

೭೫ ಗಂಗಮ್ಮ ಚಿನಿವಾರ ಪದವಿ ಮಹಾವಿದ್ಯಾಲಯ, ಮುದ್ದೇಬಿಹಾಳ, ೨೦.೮.೨೦೧೧

೭೬ ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವಿ.ವಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ ೨೨.೮.೨೦೧೧

೭೭ ಖಾಸ್ಗತೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತಾಳಿಕೋಟೆ, ೨೪.೮.೨೦೧೧

ಸಪ್ತಾಹ ೧೨

ಡಾ. ಕೆ.ರವೀಂದ್ರನಾಥ

೭೮ ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆ, ಹಾರೂಗೇರಿ, ೧೦.೧.೨೦೧೩

೭೯ ಯುನಿವರ್ಸಲ್ ಪದವಿಪೂರ್ವ ಮಹಾವಿದ್ಯಾಲಯ, ಹಾರೂಗೇರಿ, ೧೦.೧.೨೦೧೩

೮೦ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಹಾರೂಗೇರಿ, ೧೦.೧.೨೦೧೩

೮೧ ಬಿಎನ್.ಕುಲಗೋಡ ಪದವಿಪೂರ್ವ ಕಾಲೇಜು, ಮುಗುಳಖೋಡ, ೧೧.೧.೨೦೧೩

೮೨ ಮೂಡಲಗಿ ಶಿಕ್ಷಣ ಸಂಸ್ಥೆಯ ಪದವಿ ಕಾಲೇಜು, ಮೂಡಲಗಿ, ೧೧.೧.೨೦೧೩

೮೩ ಎಸ್.ಆರ್.ಎಸ್. ಪ್ರಥಮದರ್ಜೆ ಕಾಲೇಜು, ಕಲ್ಲೋಳಿ, ೧೨.೧.೨೦೧೩

೮೪ ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು, ಗೋಕಾಕ, ೧೨.೧.೨೦೧೩

ಸಪ್ತಾಹ ೧೩

ಡಾ. ಕೆ.ರವೀಂದ್ರನಾಥ

೮೫ ಬಿ.ಎ.ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ರಾಣೆಬೆನ್ನೂರು, ೫.೧೦.೨೦೧೫

೮೬ ಬೀರೇಶ್ವರ ಪ್ರೌಢಶಾಲೆ, ಕಾಕೋಳ, ೫.೧೦.೨೦೧೫

೮೭ ಬಿ.ಆರ್.ತಂಬಾಕದ ಪ್ರಥಮದರ್ಜೆ ಕಲಾ, ವಾಣಿಜ್ಯ ಮತ್ತು ವಿಜ್ಞಾನ, ಹಿರೇಕೆರೂರ, ೬.೧೦.೨೦೧೫

೮೮ ಪ್ರಿಯದರ್ಶಿನಿ ಪ್ರಥಮದರ್ಜೆ ಕಾಲೇಜು, ರಟ್ಟಿಹಳ್ಳಿ, ೭.೧೦.೨೦೧೫

೮೯ ಸರಕಾರಿ ಪ್ರಥಮದರ್ಜೆ ಕಾಲೇಜು, ಸುಣಕಲ್ಲಬಿದರಿ, ೭.೧೦.೨೦೧೫

೯೦ ಸರಕಾರಿ ಪ್ರಥಮದರ್ಜೆ ಕಾಲೇಜು, ಹಾನಗಲ್, ೮.೧೦.೨೦೧೫

೯೧. ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಹಾವೇರಿ, ೮.೧೦.೨೦೧೫

ಸಪ್ತಾಹ ೧೪

ಡಾ. ಎಸ್.ಎಸ್.ಅಂಗಡಿ

೯೨. ಗುಡನ್ಯೂಜ್ ಪದವಿ ಮಹಾವಿದ್ಯಾಲಯ, ಕಲಘಟಗಿ, ೭.೯.೨೦೧೬

೯೩. ಸರಕಾರಿ ಪ್ರಥಮದರ್ಜೆ ಕಾಲೇಜು, ಯಲ್ಲಾಪುರ, ೭.೯.೨೦೧೬

೯೪. ಸರಕಾರಿ ಪ್ರಥಮದರ್ಜೆ ಕಾಲೇಜು, ಅಳ್ನಾವರ, ೮.೯.೨೦೧೬

೯೫. ಸರಕಾರಿ ಪ್ರಥಮದರ್ಜೆ ಕಾಲೇಜು, ಜೊಯಿಡಾ, ೯.೯.೨೦೧೬

೯೬. ಶ್ರೀ ಕಾಡಸಿದ್ಧೇಶ್ವರ ಕಲಾ ಕಾಲೇಜು ಹಾಗೂ ಎಚ್.ಎಸ್.ಕೋತಂಬ್ರಿ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ, ೧೦.೯.೨೦೧೬

೯೭. ಸರಕಾರಿ ಪ್ರಥಮದರ್ಜೆ ಕಾಲೇಜು, ಕಲಘಟಗಿ, ೧೩.೯.೨೦೧೬

೯೮. ಸರಕಾರಿ ಪ್ರಥಮದರ್ಜೆ ಕಾಲೇಜು, ಹುಬ್ಬಳ್ಳಿ, ೧೪.೯.೨೦೧೬

೬

ಹಳೆಯ ಹೊನ್ನು

ಎಸ್.ಎಸ್.ಅಂಗಡಿ

ಪ್ರಾಚೀನ ಕನ್ನಡ ಸಾಹಿತ್ಯ ಎನ್ನುವುದು ಸ್ಥೂಲವಾದ ಅರ್ಥದಲ್ಲಿ ಆಧುನಿಕ ಪೂರ್ವಸಾಹಿತ್ಯ ಎಂದು ಕರೆಯಬಹುದು. ಪ್ರಾಚೀನ ಕನ್ನಡ ಸಾಹಿತ್ಯವೆಂದು ನಾವು ತಿಳಿದಿರುವ ಸಾಹಿತ್ಯ ಭಾಗ ದೊರೆಯುವುದು ಮುಖ್ಯವಾಗಿ ಓಲೆಪ್ರತಿಗಳಲ್ಲಿ, ಸ್ವಲ್ಪಮಟ್ಟಿಗೆ ಹಳೆಯ ಕಾಗದ ಪ್ರತಿಗಳಲ್ಲಿ. ಇವು ದೊರೆಯುವ ಸ್ಥಳಗಳು ಸಾಮಾನ್ಯವಾಗಿ ವಿಶ್ವವಿದ್ಯಾಲಯಗಳ ಹಸ್ತಪ್ರತಿ ವಿಭಾಗಗಳ ಹಸ್ತಪ್ರತಿ ಭಂಡಾರಗಳು, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಗ್ರಂಥ ಸಂಗ್ರಹಗಳು ಮತ್ತು ಖಾಸಗಿ ವ್ಯಕ್ತಿಗಳ ಸ್ವತಂತ್ರ ಸಂಗ್ರಹಗಳು, ದೊರೆಯುವ ಸಾಮಗ್ರಿ ಎಷ್ಟು ಎಂಬುದು ವಿಶ್ವವಿದ್ಯಾಲಯಗಳ ಹಸ್ತಪ್ರತಿ ಭಂಡಾರಗಳ ಆಗಿಂದಾಗ್ಗೆ ಪ್ರಕಟಿಸುವ ಸೂಚೀಗಳಿಂದ ಇತರ ಮೂಲಗಳು ಹೊರಡಿಸುವ ಅಂತಹ ಇತರ ಪ್ರಕಟಣೆಗಳಿಂದ ವಿಧಿತವಾಗುತ್ತವೆ. ಹಸ್ತಪ್ರತಿಗಳ ಸಂಗ್ರಹಣೆ, ಸಂರಕ್ಷಣೆಗಳ ವಿಷಯದಲ್ಲಿ ವಿಶ್ವವಿದ್ಯಾಲಯಗಳ ಪ್ರಯತ್ನಗಳೇ ಹೆಚ್ಚು ವ್ಯವಸ್ಥಿತವಾದವು. ವಿಶ್ವವಿದ್ಯಾಲಯಗಳೂ ಒಳಗೊಂಡು, ಸಂಘ-ಸಂಸ್ಥೆಗಳಲ್ಲಿ ನಡೆಯುತ್ತಿರುವ ಪ್ರಾಚೀನ ಸಾಹಿತ್ಯದ ಅಧ್ಯಯನದ ಕೆಲಸ ನಡೆಯಬೇಕಾಗಿರುವ ಕೆಲಸಗಳ ಮೊತ್ತದ ದೃಷ್ಟಿಯಿಂದ ನೋಡಿದರೆ ಕಡಮೆ ಎಂದೇ ಹೇಳಬೇಕು. ಆಗಬೇಕಾದ ಕೆಲಸ ಬೆಟ್ಟದಟ್ಟಿದೆ.

ಪ್ರಾಚೀನ ಸಾಹಿತ್ಯ ಎಂಬುದು ಕನ್ನಡ ಸಾಹಿತ್ಯದ ಆರಂಭ ಕಾಲದ ಸಾಹಿತ್ಯ ಭಾಗ. ಅದು ಕನ್ನಡ ಸಾಹಿತ್ಯದ ತಮನಿಧಿ; ಮೂಲಧನ. ಅದನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗಬೇಕಾದದ್ದು ಪ್ರತಿಯೊಬ್ಬ ಕನ್ನಡಿಗರ ಜವಾಬ್ದಾರಿಯಾಗಿದೆ. ಹಳೆಗನ್ನಡ ಸಾಹಿತ್ಯವನ್ನು ಪೋಷಿಸಿಕೊಂಡು ಬರಲಿಕ್ಕೆ ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ಪ್ರಾಧಿಕಾರಗಳು, ವಿವಿಧ ಸಂಘ ಸಂಸ್ಥೆಗಳು ಪ್ರಯತ್ನಿಸುತ್ತಿರುವುದು ಸ್ವಾಗತಾರ್ಹವಾದ ಸಂಗತಿಯಾಗಿದೆ. ಹಳೆಗನ್ನಡ ಕವಿಗಳ ಹೆಸರಿನಲ್ಲಿ ಅಧ್ಯಯನ ಕೇಂದ್ರಗಳು, ಪೀಠಗಳು ಇವೆ. ಆ ಕವಿಗಳ ಜೀವನ, ಕಾಲ, ಪರಿಸರ, ಕೃತಿಗಳ ಮೌಲ್ಯ ವಿವೇಚನೆ ಇವೆಲ್ಲವನ್ನು ಆಧುನಿಕ ಕವಿ-ಸಾಹಿತ್ಯಿಗಳಿಗೆ, ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವ ಕೆಲಸವನ್ನು ಅವು ಮಾಡುತ್ತಿವೆ. ಒಂದು ಕಾಲದಲ್ಲಿ ಪ್ರಾಚೀನ ಸಾಹಿತ್ಯಕ್ಕೆ ಮನ್ನಣೆಗಳಿರುತ್ತಿದ್ದವು ವಿವಿಧ ಘಟ್ಟಗಳಲ್ಲಿ ಅಭ್ಯಾಸದ ಏರ್ಪಾಡುಗಳಿರುತ್ತಿದ್ದವು. ಅವುಗಳ ಪ್ರಯೋಜನ ಪಡೆಯುವುದು ಒಂದು ಸಾಂಸ್ಕೃತಿಕ ಅನಿವಾರ್ಯತೆ ಆಗ ಇತ್ತು. ಈಗ ಆ ಕ್ಷೇತ್ರದ ವಿದ್ವತ್ತಿನ ಕೆಲಸ ಕುಂಠಿತವಾಗಿದೆ. ಆದರೆ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ

ಹಸ್ತಪ್ರತಿ-ಗ್ರಂಥಸಂಪಾದನೆಯ ಜೊತೆಗೆ ಹಳಗನ್ನಡ, ಸಾಹಿತ್ಯದ ಅಧ್ಯಯನಕ್ಕೆ ವಿಶೇಷ ಒಲವು ನೀಡಿದೆ. ಆ ಅಧ್ಯಯನ ಕ್ಷೇತ್ರದ ಬೆಳವಣಿಗೆಗೆ ಆ ವಿಭಾಗ ಹಾಕಿಕೊಂಡ ಹಲವಾರು ರಚನಾತ್ಮಕ ಚಟುವಟಿಕೆಗಳಲ್ಲಿ 'ಹಳೆಯ ಹೊನ್ನು' ಎಂಬ ಕಾರ್ಯಕ್ರಮ ಬಹಳ ಮುಖ್ಯವಾಗಿದೆ.

'ಹಳೆಯ ಹೊನ್ನು' ಎಂದರೆ ಹೆಸರೇ ಸೂಚಿಸುವಂತೆ ಹಸ್ತಪ್ರತಿ-ಗ್ರಂಥಸಂಪಾದನೆ ಮತ್ತು ಹಳಗನ್ನಡ ಸಾಹಿತ್ಯದ ಮಹತ್ವವನ್ನು ಬಿತ್ತರಿಸುವುದಾಗಿದೆ. ಹಸ್ತಪ್ರತಿಶಾಸ್ತ್ರ ವಿಭಾಗದ ವಿಭಾಗ ಮಟ್ಟದಲ್ಲಿ ಹಳಗನ್ನಡ ಸಾಹಿತ್ಯ ಕುರಿತು ಚರ್ಚೆ ಮಾಡುವ, ಸಂವಾದ ಬೆಳೆಸುವ ವಿದ್ವತ್ ವೇದಿಕೆ ಇದಾಗಿದೆ. ಹಳಗನ್ನಡ ಸಾಹಿತ್ಯವನ್ನು ಕಾಪಾಡಿಕೊಂಡು ಬರುವುದು, ಅದರ ಪ್ರಯೋಜನ ಪಡೆಯುವುದು ಈಗ ಮುಖ್ಯವಾಗಿದೆ. ಈಗಿನ ಸ್ನಾತಕೋತ್ತರ ಶಿಕ್ಷಣದಲ್ಲಿಯೂ ಸಹಿತ ಹಳೆಯ ಸಾಹಿತ್ಯ ಉಪೇಕ್ಷೆಗೆ ಗುರಿಯಾಗುತ್ತಿದೆ. ಕಲಿಯುವವರಿಗೂ ಕಲಿಸುವವರಿಗೂ ಆಸಕ್ತಿಯಿಲ್ಲ; ಶಕ್ತಿ ಇಲ್ಲ ಎಂಬ ಸ್ಥಿತಿ ಉಂಟಾಗಿದೆ.ಹಳೆಗನ್ನಡ ಸಾಹಿತ್ಯದಲ್ಲಿ ಜೀವನ ಮೌಲ್ಯಗಳಿವೆ ಎಂಬುದನ್ನು ತಿಳಿಸುವುದು ಈ ವೇದಿಕೆಯ ಆಶಯವಾಗಿದೆ. ಪ್ರಾಚೀನ ಕವಿ-ಕಾವ್ಯಗಳ ದೇಶ-ಕಾಲ-ಪರಿಸರ ಕುರಿತು ಚರ್ಚಿಸುವುದರೊಂದಿಗೆ ಆ ಕವಿ, ಕೃತಿಯ ಸಾಂಸ್ಕೃತಿಕ ಅಧ್ಯಯನಕ್ಕೆ ಬೇಕಾಗುವ ಪೂರ್ವಪೀಠಿಕೆ ಒದಗಿಸುವುದು. ಅದರಂತೆ ಈಗಾಗಲೇ ಪರಿಚಿತವಿರುವ ಶ್ರೇಷ್ಠ ಕವಿಗಳ ಜೊತೆಗೆ ಹೆಚ್ಚು ಚರ್ಚೆಗೆ ಒಳಗಾಗದ ಉಪೇಕ್ಷಿತ ಕವಿಗಳ ಸಾಹಿತ್ಯ ಕೃತಿಗಳನ್ನು ಹಾಗೂ ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ವಿವರಗಳನ್ನು ವಿವೇಚಿಸುವುದು ಅಪ್ರಕಟಿತ ಕಾವ್ಯಗಳ ಸ್ವರೂಪವನ್ನು ಹಾಗೂ ಅವುಗಳನ್ನು ಸಾಂಸ್ಕೃತಿಕ ಮಹತ್ವದ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆಯುವುದೂ ಸಹಿತ ತುಂಬ ಮುಖ್ಯವಾಗಿದೆ. ಪ್ರಾಚೀನ ಪದ್ಯಗಳನ್ನು ಗಟ್ಟಿಯಾಗಿ ಓದುವ ಅವುಗಳ ಅರ್ಥವನ್ನು ವಿವರಿಸುವ ಭಾಷಾ ಕೌಶಲ್ಯಗಳಾದ ಕೇಳುವಿಕೆ, ಮಾತು, ಓದು ಮತ್ತು ಬರೆಹ ಇವುಗಳನ್ನು ಅಭಿವೃದ್ಧಿಪಡಿಸುವುದರ ಮೂಲಕ ಪ್ರಾಚೀನ ಸಾಹಿತ್ಯದಲ್ಲಿ ಜೀವನ ಪಾಠಗಳಿವೆ. ಕಾಲತೀತವಾದ ಮಾನವೀಯದೃಷ್ಟಿ ವಿಶೇಷತೆಯಿದೆ. ಉದಾತ್ತ ಮೌಲ್ಯಗಳಿವೆ, ಬಹುಮುಖಿ ಸಂಬಂಧ-ಸಂಘರ್ಷಗಳ ಕುತೂಹಲ ಪ್ರಪಂಚವಿದೆ. ಪ್ರಕೃತಿಯವಿಲಾಸ-ವಿಚಾರಗಳ ರಮ್ಯ ಚಿತ್ರಗಳಿವೆ ಎಲ್ಲಕ್ಕಿಂತ ಮಿಗಿಲಾಗಿ ಹೃದಯವನ್ನು ಸಂಸ್ಕರಿಸುವ ಸಾರ ಸತ್ವಗಳಿವೆ ಎಂಬುದನ್ನು ತಿಳಿಸುವುದು ಈ ವೇದಿಕೆಯ ಮುಖ್ಯ ಉದ್ದೇಶಗಳಾಗಿವೆ. ಹದಿನೈದು ದಿನಗಳಿಗೊಮ್ಮೆ ಈ ವಿದ್ವತ್ ಕಾರ್ಯಕ್ರಮವು ಹಸ್ತಪ್ರತಿಶಾಸ್ತ್ರ ವಿಭಾಗವು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಬೇರೆ ಅಧ್ಯಯನ ವಿಭಾಗಗಳ ವಿದ್ವಾಂಸರ, ಸಂಶೋಧಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಉಪನ್ಯಾಸದ ನಂತರ ಆ ಕುರಿತು ಅರ್ಥಪೂರ್ಣವಾದ ಚರ್ಚೆ, ಸಂವಾದ ಇರುತ್ತದೆ ಇದು ಈ ವೇದಿಕೆಯ ಸ್ಥೂಲಸ್ವರೂಪವಾಗಿದೆ.

'ಹಳೆಯ ಹೊನ್ನು' ಕಾರ್ಯಕ್ರಮ ನಡೆಯುವ ಬಗೆಯನ್ನು ಕುರಿತು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು. ರನ್ನನ ಗದಾಯುದ್ಧದಲ್ಲಿ ಒಂದು ಪ್ರಸಂಗ ಹೀಗಿದೆ: ಕುರುಕ್ಷೇತ್ರದಲ್ಲಿ ಪಾಂಡವರ ಹೊಡೆತಕ್ಕೆ ಕೌರವನ ಸೈನ್ಯವೆಲ್ಲ ಸೋತು ನಾಶವಾಗಿದೆ. ದುರ್ಯೋಧನನ ಆಪ್ತರಾದ ಭೀಷ್ಮಾಚಾರ್ಯರು, ಕೃಪಾಚಾರ್ಯರು, ದುಶ್ಯಾಸನ, ಕರ್ಣಎಲ್ಲರೂ ಮಡಿದಿದ್ದಾರೆ. ದುರ್ಯೋಧನನು ಏಕಾಂಗಿಯಾಗಿದ್ದಾನೆ. ಆಪ್ತರ ಶವಗಳನ್ನು ನೋಡುತ್ತ ಹಳೆಯ ನೆನಪುಗಳಾಗಿ ತುಂಬ ಶೋಕಿಸುತ್ತಾನೆ. ಕರ್ಣನ ಶವವನ್ನು ಕಂಡಾಗ ಅವನ ದುಃಖ ಇಮ್ಮಡಿಯಾಗುತ್ತದೆ. ದುರ್ಯೋಧನನ ಆ ಶೋಕ ಪ್ರಸಂಗ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾಗಿದೆ. ಆ ಸಂದರ್ಭ ಕೆಲವು ಪದ್ಯಭಾಗಗಳು ಹೀಗಿವೆ:

ಆನುಂ, ದುಶ್ಯಾಸನನುಂ
ನೀನುಂ ಮೂವರೆದಲ್
ಆತನುಂ ಕಳಿದ ಬಳಿಕ್ಕೆ
ಆನು, ನೀನೆ ದಲ್
ಈಗಳ್ ನೀನು ಅಗಲ್ದು
ಎತ್ತ ಪೋದೆ ಅಂಗಾಧಿಪತಿ? –(೫–೧೧)

ನಾನು, ದುಶ್ಯಾಸನ ಹಾಗೂ ನೀನು ಈ ಮೂವರೆ(ಒಂದು ಜೀವವಾಗಿ) ಇದ್ದವರು. ಆತನು ಹೋದ ಬಳಿಕ ನಾನು, ನೀನು ಇಬ್ಬರೆ ಆಗಿದ್ದೆನು. ಅಂಗದ ರಾಜಾ ಈಗ ನೀನು ಕೂಡ ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ?

ನೀನು ಇಲ್ಲದೆ ಅರಸುಗೆಯ್ದನೆ
ನೀನಿಲ್ಲದೆ ಬಾಳ್ವೆನ್ ಎಂದು
ಬಗೆದಿಪ್ಪೆನೆ
ಪೇಳ್
ನೀನು ಇಲ್ಲದೆ ಅಹಿತರೊಳ್
ಸಂಧಾನಂ ಮಾಡುವೆನೆ
ಕೂಡದಂ ಅಂಗಾಧಿಪತಿ! –(೫–೧೨)

ನೀನಿಲ್ಲದೆ ನಾನು ರಾಜ್ಯವಾಳುವೆನೆ? ನೀನಿಲ್ಲದೆ ಬದುಕಬೇಕೆಂದು ಬಯಸುವೆನೆ? ಹೇಳು ನೀನಿಲ್ಲದೆ ವೈರಿಗಳೊಡನೆ ಸಂಧಿ ಮಾಡಿಕೊಳ್ಳುವೆನೆ? ಇಲ್ಲ ಮಾಡಿಕೊಳ್ಳಲಾರೆ.

ನಿನ್ನ ಮಗಂ ವೃಷಸೇನಂ
ತನ್ನ ಮಗಂ ಸತ್ತನ್
ಅಣ್ಮೆ ಲಕ್ಷಣ ಮಂ
ನೀನು ಎನ್ನಂ ಸಂತೈಸುವುದು
ಆಂ ನಿನ್ನಂ ಸಂತೈಸೆ
ಬಂದೆನಂ ಅಂಗಾಧಿಪತಿ –(೫–೧೩)

ನಿನ್ನ ಮಗನಾದ ವೃಷಸೇನನೂ, ನನ್ನ ಮಗನಾದ ಲಕ್ಷಣನೂ ಪರಾಕ್ರಮದಿಂದ ಹೋರಾಡಿ ಸತ್ತರು. ನೀನು ಬಂದು ನನ್ನನ್ನು ಸಮಾಧಾನ ಪಡಿಸಬೇಕು. ಈಗ ನಾನೇ ನಿನ್ನನ್ನು ಸಂತೈಸಲೆಂದು ಬಂದೆನು.

ನೀನ್ ಉಳ್ಳೊಡಂ ರಾಜ್ಯಂ
ನೀನ್ ಉಳ್ಳೊಡೆ ಪಟ್ಟಂಉಂಟು
ಬೆಳ್ಗೊಡೆ ಉಂಟು

ನೀನ್ ಉಳ್ದೊಡಂ ಪೀಳಿಗೆ
ನೀನಿಲ್ಲದೆ
ಇವೆಲ್ಲಂ ಒಳವೆ ಅಂಗಾಧಿಪತಿ? -(೫-೨೦)

ಕರ್ಣ, ನೀನು ಇದ್ದರೆ ರಾಜ್ಯ, ನೀನು ಇದ್ದರೆ ರಾಜ್ಯಪಟ್ಟ, ನೀನು ಇದ್ದರೆ ಶ್ವೇತಚ್ಛತ್ರ, ನೀನು ಇದ್ದರೆ ಸಿಂಹಾಸನ- ಇವೆಲ್ಲ ಉಂಟು. ನೀನೆ ಇಲ್ಲವಾದರೆ ಇವೆಲ್ಲ ಉಂಟೆ? ಎಂದು ರಣರಂಗದಲ್ಲಿ ಕರ್ಣನ ಶವವನ್ನು ಕಂಡು ದುರ್ಯೋಧನ ಹಲವು ರೀತಿಯಲ್ಲಿ ಶೋಕ ವ್ಯಕ್ತಪಡಿಸುತ್ತಾನೆ. ಕನ್ನಡ ಸಾಹಿತ್ಯದ ಶೋಕ ಪ್ರಸಂಗಗಳಲ್ಲಿ ಗದಾಯುದ್ಧದ ದುರ್ಯೋಧನನ ಈ ಶೋಕ ಪ್ರಸಂಗ ಅರ್ಥಪೂರ್ಣವಾಗಿ ಚಿತ್ರಿತವಾಗಿದೆ. ಸಹೃದಯ ವಾಚಕರ ಕರುಳು ಮಿಡಿಯುವಂತೆ ರನ್ನ ಚಿತ್ರಿಸಿದ್ದಾನೆ. ಆ ಸಂದರ್ಭದಲ್ಲಿ ಕವಿಯ ಭಾಷೆ, ಶೈಲಿ, ವರ್ಣನೆ, ಪದವೈಖರಿ, ಭಾವಸೌಂದರ್ಯ ಅರ್ಥಪೂರ್ಣವಾಗಿ ಮೂಡಿಬಂದಿವೆ.

ಮೇಲೆ ವಿವರಿಸಿದ ಹಾಗೆ 'ಹಳೆಯ ಹೊನ್ನು' ಕಾರ್ಯಕ್ರಮಗಳು ಜರಗುತ್ತವೆ. ಮುಖ್ಯವಾಗಿ ಹಲವು: ನಾಗವರ್ಮನ ಕರ್ನಾಟಕ ಕಾದಂಬರಿಯಲ್ಲಿ ಅಚ್ಛೋದ ಸರೋವರದ ವರ್ಣನೆ, ಆಂಡಯ್ಯನ ಪದಪ್ರಯೋಗ, ಶ್ರೀಹರಿಕಥಾಮೃತಸಾರದ ಮಹತ್ವ, ಸಿದ್ಧಮಂಕಚರಿತೆ-ಹಾಲುಮತ ಕಾವ್ಯದ ವಿವೇಚನೆ, ಕನ್ನಡ ಟೀಕುಸಾಹಿತ್ಯದ ಸ್ವರೂಪ ಮತ್ತು ಮಹತ್ವ, ಮಾಟ-ಮಂತ್ರಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು ಮತ್ತು ದೇಸಿ ಚಹರೆಯ ಹುಡುಕಾಟ, ಕುಮುದೇಂದ್ರ ರಾಮಾಯಣ, ಶರಣ ಮೋನಪ್ಪಯ್ಯನ ಚಾರಿತ್ರ್ಯ, ದಾಸರಾಯರ ಪದಗಳು, ಹದಿಬದೆಯ ಧರ್ಮ ಮುಂತಾದ ಪಠ್ಯಗಳು, ಅಪ್ರಕಟಿತ ಕಾವ್ಯಗಳು, ಶಾಸ್ತ್ರಸಾಹಿತ್ಯ, ಸಾಹಿತ್ಯ ಪ್ರಕಾರಗಳು ಹಸ್ತಪ್ರತಿ-ಗ್ರಂಥಸಂಪಾದನೆ ಕ್ಷೇತ್ರಗಳಲ್ಲಿ ದುಡಿದ ವಿದ್ವಾಂಸರ ಸಾಧನೆ ಮುಂತಾದ ವೈವಿಧ್ಯಮಯ ವಿಷಯಗಳು ಈ ವೇದಿಕೆಯಲ್ಲಿ ಚರ್ಚೆಯಾಗುತ್ತವೆ.

ಈ ವೇದಿಕೆಯ ಫಲಿತಗಳಾಗಿ ವಿದ್ಯಾರ್ಥಿಗಳಲ್ಲಿ ಹಳಗನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ-ಅಭಿರುಚಿ ಮೂಡಿತು, ವಿದ್ವಾಂಸರಲ್ಲಿ ಹಳಗನ್ನಡ ಬಗ್ಗೆ ಆತ್ಮವಿಶ್ವಾಸವೂ ಶ್ರದ್ಧೆಯೂ ಮೂಡಿತು. ವಿಶೇಷವಾಗಿ ವಿದ್ಯಾರ್ಥಿಗಳು ತಮ್ಮ ಅಧ್ಯಯನದಲ್ಲಿ ಉಂಟಾಗುವ ಗೊಂದಲುಗಳನ್ನು, ಸಮಸ್ಯೆಗಳನ್ನು ಅದರಂತೆ ವಿದ್ವಾಂಸರು ಅಪ್ರಕಟಿತ ಕಾವ್ಯಗಳನ್ನು ಸಂಪಾದಿಸುವಾಗ ತಲೆದೋರುವ ಸಮಸ್ಯೆಗಳನ್ನು ಈ ವೇದಿಕೆಯಲ್ಲಿ ಹಂಚಿಕೊಳ್ಳುತ್ತಿದ್ದರು. ಆ ಮೂಲಕ ಕನ್ನಡ ವಿದ್ವತ್ಕೆ ಕಾಲಾನುಕ್ರಮಣಿಕೆಯ ಗಟ್ಟಿ ಬುನಾದಿ ಹಾಕುವಲ್ಲಿ ವಿದ್ವಾಂಸರು ಶೋಧಿಸಿದ ಹೊಸ ಶೋಧಗಳಿಗೆ ಈ ವೇದಿಕೆ ಒಂದರ್ಥದಲ್ಲಿ ಮಾರ್ಗದರ್ಶನವಾಯಿತು. ಈ ವೇದಿಕೆಯ ಪರಿಣಾಮದಿಂದಾಗಿ ಹಲವಾರು ವಿದ್ಯಾರ್ಥಿಗಳು, ಆಸಕ್ತರು ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಹಸ್ತಪ್ರತಿಗಳನ್ನು ದೇಣಿಗೆಯಾಗಿ ನೀಡಿದರು ಎಂಬುದು ತುಂಬ ಮುಖ್ಯವಾದ ಸಂಗತಿಯಾಗಿದೆ. ಅದರಂತೆ ವಿದ್ಯಾರ್ಥಿಗಳಲ್ಲಿ ಪ್ರಾಚೀನ ಸಾಹಿತ್ಯ ಕುರಿತು ವಾಚನಾಭಿರುಚಿ ಬೆಳೆಯಿತು. ಅಲ್ಲದೆ ಪ್ರಾಚೀನ ಕರ್ನಾಟಕದ ಜನಜೀವನ, ಪರಂಪರೆ, ಸಾಂಸ್ಕೃತಿಕ ವಿವರಗಳ ಬಗ್ಗೆ ತಿಳಿದುಕೊಳ್ಳಲು ಕುತೂಹಲ ಮೂಡಿತು. ಒಟ್ಟಿನಲ್ಲಿ, ಈ ವೇದಿಕೆಯಿಂದ ವಿದ್ಯಾರ್ಥಿಗಳಲ್ಲಿ, ಆಸಕ್ತರಲ್ಲಿ, ಉಪಾಧ್ಯಾಯರಲ್ಲಿ ಹಳಗನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಆದರಾಭಿಮಾನ ಬೆಳೆಯಿತು ವಿಶೇಷವಾಗಿ ವಿದ್ಯಾರ್ಥಿಗಳು ಕ್ರಿಯಾಶೀಲರಾಗಿ ತಮ್ಮ ಅಧ್ಯಯನಕ್ಕೆ ಹಸ್ತಪ್ರತಿ-ಗ್ರಂಥಸಂಪಾದನೆ ಹಾಗೂ ಹಳಗನ್ನಡ ಸಾಹಿತ್ಯವನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು ಎಂಬುದು ಗಮನಾರ್ಹ ಸಂಗತಿಯಾಗಿದೆ.

ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ೨೦೦೪ರಿಂದ ೨೦೨೨ರ ವರೆಗೆ ನಡೆದ ಹಳೆಯ ಹೊನ್ನು ಕಾರ್ಯಕ್ರಮದ ವಿವರ ಹೀಗಿದೆ:

ಕ್ರಸಂ	ವಿಷಯ	ಮಂಡನೆಕಾರರು	ದಿನಾಂಕ
೧.	ಶ್ರೀ ಜಗನ್ನಾಥದಾಸರ ಶ್ರೀ ಹರಿಕಥಾಮೃತಸಾರ	ಪ್ರೊ. ಎ.ವಿ.ನಾವಡ	೧೮.೧೦.೨೦೦೪
೨.	ಮದನ ಮೋಹನ ಕಥೆ	ಹಂದ್ರಾಳ ಗವಿಸಿದ್ದಪ್ಪ	೦೮.೧೧.೨೦೦೪
೩.	ಸಿರುಮಣನಾಯಕನ ಸಾಂಗತ್ಯ	ಡಾ. ಎಸ್.ಎಸ್.ಅಂಗಡಿ	೨೯.೧೧.೨೦೦೪
೪.	ಸಿದ್ಧಮಂಕ ಚರಿತೆ	ಡಾ. ಎಫ್.ಟಿ.ಹಳ್ಳಿಕೇರಿ	೧೦.೧೨.೨೦೦೪
೫.	ಜೀವಂಧರಚರಿತೆ	ಡಾ. ಜಾಜಿ ದೇವೇಂದ್ರಪ್ಪ	೨೪.೦೧.೨೦೦೫
೬.	ಕನ್ನಡ ಟೀಕಾ ಸಾಹಿತ್ಯ	ಡಾ. ಕೆ.ರವೀಂದ್ರನಾಥ	೦೪.೦೩.೨೦೦೫
೭.	೨ನೇ ನಾಗವರ್ಮ: ಆತನ ಕೃತಿಗಳು	ಡಾ. ಎಸ್.ಎಸ್.ಅಂಗಡಿ	೨೧.೦೩.೨೦೦೫
೮.	ಕನ್ನಡ ಸಾಹಿತ್ಯದಲ್ಲಿ ನನ್ನಯ್ಯ	ಡಾ. ಎಫ್.ಟಿ.ಹಳ್ಳಿಕೇರಿ	೧೨.೦೪.೨೦೦೫
೯.	ಮಾಟ-ಮಂತ್ರಕ್ಕೆ ಸಂಬಂಧಿಸಿದ ಹಸ್ತಪ್ರತಿಗಳು	ಡಾ. ವೀರೇಶ ಬಡಿಗೇರ	೨೫.೦೬.೨೦೦೫
೧೦.	ಪ್ರೊ. ಎಂ.ಮರಿಯಪ್ಪ ಭಟ್ಟ ಅವರ ಸಾಹಿತ್ಯ ಸಾಧನೆ	ಡಾ. ಎಸ್.ಎಸ್.ಅಂಗಡಿ	೧೧.೦೮.೨೦೦೫
೧೧.	ಮಹಾಲಿಂಗ ಕವಿಯ ಮಹಾಲಿಂಗೇಂದ್ರ ವಿಜಯ	ಪ್ರೊ. ಬಿ.ಜಿ.ಬಿರಾದಾರ	೧೭.೧೦.೨೦೦೫
೧೨.	ಸಂಚಿಹೊನ್ನಮ್ಮನ ಹದಿಬದಿಯ ಧರ್ಮ	ಡಾ. ಎಸ್.ಆರ್.ಚನ್ನವೀರಪ್ಪ	೦೯.೧೨.೨೦೦೫
೧೩.	ಉದ್ಭಟಕಾವ್ಯ	ಡಾ. ಕೆ.ರವೀಂದ್ರನಾಥ	೦೯.೦೧.೨೦೦೬
೧೪.	ಬ್ರಹ್ಮ ಶಿವನ ಸಮಯ ಪರೀಕ್ಷೆ	ಡಾ. ಎಫ್.ಟಿ.ಹಳ್ಳಿಕೇರಿ	೦೭.೦೪.೨೦೦೬
೧೫.	ಕನ್ನಡಕುವಲಯಾನಂದ	ಡಾ. ಎಸ್.ಎಸ್.ಅಂಗಡಿ	೧೨.೦೭.೨೦೦೬
೧೬.	ಉದ್ಯಮ ಮತ್ತು ಮಾಧ್ಯಮಗಳಲ್ಲಿ ಹಸ್ತಪ್ರತಿಗಳ ಬಳಕೆ	ಡಾ. ವೀರೇಶ ಬಡಿಗೇರ	೨೯.೦೭.೨೦೦೬
೧೭.	ಸಾವಳಗಿ ಮಹಮ್ಮದ್ ಸಾಬನ: ತತ್ವಪದಗಳು	ಡಾ. ಎಸ್.ಆರ್.ಚನ್ನವೀರಪ್ಪ	೧೫.೦೯.೨೦೦೬
೧೮.	ತಮಿಳು ಹಸ್ತಪ್ರತಿತಜ್ಞ: ಉ.ಪಿ.ಸ್ವಾಮಿನಾಥ ಅಯ್ಯರ್	ಡಾ. ಎಫ್.ಟಿ.ಹಳ್ಳಿಕೇರಿ	೩೧.೧೦.೨೦೦೬
೧೯.	ಕುಮುದೇಂದು ಕವಿ ವಿರಚಿತ: ಕುಮುದೇಂದು ರಾಮಾಯಣ	ಡಾ. ಕೆ.ರವೀಂದ್ರನಾಥ	೦೮.೧೨.೨೦೦೬
೨೦.	ಹಾಲುಮತ ಪುರಾಣ: ಒಂದು ವಿವೇಚನೆ	ಪ್ರೊ. ಬಿ.ಜಿ.ಬಿರಾದಾರ	೨೪.೦೧.೨೦೦೭
೨೧.	ಜನಪದ ಸಾಹಿತ್ಯ ಸಂಪಾದನೆ: ತೊಡಕುಗಳು-ಸವಾಲುಗಳು	ಡಾ. ಎಸ್.ಎಸ್.ಅಂಗಡಿ	೧೭.೦೭.೨೦೦೭
೨೨.	ಶರಣ ಮೋನಪ್ಪಯ್ಯನಚಾರಿತ್ರ	ಡಾ. ಎಫ್.ಟಿ.ಹಳ್ಳಿಕೇರಿ	೦೨.೦೮.೨೦೦೭
೨೩.	ಆನುದೇವಾ ಹೊರಗಣವನು	ಡಾ. ಸಣ್ಣಪಾಪಯ್ಯ	೨೧.೦೮.೨೦೦೭
೨೪.	ಸಿದ್ಧಮಂಕ ಚರಿತೆ	ಚಂದ್ರಪ್ಪ ಎಸ್.	೧೭.೧೦.೨೦೦೭
೨೫.	ಶ್ರೀ ಸೇವಾಲಾಲ್‌ಚರಿತ್ರೆ	ಕುಮಾರ್ ಜೆ.	೧೭.೧೧.೨೦೦೭
೨೬.	ದಾಸರಾಯರ ಪದಗಳು	ಡಾ. ಎಸ್.ಆರ್.ಚನ್ನವೀರಪ್ಪ	೨೧.೦೭.೨೦೧೦
೨೭.	ನಿಜಗುಣಶಿವಯೋಗಿಗಳ ಕೈವಲ್ಯ ಪದ್ಧತಿ	ಕಾಂತೇಶರಡ್ಡಿ ಗೋಡಿಹಾಳ	೦೪.೦೮.೨೦೧೦
೨೮.	ಭಾಸ್ಕರಕವಿಯ ಜೀವಂಧರ ಚರಿತೆ	ವಿಠ್ಠಲ ತಳವಾರ	೨೫.೦೮.೨೦೧೦

೨೯.	ರುದ್ರಭಟ್ಟನ ಜಗನ್ನಾಥ ವಿಜಯ	ಬಾಳಪ್ಪ ಎ.ಬಿ	೨೨.೦೯.೨೦೧೦
೩೦.	ಅಪ್ರಕಟಿತ ಪ್ರಾಚೀನ ಸಾಹಿತ್ಯ ಮಾಲೆಯ ಸಂಪುಟಗಳು	ಡಾ. ಎಫ್.ಟಿ.ಹಳ್ಳಿಕೇರಿ	೦೬.೧೦.೨೦೧೦
೩೧.	ಆಕರ ಸಾಮಾಗ್ರಿಗಳಾಗಿ ಶಾಸನಗಳು	ಡಾ. ಕಲವೀರ ಮನ್ವಾಚಾರ್	೨೭.೧೦.೨೦೧೦
೩೨.	ಎಂ.ವಿ.ಸೀತಾರಾಮಯ್ಯ ಸಾಹಿತ್ಯ ಸಾಧನೆ	ಡಾ. ಕೆ.ರವೀಂದ್ರನಾಥ	೦೧.೧೨.೨೦೧೦
೩೩.	ದೇಪರಾಜನ ಸೊಬಗಿನ ಸೋನೆ	ಡಾ. ಎಸ್.ಎಸ್.ಅಂಗಡಿ	೦೯.೦೨.೨೦೧೧
೩೪.	೨ನೇ ಚಾವುಂಡರಾಯನ ಲೋಕೋಪಕಾರಂ	ಲಿಂಗಪ್ಪ ಗಗ್ರಿ	೨೩.೦೨.೨೦೧೧
೩೫.	ಷಟ್‌ಸ್ಥಲ ಶಿವಾಚುಣ	ಅನ್ನಪೂರ್ಣ ಗೋಸ್ಬಾಳ	೦೮.೦೩.೨೦೧೧
೩೬.	ಮಾಧವಾಂಕನ ಕಾವ್ಯ	ಡಾ. ಎಫ್.ಟಿ.ಹಳ್ಳಿಕೇರಿ	೧೩.೦೭.೨೦೧೧
೩೭.	ಬೇಂದ್ರೆ ಮತ್ತು ಶ್ರಾವಣ	ಡಾ. ಬಸವರಾಜ ಮಲಶೆಟ್ಟಿ	೦೪.೦೮.೨೦೧೧
೩೮.	ರಾಮಧ್ಯಾನ ಚರಿತೆ	ಎ.ಬಿ.ಬಾಳಪ್ಪ	೧೯.೧೦.೨೦೧೧
೩೯.	ಎಲ್.ಬಸವರಾಜ ಅವರ ಸಾಹಿತ್ಯ ಸಾಧನೆ	ಡಾ. ಎಸ್.ಎಸ್.ಅಂಗಡಿ	೦೮.೦೨.೨೦೧೨
೪೦.	ಕೆಂಭಾವಿ ಭೋಗಣ್ಣನ ಸಾಂಗತ್ಯ	ಡಾ. ಎಸ್.ಆರ್.ಚನ್ನವೀರಪ್ಪ	೨೨.೦೨.೨೦೧೨
೪೧.	ಪರಶುರಾಮ ರಾಮಾಯಣ	ಡಾ. ಕೆ.ರವೀಂದ್ರನಾಥ	೦೩.೦೩.೨೦೧೨
೪೨.	ರಾಮಲಿಂಗಕವಿಯ ಕನಕದಾಸರ ಚರಿತೆ	ಡಾ. ಎಫ್.ಟಿ.ಹಳ್ಳಿಕೇರಿ	೧೮.೦೮.೨೦೧೨
೪೩.	ವಡ್ಡಾರಾಧನೆ: ಹೊಸ ಒಳನೋಟಗಳ ಮೂಲಕ	ಕುಮಾರಸ್ವಾಮಿ ಬಿ.ಈ	೦೧.೦೯.೨೦೧೨
೪೪.	ಲಿಂಗಲೀಲಾ ವಿಲಾಸ ಚರಿತೆ	ಡಾ. ಎಸ್.ಎಸ್.ಅಂಗಡಿ	೧೫.೦೯.೨೦೧೨
೪೫.	ಸೊಪ್ಪೆಯ ಬಸವೇಶ್ವರನಚಾರಿತ್ರ	ಡಾ. ಕೆ.ರವೀಂದ್ರನಾಥ	೨೦.೧೦.೨೦೧೨
೪೬.	ವಡ್ಡಾರಾಧನೆ: ಒಂದು ಅವಲೋಕನ	ಜಲದರ್ಶಿನಿ ಜೆ.ಇ.	೦೩.೧೧.೨೦೧೨
೪೭.	ಕೋಶ ರಚನೆ: ಜಿ.ವೆಂಕಟಸುಬ್ಬಯ್ಯ ಅವರ ಸಾಧನೆ	ಡಾ. ಎಸ್.ಎಸ್.ಅಂಗಡಿ	೦೩.೧೨.೨೦೧೨
೪೮.	ಹಸ್ತಪ್ರತಿಗಳು: ಸಾಹಿತ್ಯಿಕ ಮತ್ತು ಚಾರಿತ್ರಿಕ ಮಹತ್ವ	ಡಾ. ಸಿ.ನಾಗಭೂಷಣ	೦೫.೦೧.೨೦೧೩
೪೯.	ರಾಷ್ಟ್ರೀಯತೆ ಮತ್ತು ರಾಷ್ಟ್ರಪ್ರಭುತ್ವದ ಪ್ರಮೇಯಗಳು ಮತ್ತು ಕನ್ನಡ ಗ್ರಂಥಸಂಪಾದನೆಯ ಪ್ರೇರಣೆಗಳು	ಡಾ. ವೀರೇಶ ಬಡಿಗೇರ	೦೯.೦೪.೨೦೧೩
೫೦.	ಹಳಗನ್ನಡ ಕಾವ್ಯಗಳ ಓದು ಮತ್ತು ಅನ್ವಯ	ಡಾ. ಮಾಧವ ಪೆರಾಜೆ	೩೦.೦೭.೨೦೧೩
೫೧.	ಸಂಸ್ಕೃತಿ ಅಧ್ಯಯನದ ಸಮಸ್ಯೆಗಳು	ಡಾ. ಕಿಕ್ಕೇರಿ ನಾರಾಯಣ	೧೨.೧೧.೨೦೧೩
೫೨.	ಹಸ್ತಪ್ರತಿಗಳು ಮತ್ತು ಆಧುನಿಕ ತಂತ್ರಜ್ಞಾನ	ಡಾ. ಎಂ.ಎ.ಆಳ್ವಾರ್	೦೬.೧೨.೨೦೧೩
೫೩.	ಸಂಶೋಧನೆಯಲ್ಲಿ ಪುರಾತತ್ವ ಆಕರಗಳ ಮಹತ್ವ	ಡಾ. ಸಿ.ಮಹದೇವ	೦೮.೦೭.೨೦೧೪
೫೪.	ಕರ್ನಾಟಕ-ಆಂಧ್ರ ಗಡಿನಾಡಿನ ಡೊಳ್ಳಿನ ಹಾಡುಗಳು	ಬಿ.ಎನ್.ವಿರೂಪಾಕ್ಷಿ	೨೨.೦೭.೨೦೧೪
೫೫.	ಅಮರಗನ್ನಡ	ಡಾ. ಶಿವಾನಂದ ವಿರಕ್ತಮಠ	೨೬.೦೮.೨೦೧೪
೫೬.	ಬಸವ ಕವಿಯ ಬಸವಕಲ್ಪಧೃವಂ	ಡಾ. ಎಸ್.ಆರ್.ಚನ್ನವೀರಪ್ಪ	೦೩.೧೨.೨೦೧೪
೫೭.	ಶಾಂತರಸಕವಿಯ ಯೋಗರತ್ನಾಕರ	ರವೀಂದ್ರಕುಮಾರ	೧೭.೧೨.೨೦೧೪
೫೮.	ಪಂಪ ರಾಮಾಯಣ	ಶಿವನಗೌಡ ಪಾಟೀಲ	೦೭.೦೧.೨೦೧೫

೫೯.	ನಯಸೇನನ ಧರ್ಮಾಮೃತ	ಡಾ. ಧನವಂತ ಹಾಜವಗೋಳ	೧೭.೦೧.೨೦೧೫
೬೦.	ರಾಘವಾಂಕನ ಹರಿಶ್ಚಂದ್ರಕಾವ್ಯ	ಡಿ.ಬಸವರಾಜ	೧೩.೦೨.೨೦೧೫
೬೧.	ಪ್ರಾಚೀನ ಸಾಹಿತ್ಯದಲ್ಲಿ ತಳವಾರರು	ವಿಠ್ಠಲ್ ತಳವಾರ	೦೧.೦೭.೨೦೧೫
೬೨.	ಕಕುದ್ಗಿರಿ ಮಹಾತ್ಮೆ ಅಥವಾ ಶಿವಗಂಗೆ ಮಹಾತ್ಮೆ	ಆಶಾ ಎನ್.ಟಿ.	೨೨.೦೭.೨೦೧೫
೬೩.	ಸಂಚಿಹೊನ್ನಮ್ಮನ ಹದಿಬದೆಯ ಧರ್ಮ	ಬಾಣದ ಮಂಜುನಾಥ	೩೦.೦೯.೨೦೧೫
೬೪.	ಸಂಶೋಧನೆಯಲ್ಲಿ ಕ್ಷೇತ್ರಕಾರ್ಯದ ಮಹತ್ವ	ಡಾ. ಶ್ರೀರಾಮ ಇಟ್ಟಣ್ಣನವರ	೧೬.೧೦.೨೦೧೫
೬೫.	ಹಸ್ತಪ್ರತಿ–ಗ್ರಂಥಸಂಪಾದನೆ: ದೇಸೀ ವಿದ್ವಾಂಸರ ಸಾಧನೆ	ಡಾ. ಬಿ.ನಂಜುಂಡಸ್ವಾಮಿ	೦೧.೦೧.೨೦೧೬
೬೬.	ಅವೈದಿಕ ದರ್ಶನಗಳು ಮತ್ತು ವಚನಕಾರರು	ಡಾ. ವೀರೇಶ ಬಡಿಗೇರ	೨೮.೦೬.೨೦೧೬
೬೭.	ತುರುಗಾಹಿ ರಾಮಣ್ಣನ ವಚನಗಳು	ಬಿ.ಎನ್.ವಿಜಯಶಂಕರ	೦೯.೦೮.೨೦೧೬
೬೮.	ಕನ್ನಡ ಹಸ್ತಪ್ರತಿಗಳಲ್ಲಿ ಸಾಮಾನ್ಯ ವೈದ್ಯ ಹಾಗೂ ಸ್ತ್ರೀವೈದ್ಯ	ಬೋರೇಶಿ ಈ.	೨೬.೧೧.೨೦೧೬
೬೯.	ಗದಾಯುದ್ಧ: ದುರ್ಯೋಧನನ ಶೋಕ ಪ್ರಸಂಗ	ಡಾ. ಎಸ್.ಎಸ್.ಅಂಗಡಿ	೧೫.೦೨.೨೦೧೭
೭೦.	ತತ್ವಪದ ಸಾಹಿತ್ಯ ಆಶಯ ಮತ್ತು ಅಭಿವ್ಯಕ್ತಿ	ಡಾ. ಅಮರೇಶ ನುಗಡೋಣಿ	೦೫.೦೭.೨೦೧೭
೭೧.	ಗಂಗಾಧರಂ ಶಾಸನ: ಅಧ್ಯಯನ ಮತ್ತು ವಿಶ್ಲೇಷಣೆ	ಡಾ. ಕಲವೀರ ಮನ್ವಾಚಾರ್	೦೯.೦೮.೨೦೧೭
೭೨.	ಹಸ್ತಪ್ರತಿ ಅಧ್ಯಯನದ ವಿವಿಧ ಆಯಾಮಗಳು	ಪ್ರವೀಣ ಆರ್.	೧೨.೧೨.೨೦೧೮
೭೩.	ಕನ್ನಡದಲ್ಲಿ ಶಿಲ್ಪಶಾಸ್ತ್ರ ಸಾಹಿತ್ಯ	ರಾಜಶೇಖರ	೧೭.೦೧.೨೦೧೯
೭೪.	ಎಂ.ಎಂ.ಕಲಬುರ್ಗಿ ಅವರ ವಚನ ಸಾಹಿತ್ಯ ಸಂಪಾದನೆಯ ವೈಧಾನಿಕತೆ	ಶ್ವೇತ ಹೆಚ್.ಬಿ.	೦೭.೦೨.೨೦೧೯
೭೫.	ಹಳಗನ್ನಡ ಕಾವ್ಯ: ವಾಚನ ಮತ್ತು ವ್ಯಾಖ್ಯಾನ	ಡಾ. ತಮಿಳ್ ಸೆಲ್ವಿ	೨೦.೦೨.೨೦೧೯
೭೬.	ಸಾಹಿತ್ಯ ಸಂಶೋಧನೆಯ ವಿವಿಧ ಆಯಾಮಗಳು	ಡಾ. ಅನುಸೂಯ ಕಾಂಬಳೆ	೨೦.೦೭.೨೦೧೯
೭೭.	ಭಾರತೀಯ ಸಾಂಸ್ಕೃತಿಕ ಬುನಾದಿ ಮತ್ತು ಕ್ರಿಯಾಶೀಲ ಆರ್ಥಿಕತೆಗೆ ವಿಶ್ವಕರ್ಮ ಕುಶಲಕಲೆಗಳ ಕೊಡುಗೆ	ಡಾ. ವಿ.ಪಿ.ರಾಘವನ್	೨೮.೦೧.೨೦೨೦
೭೮.	ಶಾಂತಲಿಂಗದೇಶಿಕ ಕವಿಯ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ	ಡಾ. ಕೆ.ರವೀಂದ್ರನಾಥ	೨೩.೧೨.೨೦೨೧
೭೯.	ರಾಮದಾಸರ ದಾಸ ಬೋಧೆ: ತಾತ್ವಿಕ ಹಿನ್ನೆಲೆ	ರಾಮಚಂದ್ರ ಪಡೇಸೂರ	೧೨.೦೧.೨೦೨೨
೮೦.	ಅಲ್ಲಮಪ್ರಭುದೇವರ ವಚನಗಳಲ್ಲಿ ಯೋಗದ ಅನುಸಂಧಾನ	ಸಾಗರ್ ಜಿ.ಸಿ.	೨೭.೦೧.೨೦೨೨
೮೧.	ಜೀವಣ್ಣ ಮಸಳಿ ಅವರ ಮಹಾಭಾರತ ವಿಮರ್ಶೆ: ಒಂದು ಅವಲೋಕನ	ವಿಶ್ವನಾಥ ಪತ್ತಾರ	೧೭.೦೨.೨೦೨೨

೧೦

ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆಯ ಪ್ರಕಟಣೆಗಳು

ಕೆ. ರವೀಂದ್ರನಾಥ

ಹಸ್ತಪ್ರತಿಶಾಸ್ತ್ರ ವಿಭಾಗ ಆರಂಭಗೊಂಡು ೨೫ ವರ್ಷಗಳು ಗತಿಸಿದವು. ಈ ಇಪ್ಪತ್ತೈದು ವರ್ಷಗಳಲ್ಲಿ ವಿಭಾಗದ ಸದಸ್ಯರಾದ ಪ್ರೊ. ಎ.ವಿ.ನಾವಡ, ಪ್ರೊ. ವೀರೇಶ ಬಡಿಗೇರ, ಪ್ರೊ. ಎಫ್.ಟಿ.ಹಳ್ಳಿಕೇರಿ, ಪ್ರೊ. ಕೆ. ರವೀಂದ್ರನಾಥ, ಪ್ರೊ. ಎಸ್.ಎಸ್.ಅಂಗಡಿ ಮತ್ತು ಪ್ರೊ. ಎಸ್.ಆರ್.ಚನ್ನವೀರಪ್ಪ ಇವರುಗಳು ವೈಯಕ್ತಿಕ ಹಾಗೂ ಸಾಂಸ್ಕೃತಿಕ ಯೋಜನೆಗಳನ್ನು ವ್ರತವೆಂಬಂತೆ ಪೂರೈಸಿದ್ದಾರೆ. ನಾಡಿನಾದ್ಯಂತ ಕ್ಷೇತ್ರಕಾರ್ಯ ಕೈಕೊಂಡು ಹಸ್ತಪ್ರತಿ ಸಂಗ್ರಹಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಸಂಗ್ರಹಿಸಿದ ಹಸ್ತಪ್ರತಿಗಳ ದುರಸ್ತಿ, ಸಂರಕ್ಷಣೆ, ಸೂಚಿರಚನೆ ಮತ್ತು ಅಧ್ಯಯನವೆಂಬ ನಾಲ್ಕು ನೆಲೆಯಲ್ಲಿ ನಿರ್ವಹಿಸಿದ ಕಾರ್ಯವನ್ನು ಸಾಂಸ್ಥಿಕ ಯೋಜನೆಯೆಂದು ಗುರುತಿಸಲಾಗಿದೆ. ಇದರ ಜೊತೆಗೆ ವ್ಯಕ್ತಿಗತವಾಗಿ ಒಬ್ಬೊಬ್ಬ ಪ್ರಾಧ್ಯಾಪಕರು ಒಂದೊಂದು ವರ್ಷ ವೈಯಕ್ತಿಕ ಯೋಜನೆಗಳನ್ನು ಪೂರೈಸಿದ್ದಾರೆ. ಹೀಗೆ ಸಾಂಸ್ಥಿಕ ಹಾಗೂ ವೈಯಕ್ತಿಕ ಜೊತೆಗೆ ನಿಯತಕಾಲಿಕೆಗಳ ಸಂಪಾದಕತ್ವ, ಪೀಠಗಳ ಸಂಚಾಲಕತ್ವ ಸೇರಿದಂತೆ ಶೈಕ್ಷಣಿಕ ಭಾಗವಾಗಿ ಹೆಚ್ಚುವರಿ ಹೊಣೆಗಾರಿಕೆಯನ್ನು ನಿರ್ವಹಿಸಿದ್ದಾರೆ. ಹಸ್ತಪ್ರತಿಶಾಸ್ತ್ರ ವಿಭಾಗದ ಮಾಲೆ ೨೫ ವರ್ಷಗಳಲ್ಲಿ ೭೫ಕ್ಕೂ ಹೆಚ್ಚು ಕೃತಿಗಳನ್ನು ಪ್ರಸಾರಾಂಗ ಪ್ರಕಟಿಸಿದೆ. ವಿಭಾಗ ಮಾಲೆಯಲ್ಲಿ ಪ್ರಕಟಗೊಂಡ ಕೃತಿಗಳು ಸಂಶೋಧಕ, ವಿದ್ವಾಂಸರಿಗೆ ಆಕರಸಾಮಗ್ರಿಗಳಾಗಿವೆ.

ಪ್ರಸ್ತುತ ಹಸ್ತಪ್ರತಿಶಾಸ್ತ್ರ ವಿಭಾಗದ ಮಾಲೆಯ ಒಟ್ಟು ಪ್ರಕಟಣೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಿಕೊಂಡು ಪರಿಚಯ ಮಾಡಲಾಗಿದೆ.

೧. ಸಂಪಾದಿತ ಕೃತಿಗಳು

೨. ಹಸ್ತಪ್ರತಿ ಸೂಚಿ ಸಂಪುಟಗಳು

೩. ಪ್ರಾಧ್ಯಾಪಕರ ಸ್ವತಂತ್ರ ಕೃತಿಗಳು

೪. ಹಸ್ತಪ್ರತಿ ವ್ಯಾಸಂಗ ಸಂಪುಟಗಳು

೫. ಹಸ್ತಪ್ರತಿ ಅಧ್ಯಯನ ಸಂಚಿಕೆಗಳು

೬. ವಿಭಾಗದ ನೆನಪಿನ ಸಂಪುಟಗಳು

೧. ಸಂಪಾದಿತ ಕೃತಿಗಳು

ಹಸ್ತಪ್ರತಿ ಸಂಗ್ರಹ–ಪರಿಷ್ಕರಣೆ ಮತ್ತು ಪ್ರಕಟಣೆಯ ಭಾಗವಾಗಿ ಕನ್ನಡದಲ್ಲಿ ಗ್ರಂಥಸಂಪಾದನಾ ಶಾಸ್ತ್ರ ಬೆಳವಣಿಗೆಯಾಗಿದೆ. ಈ ಶಾಸ್ತ್ರವನ್ನು ತ್ರಿಕರಣಶುದ್ಧವಾಗಿ ತಮ್ಮ ಗ್ರಂಥಸಂಪಾದನೆಯ ಮೂಲಕ ಪೂರೈಸಿಕೊಟ್ಟಿರುವ ವಿಭಾಗದ ಪ್ರಾಧ್ಯಾಪಕರ ಸಂಪಾದಿತ ಕೃತಿಗಳು ಹಲವು ದೃಷ್ಟಿಯಿಂದ ಮಹತ್ವವನ್ನು ಪಡೆದುಕೊಳ್ಳುತ್ತವೆ. ಪ್ರೊ. ಎಫ್.ಟಿ.ಹಳ್ಳಿಕೇರಿ ಅವರ ಎಮ್ಮೆಬಸವನ ಕಾಲಜ್ಞಾನ ಸಾಹಿತ್ಯಕೃತಿ ವಿಜಯನಗರ ಪತನದ ಸಂದರ್ಭದಲ್ಲಿ ಜೀವಿಸಿದ ಎಮ್ಮೆಬಸವನ ೪೩೦ ಕಾಲಜ್ಞಾನದ ವಚನಗಳನ್ನು ಪರಿಷ್ಕರಿಸಿ ಕೊಡಲಾಗಿದೆ. ೧೨ ಪುಟ ವ್ಯಾಪ್ತಿಯ ಪ್ರಸ್ತಾವನೆಯಲ್ಲಿ ಕವಿಯ ಇತಿವೃತ್ತ, ಇಷ್ಟದೈವ, ಸಾಹಿತ್ಯದ ಉದ್ದೇಶವನ್ನು ಚರ್ಚಿಸಲಾಗಿದೆ. 'ಕರಸ್ಥಲ ಸಾಹಿತ್ಯ' ಕೃತಿಯಲ್ಲಿ ಕರಸ್ಥಲ ವೀರಣ್ಣೊಡೆಯ, ಕರಸ್ಥಲ ನಾಗಿದೇವ, ಕರಸ್ಥಲ ಮಲ್ಲಿಕಾರ್ಜುನರು ರಚಿಸಿದ ಕಂದ, ಶತಕ, ವೃತ್ತ, ತ್ರಿಪದಿ, ರಗಳೆ, ವಚನ, ಸ್ವರವಚನ, ತಾರಾವಳಿ, ಸ್ತೋತ್ರ, ಚೌಪದಿ ಮುಂತಾದ ಪ್ರಕಾರಗಳನ್ನು ಸಂಪಾದಿಸಿ ಕೊಡುವುದರ ಮೂಲಕ ಕರಸ್ಥಲ ಸಾಹಿತ್ಯ ಪರಂಪರೆಯನ್ನು ಒಂದು ಕಡೆ ವಿಶ್ಲೇಷಿಸಿದ್ದಾರೆ. 'ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ' ಕೃತಿ ೭ ಸಂಧಿ ೧೪೨ ಪದ್ಯಗಳ ಕಿರುಕೃತಿ. ಭಾಮಿನಿ–ವಾರ್ಧಕ ಷಟ್ಪದಿಗಳ ಸಮುಚ್ಚಯವಾಗಿರುವ ಕಾವ್ಯವನ್ನು ಹರಪನಹಳ್ಳಿ ಪಾಳೇಗಾರರ ಬಾಗುಳಿಯ ಬಸಪ್ಪನಾಯಕನ ಕಾಲದಲ್ಲಿದ್ದ ಪುರೋಹಿತ ಹಿರಿಯಣ್ಣ ಈ ಶಾಸ್ತ್ರ ಕೃತಿಯನ್ನು ರಚಿಸಿದ್ದಾನೆ. ಹಂಪಿಯ ಗಾಯತ್ರಿಪೀಠದ ಪ್ರತಿ ಹಾಗೂ ಲಿಂಗಸುಗೂರು ತಾಲೂಕಿನ ತಲೆಕಟ್ಟು ಗ್ರಾಮದ ಪ್ರತಿಯನ್ನು ಬಳಸಿಕೊಂಡು ಸಂಪಾದಿಸಿದ ಕೃತಿ 'ಚಿದಾನಂದಾವಧೂತ ಚರಿತ್ರೆ'. ಅಪ್ಪಯ್ಯನೆಂಬ ಕವಿ ಬರೆದ ಈ ಚಾರಿತ್ರಿಕ ಕಾವ್ಯ ಚಿದಾನಂದವದೂತರ ಜೀವನಚರಿತ್ರೆಯನ್ನು ಕನಕಗಿರಿ, ಆನೆಗುಂದಿ ಮತ್ತು ಚಿಕ್ಕಜಂತಕಲ್ ಗ್ರಾಮಗಳ ಚರಿತ್ರೆಯನ್ನು ನಿರೂಪಿಸುತ್ತದೆ. 'ಕನ್ನಡ ಜೈನ ಹಾಡುಗಳು' ಕೃತಿಯನ್ನು ಡಾ. ಎಫ್.ಟಿ.ಹಳ್ಳಿಕೇರಿ ಹಾಗೂ ಪ್ರೊ. ಕೆ.ರವೀಂದ್ರನಾಥ ಅವರು ಸಂಪಾದಿಸಿದ್ದಾರೆ. ಲಿಂಗಾಯತ ಸ್ವರವಚನ–ತತ್ವಪದಗಳಂತೆ, ಹರಿದಾಸರ ಕೀರ್ತನೆಗಳಂತೆ ಜೈನರಲ್ಲಿ ಹಾಡುಗಳಿವೆ. ಈ ಹಾಡುಗಳ ಪ್ರಕಟಣೆಗೆ ಒಂದು ಶತಮಾನಕ್ಕೂ ಹೆಚ್ಚು ಇತಿಹಾಸವಿದೆ. ಕರ್ನಾಟಕದ ಮಠ–ಮಾನ್ಯಗಳ, ಶಿಕ್ಷಣ ಸಂಸ್ಥೆಗಳ ಹಸ್ತಪ್ರತಿಗಳನ್ನು ಪರಿಶೋಧಿಸಿ ೪೬೧ ಹಾಡುಗಳನ್ನು ಸಂಪಾದಿಸಿದ ಕೃತಿ. ಡಿ.ಎಲ್.ನರಸಿಂಹಾಚಾರ್ ಅವರ ಶತಮಾನ ಸ್ಮರಣೆಗಾಗಿ 'ಡಿ.ಎಲ್.ನರಸಿಂಹಾಚಾರ್: ಶತಮಾನ ಸ್ಮರಣೆ' ಕೃತಿಯಲ್ಲಿ ಡಿ.ಎಲ್.ನರಸಿಂಹಾಚಾರ್ ಅವರ ವ್ಯಕ್ತಿತ್ವವನ್ನು ಪರಿಚಯಿಸುವ ೪೩ ಲೇಖನಗಳು, ಎರಡನೆಯ ಭಾಗದಲ್ಲಿ ಡಿ.ಎಲ್.ಎನ್. ಅವರ ಸಾಹಿತ್ಯ ಕುರಿತಂತೆ ೧೩ ಲೇಖನಗಳನ್ನು ಒಳಗೊಂಡಿದೆ. 'ಮಲ್ಲಿಕಾರ್ಜುನ ಕವಿಯ ಹಾಲಸಿದ್ದೇಶ್ವರ ಸಾಂಗತ್ಯ' ಸ್ಥಳೀಯ ಮಠಾಧಿಪತಿಯೊಬ್ಬನ ಚರಿತ್ರೆಯನ್ನು ನಿರೂಪಿಸುವ ಕಾವ್ಯ. ಕವಿ ಮಲ್ಲಣ್ಣ ರಚಿಸಿದ 'ಕೋಕಶಾಸ್ತ್ರ' ಕಾಮಶಾಸ್ತ್ರವನ್ನು ವಿವರಿಸುವ ಲೌಕಿಕಶಾಸ್ತ್ರ ಕೃತಿಯನ್ನು ಬೆಳಕಿಗೆ ತರಲಾಗಿದೆ. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಕೋಳೂರು ಶಂಕರ ಕವಿಯ 'ಮಾಧವಾಂಕ ಚರಿತೆ' ಸತ್ಯೇಂದ್ರ ಚೋಳನ ಕಥೆಯನ್ನು ನಿರೂಪಿಸುವ ಕೃತಿ. ೧೮ನೇ ಶತಮಾನದ ಆದಿಭಾಗದಲ್ಲಿ ಕೋಳೂರು ಶಂಕರ ಕವಿಯ ಚೋರ ಬಸವೇಶ್ವರ ಕಾವ್ಯ, ನವಮೋಹನ ತರಂಗಿಣಿ, ತಿಂಥಣಿ ಮೋನಪ್ಪಯ್ಯ ಚರಿತ್ರೆಗಳ ಜೊತೆಗೆ ಮಾಧವಾಂಕ ಚರಿತೆ ಹೊಸ ಸೇರ್ಪಡೆಯಾಗಿದೆ. ಕನ್ನಡ ಗ್ರಂಥಸಂಪಾದನೆಯಲ್ಲಿ ದುಡಿದ ಮಹನೀಯರಲ್ಲಿ ಎಚ್. ದೇವಿರಪ್ಪನವರು ಒಬ್ಬರು. ಇವರ ಸಾಹಿತ್ಯ ಸಾಧನೆ ಕುರಿತು ಹೊನ್ನಾಳಿಯಲ್ಲಿ ನಡೆಸಿದ ವಿಚಾರಸಂಕಿರಣಗಳ ಪ್ರಬಂಧಗಳನ್ನು ಸಂಪಾದಿಸಿಕೊಟ್ಟ ಕೃತಿ 'ಹೆಚ್.ದೇವಿರಪ್ಪ: ಸಾಹಿತ್ಯ ಸಾಧನೆ'. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ಬಹಳ ಹಿಂದೆಯೇ ಪಂ. ಎಸ್.ಬಸಪ್ಪನವರಿಂದ ಸಂಪಾದಿಸಲ್ಪಟ್ಟಿತ್ತು. ಮತ್ತೊಂದು ಹಸ್ತಪ್ರತಿ ಸಹಾಯದಿಂದ ಪರಿಷ್ಕೃತ ಆವೃತ್ತಿಯನ್ನು ಪ್ರೊ. ಎಫ್.ಟಿ.ಹಳ್ಳಿಕೇರಿ ಅವರು ಪ್ರಕಟಿಸಿದ್ದಾರೆ.

ಡಾ. ವೀರೇಶ ಬಡಿಗೇರ ಅವರ 'ಹಳೆಯ ಲಾವಣಿಗಳು-೧'ರಲ್ಲಿ ಉತ್ತರ ಕರ್ನಾಟಕದ ವಿಶಿಷ್ಟ ಪದ್ಯ ಪ್ರಕಾರವಾದ ಲಾವಣಿಗಳನ್ನು ಹಸ್ತಪ್ರತಿಶಾಸ್ತ್ರ ವಿಭಾಗದ ಹಸ್ತಪ್ರತಿ ಭಂಡಾರದಲ್ಲಿ ಹಸ್ತಪ್ರತಿಗಳನ್ನು ಅವಲೋಕಿಸಿ ಸಂಪಾದಿಸಿದ್ದಾರೆ. ಚರಿತ್ರೆ-ಪುರಾಣಗಳು-೧೦, ಕಾಮ-ಪ್ರೇಮ-೨೭, ನೀತಿ-ತಾತ್ವಿಕತೆ-೧೪, ಕಲ್ಕಿ-ತುರಾಯಿ-೨೭ ಒಟ್ಟು ೭೩ ಲಾವಣಿಗಳು ಇಲ್ಲಿ ಸಂಗ್ರಹಗೊಂಡಿವೆ. 'ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರಸಂಗ್ರಹ' ಕೃತಿಯನ್ನು ಡಾ. ಎಸ್.ಆರ್.ಚನ್ನವೀರಪ್ಪ ಅವರ ಜೊತೆಗೂಡಿ ಸಂಪಾದಿಸಿದ್ದಾರೆ. ವಿಷ್ಣುಶರ್ಮನ ಪಂಚತಂತ್ರದಲ್ಲಿ ಮಿತ್ರ, ಸುಹೃಲ್ಲಾಭ, ಸಂಧಿ, ಲಬ್ಧ ಮತ್ತು ಕಾರ್ಯತತ್ವವೆಂಬ ೫ ತಂತ್ರಗಳಿಗೆ ಸಂಬಂಧಿಸಿದ ೩೨ ಕಥೆಗಳ ಸಂಕಲನವಿದು. ಏಕೈಕ ಹಸ್ತಪ್ರತಿಯಿಂದ ಪರಿಷ್ಕರಣೆ ಮಾಡಿದ 'ಭದ್ರಕಾಳಿ ವಿವಾಹ'ವನ್ನು ವಿರೂಪಣ್ಣನೆಂಬ ಕವಿ ವಿಶ್ವಕರ್ಮ ಸಮುದಾಯದವನೆಂಬುದನ್ನು ಗುರುತಿಸಲಾಗಿದೆ. 'ತತ್ವ ಕೊರವಂಜಿ' ಕೃತಿಯಲ್ಲಿ ಕೊರವಂಜಿ ಸಾಹಿತ್ಯ, ಕೊರವಂಜಿಯ ಕುಲ ಮೂಲ ನೆಲೆಗಳನ್ನು ಸಂಗ್ರಹಿಸಿಕೊಡಲಾಗಿದೆ. 'ಮಳೆಯ ರಾಜ ಚಾರಿತ್ರ' ಸಜ್ಜೆಯ ಸಿದ್ಧಲಿಂಗ ಕವಿಯ ಈ ಕೃತಿ ಎರಡು ಹಸ್ತಪ್ರತಿಗಳ ಸಹಾಯದಿಂದ ಸಂಪಾದನೆ ಮಾಡಲಾಗಿದೆ.

ಡಾ ಕೆ.ರವೀಂದ್ರನಾಥ ಅವರ ವಚನಸಾಹಿತ್ಯ ಅಧ್ಯಯನ ವ್ಯಾಪ್ತಿ ವಿಸ್ತಾರವಾದದ್ದು. ಅವುಗಳ ನಿರ್ವಚನ-ಅಧ್ಯಯನದ ಜೊತೆಗೆ ವಚನ ಸಂಪಾದನೆಯನ್ನು ಮಾಡಿದ್ದಾರೆ. ಶರಣರು ಕೇವಲ ವಚನಗಳನ್ನು ರಚಿಸದೆ ವಚನೇತರ ಸಾಹಿತ್ಯ ಪ್ರಕಾರಗಳಾದ ಕಾಲಜ್ಞಾನ, ಮಂತ್ರಗೋಪ್ಯ, ಕರಣಹಸುಗೆ, ಮಿಶ್ರಾರ್ಪಣ, ಸ್ವರವಚನಗಳು, ಸೃಷ್ಟಿಯ ವಚನಗಳು, ದೀಕ್ಷಾ ವಿಧಾನ, ತ್ರಿವಿಧಿ ಸಾಹಿತ್ಯ ಮುಂತಾದ ಪ್ರಕಾರಗಳನ್ನು ಹಸ್ತಪ್ರತಿ ಮೂಲದಿಂದ ಪರಿಷ್ಕರಿಸಿ ಕೊಡಲಾಗಿದೆ. 'ಕನ್ನಡ ಜೈನ ಹಾಡುಗಳು' ಜೈನ ಹಸ್ತಪ್ರತಿ ಅವಲೋಕನದಿಂದ ಸಂಗ್ರಹಿಸಿದ ೪೫೧ ಹಾಡುಗಳನ್ನು ಮೊದಲ ಬಾರಿಗೆ ಸಂಗ್ರಹಿಸಿದ ಕೃತಿಯಾಗಿದೆ. ಓರಂಗಲ್ಲಿನ ಕಾಕತೀಯರ ಪರಿಸರದಲ್ಲಿದ್ದ ಗುಂಡಬ್ರಹ್ಮಯ್ಯರೆಂಬ ಶರಣರನ್ನು ಕುರಿತು ೬ ಜನರು ಕಾವ್ಯ ಬರೆದಿದ್ದಾರೆ. ಈ ಕೃತಿಗಳು ಸಾಂಸ್ಕೃತಿಕವಾಗಿ ಕರ್ನಾಟಕಾಂಧ್ರ ಪರಿಸರದ ಶೂಲದ ಹಬ್ಬದ ಆಚರಣೆ, ಶರಣ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಸಮಗ್ರ ಕೃತಿಗಳನ್ನು ಒಂದೆಡೆ ಪರಿಷ್ಕರಿಸಿ ಪ್ರಕಟಿಸಲಾಗಿದೆ.

ಶರಣರ ತತ್ವ ಸಿದ್ಧಾಂತಗಳನ್ನು 'ಉದ್ಧರಣೆ ಸಾಹಿತ್ಯ' ಎಂಬ ವಿಶೇಷ ಚಿತ್ರಸಾಹಿತ್ಯ ಮತ್ತು ವಾಚ್ಯದಲ್ಲಿ ವಿವರಿಸುವ ಅಪೂರ್ವ ಹಸ್ತಪ್ರತಿಗಳು ದೊರೆಯುತ್ತವೆ. ಕಲ್ಲುಗಿಡಿ ಸಿದ್ಧಪ್ಪನವರ ಮನೆಯಲ್ಲಿ ಕಂಪ್ಲಿಯಲ್ಲಿ ದೊರೆತ ಹಸ್ತಪ್ರತಿಯ ಸಹಾಯದಿಂದ ಈ ಕೃತಿಯನ್ನು ಸಂಪಾದಿಸಲಾಗಿದೆ. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತಿದೆ. ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ ಕಲ್ಲೂರಿನ ಧೂಪದ ಮನೆತನ ಕವಿ ಪರಂಪರೆಯನ್ನು ಹೊಂದಿದೆ. ಈ ಮನೆತನದ ಲಿಂಗಣ್ಣೊಡೆಯ 'ವರರಮ್ಯ ರತ್ನಾಕರ' ಎಂಬ ಕೃತಿಯನ್ನು ರಚಿಸಿದ್ದಾನೆ. ಪೌರಾಣಿಕ ಕಥೆಗಳು ಮತ್ತು ಶರಣ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಲಿಂಗಾಯತ ತತ್ವವನ್ನು ವಿವರಿಸುವ ಈ ಕೃತಿಯನ್ನು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಲಾಗಿದೆ. ಇದಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ಕಿತ್ತೂರು ಸಂಸ್ಥಾನದ ರುದ್ರಮ್ಮನನ್ನು ಕುರಿತು ಯಕ್ಷಗಾನದಲ್ಲಿ ರಚನೆಯಾದ 'ಕಿತ್ತೂರು ರುದ್ರಮ್ಮನ ಕಥೆ'ಯನ್ನು ಸೂಕ್ತ ಪ್ರಸ್ತಾವನೆಯೊಂದಿಗೆ ಸಂಪಾದಿಸಿ ಕೊಡಲಾಗಿದೆ. ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಕೃತಿಯು ಬಹುಹಿಂದೆಯೆ ಪ್ರಕಟಿತವಾಗಿತ್ತು. ಇತ್ತೀಚೆಗೆ ದೊರೆತ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಯನ್ನು ಬಳಸಿಕೊಂಡು ಸಂಪಾದಿಸಲಾಗಿದೆ. ಕನ್ನಡ ವಿಶ್ವವಿದ್ಯಾಲಯದ ರಜತಮಹೋತ್ಸವ ನೆನಪಿಗಾಗಿ ಕನ್ನಡ ಗ್ರಂಥಸಂಪಾದಕರ ಸಾಧನೆ ಮಾಲೆಯಡಿ 'ಬಿ.ಎಸ್ ಸಣ್ಣಯ್ಯ: ಜೀವನ ಮತ್ತು ಸಾಧನೆ' ಎಂಬ

ವಿಚಾರ ಸಂಕಿರಣವನ್ನು ಶ್ರವಣಬೆಳಗೊಳದಲ್ಲಿ ಏರ್ಪಡಿಸಲಾಗಿತ್ತು. ಅಲ್ಲಿ ಮಂಡಿತವಾದ ಪ್ರಬಂಧಗಳನ್ನು ಸಂಗ್ರಹಿಸಿ ಸಂಪಾದಿಸಲಾಗಿದೆ.

ಡಾ. ಎಸ್.ಎಸ್.ಅಂಗಡಿಯವರು ಪ್ರಾಚೀನ ಕೃತಿಗಳನ್ನು ಸರಳ ಗದ್ಯಾನುವಾದದಲ್ಲಿ ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇದರಂಗವಾಗಿ 'ಸರಳ ಶಬ್ದಮಣಿದರ್ಪಣ'ವನ್ನು ಸೂತ್ರಗಳಿಗೆ ಸರಳವಾದ ಹೊಸಗನ್ನಡದಲ್ಲಿ ವಿವರಣೆ ನೀಡಿ ಸರಳೀಕರಣಗೊಳಿಸಲಾಗಿದೆ. ಅನುಬಂಧಗಳಲ್ಲಿ ಶಬ್ದಾರ್ಥನಿರ್ಣಯ, ವ್ಯಾಕರಣ ಪರಿಭಾಷೆ, ಕ್ರಿಯಾಪದ ಮತ್ತು ಅರ್ಥಕೋಶಗಳಿಂದ ಈ ಕೃತಿ ಶಾಸ್ತ್ರೀಯ ಸಂಪಾದನೆಯನ್ನು ಪಡೆದುಕೊಂಡಿದೆ. ಇದೇ ರೀತಿ ಆಂಡಯ್ಯನ 'ಸರಳ ಕಬ್ಬಿಗರ ಕಾವ' ಹೆಸರಿನಲ್ಲಿ ಸಂಪಾದಿಸಿದ್ದಾರೆ. ಸಿದ್ಧನಂಜೇಶನ 'ರಾಘವಾಂಕ ಚರಿತೆ' ಕನ್ನಡ ಕಾವ್ಯಗಳಲ್ಲಿ ಅಪರೂಪದ ಕೃತಿ. ಈ ಕೃತಿ ಈ ಹಿಂದೆ ಸಂಪಾದನೆಯಾಗಿತ್ತು. ಇತ್ತೀಚಿನ ಬೇರೆ ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಕೊಡಲಾಗಿದೆ.

ಡಾ. ಎಸ್.ಆರ್.ಚನ್ನವೀರಪ್ಪನವರು ಸಂಪಾದಿಸಿದ 'ನಾಗಲಿಂಗಸ್ವಾಮಿ ತತ್ವಪದಗಳು' ಕರ್ನೂಲ ಜಿಲ್ಲೆಯ ಗುಡಿಕಲ್ಲು ಪೀಠಾಧ್ಯಕ್ಷರಾದ ಶ್ರೀ ಹುಸೇನ ಪೀರ ಸ್ವಾಮಿಗಳವರ ಶಿಷ್ಯ ನಾಗಲಿಂಗಸ್ವಾಮಿ ಒಬ್ಬ ತತ್ವಪದಕಾರ. ೫೮ ತತ್ವಪದಗಳನ್ನು ಒಳಗೊಂಡ ಈ ಕೃತಿಯನ್ನು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಿದ್ದಾರೆ. ಬದುಕಿನ ಅಸ್ಥಿರತೆ, ಚತುರ್ವರ್ಣಗಳ ಮೇಲಾಟ, ಸಂಸಾರದ ಜಂಜಾಟ, ಮೋಕ್ಷ-ಪಾರಮಾರ್ಥಿಕ ಜ್ಞಾನಗಳ ಪರಿಕಲ್ಪನೆಯನ್ನು ಪ್ರತಿಪಾದಿಸುವ ತತ್ವಪದಗಳ ಆಶಯವನ್ನು ಪ್ರಸ್ತಾವನೆಯಲ್ಲಿ ಚರ್ಚಿಸಲಾಗಿದೆ. ೧೫೫೫ ಸ್ವರವಚನಗಳ 'ಸ್ವರವಚನ ತರಂಗ-೧'ನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸಂಗ್ರಹಾಲಯದ ಹಸ್ತಪ್ರತಿಗಳನ್ನು ಬಳಸಿಕೊಂಡು ಸಂಪಾದಿಸಲಾಗಿದೆ. ಈ ಕೃತಿಯಲ್ಲಿ ಮುದ್ರಿಕೆ, ಸ್ಥಳನಾಮ, ಆಕರಸೂಚಿಗಳನ್ನು ನೀಡಿರುವುದು ಅಧ್ಯಯನಕಾರರಿಗೆ ಸಹಾಯಕವಾಗುತ್ತದೆ. ಡಾ. ವೀರೇಶ ಬಡಿಗೇರ ಅವರೊಂದಿಗೆ ಸಂಪಾದಿಸಿದ ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರಸಂಗ್ರಹವನ್ನು ಬಳ್ಳಾರಿ ಪರಿಸರದ ಹಸ್ತಪ್ರತಿಯ ಸಹಾಯದಿಂದ ಸಂಪಾದಿಸಿದ್ದಾರೆ. 'ದಾಸರಾಯರ ಪದಗಳು' ಎಂಬುದು ಅನುಭಾವಸಾಹಿತ್ಯ ಪ್ರಕಾರ. ಇಲ್ಲಿಯ ಹಾಡುಗಳಲ್ಲಿ ಸುಳಾದಿ, ಉಗಾಭೋಗ, ಕೀರ್ತನೆ, ಸುವ್ವಿಹಾಡು, ವೃತ್ತನಾಮ, ಉದಯರಾಗಗಳನ್ನೊಳಗೊಂಡ ಗೇಯ ಪದ್ಯರೂಪಗಳನ್ನು ಪರಿಷ್ಕರಿಸಿ ಕೊಡಲಾಗಿದೆ. 'ಬಸವಕಲ್ಪದುಮಂ' ಎಂಬುದು ಬಸವಣ್ಣನ ಜೀವನ ಕಾವ್ಯ. ೧೭ನೇ ಶತಮಾನದ ಬಸವ ಕವಿಯಿಂದ ರಚನೆಯಾದ ಈ ಕೃತಿಯನ್ನು ಏಕೈಕ ಹಸ್ತಪ್ರತಿಯಿಂದ ಸಂಪಾದಿಸಲಾಗಿದೆ. ಹೂವಿನಮಡು(ದಾವಣಗೆರೆ ಜಿಲ್ಲೆ) ಗ್ರಾಮದಲ್ಲಿ ದೊರೆತ 'ನೀತಿ ಕಥಾಸಾರ' ಎಂಬ ಕೃತಿ ದುರ್ಗಸಿಂಹನ ಪಂಚತಂತ್ರದ ಕಥೆಗಳಂತೆ ರಚನೆಯಾಗಿದೆ. ನೈತಿಕತೆಯನ್ನು ಪ್ರತಿಪಾದಿಸುವ ಇಲ್ಲಿಯ ಕಥೆಗಳು ಕನ್ನಡ ಕಥಾ ಸಾಹಿತ್ಯಕ್ಕೆ ಹೊಸ ಸೇರ್ಪಡೆಯನ್ನು ಈ ಕೃತಿಯ ಸಂಪಾದನೆಯಿಂದ ಡಾ. ಎಸ್.ಆರ್.ಚನ್ನವೀರಪ್ಪ ಅವರು ಮಾಡಿದ್ದಾರೆ.

'ಪ್ರಾಚೀನ ಲೇಖನ ಸಾಮಗ್ರಿಗಳು' ಎಂಬುದು ಅನುವಾದ ಕೃತಿ. ಡಾ. ಶ್ರೀಮತಿ ಆಲ್ಬರ್ಟಿನ್ ಗೌರ್ ಅವರ ಇಂಗ್ಲಿಷ್ ಕೃತಿಯನ್ನು ಡಾ. ಶ್ರೀನಿವಾಸ ಹಾವನೂರ ಮತ್ತು ಲಕ್ಷ್ಮೀನಾರಾಯಣ ಅರೋರ ಅವರು ಕನ್ನಡೀಕರಿಸಿದ್ದಾರೆ. ಈ ಕಿರುಕೃತಿಯಲ್ಲಿ ಶಿಲೆ, ಮೊಹರುಗಳು, ಆಮೆಚಿಪ್ಪು, ದಂತ, ಹಲಗೆ, ಬಿದಿರು, ತಾಳೆಗರಿ, ಅರಳಿಎಲೆ, ತೊಗಟೆ, ಜೇಡಿಮಣ್ಣು, ಮಡಿಕೆ ಚೂರುಗಳು, ಲೋಹಗಳು, ಚರ್ಮ, ರೇಷ್ಮೆ ಇತ್ಯಾದಿ ಸಾಮಗ್ರಿಗಳನ್ನು ಬಳಸಿಕೊಳ್ಳುತ್ತಿದ್ದ ಇತಿಹಾಸವನ್ನು ಈ ಕೃತಿ ವಿವರಿಸುತ್ತದೆ.

೨. ಹಸ್ತಪ್ರತಿ ಸೂಚೀಸಂಪುಟಗಳು

ಹಸ್ತಪ್ರತಿಶಾಸ್ತ್ರ ವಿಭಾಗದ 'ಹಸ್ತಪ್ರತಿಗಳ ಸರ್ವೇಕ್ಷಣೆ-ಸಂಗ್ರಹ ಹಾಗೂ ಸೂಚೀಕರಣ ಮತ್ತು ಪ್ರಕಟಣೆ' ಎಂಬ ನಿರಂತರವಾದ ಸಾಂಸ್ಥಿಕ ಯೋಜನೆಯನ್ನು ನಿರ್ವಹಿಸುತ್ತಾ ಬಂದಿದೆ. ವಿಭಾಗದ ಆರು ಜನ ಪ್ರಾಧ್ಯಾಪಕರು ಜಿಲ್ಲಾವಾರು ಕ್ಷೇತ್ರಕಾರ್ಯಮಾಡಿ ಸಂಗ್ರಹಗೊಂಡ ಹಸ್ತಪ್ರತಿಗಳ ಲಕ್ಷಣ-ಸ್ವರೂಪ-ಪ್ರಕಾರ ಹಾಗೂ ಅದರ ಒಟ್ಟು ವೈಶಿಷ್ಟ್ಯವನ್ನು ಪರಿಚಯಿಸುವ ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸುತ್ತಾ ಬಂದಿದ್ದಾರೆ. ಕನ್ನಡ ವಿಶ್ವವಿದ್ಯಾಲಯ 'ಹಸ್ತಪ್ರತಿಸೂಚೀ ಸಂಪುಟ' ಹೆಸರಿನಲ್ಲಿ ಇದುವರೆಗೆ ೫ ಸಂಪುಟಗಳು ಪ್ರಕಟಗೊಂಡಿವೆ. ೬ನೇ ಸಂಪುಟ ಮುದ್ರಣಕ್ಕೆ ಸಿದ್ಧಗೊಂಡಿದೆ.

ಹಸ್ತಪ್ರತಿಸೂಚೀ-೧ ಮತ್ತು ೩ನ್ನು ಡಾ. ಎಫ್.ಟಿ.ಹಳ್ಳಿಕೇರಿ ಮತ್ತು ಡಾ. ಕೆ.ರವೀಂದ್ರನಾಥ ಅವರು ಸಂಪಾದಿಸಿದ್ದಾರೆ. ಸಂಪುಟ ೨ ಮತ್ತು ೪ನ್ನು ಡಾ. ವೀರೇಶ ಬಡಿಗೇರ ಹಾಗೂ ಡಾ. ಎಸ್.ಆರ್.ಚನ್ನವೀರಪ್ಪ ಅವರು ಸಂಪಾದಿಸಿದ್ದಾರೆ. ಸಂಪುಟ-೫ನ್ನು ಡಾ. ವೀರೇಶ ಬಡಿಗೇರ ಅವರು ಸಂಪಾದಿಸಿದ್ದಾರೆ. ಇವರ ಸಂಪಾದನೆಯಲ್ಲಿ ಸಂಪುಟ ೬ ಪ್ರಕಟಣೆಗೆ ಸಿದ್ಧವಾಗಿದೆ. ೪೦೦ ಹಸ್ತಪ್ರತಿ ಕಟ್ಟುಗಳಂತೆ ಇದುವರೆಗೆ ೨೪೦೦ ಹಸ್ತಪ್ರತಿಗಳ ಪರಿಪೂರ್ಣ ಮಾಹಿತಿಯನ್ನು ಈ ಸಂಪುಟಗಳು ಒದಗಿಸುತ್ತವೆ. ಪ್ರತಿಯೊಂದು ವಿವರಣಾತ್ಮಕ ಸೂಚೀಗಳು ಕರ್ತೃ, ಕಾಲವಿಚಾರ, ಅದರ ವಸ್ತು, ಹಸ್ತಪ್ರತಿಯ ಪ್ರಕಾರ(ತಾಡೋಲೆ-ಕಾಗದ) ಭಾಷೆ, ಲಿಪಿ, ಸಮಗ್ರ/ಅಸಮಗ್ರ ಇತ್ಯಾದಿ ಒಂದು ಪ್ರತಿಯ ಒಟ್ಟು ಪರಿಚಯವನ್ನು ವಿವರಣಾತ್ಮಕವಾಗಿ ತಿಳಿಸಿಕೊಡುತ್ತವೆ. ಸಂಪುಟ-೧ರಲ್ಲಿ ೬೨೩ ಕಾವ್ಯಗಳು, ೧೩೭ ಕವಿಗಳು, ೬೮ ಸ್ಥಳನಾಮಗಳು, ೭೦ ಜನ ಲಿಪಿಕಾರರು, ೧೪೬ ಜನ ಹಸ್ತಪ್ರತಿ ದಾನಿಗಳನ್ನು ಪರಿಚಯಿಸಿದರೆ; ಸಂಪುಟ-೨ರಲ್ಲಿ ೫೪೫ ಕಾವ್ಯಗಳು, ೧೨೦ ಕವಿಗಳು, ೧೧೨ ಸ್ಥಳನಾಮಗಳು, ೪೯ ಲಿಪಿಕಾರರು, ೨೩ ಜನ ಪ್ರತಿಮಾಡಿದವರು, ೮೨ ಜನ ಹಸ್ತಪ್ರತಿ ದಾನಿಗಳ ಉಲ್ಲೇಖಗಳಿವೆ. ಸಂಪುಟ-೩ರಲ್ಲಿ ೫೯೫ ಕಾವ್ಯಗಳು, ೧೧೨ ಕವಿಗಳು, ೬೩ ಜನ ಲಿಪಿಕಾರರು, ೭೨ ಜನ ಹಸ್ತಪ್ರತಿ ದಾನಿಗಳ ವಿವರಣೆಯಿದೆ. ಅದೇ ರೀತಿ ಸಂಪುಟ-೪ರಲ್ಲಿ ೫೭೪ ಕಾವ್ಯಗಳು, ೭೧ ಜನ ಕವಿಗಳು, ೩೦ ಜನ ಲಿಪಿಕಾರರು, ೧೦೪ ಸ್ಥಳನಾಮಗಳು, ೬ ಜನ ಪ್ರತಿಮಾಡಿದವರು, ೫೧ ಜನ ಹಸ್ತಪ್ರತಿ ದಾನಿಗಳನ್ನು ಪರಿಚಯಿಸಲಾಗಿದೆ. ಈ ಮಾಹಿತಿಗಳಿಂದ ಆಧುನಿಕ ಪೂರ್ವ ಕನ್ನಡಸಾಹಿತ್ಯದ ಧಾರ್ಮಿಕ, ಸಾಹಿತ್ಯಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಶಾಸ್ತ್ರೀಯ ಅಧ್ಯಯನಕ್ಕೆ ತುಂಬಾ ಉಪಯುಕ್ತ ಮಾಹಿತಿಯನ್ನು ನೀಡಿದಂತಾಗುತ್ತದೆ.

೩. ಪ್ರಾಧ್ಯಾಪಕರ ಸ್ವತಂತ್ರ ಕೃತಿಗಳು

ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಸ್ತಪ್ರತಿ ಮೂಲದ ಪಾಠ ಪರಿಷ್ಕರಣೆಯ ಜೊತೆಗೆ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸ್ವತಂತ್ರ ಕೃತಿಗಳನ್ನು ರಚಿಸಿ ಹಸ್ತಪ್ರತಿಶಾಸ್ತ್ರ-ಗ್ರಂಥ ಸಂಪಾದನಶಾಸ್ತ್ರ ಮತ್ತು ಆಕರಶಾಸ್ತ್ರಗಳ ಮಹತ್ವವನ್ನು ಮತ್ತು ಅಧ್ಯಯನಗಳ ಅಗತ್ಯವನ್ನು ಅನಾವರಣ ಮಾಡಿದ್ದಾರೆ.

ಡಾ. ವೀರೇಶ ಬಡಿಗೇರ ಅವರ 'ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ' ಹೆಸರಿನ ಕೃತಿ ಹಸ್ತಪ್ರತಿಗಳ ಗಣಕೀಕರಣ ಪ್ರಕ್ರಿಯೆಯ ಬಗ್ಗೆ ವಿವರಿಸುತ್ತದೆ. ಹಸ್ತಪ್ರತಿಗಳು ಪ್ರಾಚೀನ ಬರವಣಿಗೆಯ ಸಾಮಗ್ರಿಗಳಾದರೆ; ಕಂಪ್ಯೂಟರ್-ಸಾಫ್ಟ್‌ವೇರ್ ತಂತ್ರಜ್ಞಾನಗಳು ಆಧುನಿಕ ಆವಿಷ್ಕಾರಗಳು. ಹೀಗಾಗಿ ಆಧುನಿಕ ಅನುಕೂಲತೆಗಳನ್ನು ಬಳಸಿಕೊಳ್ಳುವುದರ ಮೂಲಕ ಅವುಗಳೋದಿನ ಕ್ರಮ, ಸಂಪಾದನೆಯ ವಿಧಾನ, ಸಂರಕ್ಷಣೆಯ ಸ್ವರೂಪವನ್ನು ಹೇಗೆ ನಿರ್ವಹಿಸಬಹುದೆಂಬುದನ್ನು ಈ ಕೃತಿ ವಿವರಿಸುತ್ತದೆ. 'ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು' ಎನ್ನುವ ಕೃತಿಯಲ್ಲಿ ಡಾ. ವೀರೇಶ ಬಡಿಗೇರ ಅವರು ಗ್ರಂಥಸಂಪಾದನೆಯ ಹಿಂದಿರುವ ಸಾಂಸ್ಕೃತಿಕ ವಿನ್ಯಾಸ,

ಭಾಷೆಯ ಅಭಿರುಚಿ ಅದರ ಸ್ಥಿತ್ಯಂತರಗಳು, ಹಸ್ತಪ್ರತಿಗಳ ಪ್ರತೀಕರಣಕ್ಕೆ ಕಾರಣವಾಗುವ ನೆಲೆಗಳನ್ನು ಮತ್ತು ಬಹುಪಾಠಗಳ ಸಾಮಗ್ರಿಯಾಗಿರುವ ಹಸ್ತಪ್ರತಿಗಳು ಚರಪಠ್ಯಗಳೆಂಬುದನ್ನು ವಿವರಿಸಿದ್ದಾರೆ. 'ಬಾಚಿಕಾಯಕದ ಬಸವಯ್ಯನ ವೃತ್ತಿ ಹಾಗೂ ತತ್ವಮೀಮಾಂಸೆ' ಎನ್ನುವ ಕೃತಿಯಲ್ಲಿ ಬಸವಯ್ಯನ ವೃತ್ತಿ ವಿಶೇಷತೆಯನ್ನು ಆತನ ವಚನಗಳ ಮೂಲಕ ವಿಶ್ಲೇಷಣೆ ಮಾಡಿದ್ದಾರೆ. ಶಾಸ್ತ್ರೀಯ ಭಾಷಾ ಯೋಜನೆಯಲ್ಲಿ ಪ್ರಕಟವಾದ 'ಕನ್ನಡ ಮೋಡಿಲಿಪಿ ಸಂರಚನೆ ಮತ್ತು ಸಂವರ್ಧನೆ' ಕೃತಿಯಲ್ಲಿ ಕನ್ನಡ ಮೂಡಿಲಿಪಿಯ ಬೆಳವಣಿಗೆಯನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅದೇ ರೀತಿ 'ಕನ್ನಡ ಹಸ್ತಪ್ರತಿಗಳ ಮೌಖಿಕ ಸಂಕಥನ'ದಲ್ಲಿ ಮಾತು ಮತ್ತು ಬರಹಗಳ ವೈವಿಧ್ಯತೆಗಳ ಆಯಾಮಗಳನ್ನು ಮೌಖಿಕತೆಯೇ ಹಸ್ತಪ್ರತಿಗಳ ಚರಪಠ್ಯ ನಿರ್ಮಾಣಕ್ಕೆ ಕಾರಣವೆಂಬುದನ್ನು ಪ್ರತಿಪಾದಿಸಲಾಗಿದೆ. 'ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಶಿ ವಿವೇಕ' ಎಂಬ ಕೃತಿಯಲ್ಲಿ ಕೃಷಿಶಾಸ್ತ್ರದ ಭಾಗವಾಗಿ ಚರ್ಚೆಯಾಗಿರುವ ನೀರಿನ ಬಳಕೆ ಹಾಗೂ ಆ ಕುರಿತಾಗಿ ಪ್ರಾಚೀನರ ತಿಳುವಳಿಕೆಯನ್ನು ಪರಿಚಯಿಸುತ್ತದೆ. ಕರ್ನಾಟಕದ ಆಯಗಾರರು ಎಂಬ ಕೃತಿ ಉತ್ಪಾದನಾ ಕೌಶಲ್ಯಗಳ ಮೂಲಕ ಆಯಗಾರರು ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಲ್ಲಿ ಗುರುತಿಸಿಕೊಂಡ ರೀತಿಯನ್ನು ವಿವರಿಸಲಾಗಿದೆ. 'ಕರ್ನಾಟಕ ಚರ್ಮ ಪತ್ರಗಳು' ಕೃತಿಯು ಚರ್ಮವಿಜ್ಞಾನ ಮತ್ತು ಧ್ವನಿಯ ತಿಳುವಳಿಕೆಯನ್ನು ಕುರಿತ ಅಧ್ಯಯನವಾಗಿದೆ.

ಡಾ. ಕೆ.ರವೀಂದ್ರನಾಥ ಅವರು ಹಳೆಗನ್ನಡ, ವಚನಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ಶಾಸನಶಾಸ್ತ್ರ, ದಾಖಲುಸಾಹಿತ್ಯ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ. ಹೀಗಾಗಿ ಏಕಪ್ರತಿ ರೂಪದಲ್ಲಿ ಸಿಗುವ ದಾಖಲೆಗಳನ್ನು ಕುರಿತು 'ಕನ್ನಡ ದಾಖಲು ಸಾಹಿತ್ಯ' ಎಂಬ ಕೃತಿಯನ್ನು ರಚಿಸಿದ್ದಾರೆ. ದಾಖಲುಸಾಹಿತ್ಯದ ಅರ್ಥ–ಲಕ್ಷಣ–ಸ್ವರೂಪ–ಮಹತ್ವ ಮತ್ತು ದಾಖಲು ಸಾಹಿತ್ಯ ಪ್ರಕಾರಗಳಾದ ಶಾಸನ, ಕಡತ, ನಿರೂಪ, ಭಿನ್ನವತ್ತಳೆ, ಬಖೈರು, ಕೈಫಿಯತ್ತು, ನಾಮೆಗಳು, ವಂಶಾವಳಿ, ದಿನಚರಿಗಳು ಹಾಗೂ ಸ್ಥಳಪುರಾಣ ಮಹಾತ್ಮೆಗಳನ್ನು ಮೊದಲ ಬಾರಿಗೆ ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ್ದಾರೆ. ಕನ್ನಡ ದಾಖಲುಸಾಹಿತ್ಯ ಅಧ್ಯಯನದ ಇತಿಹಾಸವನ್ನು ಕುರಿತು ಸಾಧಾರ ಪೂರ್ವಕವಾಗಿ ಈ ಕೃತಿ ಚರ್ಚಿಸುತ್ತದೆ. ಶ್ರೀಯುತರ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. 'ಕನ್ನಡ ಟೀಕಾಸಾಹಿತ್ಯ' ಹೆಸರಿನ ಕೃತಿ ಕನ್ನಡ ಕಾವ್ಯಗಳಿಗೆ, ವಚನಗಳಿಗೆ ಟೀಕು, ವ್ಯಾಖ್ಯಾನ ಬರೆದ ಟೀಕಾಚಾರ್ಯರರನ್ನು ಮತ್ತು ಅವರ ಗ್ರಂಥಗಳನ್ನು ವಿಶ್ಲೇಷಿಸಿದ ಸಂಶೋಧನಾತ್ಮಕ ಕೃತಿ. ಕನ್ನಡ ಟೀಕಾಸಾಹಿತ್ಯದ ಅರ್ಥ, ಉಗಮ, ಸ್ವರೂಪ, ಲಕ್ಷಣವನ್ನು ವಿವಿಧ ಮತಗಳು ನಿರ್ವಚಿಸಿದ ಬಗೆಯನ್ನು ಇಲ್ಲಿ ನಿರೂಪಿಸಲಾಗಿದೆ. 'ಹಸ್ತಪ್ರತಿಗಳು: ಕನ್ನಡಿಗರ ಬದುಕು' ಎಂಬ ಗ್ರಂಥವನ್ನು ಕನ್ನಡ ಶಾಸ್ತ್ರೀಯ ಭಾಷಾ ಯೋಜನೆಯಲ್ಲಿ ರಚಿಸಲಾಗಿದೆ. ಇದುವರೆಗೆ ಹಸ್ತಪ್ರತಿಗಳನ್ನು ಗ್ರಂಥಸಂಪಾದನೆ ಶಾಸ್ತ್ರದ ಭಾಗವಾಗಿ ಅಧ್ಯಯನ ಮಾಡಲಾಗಿದೆ. ಆದರೆ ಹಸ್ತಪ್ರತಿಗಳ ಪ್ರತಿಕಾರರ ಹೇಳಿಕೆಗಳು ಅವರ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಕೌಟುಂಬಿಕ ಸ್ಥಿತಿ–ಗತಿಗಳನ್ನು ವಿವರಿಸುವುದರ ಮೂಲಕ ಆ ಕಾಲದ ಜನ ಜೀವನದ ಬದುಕನ್ನು ಕಟ್ಟಿಕೊಡುತ್ತವೆ. ಹಸ್ತಪ್ರತಿಗಳ ಸಂರಕ್ಷಣೆಯ ಬದುಕು, ಹಸ್ತಪ್ರತಿಗಳ ಸಂವರ್ಧನೆಯ ಬದುಕು ಹಾಗೂ ಹಸ್ತಪ್ರತಿಗಳ ಪರಿಚಲನೆಯ ಬದುಕಿನಲ್ಲಿ ಕವಿನಿರ್ಮಿತ ಕೃತಿ, ಲಿಪಿಕಾರ ನಿರ್ಮಿತ ಪ್ರತಿಯಾಗಿ ರೂಪುಗೊಳ್ಳುವಾಗ ಅದರ ಉತ್ಪಾದನೆಗೆ ದುಡಿದ ಕರ್ನಾಟಕದ ಕುಶಲಕರ್ಮಿಗಳಾದ ಕಮ್ಮಾರ, ಚಿತ್ರಗಾರ, ಓಲೆಕಾರ, ಮಸಿವೃತ್ತಿಯವರು, ವಸ್ತ್ರದವರು ಮುಂತಾದ ಜನಜೀವನದ ಇತಿಹಾಸ ಮತ್ತು ಬದುಕಿನ ಕ್ರಮವನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

ಡಾ. ಎಸ್.ಎಸ್.ಅಂಗಡಿಯವರು ರಚಿಸಿದ 'ಕನ್ನಡ ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ' ಕೃತಿ ಹಸ್ತಪ್ರತಿಗಳ ಭಾಷಿಕ ಅಧ್ಯಯನಕ್ಕೆ ಸಂಬಂಧಿಸಿದ ಮೊದಲ ಕೃತಿ. ಹಸ್ತಪ್ರತಿ ಬರಹದ ಭಾಷೆ ಮತ್ತು ಮೌಖಿಕ ಭಾಷೆಗೆ ಸಂಬಂಧಿಸಿದಂತೆ ಇಲ್ಲಿ ಚರ್ಚಿಸಲಾಗಿದೆ. ಲಿಪಿಕಾರರ ಬರವಣಿಗೆಯ ವ್ಯತ್ಯಾಸಗಳು ಇದರಿಂದ ಉಂಟಾಗುವ ಭಿನ್ನಪಾಠಗಳು ಇವುಗಳ ವಿವೇಚನೆ ವಿಸ್ತಾರವಾಗಿ ಚರ್ಚೆಯಾಗಿದೆ. ವ್ಯಾಕರಣ, ಛಂದಸ್ಸು, ನಿಘಂಟುಗಳ, ಪಾಠ ಪರಿಷ್ಕರಣ ಸಂದರ್ಭದಲ್ಲಿ ಭಾಷೆ ವಹಿಸುವ ಪಾತ್ರವನ್ನು ಈ ಕೃತಿ ವಿವರಿಸುತ್ತದೆ.

೪. ಹಸ್ತಪ್ರತಿ ವ್ಯಾಸಂಗ ಸಂಪುಟಗಳು

ಆರಂಭದಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗ ನಡೆಸಿಕೊಂಡು ಬಂದಿದ್ದ ವಿಚಾರಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಅನಂತರದಲ್ಲಿ ನಡೆಸಿಕೊಂಡು ಬರುತ್ತಿರುವ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು 'ಹಸ್ತಪ್ರತಿ ವ್ಯಾಸಂಗ' ಹೆಸರಿನ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತಿದೆ.

ಹಸ್ತಪ್ರತಿ ವ್ಯಾಸಂಗ-೧ನ್ನು ಪ್ರೊ. ಎ.ವಿ.ನಾವಡ ಹಾಗೂ ಡಾ. ಎಸ್.ಎಸ್.ಅಂಗಡಿ ಅವರು ಸಂಪಾದಿಸಿದ್ದಾರೆ. ಧರ್ಮಸ್ಥಳದಲ್ಲಿ ನಡೆಸಿದ 'ಗ್ರಂಥಸಂಪಾದನೆಯ ವಿದಿ-ವಿಧಾನಗಳು' ಎಂಬ ವಿಚಾರ ಸಂಕಿರಣದಲ್ಲಿ ಮಂಡಿತವಾದ ಒಂಬತ್ತು ಪ್ರಬಂಧಗಳನ್ನು ಇಲ್ಲಿ ಸಂಪಾದಿಸಿಕೊಡಲಾಗಿದೆ. ಗ್ರಂಥಸಂಪಾದನೆಯ ವೈಧಾನಿಕತೆ, ದೇಸಿ, ಮಾರ್ಗ, ಶಾಸನ, ಸಚಿತ್ರ ಪಠ್ಯಗಳ ಸಂಪಾದನೆಯಲ್ಲಿ ತಲೆದೋರಬಹುದಾದ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಇಲ್ಲಿಯ ಪ್ರಬಂಧಗಳು ಚರ್ಚಿಸಿವೆ. ವಿಶೇಷವಾಗಿ ಕರಾವಳಿ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದ ಹಸ್ತಪ್ರತಿಗಳ ನೆಲೆಗಳನ್ನು ಕುರಿತಾದ ಪ್ರಬಂಧಗಳು ಕ್ಷೇತ್ರಕಾರ್ಯವನ್ನು ಅವಲಂಬಿಸಿ ರಚನೆಯಾಗಿವೆ. ಹಸ್ತಪ್ರತಿ ವ್ಯಾಸಂಗ-೨ನ್ನು ಪ್ರೊ. ಎಫ್.ಟಿ.ಹಳ್ಳಿಕೇರಿ ಮತ್ತು ಪ್ರೊ. ಕೆ.ರವೀಂದ್ರನಾಥ ಅವರು ಸಂಪಾದಿಸಿದ್ದಾರೆ. ಮೇಲುಕೋಟೆಯಲ್ಲಿ ಆಯೋಜಿಸಿದ್ದ 'ಕನ್ನಡ ಹಸ್ತಪ್ರತಿ ಭಂಡಾರಗಳು' ಎಂಬ ವಿಚಾರ ಸಂಕಿರಣದಲ್ಲಿ ಮಂಡಿತವಾದ ೯ ಲೇಖನಗಳು ಹಸ್ತಪ್ರತಿ ಭಂಡಾರಗಳ ಸ್ವರೂಪ, ನವೀಕರಣ, ಅಪೂರ್ವತೆಗಳ ಜೊತೆಗೆ ಸರಕಾರಿ, ಸಾರ್ವಜನಿಕ, ಮಠಮಾನ್ಯಗಳು, ಹೊರನಾಡು ಮತ್ತು ವಿದೇಶಗಳಲ್ಲಿಯ ಹಸ್ತಪ್ರತಿ ಭಂಡಾಗಳನ್ನು ಪರಿಚಯಿಸಲಾಗಿದೆ. ಅನುಬಂಧದಲ್ಲಿ ಧಾರವಾಡದ ಕನ್ನಡ ಅಧ್ಯಯನ ಪೀಠ, ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನ ಹಾಗೂ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರಗಳನ್ನು ಪರಿಚಯಿಸಲಾಗಿದೆ. ಆಧುನಿಕ ಸೌಲಭ್ಯಗಳಿಂದ ವಂಚಿತವಾಗದಂತೆ ಹಸ್ತಪ್ರತಿ ಭಂಡಾರಗಳು ಬೆಳೆಯಬೇಕೆಂಬ ಒತ್ತಾಸೆಯನ್ನು ಇಲ್ಲಿಯ ಪ್ರಬಂಧಗಳು ತಿಳಿಸಿಕೊಡುತ್ತವೆ. ಹಸ್ತಪ್ರತಿ ವ್ಯಾಸಂಗ-೩ನ್ನು ಪ್ರೊ. ವೀರೇಶ ಬಡಿಗೇರ ಮತ್ತು ಪ್ರೊ. ಎಸ್.ಆರ್.ಚನ್ನವೀರಪ್ಪ ಅವರು ಸಂಪಾದಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಕನ್ನಡ ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ' ಎಂಬ ವಿಚಾರಸಂಕಿರಣದಲ್ಲಿ ಮಂಡಿತವಾದ ೧೩ ಪ್ರಬಂಧಗಳನ್ನು ಸಂಪಾದಿಸಿಕೊಡಲಾಗಿದೆ. ಕಂಪ್ಯೂಟರನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡ ಅಭಿವೃದ್ಧಿ, ಭಾಷೆ, ಜನಪದ, ಹಸ್ತಪ್ರತಿಗಳು, ಕಾವ್ಯ, ನಿಘಂಟು ಮುಂತಾದ ವಿಷಯಗಳ ಮೇಲೆ ಇಲ್ಲಿ ಚರ್ಚೆಗಳು ನಡೆದಿವೆ. ಹಸ್ತಪ್ರತಿ ವ್ಯಾಸಂಗ-೪ನ್ನು ಪ್ರೊ. ವೀರೇಶ ಬಡಿಗೇರ ಮತ್ತು ಎಸ್.ಆರ್.ಚನ್ನವೀರಪ್ಪನವರು ಸಂಪಾದಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿತ್ತು. ಇಲ್ಲಿ ಮಂಡಿತವಾದ ೨೨ ಪ್ರಬಂಧಗಳು ೮ ಪ್ರತಿಕ್ರಿಯೆಗಳು ಇಲ್ಲಿ ಸಂಪಾದನೆಗೊಂಡಿವೆ. ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಭಾಷಿಕರಚನೆ, ಕವಿಪಾಠ ಗುರುತಿಸುವಿಕೆ ಇತ್ಯಾದಿಯಾಗಿ ಪ್ರಾಚೀನ ಮತ್ತು ಆಧುನಿಕತೆಯ ಹಿನ್ನೆಲೆಯಲ್ಲಿಟ್ಟುಕೊಂಡು ವಿದ್ವಾಂಸರು ಚರ್ಚಿಸಿದ್ದಾರೆ.

ಹಸ್ತಪತಿಶಾಸ್ತ್ರ ವಿಭಾಗ ೨೦೦೩ರಿಂದ ಪ್ರತಿವರ್ಷ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನವನ್ನು ನಡೆಸಿಕೊಂಡು ಬರುತ್ತಲಿದೆ. ಇದರಂಗವಾಗಿ ಇಲ್ಲಿ ಮಂಡಿತವಾದ ಪ್ರಬಂಧಗಳನ್ನು ಸಂಪುಟ ರೂಪದಲ್ಲಿ ಪ್ರಕಟಿಸುತ್ತ ಬರಲಾಗಿದೆ. ವಿಶೇಷವೆಂದರೆ ಸಮ್ಮೇಳನವನ್ನು ಆಯೋಜಿಸಿದ ಆಯಾ ಮುಖ್ಯಸ್ಥರ ಪ್ರಾಸ್ತಾವಿಕ ಮಾತುಗಳು ಹಾಗೂ ಸಮ್ಮೇಳನಕ್ಕೆ ಆಯ್ಕೆಯಾದ ಸಮ್ಮೇಳನಾಧ್ಯಕ್ಷರುಗಳ ಭಾಷಣಗಳು ಒಟ್ಟು ಸಮ್ಮೇಳನದ ಆಶಯವನ್ನು ಒಳಗೊಂಡಂತೆ ಹಸ್ತಪ್ರತಿ-ಗ್ರಂಥಸಂಪಾದನೆ ಕ್ಷೇತ್ರದಲ್ಲಿ ನಡೆದ ಕೆಲಸ-ಕಾರ್ಯಗಳನ್ನು ವಸ್ತುನಿಷ್ಠವಾಗಿ ಚರ್ಚಿಸಿರುವುದರಿಂದ ಈ ಕ್ಷೇತ್ರದ ಸಾಧನೆ ಮತ್ತು ಮಿತಿಗಳನ್ನು ಕುರಿತಾಗಿ ಬೆಳಕನ್ನು ಚೆಲ್ಲುತ್ತವೆ.

ಹಸ್ತಪ್ರತಿ ವ್ಯಾಸಂಗ-೫ ಮಂಗಳೂರಿನಲ್ಲಿ ಆಯೋಜಿಸಿದ್ದ ಪ್ರಥಮ ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳ ಸಂಪುಟ. ಇದನ್ನು ಡಾ. ವೀರೇಶ ಬಡಿಗೇರ ಅವರು ಸಂಪಾದಿಸಿದ್ದಾರೆ. ಇಲ್ಲಿ 'ಹರ್ಮನ್ ಮೊಗ್ಲಿಂಗ್ ಸಂಸ್ಮರಣೆ' ಎಂಬ ವಿಶೇಷ ಗೋಷ್ಠಿಯನ್ನು ಏರ್ಪಡಿಸಿ ಗ್ರಂಥಸಂಪಾದನೆ, ಕೊಡಗಿನ ಚರಿತ್ರೆ, ಮೌಖಿಕ ಸಾಹಿತ್ಯ ಸಂಪಾದನೆ, ಕನ್ನಡ ಪತ್ರಿಕೋದ್ಯಮದಲ್ಲಿ ಮೊಗ್ಲಿಂಗ್ ಅವರ ಸಾಧನೆಯನ್ನು ಪರಿಚಯಿಸಲಾಗಿದೆ. ಸಮ್ಮೇಳನಾಧ್ಯಕ್ಷರಾಗಿ ಟಿ.ವಿ.ವೆಂಕಟಾಚಲ ಶಾಸ್ತ್ರೀಗಳ ಸಾಧನೆ, ಗ್ರಂಥಸಂಪಾದನೆಯ ಹಿಂದಿರುವ ಮನೋಧರ್ಮ ಕುರಿತು ಪ್ರಬಂಧಗಳು ಹೊಸ ಬೆಳಕನ್ನು ಚೆಲ್ಲಿವೆ. ಹಸ್ತಪ್ರತಿ ವ್ಯಾಸಂಗ-೬ನ್ನು ಡಾ. ಎಸ್.ಆರ್ ಚನ್ನವೀರಪ್ಪ ಸಂಪಾದಿಸಿದ್ದಾರೆ. ಸಂಕೇಶ್ವರದಲ್ಲಿ ನಡೆದ ಎರಡನೇ ಸಮ್ಮೇಳನದಲ್ಲಿ ವಿಶೇಷವಾಗಿ ಕೆ.ಜಿ.ಕುಂದಣಗಾರರ ಸಾಹಿತ್ಯ ಸಾಧನೆಯನ್ನು, ಸಮ್ಮೇಳನಾಧ್ಯಕ್ಷರಾಗಿದ್ದ ಎನ್. ಬಸವರಾಧ್ಯರ ಗ್ರಂಥಸಂಪಾದನೆಯ ವೈಧಾನಿಕತೆಯನ್ನು, ಕನ್ನಡ ಹಸ್ತಪ್ರತಿಗಳ ಮೌಖಿಕ, ಚಾರಿತ್ರಿಕ, ಕೌಟುಂಬಿಕ, ಸಾಂಸ್ಕೃತಿಕ ಸಂಕಥನಗಳನ್ನು, ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಕುರಿತು ಪ್ರಬಂಧಗಳು ಮಂಡಿತವಾಗಿವೆ.

ಹಸ್ತಪ್ರತಿ ವ್ಯಾಸಂಗ-೭ ವಿಜಯಪುರದ ವಚನ ಪಿತಾಮಹ ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ಡಾ. ಎಂ.ಎಂ.ಕಲಬುರ್ಗಿ ಅವರ ಸಮ್ಮೇಳನದ ಸರ್ವಾಧ್ಯಕ್ಷತೆಯಲ್ಲಿ ನಡೆದ ಮೂರನೇ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳನ್ನು ಒಳಗೊಂಡಿದೆ. ಫ.ಗು.ಹಳಕಟ್ಟಿಯವರ ಸಾಹಿತ್ಯ ಸ್ಮರಣೆ ಕುರಿತ ಎರಡು ಗೋಷ್ಠಿಗಳಲ್ಲಿ ಫ.ಗು.ಹಳಕಟ್ಟಿಯವರ ವಚನಸಾಹಿತ್ಯ, ಸಂಗ್ರಹ, ಸಂಪಾದನೆ ಹಾಗೂ ಅಧ್ಯಯನ, ಪತ್ರಿಕಾ ಸಾಹಿತ್ಯ, ಲೇಖನ ಸಾಹಿತ್ಯ ಕುರಿತು ಚರ್ಚಿಸಲಾಗಿದೆ. ಮತ್ತು ಶಾಸ್ತ್ರಸಾಹಿತ್ಯ ಹಸ್ತಪ್ರತಿಗಳ ವೈದ್ಯ, ಗೃಹ, ವಾಸ್ತು, ಶಿಲ್ಪಶಾಸ್ತ್ರ, ಸೂಪಶಾಸ್ತ್ರ, ಅಶ್ವಶಾಸ್ತ್ರಗಳನ್ನು ಮೊದಲಬಾರಿಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ವಿಜಯಪುರ ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಹಸ್ತಪ್ರತಿ-ಗ್ರಂಥಸಂಪಾದನೆ ಕ್ಷೇತ್ರಗಳಿಗೆ ಎಂ.ಎಂ.ಕಲಬುರ್ಗಿ ಅವರ ಕೊಡುಗೆ ಕುರಿತು ಎಲ್ಲಿ ಪ್ರಬಂಧಗಳು ಮಂಡಿತವಾಗಿವೆ. ಪ್ರಸ್ತುತ ಸಂಪುಟವನ್ನು ಎಫ್.ಟಿ.ಹಳ್ಳಿಕೇರಿ ಅವರು ಸಂಪಾದಿಸಿದ್ದಾರೆ. ಇವರೇ ಸಂಪಾದಿಸಿದ ಹಸ್ತಪ್ರತಿ ವ್ಯಾಸಂಗ-೮ನ್ನು ತುಮಕೂರಿನ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಹಯೋಗದಲ್ಲಿ ನಡೆದ ನಾಲ್ಕನೇ ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳ ಸಂಪುಟವಾಗಿದೆ. ಈ ಸಂಪುಟದಲ್ಲಿ ಆರ್.ನರಸಿಂಹಾಚಾರ್ ಸಾಹಿತ್ಯ ಸಂಸ್ಮರಣೆಯ ಎರಡು ಗೋಷ್ಠಿಗಳಲ್ಲಿ ಆರ್.ನರಸಿಂಹಾಚಾರರ ಪರಿಸರ, ಕರ್ನಾಟಕ ಕವಿಚರಿತೆಗಳ ವಿನ್ಯಾಸ, ಗ್ರಂಥಸಂಪಾದನೆ, ಭಾಷೆ-ಸಾಹಿತ್ಯಚರಿತ್ರೆ, ಸಂಶೋಧನೆಯಲ್ಲಿ ಶೋಧವನ್ನು ವಿದ್ವಾಂಸರು ದಾಖಲಿಸಿದ್ದಾರೆ. ಲೌಖಿಕಶಾಸ್ತ್ರ ಹಸ್ತಪ್ರತಿಗಳನ್ನು ಕುರಿತಂತೆ ಗಜಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಕಾಮಶಾಸ್ತ್ರ, ರಟ್ಟಮತಶಾಸ್ತ್ರ ಕುರಿತು ವಿಶೇಷವಾಗಿ ತುಮಕೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು ಸಮ್ಮೇಳನಾಧ್ಯಕ್ಷರಾಗಿದ್ದ ಬಿ.ಎಸ್ ಸಣ್ಣಯ್ಯನವರ ಹಸ್ತಪ್ರತಿ-ಗ್ರಂಥಸಂಪಾದನೆಯ ಸಾಧನೆಯನ್ನು ಇಲ್ಲಿಯ ಲೇಖನಗಳು ವಿವರಿಸುತ್ತವೆ.

ಹಸ್ತಪ್ರತಿ ವ್ಯಾಸಂಗ–೯ ಪ್ರೊ. ಬಿ.ವಿ.ಮಲ್ಲಾಪುರ ಅವರ ಅಧ್ಯಕ್ಷತೆಯಲ್ಲಿ ಸೇಡಂನಲ್ಲಿ ನಡೆದ ಐದನೆಯ ಸಮ್ಮೇಳನದ ಮಂಡಿತ ಪ್ರಬಂಧಗಳ ಸಂಪುಟ. ಈ ಸಂಪುಟದ ಸಂಪಾದಕರು ಡಾ. ಎಸ್.ಎಸ್.ಅಂಗಡಿಯವರು ಗೊರೇಬಾಳ ಹನುಮಂತರಾವ್ ಅವರ ಸಾಹಿತ್ಯ ಸಂಸ್ಮರಣೆಯ ಎರಡು ಗೋಷ್ಠಿಗಳಲ್ಲಿ ಗೊರೇಬಾಳರ ಪರಿಸರ, ದಾಸಸಾಹಿತ್ಯ, ಸಂಗ್ರಹ–ಪ್ರಕಟಣೆ, ಸ್ವತಂತ್ರ ಸಾಹಿತ್ಯರಚನೆ ಕುರಿತಂತೆ ಲೇಖನಗಳಿವೆ. ಲೌಖಿಕಶಾಸ್ತ್ರ ಸಾಹಿತ್ಯ, ಹಸ್ತಪ್ರತಿಗಳಲ್ಲಿ ಕೃಷಿಶಾಸ್ತ್ರ, ಖಗೋಳ ಶಾಸ್ತ್ರ, ಸಮಾಜಶಾಸ್ತ್ರಗಳನ್ನು ಗುಲ್ಬರ್ಗಾ ಜಿಲ್ಲೆಯ ಹಸ್ತಪ್ರತಿ ಸಂಪತ್ತನ್ನು ಕುರಿತ ಲೇಖನಗಳಿವೆ. ಡಾ. ಎಸ್.ಆರ್.ಚನ್ನವೀರಪ್ಪ ಅವರು ಸಂಪಾದಿಸಿದ ಹಸ್ತಪ್ರತಿ ವ್ಯಾಸಂಗ–೧೦ ಬಸವನಬಾಗೇವಾಡಿಯಲ್ಲಿ ನಡೆದ ಆರನೆಯ ಹಸ್ತಪ್ರತಿ ಸಮ್ಮೇಳನದ ಮಂಡಿತ ಪ್ರಬಂಧಗಳ ಸಂಪುಟ. ಪ್ರೊ. ಸಿ.ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನದಲ್ಲಿ ಶಿ.ಶಿ.ಬಸವನಾಳ ಅವರ ಸಾಹಿತ್ಯ ಸ್ಮರಣೆ ಕುರಿತಾದ ಎರಡು ಗೋಷ್ಠಿಗಳಲ್ಲಿ ಬಸವನಾಳರ ಶೈಕ್ಷಣಿಕ ಸಾಧನೆ, ಸಮಕಾಲೀನ ಪರಿಸರ, ಸಂಪಾದಿತ ಕೃತಿಗಳು ಮತ್ತು ಲೌಕಿಕಶಾಸ್ತ್ರ ಹಸ್ತಪ್ರತಿಗಳಾದ ಯೋಗಶಾಸ್ತ್ರ, ಗಣಿತಶಾಸ್ತ್ರ, ನೀತಿಶಾಸ್ತ್ರ, ಪ್ರಶ್ನೆಶಾಸ್ತ್ರ ಕುರಿತಂತೆ ವಿಶೇಷವಾಗಿ ಸಮ್ಮೇಳನಾಧ್ಯಕ್ಷರ ಸಾಹಿತ್ಯಸಾಧನೆ, ಬಸವನಬಾಗೇವಾಡಿ ಪರಿಸರದ ಹಸ್ತಪ್ರತಿ ಸಂಪತ್ತು ಎಂಬ ಪ್ರಬಂಧಗಳು ಮಂಡಿತವಾಗಿವೆ.

ಹಸ್ತಪ್ರತಿ ವ್ಯಾಸಂಗ ೧೧ ಮತ್ತು ೧೨ ಪ್ರೊ ಕೆ.ರವೀಂದ್ರನಾಥ ಅವರ ಸಂಪಾದಕತ್ವದಲ್ಲಿ ಪ್ರಕಟವಾದ ಸಂಪುಟಗಳು. ಸುತ್ತೂರಿನ ಶ್ರೀ ಶಿವರಾತ್ರೀಶ್ವರ ಸಂಸ್ಥೆಯೊಂದಿಗೆ ಹಮ್ಮಿಕೊಂಡಿದ್ದ ಅಖಿಲ ಕರ್ನಾಟಕ ೭ನೆಯ ಹಸ್ತಪ್ರತಿ ಸಮ್ಮೇಳನವನ್ನು ಡಾ. ಬಿ.ವ್ಹಿ.ಶಿರೂರ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಮ್ಮೇಳನದಲ್ಲಿ ಶಿ.ಚ.ನಂದಿಮಠರ ಜೀವನ, ಶೈಕ್ಷಣಿಕ ಸಾಧನೆ, ಶಾಸನ, ಚರಿತ್ರೆ, ಧರ್ಮಗಳ ಅಧ್ಯಯನ, ಗ್ರಂಥಸಂಪಾದನೆ, ವಿಮರ್ಶೆ ಕುರಿತು ಎರಡು ಗೋಷ್ಠಿಗಳಲ್ಲಿ ಚರ್ಚಿಸಲಾದ ಲೇಖನಗಳಿವೆ. ಕನ್ನಡ ಶಾಸ್ತ್ರಸಾಹಿತ್ಯ ಕೃತಿಗಳಾದ ಜಲಶಾಸ್ತ್ರ, ಶಕುನಶಾಸ್ತ್ರ, ರತ್ನಶಾಸ್ತ್ರ, ಮುಲ್ಲಾಶಾಸ್ತ್ರ ಕುರಿತಂತೆ ಮೈಸೂರು ಪರಿಸರದ ಹಸ್ತಪ್ರತಿ ಸಂಪತ್ತು, ಬಿ.ವಿ.ಶಿರೂರ್ ಅವರ ಹಸ್ತಪ್ರತಿ–ಗ್ರಂಥಸಂಪಾದನೆ ಕ್ಷೇತ್ರಗಳ ಕೊಡುಗೆಯನ್ನು ಪರಿಚಯಿಸುವ ಲೇಖನಗಳಿವೆ. ಹಸ್ತಪ್ರತಿ ವ್ಯಾಸಂಗ–೧೨ ಶಿವಮೊಗ್ಗದ ಬೆಕ್ಕಿನ ಕಲ್ಮಠದಲ್ಲಿ ನಡೆದ ಎಂಟನೆಯ ಹಸ್ತಪ್ರತಿ ಸಮ್ಮೇಳನ. ಈ ಸಮ್ಮೇಳನದ ಸರ್ವಾಧ್ಯಕ್ಷರು ಗೌ.ಮ.ಉಮಾಪತಿ ಶಾಸ್ತ್ರೀಗಳು. ಪ್ರಸ್ತುತ ಸಂಪುಟವು ಶಿರಾಳಕೊಪ್ಪದ ಚನ್ನಮಲ್ಲಿಕಾರ್ಜುನರ ಜೀವನ, ಧಾರ್ಮಿಕ ಸಾಹಿತ್ಯರಚನೆ, ಪತ್ರಿಕಾಸಾಹಿತ್ಯ, ಗ್ರಂಥಸಂಪಾದನೆ, ಸಂಶೋಧನೆ, ಸ್ವತಂತ್ರ ಕೃತಿಗಳಲ್ಲದೆ ಅವರು ಶೋಧಿಸಿದ ಹಸ್ತಪ್ರತಿಗಳನ್ನು, ಕನ್ನಡ ಲೌಖಿಕಶಾಸ್ತ್ರ ಕೃತಿಗಳಾದ ಖಡ್ಗ, ನಾಡಿಶಾಸ್ತ್ರ, ಬೈಷಜ್ಯಶಾಸ್ತ್ರ, ಕವಿರಾಜಮಾರ್ಗ ಕುರಿತಂತೆ ಪ್ರಬಂಧಗಳನ್ನು ಒಳಗೊಂಡಿದೆ. ಶಿವಮೊಗ್ಗ ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಉಮಾಪತಿ ಶಾಸ್ತ್ರೀಗಳ ಸಾಹಿತ್ಯ ಸಾಧನೆಯನ್ನು ಇಲ್ಲಿ ದಾಖಲಿಸಲಾಗಿದೆ.

ಹಸ್ತಪ್ರತಿ ವ್ಯಾಸಂಗ–೧೩, ೧೪ ಹಾಗೂ ೧೫ನೇ ಸಂಪುಟಗಳನ್ನು ಪ್ರೊ. ವೀರೇಶ ಬಡಿಗೇರ ಅವರು ಸಂಪಾದಿಸಿದ್ದಾರೆ. ಇವು ಕ್ರಮವಾಗಿ ಕೆರೂರ, ಧಾರವಾಡ, ವಿದ್ಯಾರಣ್ಯ ಆವರಣದಲ್ಲಿ ೯, ೧೦ ಹಾಗೂ ೧೧ನೇ ಸಮ್ಮೇಳನಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಒಳಗೊಂಡಿದೆ. ೧೩ನೇ ಸಂಪುಟವು ಕನ್ನಡ ಹಸ್ತಪ್ರತಿಗಳು ಮತ್ತು ಕುಶಲಕರ್ಮಿ ವರ್ಗಗಳನ್ನು ಕುರಿತು ಹತ್ತು ಪ್ರಬಂಧಗಳು ಮತ್ತು ಹಸ್ತಪ್ರತಿ ನಿರ್ಮಾಣ ಕೇಂದ್ರಗಳಾದ ಮಠಗಳು–ಚೈತ್ಯಾಲಯಗಳನ್ನು ಕುರಿತು ೫ ಲೇಖನಗಳು, ಬಾಗಲಕೋಟೆ ಪರಿಸರದ ಹಸ್ತಪ್ರತಿ ನೆಲೆಗಳು, ಸಮ್ಮೇಳನಾಧ್ಯಕ್ಷರಾದ ಡಾ. ಬಿ.ಕೆ.ಹಿರೇಮಠರ ಬದುಕು–ಬರಹ ಕುರಿತ ಲೇಖನಗಳು, ಡಾ. ಬಿ.ಎಸ್.ಗದ್ದಗಿಮಠ ಅವರ ಸಾಹಿತ್ಯ–ಸಾಧನೆಯ ವಿಶೇಷ ಉಪನ್ಯಾಸಗಳನ್ನು ಸಂಯೋಜಿಸಲಾಗಿದೆ. ೧೪ನೇ ಸಂಪುಟದಲ್ಲಿ ಪಠ್ಯ–ಪ್ರತೀಕರಣ ಮತ್ತು ಸಾಮಾಜಿಕ ವಲಯ, ಪಠ್ಯ ಪ್ರತೀಕರಣ ಮತ್ತು ಸಾಂಸ್ಕೃತಿಕ ವಲಯ, ಪಠ್ಯ ಪ್ರತೀಕರಣ ಮತ್ತು

ಸಾಹಿತ್ಯಿಕ ವಲಯ, ಪಠ್ಯ-ಪ್ರತೀಕರಣ ಮತ್ತು ಸಾಹಿತ್ಯೇತರ ವಲಯ, ಧಾರವಾಡ ಪರಿಸರದ ಹಸ್ತಪ್ರತಿ ಸಂಪತ್ತು, ಸಮ್ಮೇಳನಾಧ್ಯಕ್ಷರಾಗಿದ್ದ ಡಾ. ಚಂದ್ರಶೇಖರ ಕಂಬಾರರ ಸಾಹಿತ್ಯ-ಸಾಧನೆಯ ಒಟ್ಟು ೨೮ ಲೇಖನಗಳಿವೆ. ೧೫ನೇ ಸಂಪುಟದಲ್ಲಿ ಸಂಗ್ರಹ-ಸಂಕಲನ-ಸಂಪಾದನೆ: ವಸಹಾತುಪೂರ್ವ ಸಂದರ್ಭ, ಸಂಗ್ರಹ-ಸಂಕಲನ-ಸಂಪಾದನೆ: ವಸಹಾತ್ತೋತ್ತರಸಂದರ್ಭ, ಬಳ್ಳಾರಿ ಪರಿಸರ ಸಾಹಿತ್ಯ ಸಂಪತ್ತು, ಎನ್.ಅನಂತರಂಗಾಚಾರ್ಯ ಅವರ ಸಾಹಿತ್ಯ ಸ್ಮರಣೆ ಹಾಗೂ ಸಮ್ಮೇಳನಾಧ್ಯಕ್ಷರಾಗಿದ್ದ ದೇ.ಜವರೇಗೌಡರ ಬದುಕು-ಬರಹ ಕುರಿತಾದ ಲೇಖನಗಳನ್ನು ಒಳಗೊಂಡಿದೆ.

ಡಾ. ಎಫ್.ಟಿ.ಹಳ್ಳಿಕೇರಿ ಅವರು ಸಂಪಾದಿಸಿರುವ ಹಸ್ತಪ್ರತಿ ವ್ಯಾಸಂಗ-೧೬ ಉಜಿರೆಯಲ್ಲಿ ನಡೆದ ೧೨ನೇ ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳ ಸಂಪುಟ. ಇದರಲ್ಲಿರುವ ಎತ್ತೂರ್ರು ಶಾಂತರಾಜಶಾಸ್ತ್ರೀ ಸಾಹಿತ್ಯ ಸ್ಮರಣೆ, ಮಾರ್ಗ ಸಾಹಿತ್ಯ ಪರಿಷ್ಕರಣೆಗಳಲ್ಲಿ ಕವಿರಾಜಮಾರ್ಗ, ಆದಿಪುರಾಣ, ಪಂಪಭಾರತ ಮತ್ತು ಗದಾಯುದ್ಧ ಕೃತಿಗಳ ಸಮೀಕ್ಷೆ ಮಾಡಲಾಗಿದೆ. ಕರಾವಳಿ ಕರ್ನಾಟಕದ ಹಸ್ತಪ್ರತಿ ಸಂಪತ್ತು, ಸಮ್ಮೇಳನಾಧ್ಯಕ್ಷರಾದ ಡಾ. ವೀರಣ್ಣ ರಾಜೂರ ಅವರ ಹಸ್ತಪ್ರತಿ-ಗ್ರಂಥಸಂಪಾದನೆ ಕೊಡುಗೆ ಕುರಿತ ಲೇಖನಗಳಿವೆ. ಹಸ್ತಪ್ರತಿ ವ್ಯಾಸಂಗ-೧೭ ಗದುಗಿನಲ್ಲಿ ನಡೆದ ೧೩ನೇ ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳ ಸಂಪುಟವನ್ನು ಡಾ. ಎಫ್.ಟಿ. ಹಳ್ಳಿಕೇರಿ ಸಂಪಾದಿಸಿದ್ದಾರೆ. ಎಂ.ಎಸ್.ಸುಂಕಾಪುರ ಅವರ ಸಾಹಿತ್ಯ ಸ್ಮರಣೆಯನ್ನು ಕುರಿತ ೮ ಲೇಖನಗಳು, ಮಾರ್ಗ ಕೃತಿಗಳಾದ ಛಂದೋಂಬುದಿ, ರಾಮಚಂದ್ರಚರಿತ ಪುರಾಣ, ದೇಶಿ ಕೃತಿಗಳಾದ ಕೇಶಿರಾಜನ ಶಬ್ದಮಣಿ ದರ್ಪಣ, ಬಸವಣ್ಣನವರ ವಚನಗಳ ಪರಿಷ್ಕರಣೆಯ ಇತಿಹಾಸ-ವಿಧಾನಗಳನ್ನು ನಾಲ್ಕು ಜನ ವಿದ್ವಾಂಸರು ಚರ್ಚಿಸಿದ್ದಾರೆ. ಗದಗ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಮತ್ತು ಸಮ್ಮೇಳನಾಧ್ಯಕ್ಷರಾದ ವೈ.ಸಿ.ಭಾನುಮತಿಯವರು ಹಸ್ತಪ್ರತಿ-ಗ್ರಂಥಸಂಪಾದನೆಗೆ ನೀಡಿದ ಕೊಡುಗೆಯನ್ನು ಕುರಿತ ಲೇಖನಗಳಿವೆ.

ಡಾ. ಕೆ.ರವೀಂದ್ರನಾಥ ಸಂಪಾದಿಸಿದ ಹಸ್ತಪ್ರತಿ ವ್ಯಾಸಂಗ-೧೮ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ೧೪ನೇ ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿತವಾದ ಲೇಖನಗಳ ಸಂಪುಟ. ಎಸ್.ಶಿವಣ್ಣ ಅವರ ಜೀವನ-ಸಾಧನೆ ಕುರಿತು ೧೧ ಲೇಖನಗಳಿವೆ. ಎಸ್.ಶಿವಣ್ಣನವರು ಗ್ರಂಥಸಂಪಾದನೆ, ಸಂಶೋಧನೆ, ಸೂಚಿರಚನೆ ಹಾಗೂ ಲಘುಸಾಹಿತ್ಯ ಸಂಪಾದನೆಯ ವೈಧಾನಿಕತೆಯನ್ನು ವಿದ್ವಾಂಸರು ಚರ್ಚಿಸಿದ್ದಾರೆ. ಹರಿಹರನ ರಗಳೆಗಳು, ಕುಮಾರವ್ಯಾಸ ಭಾರತ, ಸರ್ವಜ್ಞನ ತ್ರಿಪದಿಗಳು ಹಾಗೂ ಭರತೇಶ ವೈಭವ ಕೃತಿಗಳ ಪರಿಷ್ಕರಣೆ ಮತ್ತು ಅಧ್ಯಯನಕ್ಕೆ ಸಂಬಂಧಿಸಿದ ಲೇಖನಗಳಿವೆ. ಬಳ್ಳಾರಿ ಜಿಲ್ಲೆಯ ಬಯಲಾಟದ ಹಸ್ತಪ್ರತಿಗಳು ಹಾಗೂ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಎಂ.ಪಿ. ಮಂಜಪ್ಪ ಶೆಟ್ಟಿಯವರ ಹಸ್ತಪ್ರತಿ-ಗ್ರಂಥಸಂಪಾದನೆಯ ಕೊಡುಗೆ ಕುರಿತಾದ ಲೇಖನಗಳು ಇಲ್ಲಿ ಸಂಪಾದನೆಗೊಂಡಿವೆ. ಇವರೇ ಸಂಪಾದಿಸಿದ ಹಸ್ತಪ್ರತಿ ವ್ಯಾಸಂಗ-೧೯ ಬೆಳಗಾವಿಯ ಭರತೇಶ ಶಿಕ್ಷಣ ಸಂಸ್ಥೆಯಲ್ಲಿ ಪ್ರೊ. ಹಂಪ ನಾಗರಾಜಯ್ಯನವರ ಸರ್ವಾಧ್ಯಕ್ಷತೆಯಲ್ಲಿ ನಡೆದ ೧೫ನೇ ಸಮ್ಮೇಳನದಲ್ಲಿ ಮಂಡಿತವಾದ ಲೇಖನಗಳಿವೆ. ಟಿ.ಎಸ್ ವೆಂಕಣ್ಣಯ್ಯ, ಎಸ್.ಎಂ.ಹುಣಿಸ್ಯಾಳ, ಪಂಡಿತ ಎಸ್.ಬಸಪ್ಪ, ಸ.ಸ.ಮಾಳವಾಡ, ಕೆ.ವೆಂ.ರಾಘವಾಚಾರ್, ಡಿ.ಕೆ. ಭೀಮಸೇನರಾವ್, ಜಿ.ವೆಂಕಟಸುಬ್ಬಯ್ಯ, ವಿ.ಶಿವಾನಂದ ಅವರುಗಳ ಗ್ರಂಥಸಂಪಾದನೆಯ ವೈಧಾನಿಕತೆಯನ್ನು ಕುರಿತು ೮ ಜನ ವಿದ್ವಾಂಸರ ಲೇಖನಗಳಿವೆ. ಪ್ರಾಚೀನ ಅಲಂಕಾರಶಾಸ್ತ್ರ ಕೃತಿಗಳಾದ ಕಾವ್ಯಾವಲೋಕನ, ಉದಯಾದಿತ್ಯಾಲಂಕಾರ, ರಸರತ್ನಾಕರ, ಮಾಧವಾಲಂಕಾರ ಕಾವ್ಯಗಳ ಪರಿಷ್ಕರಣೆ ಮತ್ತು ಅಧ್ಯಯನ ಚರಿತ್ರೆಯನ್ನು

ವಿಶ್ಲೇಷಿಸಿದ ಲೇಖನಗಳಿವೆ. ಬೆಳಗಾವಿ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಹಾಗೂ ಸಮ್ಮೇಳನಾಧ್ಯಕ್ಷರಾದ ಡಾ. ಹಂಪನಾ ಅವರ ಹಸ್ತಪ್ರತಿ-ಗ್ರಂಥಸಂಪಾದನೆ ಕ್ಷೇತ್ರದ ಕೊಡುಗೆಯನ್ನು ಪರಿಚಯಿಸುವ ಲೇಖನವಿದೆ.

ಹಸ್ತಪ್ರತಿ ವ್ಯಾಸಂಗ-೨೦ ಡಾ. ವೀರೇಶ ಬಡಿಗೇರ ಅವರು ಸಂಪಾದಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಹದಿನಾರನೆಯ ಹಸ್ತಪ್ರತಿ ಸಮ್ಮೇಳನದ ಸಂಪುಟ. ಟಿ.ಎನ್.ನಾಗರತ್ನ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನದಲ್ಲಿ ಆರ್.ಸಿ.ಹಿರೇಮಠ ಅವರ ಜನ್ಮಶತಮಾನೋತ್ಸವ ಸಂಸ್ಮರಣೆಗಾಗಿ ಅವರ ಜೀವನ, ಕಾವ್ಯ-ವಚನ ಸಂಪಾದನೆ, ಸಂಶೋಧನೆ, ಭಾಷಾಶಾಸ್ತ್ರ, ಆತ್ಮಚರಿತ್ರೆ-ಜೀವನಚರಿತ್ರೆ, ವಿಮರ್ಶೆ, ಅನುವಾದ ಸಾಹಿತ್ಯಕ್ಕೆ ಆರ್.ಸಿ. ಹಿರೇಮಠ ಕೊಡುಗೆಯನ್ನು ಕುರಿತು ೮ ಲೇಖನಗಳು ಇಲ್ಲಿ ಸೇರಿವೆ. ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಇತ್ತೀಚಿನ ಒಲವುಗಳು ಎಂಬ ಗೋಷ್ಠಿಯಲ್ಲಿ ಓದಿನ ವಿಧಾನ. ಮಹಿಳಾ ಸಂವೇದನೆಗಳು ಮುಂತಾದ ಸಂಗತಿಗಳನ್ನು ಚರ್ಚಿಸಿದ ೧೧ ಲೇಖನಗಳು, ಡಾ. ಟಿ.ಎಸ್.ನಾಗರತ್ನ ಅವರ ಗ್ರಂಥಸಂಪಾದನೆ ವೈಜ್ಞಾನಿಕತೆಯನ್ನು ಕುರಿತ ಲೇಖನವು ಇಲ್ಲಿ ಸೇರಿದೆ. ಇವರೇ ಸಂಪಾದಿಸಿದ ಹಸ್ತಪ್ರತಿ ವ್ಯಾಸಂಗ-೨೧ ಗದಗಿನಲ್ಲಿ ನಡೆದ ೧೭ನೇ ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳನ್ನು ಒಳಗೊಂಡಿದೆ. ಡಾ. ಎಸ್.ಆರ್.ಗುಂಜಾಳ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನದಲ್ಲಿ ಪ್ರೊ. ಎಂ.ಮರಿಯಪ್ಪಭಟ್ಟ ಅವರ ಸಾಹಿತ್ಯ ಸ್ಮರಣೆ ಗೋಷ್ಠಿಯಲ್ಲಿ ಜೀವನ, ಸಂಶೋಧನೆ, ಶಾಸನ ಮತ್ತು ಕನ್ನಡ ಸಾಹಿತ್ಯ ಚರಿತ್ರೆ, ಅಧ್ಯಯನಗಳು, ಗ್ರಂಥಸಂಪಾದನೆ, ನಿಘಂಟು ಹಾಗೂ ಕೋಶರಚನೆ, ಅನುವಾದ ಮತ್ತು ಅನ್ಯಭಾಷಾ ಕಾರ್ಯಗಳನ್ನು ಕುರಿತ ೯ ಲೇಖನಗಳಿವೆ. ಪ್ರಾಚೀನ ಕನ್ನಡ ಕಾವ್ಯ: ಓದು ಮತ್ತು ವ್ಯಾಖ್ಯಾನ, ಪ್ರಾಚೀನ ಕನ್ನಡ ಸಾಹಿತ್ಯ ಪ್ರಕಟಣಾ ಸಂಸ್ಥೆಗಳಾದ ಮದ್ರಾಸ್, ಮಂಗಳೂರು, ಹಳೆಯ ಮೈಸೂರು, ಉತ್ತರ ಕರ್ನಾಟಕ ಪರಿಸರದ ಸಂಸ್ಥೆಗಳನ್ನು ಕುರಿತು ಚರ್ಚಿಸಲಾಗಿದೆ. ಸಮ್ಮೇಳನಾಧ್ಯಕ್ಷರಾದ ಎಸ್.ಆರ್.ಗುಂಜಾಳ ಅವರ ಬದುಕು-ಬರಹವನ್ನು ಇದರಲ್ಲಿ ದಾಖಲಿಸಲಾಗಿದೆ.

ಹಸ್ತಪ್ರತಿ ವ್ಯಾಸಂಗ-೨೨ನ್ನು ಡಾ. ಎಫ್.ಟಿ.ಹಳ್ಳಿಕೇರಿ ಅವರು ಸಂಪಾದಿಸಿದ್ದಾರೆ. ಪ್ರೊ. ಎ.ವಿ.ನಾವಡ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆದ ಹದಿನೆಂಟನೆಯ ಹಸ್ತಪ್ರತಿ ಸಮ್ಮೇಳನವನ್ನು ಪುತ್ತೂರಿನಲ್ಲಿ ಆಯೋಜಿಸಲಾಗಿತ್ತು. ಈ ಸಂಪುಟದಲ್ಲಿ ರೆ.ಎಫ್.ಕಿಟೆಲ್ ಸಾಹಿತ್ಯಸ್ಮರಣೆ ಗೋಷ್ಠಿಯಲ್ಲಿ ಅವರ ಜೀವನ, ನಿಘಂಟು-ವ್ಯಾಕರಣ, ಪಠ್ಯಪುಸ್ತಕ ರಚನೆ, ಗ್ರಂಥಸಂಪಾದನೆ, ಸಂಶೋಧನೆ, ಧಾರ್ಮಿಕ ಸಾಹಿತ್ಯ, ಸಾಹಿತ್ಯಚರಿತ್ರೆ, ಕುರಿತು ೮ ಪ್ರಬಂಧಗಳು ಮಂಡಿತವಾಗಿವೆ. ಕರಾವಳಿ ಕರ್ನಾಟಕ ಭಾಗದ ಯಕ್ಷಗಾನದ ಹಸ್ತಪ್ರತಿಗಳ ಅಧ್ಯಯನ, ಪ್ರಾಚೀನ ಕಾವ್ಯಗಳಾದ ಹರಿಹರನ ಗಿರಿಜಾಕಲ್ಯಾಣ, ರತ್ನಾಕರವರ್ಣಿಯ ಭರತೇಶವೈಭವ, ಷಡಕ್ಷರಿಯ ರಾಜಶೇಖರವಿಳಾಸ, ಅಕ್ಕಮಹಾದೇವಿಯ ವಚನಗಳ ಪರಿಷ್ಕರಣೆ ಕುರಿತು ಲೇಖನಗಳಿವೆ. ಪ್ರೊ. ಎ.ವಿ.ನಾವಡ ಅವರ ಸಾಹಿತ್ಯ ಸಾಧನೆ ಕುರಿತು ವಿಶೇಷ ಉಪನ್ಯಾಸದಲ್ಲಿ ಮಂಡಿತವಾದ ಪ್ರಬಂಧ ಸೇರಿದೆ. ಪ್ರೊ. ಹಳ್ಳಿಕೇರಿಯವರೇ ಸಂಪಾದಿಸಿದ ೧೯ನೆಯ ಹಸ್ತಪ್ರತಿ ಸಮ್ಮೇಳನವು ಬಾಗಲಕೋಟೆಯಲ್ಲಿ ನಡೆದಿದೆ. ಸಮ್ಮೇಳನದ ಸರ್ವಾಧ್ಯಕ್ಷರು ಪ್ರೊ. ಲಕ್ಷ್ಮಣ ತೆಲಗಾವಿ ಅವರು. ಹಸ್ತಪ್ರತಿ ವ್ಯಾಸಂಗ-೨೩ರಲ್ಲಿ ಡಾ. ಬಿ.ಆರ್.ಹಿರೇಮಠ ಅವರ ಸಾಹಿತ್ಯ ಸ್ಮರಣೆಯ ಎರಡು ಗೋಷ್ಠಿಗಳಲ್ಲಿ ಜೀವನ, ಹಸ್ತಪ್ರತಿ ಅಧ್ಯಯನ, ಕಾವ್ಯಸಾಹಿತ್ಯ ಸಂಪಾದನೆ, ವಚನಸಾಹಿತ್ಯ ಸಂಪಾದನೆ, ಸಾಹಿತ್ಯ ಸಂಶೋಧನೆ, ಶಾಸನ ಸಂಶೋಧನೆ, ಸೃಜನಸಾಹಿತ್ಯ ಕುರಿತಾದ ಪ್ರಬಂಧಗಳು ಮಂಡನೆಯಾಗಿವೆ. ಹಸ್ತಪ್ರತಿ ಪ್ರಶಸ್ತಿಗಳನ್ನು ಕುರಿತು ಪ್ರಶಸ್ತಿಗಳ ಅರ್ಥ, ಸ್ವರೂಪ, ವಿಷಯ ವೈವಿಧ್ಯ, ಚಾರಿತ್ರಿಕ ಸಂಗತಿಗಳು, ಭಾಷಿಕ ವಿವೇಚನೆ ಮತ್ತು ಸಾಂಸ್ಕೃತಿಕ ಅನನ್ಯತೆಗೆ ಸಂಬಂಧಿಸಿದ ಲೇಖನಗಳಿವೆ. ಪ್ರಾಚೀನ ಕಾವ್ಯ ಪರಿಷ್ಕರಣೆಯಲ್ಲಿ ಅಲ್ಲಮಪ್ರಭುದೇವರ

ವಚನಗಳು, ರಾಘವಾಂಕನ ಹರಿಶ್ಚಂದ್ರಕಾವ್ಯ, ಚಾಮರಸನ ಪ್ರಭುಲಿಂಗಲೀಲೆ, ಕನಕದಾಸರ ಕೀರ್ತನೆಗಳನ್ನು ವಿಶ್ಲೇಷಿಸಲಾಗಿದೆ. ಸಮ್ಮೇಳನದ ಸರ್ವಾಧ್ಯಕ್ಷರಾದ ಲಕ್ಷ್ಮಣ ತೆಲಗಾವಿ ಅವರ ಸಮಗ್ರ ಸಂಶೋಧನೆಯನ್ನು ಪರಿಚಯಿಸುವ ಲೇಖನ ಇಲ್ಲಿ ಸೇರ್ಪಡೆಯಾಗಿದೆ.

೫. ಹಸ್ತಪ್ರತಿ ಅಧ್ಯಯನ ಸಂಚಿಕೆಗಳು

ಒಂದು ಅಧ್ಯಯನ ವಿಭಾಗದ ಶೋಧನೆ-ಬೋಧನೆಗಳು ವಿದ್ವಾಂಸರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತ ಶ್ರೀಸಾಮಾನ್ಯ ಜನರಿಗೆ ತಲುಪಬೇಕು ಎಂಬ ಉದ್ದೇಶದಿಂದ ನಿಯತಕಾಲಿಕೆಗಳನ್ನು ಹೊರಡಿಸುವ ಪರಂಪರೆ ಇರುವುದನ್ನು ಕಾಣುತ್ತೇವೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ನಾಟಕ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಭಾರತಿ ಮುಂತಾದ ಸಂಶೋಧನೆಯ ಭಾಗವಾಗಿ ಪ್ರಕಟಣೆಗೊಂಡ ನಿಯತಕಾಲಿಕೆಗಳು ೨೫-೫೦ ವರ್ಷಗಳನ್ನು ಪೂರೈಸಿದ ಇತಿಹಾಸವೂ ಈ ಪತ್ರಿಕೆಗಳಿಗಿದೆ. ಕನ್ನಡ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ' ಆರಂಭದಲ್ಲಿ ಬಂದ ಸಂಚಿಕೆ. ಇತ್ತೀಚಿಗೆ ಶಾಸನ ಅಧ್ಯಯನ, ಚರಿತ್ರೆ ಅಧ್ಯಯನ, ಜಾನಪದ ಅಧ್ಯಯನ, ಅಭಿವೃದ್ಧಿ ಅಧ್ಯಯನ, ಬುಡಕಟ್ಟು ಅಧ್ಯಯನ ಹೀಗೆ ಪ್ರತಿ ಅಧ್ಯಯನ ವಿಭಾಗಗಳು ಪತ್ರಿಕೆಗಳನ್ನು ತರುತ್ತಲಿವೆ. ಈ ಸಾಲಿನಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗ ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆ ಎರಡು ಸಂಚಿಕೆಗಳಲ್ಲಿ ಪ್ರಕಟಗೊಳ್ಳುತ್ತಿದೆ. ಇದುವರೆಗೆ ೧೪ ಸಂಪುಟಗಳು, ೨೮ ಸಂಚಿಕೆಗಳು ಮುದ್ರಣಗೊಂಡಿವೆ.

ಪ್ರಸ್ತುತ ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆಗಳು ವಿಶಿಷ್ಟ ರೀತಿಯ ಹಸ್ತಪ್ರತಿ-ಗ್ರಂಥಸಂಪಾದನೆ ಕ್ಷೇತ್ರಗಳನ್ನು ಪ್ರತಿನಿಧಿಸುವ ಲೇಖನಗಳನ್ನು ವಿದ್ವಾಂಸರಿಂದ ಬರೆಯಿಸಿ, ಅಥವಾ ಈಗಾಗಲೇ ಪ್ರಕಟಗೊಂಡ ಅಪರೂಪದ ಲೇಖನಗಳನ್ನು ಬಳಸಿಕೊಳ್ಳಲಾಗಿದೆ. 'ಹಂಬಲ' ಹೆಸರಿನ ಸಂಪಾದಕೀಯ ಮಾತುಗಳು ಹಳೆಯ ಪುಸ್ತಕಗಳ ವಿನ್ಯಾಸ-ವಿಶಿಷ್ಟತೆ ಮತ್ತು ಅಧ್ಯಯನ, ಸಂರಕ್ಷಣೆ ಮತ್ತು ಸಂವರ್ಧನೆಯ ಪ್ರಮೇಯಗಳು, ಕನ್ನಡ ಪಠ್ಯಗಳ ಸಹವರ್ತಿ ಚಿಂತನೆ, ಮತ್ತೊಂದು ಕವಿಚರಿತೆಯ ಅಗತ್ಯತೆ, ಹಸ್ತಪ್ರತಿ ತಜ್ಞರ ಕುರಿತು, ಜನಪದ ಸಂಪಾದನೆ ಸವಾಲುಗಳು, ಶಾಸ್ತ್ರಸಾಹಿತ್ಯ ಪ್ರಕಟಣೆಯ ಒತ್ತಾಸೆ-ಹೀಗೆ ಅಪರೂಪದ ವಿಷಯಗಳನ್ನು ಎತ್ತಿಕೊಂಡು ಮಾಡಿದ ಚರ್ಚೆಗಳು ಮುಂದಿನ ಅಧ್ಯಯನಕ್ಕೆ ಮಾರ್ಗದರ್ಶನ ಮಾಡುತ್ತವೆ. 'ಅಲೇಖನ' ಎಂಬ ಭಾಗದಲ್ಲಿ ಗ್ರಂಥಸಂಪಾದನೆ, ಭಾಷಾಶಾಸ್ತ್ರ, ಹಸ್ತಪ್ರತಿಶಾಸ್ತ್ರ, ಜಾನಪದ ಹೀಗೆ ಹಲವು ಹತ್ತು ಕ್ಷೇತ್ರಗಳಲ್ಲಿ ನಡೆದ ಅಧ್ಯಯನಗಳ ಪ್ರಾಯೋಗಿಕ ಚರಿತ್ರೆಯ ಲೇಖನಗಳು ಪ್ರಕಟಗೊಂಡಿವೆ. 'ಲೋಕನ' ಭಾಗದಲ್ಲಿ ಸ್ವತಂತ್ರ ಹಾಗೂ ಚಿಂತನಾರ್ಹ ಲೇಖನಗಳನ್ನು ಸಂಯೋಜಿಸಲಾಗಿದೆ. 'ವರಸೆ' ಭಾಗದಲ್ಲಿ ಒಂದು ನಿರ್ದಿಷ್ಟ ಪದ, ಪದ್ಯದ ಸಾಲು ಅಥವಾ ವಚನ, ಕಾವ್ಯ ಭಾಗದ ಪಾಠ ಪರಿಷ್ಕರಣೆಯ ಮೂಲ ಆಶಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದ ಲೇಖನಗಳಿವೆ. 'ಅವಲೋಕನ'ದಲ್ಲಿ ಅನುವಾದ ಹಾಗೂ ವಿಮರ್ಶಾ ಲೇಖನಗಳಿಗೆ ಆದ್ಯತೆ ನೀಡಲಾಗಿದೆ. 'ಹಳೆಯಹೊನ್ನು' ಸಂಪಾದನೆಗೊಂಡಿರುವ ಕಾವ್ಯಕೃತಿಗಳ ಪ್ರಸ್ತಾವನಭಾಗ ಅಥವಾ ಉಪೋದ್ಘಾತದ ಮಾತುಗಳನ್ನು ಮರುಚಿಂತನೆಗೆ ಒಳಪಡಿಸುವ ಲೇಖನಗಳಿಂದ ಕೂಡಿದೆ. 'ಸಂಚಿ' ಹಸ್ತಪ್ರತಿ ಅಥವಾ ಕಾವ್ಯವೊಂದರ ಅಧ್ಯಯನ-ಪ್ರಕಟಣೆ ಹಾಗೂ ಲೇಖನ ಸೂಚಿಯನ್ನು ನೀಡುವುದು. ಹಸ್ತಪ್ರತಿ-ಗ್ರಂಥಸಂಪಾದನೆ ಪರಿಣಿತ ವಿದ್ವಾಂಸರೊಂದಿಗಿನ ಸಂದರ್ಶನವನ್ನು 'ಸಂವಾದ' ಭಾಗದಲ್ಲಿ ಅಳವಡಿಸಲಾಗಿದೆ. ಸ್ಥೂಲವಾಗಿ ಈ ಮೇಲಿನ ಕ್ರಮವನ್ನೇ ಎಲ್ಲಾ ಸಂಚಿಕೆಗಳು ಅನುಸರಿಸಿವೆ. ಇತ್ತೀಚಿಗೆ ಸಂಶೋಧನೆಯ ವೈಧಾನಿಕತೆ, ಕಾವ್ಯ ಪ್ರಕಾರಗಳ ಅರ್ಥ, ಲಕ್ಷಣ, ಇತಿಹಾಸ, ಅಧ್ಯಯನ ಪರಂಪರೆಯನ್ನು ಗುರುತಿಸಬೇಕೆಂಬ ಅಪೇಕ್ಷೆಯಿಂದಲೂ ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆ ಹೊಸ ಚಿಂತನೆಗಳನ್ನು ಇರಿಸಿಕೊಂಡು ಪ್ರಕಟವಾಗುತ್ತಿದೆ.

ಹಸ್ತಪ್ರತಿ-ಗ್ರಂಥಸಂಪಾದನೆಯಂಥ ಉಪೇಕ್ಷಿತ ಕ್ಷೇತ್ರವನ್ನು ಸರಳವಾದ ಭಾಷೆ ಮತ್ತು ಆಶಯಗಳಿಂದ ಜನಸಾಮಾನ್ಯರಿಗೆ, ವಿದ್ವಾಂಸರಿಗೆ ಉಪಯುಕ್ತವಾಗುವಂತೆ ವಿಭಾಗದ ಪ್ರಾಧ್ಯಾಪಕರಾದ ಪ್ರೊ ಎ.ವಿ.ನಾವಡ, ಪ್ರೊ. ವೀರೇಶ ಬಡಿಗೇರ, ಪ್ರೊ. ಎಫ್.ಟಿ.ಹಳ್ಳಿಕೇರಿ, ಪ್ರೊ. ಕೆ.ರವೀಂದ್ರನಾಥ, ಪ್ರೊ. ಎಸ್.ಎಸ್.ಅಂಗಡಿ, ಪ್ರೊ. ಎಸ್.ಆರ್.ಚೆನ್ನವೀರಪ್ಪ ಅವರುಗಳು ಹಸ್ತಪ್ರತಿ ಅಧ್ಯಯನಕ್ಕೆ ವಿದ್ವತ್‌ಮನ್ನಣೆಯನ್ನು ತಂದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

೬. ವಿಭಾಗದ ನೆನಪಿನ ಸಂಪುಟಗಳು

ಹಸ್ತಪ್ರತಿಶಾಸ್ತ್ರ ವಿಭಾಗ ೧೯೯೬ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ೨೦೦೬ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ೧೦ ವರ್ಷಗಳ ಪ್ರಾಯ. ಇದರಂಗವಾಗಿ ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ಸಮಾರಂಭವನ್ನು ಕನ್ನಡ ವಿಶ್ವವಿದ್ಯಾಲಯದ 'ಭುವನ ವಿಜಯ' ಸಭಾಂಗಣದಲ್ಲಿ ದಿನಾಂಕ ೧೭, ೧೮ ಮಾರ್ಚ್ ೨೦೦೬ ರಂದು ಆಯೋಜಿಸಲಾಗಿತ್ತು. ಈ ಸಮಾರಂಭದಲ್ಲಿ ವಿಭಾಗದ ಹತ್ತು ವರ್ಷಗಳ ಸಾಧನೆಯನ್ನು ದಾಖಲಿಸಬೇಕೆಂಬ ಉದ್ದೇಶದಿಂದ 'ಕವಳಿಗೆ' ಹೆಸರಿನ ನೆನಪಿನ ಸಂಪುಟವನ್ನು ಪ್ರಕಟಿಸಲಾಯಿತು. ಈ ಸಂಪುಟವನ್ನು ಪ್ರೊ. ಎ.ವಿ.ನಾವಡ ಮತ್ತು ಪ್ರೊ. ಕೆ. ರವೀಂದ್ರನಾಥ ಅವರುಗಳು ಸಂಪಾದಿಸಿಕೊಟ್ಟಿದ್ದಾರೆ. ಪ್ರಸ್ತುತ ಸಂಪುಟ-೧ ಹಸ್ತಪ್ರತಿಶಾಸ್ತ್ರ ವಿಭಾಗದ ಸಾಧನೆಗಳು, ೨. ಹಸ್ತಪ್ರತಿಗಳು ಮತ್ತು ಗ್ರಂಥಸಂಪಾದನೆ: ವಿದ್ವಾಂಸರ ಚಿಂತನೆ, ೩. ಜಾಹೀರಾತುಗಳು ಎಂಬ ಮೂರು ಭಾಗಗಳಲ್ಲಿ ವಿನ್ಯಾಸಗೊಂಡಿದೆ.

'ಹಸ್ತಪ್ರತಿಶಾಸ್ತ್ರ ವಿಭಾಗ ಸಾಧನೆ'ಯನ್ನು ಪರಿಚಯಿಸುವ ಮೊದಲ ಭಾಗದಲ್ಲಿ ಒಂಬತ್ತು ಜನ ವಿದ್ವಾಂಸರು ಲೇಖನ ಬರೆದಿದ್ದಾರೆ. ಹಸ್ತಪ್ರತಿ ಭಂಡಾರ(ಡಾ. ಎಫ್.ಟಿ.ಹಳ್ಳಿಕೇರಿ) ಕುರಿತಂತೆ ಹಸ್ತಪ್ರತಿಗಳ ಸರ್ವೇಕ್ಷಣೆ-ಸಂಗ್ರಹ, ಪ್ರಕಟಿತ ಕೃತಿಗಳ ಪ್ರಕಟಣೆ, ನಮ್ಮ ಭಂಡಾರದಲ್ಲಿರುವ ಹಸ್ತಪ್ರತಿಗಳ ವಿಶೇಷತೆಯನ್ನು ಪರಿಚಯಿಸಿಕೊಟ್ಟಿದ್ದಾರೆ. ಸಂಶೋಧನ ಯೋಜನೆಗಳು(ಡಾ. ಎಸ್.ಎಸ್.ಅಂಗಡಿ) ಎಂಬ ಲೇಖನದಲ್ಲಿ ವಿಭಾಗದ ಪ್ರಾಧ್ಯಾಪಕರು ಪೂರೈಸಿದ ಸಾಂಸ್ಥಿಕ ಮತ್ತು ವೈಯಕ್ತಿಕ ಯೋಜನೆಗಳನ್ನು ಸಮಗ್ರವಾಗಿ ವಿವರಿಸಿದ್ದಾರೆ. ವಿಭಾಗ ಮಾಲೆಯ ಪ್ರಕಟಣೆಗಳು (ಡಾ. ಕೆ.ರವೀಂದ್ರನಾಥ) ಎಂಬ ಲೇಖನದಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆ ಹೆಸರಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಪ್ರಾಧ್ಯಾಪಕರ ಕೃತಿಗಳನ್ನು ವಿಮರ್ಶೆ ಮಾಡಲಾಗಿದೆ. ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆಗಳು(ಡಾ. ಜಿ. ಕರಿಯಪ್ಪ) ಲೇಖನದಲ್ಲಿ ವಿಭಾಗ ಶೈಕ್ಷಣಿಕ ಭಾಗವಾಗಿ ಹೊರಡಿಸುತ್ತಿರುವ ಹಸ್ತಪ್ರತಿ ಅಧ್ಯಯನ ಹೆಸರಿನ ನಿಯತಕಾಲಿಕೆಗಳ ವಿಶೇಷತೆಯನ್ನು ಎತ್ತಿ ಹೇಳುವ ಲೇಖನವಾಗಿದೆ. ವಿಚಾರಸಂಕಿರಣ-ವಿಶೇಷ ಉಪನ್ಯಾಸ-ಹಸ್ತಪ್ರತಿ ಸಮ್ಮೇಳನಗಳು(ಡಾ. ವೀರೇಶ ಬಡಿಗೇರ) ಎಂಬ ಲೇಖನದಲ್ಲಿ ಹತ್ತು ವರ್ಷಗಳಕಾಲ ವಿಭಾಗವು ನಡೆಸಿಕೊಂಡು ಬಂದ ವಿಚಾರಸಂಕಿರಣಗಳನ್ನು, ಈ ಕ್ಷೇತ್ರದ ವಿದ್ವಾಂಸರಿಂದ ಕೊಡಮಾಡಿಸಿದ ವಿಶೇಷ ಉಪನ್ಯಾಸಗಳ ಉದ್ದೇಶಗಳನ್ನು ಹಾಗೂ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನಗಳನ್ನು ಕುರಿತು ಪರಿಚಯಿಸಿದ್ದಾರೆ. ಹಳೆಯ ಹೊನ್ನು(ಗವಿಸಿದ್ಧಪ್ಪ ಹಂದ್ರಾಳು) ಲೇಖನ ಹಳಗನ್ನಡ-ಗ್ರಂಥಸಂಪಾದನೆ ಹಾಗೂ ಹಸ್ತಪ್ರತಿ ಕುರಿತು ವಿದ್ಯಾರ್ಥಿಗಳ ಮತ್ತು ಪ್ರಾಧ್ಯಾಪಕರ ಚರ್ಚಾವೇದಿಕೆಯಾಗಿದ್ದ ಹಳೆಯಹೊನ್ನು ಕಾರ್ಯಕ್ರಮದ ಸ್ವರೂಪವನ್ನು ಪರಿಚಯಿಸಿದ್ದಾರೆ. ಹಸ್ತಪ್ರತಿಶಾಸ್ತ್ರ ವಿಭಾಗ ಪ್ರತಿವರ್ಷ ಆಚರಿಸಿಕೊಂಡು ಬರುತ್ತಿರುವ ಹಸ್ತಪ್ರತಿ ತರಬೇತಿ ಶಿಬಿರಗಳು(ಡಾ. ಎಸ್.ಆರ್. ಚೆನ್ನವೀರಪ್ಪ) ಮತ್ತು ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ(ಬಿ.ಜಿ.ಬಿರಾದಾರ್)ಗಳ ಉದ್ದೇಶ, ಮಹತ್ವ ಅವಶ್ಯಕತೆಯನ್ನು ವಿವರಿಸಿದ್ದಾರೆ. ನಮ್ಮ ಪ್ರಸಾರಂಗವಲ್ಲದೆ ಸ್ವಂತಕ್ಕೆ ಮತ್ತು ವಿಭಾಗದ ಹೊರಗಡೆ ಪ್ರಕಟಣೆಗೊಂಡ ಪ್ರಾಧ್ಯಾಪಕರ ಕೃತಿಗಳನ್ನು(ಬಿ. ಮಂಜುಳಾ) ಸಮೀಕ್ಷಿಸಿದ್ದಾರೆ. ಅದುವರೆಗೆ ವಿಭಾಗದಲ್ಲಿ ಅಧ್ಯಯನ ಮಾಡಿದ

ವಿದ್ಯಾರ್ಥಿಗಳ ಮಾಹಿತಿ, ಗಣ್ಯರ ಅಭಿಪ್ರಾಯಗಳನ್ನು ಮೊದಲನೆಯ ಭಾಗದಲ್ಲಿ ನೀಡಲಾಗಿದೆ. ಎರಡನೇ ಭಾಗದಲ್ಲಿ ಕನ್ನಡ ಗ್ರಂಥಸಂಪಾದನೆ ಕುರಿತು ಎನ್.ಅನಂತರಂಗಾಚಾರ್, ಡಾ. ಎಂ.ಚಿದಾನಂದಮೂರ್ತಿ, ಡಾ. ಎಂ.ಎಂ. ಕಲಬುರ್ಗಿ, ಎಸ್.ಆರ್.ಗುಂಜಾಳ ಹಾಗೂ ವೈ.ಸಿ. ಭಾನುಮತಿ ಅವರ ಮಹತ್ವದ ಲೇಖನಗಳನ್ನು ಬಳಸಿಕೊಳ್ಳಲಾಗಿದೆ. ದಶಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 'ದಕ್ಷಿಣಭಾರತೀಯ ಗ್ರಂಥಸಂಪಾದನೆ' ರಾಷ್ಟ್ರೀಯ ವಿಚಾರ ಸಂಕಿರಣದ ಆಮಂತ್ರಣ ಪತ್ರಿಕೆ, ಗಣ್ಯಮಾನ್ಯರ ಸಂದೇಶ ಹಾಗೂ ದಶಮಾನೋತ್ಸವದ ವರದಿ, ಬಿಡುಗಡೆಯಾದ ಕೃತಿಗಳ ಪಟ್ಟಿಯನ್ನು ನೀಡಲಾಗಿದೆ.

೨೦೨೨ ಹಸ್ತಪ್ರತಿಶಾಸ್ತ್ರ ವಿಭಾಗ ೨೫ ವರ್ಷಗಳನ್ನು ಪೂರೈಸಿ ೨೬ನೇ ವರ್ಷಕ್ಕೆ ಕಾಲಿಡುತ್ತಲಿದೆ. ಇದರಂಗವಾಗಿ ಹಸ್ತಪ್ರತಿಶಾಸ್ತ್ರ ವಿಭಾಗದ ರಜತಮಹೋತ್ಸವ ಸಮಾರಂಭವನ್ನು ನವೆಂಬರ್ ಮೊದಲ ವಾರದಲ್ಲಿ ಏರ್ಪಡಿಸಲಾಗಿದೆ. ಸಮಾರಂಭದ ನೆನಪಿಗಾಗಿ 'ತಾಡೋಲೆ' ಹೆಸರಿನ ನೆನಪಿನ ಸಂಪುಟವನ್ನು ಪ್ರಕಟಿಸಲಾಗಿದೆ. ಇದರ ಪ್ರಧಾನ ಸಂಪಾದಕರು ಡಾ. ಎಫ್.ಟಿ.ಹಳ್ಳಿಕೇರಿ, ಸಂಪಾದಕರು ಡಾ. ವೀರೇಶ ಬಡಿಗೇರ ಮತ್ತು ಡಾ. ಕೆ.ರವೀಂದ್ರನಾಥ ಅವರು. ಹಸ್ತಪ್ರತಿಶಾಸ್ತ್ರ ವಿಭಾಗ ೨೫ ವರ್ಷಗಳ ಕಾಲ ನಡೆಸಿಕೊಂಡು ಬಂದ ಶೈಕ್ಷಣಿಕ ಕಾರ್ಯಕ್ರಮಗಳಾದ ಹಸ್ತಪ್ರತಿ ಸಮ್ಮೇಳನಗಳು, ಹಳಗನ್ನಡ ಬೋಧನಾ ತರಬೇತಿ ಶಿಬಿರಗಳು, ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರಗಳು, ವಿಭಾಗದ ಶೈಕ್ಷಣಿಕ ಯೋಜನೆಗಳು, ವಿಭಾಗಮಾಲೆಯ ಪ್ರಕಟಣೆಗಳು, ಹಸ್ತಪ್ರತಿಶಾಸ್ತ್ರ ವಿಭಾಗದ ಸ್ಥಾಪನೆ, ಸ್ವರೂಪ ಹಾಗೂ ಉದ್ದೇಶಗಳು ಹೆಸರಿನ ಲೇಖನಗಳು, ವಿಶೇಷವಾಗಿ ವಿಭಾಗದ ಪ್ರಾಧ್ಯಾಪಕರ ಶೈಕ್ಷಣಿಕ ಸಾಧನೆಗಳನ್ನು ದಾಖಲಿಸಲಾಗಿದೆ. ಅಪರೂಪದ ಭಾವಚಿತ್ರಗಳು, ವಿಭಾಗದ ಪ್ರಕಟಣೆ ಎಂ.ಫಿಲ್. ಪಿಎಚ್.ಡಿ. ವಿದ್ಯಾರ್ಥಿಗಳ ಯಾದಿಯನ್ನು ನೀಡಲಾಗಿದೆ. ಒಟ್ಟಾರೆ ಒಂದು ಶೈಕ್ಷಣಿಕ ವಿಭಾಗದ ಪ್ರಾಧ್ಯಾಪಕ ಸದಸ್ಯರು, ಆಡಳಿತಾಧಿಕಾರಿಗಳು ಮನಸ್ಸು ಮಾಡಿದರೆ ಶೈಕ್ಷಣಿಕವಾಗಿ ವಿಭಾಗವನ್ನು ಹೇಗೆ ಬೆಳೆಸಬಹುದು ಎಂಬುದನ್ನು ತಿಳಿದುಕೊಳ್ಳುವ ಕುತೂಹಲದ ಕಡೆಗೆ ಎಲ್ಲರ ಗಮನವನ್ನು ಸೆಳೆಯುವಂಥ ಮಾಹಿತಿಪೂರ್ಣ ಸಂಚಿಕೆಗಳು ಎಂಬುದರಲ್ಲಿ ಎರಡು ಮಾತಿಲ್ಲ.

ಒಟ್ಟಾರೆ ಸಂಪಾದಿತ ಕೃತಿಗಳಲ್ಲಿ ಉಪೇಕ್ಷಿತ, ಐಕ್ಯಕ ಮತ್ತು ಚಾರಿತ್ರಿಕ ಹಾಗೂ ಧಾರ್ಮಿಕ ಹಸ್ತಪ್ರತಿಗಳ ಸಹಾಯದಿಂದ ವಿಭಾಗದ ಪ್ರಾಧ್ಯಾಪಕ ಮಿತ್ರರ ಸಂಪಾದಿತ ಕೃತಿಗಳು ನಳನಳಿಸುತ್ತಿವೆ. ಸಂಗ್ರಹಿತವಾದ ಹಸ್ತಪ್ರತಿಗಳ ಸಮಗ್ರ ಜಾತಕವನ್ನು ಹಸ್ತಪ್ರತಿಸೂಚಿ ಸಂಪುಟಗಳು ಅನಾವರಣಗೊಳಿಸಿದೆ. ಈ ವಿಭಾಗದ ಸ್ವತಂತ್ರ ಕೃತಿಗಳು ಸಂಶೋಧನೆ, ವಿಮರ್ಶೆ, ನಿರ್ವಚನಗಳ ದೃಷ್ಟಿಯಿಂದ ಶ್ರೇಷ್ಠಮಟ್ಟದ ಅಧ್ಯಯನಗಳಾಗಿವೆ. ವಿಚಾರ ಸಂಕಿರಣ-ಸಮ್ಮೇಳನಗಳ ಸಮಗ್ರ ದಾಖಲೀಕರಣದ ಪ್ರತಿಬಿಂಬಗಳ 'ಹಸ್ತಪ್ರತಿ ವ್ಯಾಸಂಗಗಳು' ಮಾಹಿತಿ ಪ್ರಧಾನವಾಗಿವೆ. ವಿಭಾಗದ ಶೈಕ್ಷಣಿಕ ಶಿಸ್ತನ್ನು ಪರಿಚಯಿಸುವ ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆಗಳು ಉಪೇಕ್ಷಿತ ಕ್ಷೇತ್ರವೊಂದರ ಚರ್ಚೆಯನ್ನು ಆರಂಭಿಸಿವೆ. ದಶಮಾನೋತ್ಸವ-ರಜತ ಮಹೋತ್ಸವಗಳ ಸಂಭ್ರಮವನ್ನು ಹಿಡಿದಿಟ್ಟಿರುವ ಹಸ್ತಪ್ರತಿಶಾಸ್ತ್ರ ವಿಭಾಗದ ನೆನಪಿನ ಸಂಪುಟಗಳು ನಮ್ಮ ವಿಭಾಗ ಮಾಡಿದ ಕೆಲಸಗಳ ವರದಿಗಳಾಗಿ ಪ್ರಕಟಗೊಂಡಿವೆ.

ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆಯ ವಿವರಗಳು

ಮಾಲೆಯ ಕ್ರಮಸಂಖ್ಯೆ / ಪುಸ್ತಕದ ಹೆಸರು, ಲೇಖಕರು-ಸಂಪಾದಕರು / ಪ್ರಕಟಣ ವರ್ಷ

೧.	ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ ಸಂ: ಎಫ್.ಟಿ. ಹಳ್ಳಿಕೇರಿ	೧೯೯೯
೨.	ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂ: ೧ ಸಂ: ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ	೨೦೦೦
೩.	ಕನ್ನಡ ದಾಖಲು ಸಾಹಿತ್ಯ ಕೆ.ರವೀಂದ್ರನಾಥ	೨೦೦೦
೪.	ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂ: ೨ ಸಂ: ವೀರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ	೨೦೦೦
೫.	ಕನ್ನಡ ಹಸ್ತಪ್ರತಿಗಳು ಮತ್ತು ಸಾಪ್ಟವೇರ್ ತಂತ್ರಜ್ಞಾನ ವೀರೇಶ ಬಡಿಗೇರ	೨೦೦೦
೬.	ನಾಗಲಿಂಗಸ್ವಾಮಿ ತತ್ವಪದಗಳು ಸಂ: ಎಸ್.ಆರ್.ಚನ್ನವೀರಪ್ಪ	೨೦೦೦
೭.	ಕರಸ್ಥಲ ಸಾಹಿತ್ಯ ಸಂ: ಎಫ್.ಟಿ.ಹಳ್ಳಿಕೇರಿ	೨೦೦೦
೮.	ಬಸವಯುಗದ ವಚನೇತರ ಸಾಹಿತ್ಯ ಸಂ: ಕೆ.ರವೀಂದ್ರನಾಥ	೨೦೦೦
೯.	ಹಳೆಯ ಲಾವಣಿಗಳು ಸಂ: ವೀರೇಶ ಬಡಿಗೇರ	೨೦೦೦
೧೦.	ಸ್ವರವಚನ ತರಂಗ-೧ ಸಂ: ಎಸ್.ಆರ್.ಚನ್ನವೀರಪ್ಪ	೨೦೦೦
೧೧.	ಕನ್ನಡ ಜೈನ ಹಾಡುಗಳು ಸಂ: ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ	೨೦೦೨
೧೨.	ಹಸ್ತಪ್ರತಿ ವ್ಯಾಸಂಗ-೧ ಸಂ: ಎ.ವಿ.ನಾವಡ, ಎಸ್.ಎಸ್.ಅಂಗಡಿ	೨೦೦೨

೧೩. ಹಸ್ತಪ್ರತಿ ವ್ಯಾಸಂಗ-೨
ಸಂ: ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ ೨೦೦೨

೧೪. ಹಸ್ತಪ್ರತಿ ವ್ಯಾಸಂಗ-೩
ಸಂ: ವೀರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ ೨೦೦೨

೧೫. ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಅನುವಾದ
ಸಂ: ವೀರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ ೨೦೦೨

೧೬. ಹಿರಿಯಣ್ಣ ಕವಿಯ ಹಯರತ್ನಶ್ರೇಣಿ
ಸಂ: ಎಫ್.ಟಿ.ಹಳ್ಳಿಕೇರಿ ೨೦೦೪

೧೭. ಹಸ್ತಪ್ರತಿ ವ್ಯಾಸಂಗ-೪
ಸಂ: ವೀರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ ೨೦೦೩

೧೮. ಪ್ರಾಚೀನ ಲೇಖನ ಸಾಮಗ್ರಿಗಳು
ಅನು: ಶ್ರೀನಿವಾಸ ಹಾವನೂರ ಕ್ಷ್ಮೀನಾರಾಯಣ ಅರೋರ ೨೦೦೩

೧೯. ಸರಳ ಶಬ್ದಮಣಿದರ್ಪಣ
ಸಂ: ಎಸ್.ಎಸ್.ಅಂಗಡಿ ೨೦೦೫

೨೦. ಡಿ.ಎಲ್.ನರಸಿಂಹಾಚಾರ್:ಶತಮಾನ ಸ್ಮರಣೆ
ಎಫ್.ಟಿ.ಹಳ್ಳಿಕೇರಿ ೨೦೦೬

೨೧. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂ: ೩
ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ ೨೦೦೬

೨೨. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂ: ೪
ವೀರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ ೨೦೦೬

೨೩. ಚಿದಾನಂದಾವಧೂತ ಚಾರಿತ್ರ
ಸಂ: ಎಫ್.ಟಿ.ಹಳ್ಳಿಕೇರಿ ೨೦೦೬

೨೪. ಗುಂಡಬ್ರಹ್ಮಯ್ಯಗಳ ಸಾಹಿತ್ಯ
ಸಂ:ಕೆ.ರವೀಂದ್ರನಾಥ ೨೦೦೬

೨೫. ಕನ್ನಡ ಹಸ್ತಪ್ರತಿ ರಚನೆ:ಭಾಷಿಕ ವಿವೇಚನೆ
ಎಸ್.ಎಸ್.ಅಂಗಡಿ ೨೦೦೬

೨೬. ಕನ್ನಡ ಹಸ್ತಪ್ರತಿಗಳು: ಬಹುಪಠ್ಯೀಯ ನೆಲೆಗಳು
ವೀರೇಶ ಬಡಿಗೇರ ೨೦೦೬

೨೭. ಹಸ್ತಪ್ರತಿ ವ್ಯಾಸಂಗ–೫
ಸಂ: ವೀರೇಶ ಬಡಿಗೇರ ೨೦೦೬

೨೮. ಹಸ್ತಪ್ರತಿ ವ್ಯಾಸಂಗ–೬
ಸಂ: ಎಸ್.ಆರ್.ಚನ್ನವೀರಪ್ಪ ೨೦೦೬

೨೯. ಕನ್ನಡ ಟೀಕಾ ಸಾಹಿತ್ಯ
ಕೆ.ರವೀಂದ್ರನಾಥ ೨೦೦೬

೩೦. ಕವಳಿಗೆ(ದಶಮಾನೋತ್ಸವ ನೆನಪಿನ ಸಂಪುಟ)
ಪ್ರ.ಸಂ: ಎಫ್.ಟಿ.ಹಳ್ಳಿಕೇರಿ, ಸಂ: ಎ.ವಿ.ನಾವಡ, ಕೆ.ರವೀಂದ್ರನಾಥ ೨೦೦೬

೩೧. ಹಸ್ತಪ್ರತಿ ವ್ಯಾಸಂಗ–೭
ಸಂ:ಎಫ್.ಟಿ.ಹಳ್ಳಿಕೇರಿ ೨೦೦೬

೩೨. ಬಾಚಿಕಾಯಕದ ಬಸಯ್ಯ: ವೃತ್ತಿ ಹಾಗೂ ತತ್ವಮೀಮಾಂಸೆ
ವೀರೇಶ ಬಡಿಗೇರ ೨೦೦೭

೩೩. ಹಸ್ತಪ್ರತಿ ವ್ಯಾಸಂಗ: ೮
ಸಂ: ಎಫ್.ಟಿ.ಹಳ್ಳಿಕೇರಿ ೨೦೦೮

೩೪. ಹಸ್ತಪ್ರತಿ ವ್ಯಾಸಂಗ: ೯
ಸಂ: ಎಸ್.ಎಸ್.ಅಂಗಡಿ ೨೦೧೦

೩೫. ಉದ್ಧರಣೆ ಸಾಹಿತ್ಯ
ಸಂ: ಕೆ.ರವೀಂದ್ರನಾಥ ೨೦೧೦

೩೬. ಹಸ್ತಪ್ರತಿ ವ್ಯಾಸಂಗ: ೧೦
ಸಂ:ಎಸ್.ಆರ್.ಚನ್ನವೀರಪ್ಪ ೨೦೧೧

೩೭. ಕನ್ನಡ ಮೋಡಿಲಿಪಿ: ಸಂರಚನೆ ಮತ್ತು ಸಂವರ್ಧನೆ
ವೀರೇಶ ಬಡಿಗೇರ ೨೦೧೧

೩೮. ಹಸ್ತಪ್ರತಿ ವ್ಯಾಸಂಗ: ೧೧
ಸಂ: ಕೆ.ರವೀಂದ್ರನಾಥ ೨೦೧೨

೬೭. ಹಸ್ತಪ್ರತಿ ವ್ಯಾಸಂಗ:೨೧
ಸಂ: ವೀರೇಶ ಬಡಿಗೇರ ೨೦೨೨

೬೮. ಕರ್ನಾಟಕದ ಆಯಗಾರರು
ವೀರೇಶ ಬಡಿಗೇರ ೨೦೨೨

೬೯. ಲಕ್ಕಣ್ಣ ದಂಡೇಶ ಕವಿಯ ಶಿವತತ್ವ ಚಿಂತಾಮಣಿ
ಸಂ: ಎಫ್.ಟಿ.ಹಳ್ಳಿಕೇರಿ ೨೦೨೨

೭೦. ಹಸ್ತಪ್ರತಿ ವ್ಯಾಸಂಗ–೨೨
ಸಂ: ಎಫ್.ಟಿ.ಹಳ್ಳಿಕೇರಿ ೨೦೨೨

೭೧. ತಾಡೋಲೆ(ರಜತ ಮಹೋತ್ಸವ ನೆನಪಿನ ಸಂಪುಟ)
ಗೌ.ಸಂ: ಸ.ಚಿ.ರಮೇಶ, ಪ್ರ.ಸಂ: ಎಫ್.ಟಿ.ಹಳ್ಳಿಕೇರಿ
ಸಂ: ವೀರೇಶ ಬಡಿಗೇರ, ಕೆ.ರವೀಂದ್ರನಾಥ ೨೦೨೨

೭೨. ಕನ್ನಡ ದಾಖಲು ಸಾಹಿತ್ಯ(ಇಂಗ್ಲಿಷ ಆವೃತ್ತಿ)
ಕೆ.ರವೀಂದ್ರನಾಥ ೨೦೨೨

೭೩. ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ
ಸಂ: ಕೆ.ರವೀಂದ್ರನಾಥ ೨೦೨೨

೭೪. ಕರ್ನಾಟಕದ ಚರ್ಮ ವಾದ್ಯಗಳು
ವೀರೇಶ ಬಡಿಗೇರ ೨೦೨೨

ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆಯ ವಿವರಗಳು

೧. ಹಸ್ತಪ್ರತಿ ಅಧ್ಯಯನ ಸಂಪುಟ ೧, ಸಂಚಿಕೆ ೧
ಸಂ: ವೀರೇಶ ಬಡಿಗೇರ ೨೦೦೫

೨. ಹಸ್ತಪ್ರತಿ ಅಧ್ಯಯನ ಸಂಪುಟ ೧, ಸಂಚಿಕೆ ೨
ಸಂ: ವೀರೇಶ ಬಡಿಗೇರ ೨೦೦೫

೩. ಹಸ್ತಪ್ರತಿ ಅಧ್ಯಯನ ಸಂಪುಟ ೨, ಸಂಚಿಕೆ ೧
ಸಂ: ವೀರೇಶ ಬಡಿಗೇರ ೨೦೦೫

೪. ಹಸ್ತಪ್ರತಿ ಅಧ್ಯಯನ ಸಂಪುಟ ೨, ಸಂಚಿಕೆ ೨
ಸಂ: ವೀರೇಶ ಬಡಿಗೇರ ೨೦೦೫

೫. ಹಸ್ತಪ್ರತಿ ಅಧ್ಯಯನ ಸಂಪುಟ ೩, ಸಂಚಿಕೆ ೧
ಸಂ: ಎಫ್.ಟಿ.ಹಳ್ಳಿಕೇರಿ ೨೦೦೬

೬. ಹಸ್ತಪ್ರತಿ ಅಧ್ಯಯನ ಸಂಪುಟ ೩, ಸಂಚಿಕೆ ೨
ಸಂ: ಎಫ್.ಟಿ.ಹಳ್ಳಿಕೇರಿ ೨೦೦೬

೭. ಹಸ್ತಪ್ರತಿ ಅಧ್ಯಯನ ಸಂಪುಟ ೪, ಸಂಚಿಕೆ ೧
ಸಂ: ಎಫ್.ಟಿ.ಹಳ್ಳಿಕೇರಿ ೨೦೦೫

೮. ಹಸ್ತಪ್ರತಿ ಅಧ್ಯಯನ ಸಂಪುಟ ೪, ಸಂಚಿಕೆ ೨
ಸಂ: ಎಫ್.ಟಿ.ಹಳ್ಳಿಕೇರಿ ೨೦೦೯

೯. ಹಸ್ತಪ್ರತಿ ಅಧ್ಯಯನ ಸಂಪುಟ ೫, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ಕೆ.ರವೀಂದ್ರನಾಥ ೨೦೧೦

೧೦. ಹಸ್ತಪ್ರತಿ ಅಧ್ಯಯನ ಸಂಪುಟ ೬, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ವೀರೇಶ ಬಡಿಗೇರ ೨೦೧೦

೧೧. ಹಸ್ತಪ್ರತಿ ಅಧ್ಯಯನ ಸಂಪುಟ ೭, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ಎಸ್.ಎಸ್.ಅಂಗಡಿ ೨೦೧೨

೧೨. ಹಸ್ತಪ್ರತಿ ಅಧ್ಯಯನ ಸಂಪುಟ ೮, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ಎಸ್.ಆರ್.ಚನ್ನವೀರಪ್ಪ ೨೦೧೨

೧೩. ಹಸ್ತಪ್ರತಿ ಅಧ್ಯಯನ ಸಂಪುಟ ೯, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ವೀರೇಶ ಬಡಿಗೇರ ೨೦೨೧

೧೪. ಹಸ್ತಪ್ರತಿ ಅಧ್ಯಯನ ಸಂಪುಟ ೧೦, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ವೀರೇಶ ಬಡಿಗೇರ ೨೦೨೧

೧೫. ಹಸ್ತಪ್ರತಿ ಅಧ್ಯಯನ ಸಂಪುಟ ೧೧, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ವೀರೇಶ ಬಡಿಗೇರ ೨೦೨೧

೧೬. ಹಸ್ತಪ್ರತಿ ಅಧ್ಯಯನ ಸಂಪುಟ ೧೨, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ವೀರೇಶ ಬಡಿಗೇರ ೨೦೨೨

೧೭. ಹಸ್ತಪ್ರತಿ ಅಧ್ಯಯನ ಸಂಪುಟ ೧೩, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ಎಫ್.ಟಿ.ಹಳ್ಳಿಕೇರಿ ೨೦೨೨

೧೮. ಹಸ್ತಪ್ರತಿ ಅಧ್ಯಯನ ಸಂಪುಟ ೧೪, ಸಂಚಿಕೆ ೧ ಮತ್ತು ೨(ಸಂಯುಕ್ತ ಸಂಚಿಕೆ)
ಸಂ: ಕೆ.ರವೀಂದ್ರನಾಥ ೨೦೨೨

೧೧

ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ಕಾರ್ಯಕ್ರಮ

ಎಫ್.ಟಿ. ಹಳ್ಳಿಕೇರಿ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಆರಂಭವಾಗಿ ಹತ್ತು ವರ್ಷ(೧೯೯೬-೨೦೦೬)ಗಳನ್ನು ಪೂರೈಸಿದ ಸಂದರ್ಭದಲ್ಲಿ ದಶಮಾನೊತ್ಸವ ಕಾರ್ಯಕ್ರಮವನ್ನು ೧೭-೧೮, ಮಾರ್ಚ ೨೦೦೬ರಂದು ಭುವನ ವಿಜಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ೨೦೦೫-೦೬ನೆಯ ಶೈಕ್ಷಣಿಕ ವರ್ಷವನ್ನು ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ವರ್ಷ ಎಂದು ಘೋಷಿಸಿ, ಅನೇಕ ರಚನಾತ್ಮಕ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸ ಲಾಗಿತ್ತು. ಹಸ್ತಪ್ರತಿಶಾಸ್ತ್ರ ವಿಭಾಗ ಮಾಲೆಯಡಿ ಹತ್ತು ಪುಸ್ತಕಗಳ ಪ್ರಕಟಣೆ, ಹತ್ತು ಜನ ಹಸ್ತಪ್ರತಿ ತಜ್ಞರ ಭಾವಚಿತ್ರ ಅನಾವರಣ, ಹತ್ತು ಜನ ಹಸ್ತಪ್ರತಿ ತಜ್ಞರಿಗೆ ಸನ್ಮಾನ ಕಾರ್ಯಕ್ರಮ, ದಕ್ಷಿಣ ಭಾರತೀಯ ಗ್ರಂಥಸಂಪಾದನೆ-ರಾಷ್ಟ್ರೀಯ ವಿಚಾರ ಸಂಕಿರಣ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅವುಗಳ ವಿವರಗಳು ಹೀಗಿವೆ:

ಉದ್ಘಾಟನ ಕಾರ್ಯಕ್ರಮ

೧೮.೩.೨೦೦೬ರಂದು ಬೆಳಿಗ್ಗೆ ೧೧ ಗಂಟೆಗೆ ನಡೆದ ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ಕಾರ್ಯಕ್ರಮದ ಉದ್ಘಾಟನೆ ನಡೆಯಿತು. ಉದ್ಘಾಟನೆ ಮಾಡಿದ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಎಚ್.ಜೆ.ಲಕ್ಕಪ್ಪಗೌಡ ಅವರು ಮಾತನಾಡುತ್ತ "ದಕ್ಷಿಣ ಭಾರತೀಯ ಭಾಷೆಗಳ ಹಸ್ತಪ್ರತಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸಬೇಕು. ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಂಪನ್ಮೂಲ ಒದಗಿಸಿಕೊಡಬೇಕು.ಈ ಕೇಂದ್ರದಲ್ಲಿ ದಕ್ಷಿಣ ಭಾರತೀಯ ಎಲ್ಲ ಭಾಷೆಗಳ ಹಸ್ತಪ್ರತಿಗಳು ದೊರಕುವಂತಾಗಬೇಕು. ಅವುಗಳನ್ನು ಮುಂದಿನ ಪೀಳಿಗೆಗೆ ಅರ್ಥೈಸುವಂತೆ ತರುಣ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಸದಸ್ಯರು ರಾಜ್ಯಾದ್ಯಂತ ಸಂಚರಿಸಿ ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಸಂರಕ್ಷಿಸಿ ಪ್ರಕಟಿಸುತ್ತಿರುವುದು ಶ್ಲಾಘನೀಯ ಕಾರ್ಯ"ವೆಂದು ಅಭಿಪ್ರಾಯಪಟ್ಟರು.

ಹಸ್ತಪ್ರತಿಶಾಸ್ತ್ರ ವಿಭಾಗದ ಸದಸ್ಯರು ಸಿದ್ಧಪಡಿಸಿದ, ಪ್ರಸಾರಂಗವು ಪ್ರಕಟಿಸಿದ ಹತ್ತು ಪುಸ್ತಕಗಳನ್ನು ಬಿಡುಗಡೆ ಮಾಡಿದ ಪ್ರಸಿದ್ಧ ವಿಮರ್ಶಕ ಡಾ. ಗಿರಡ್ಡಿ ಗೋವಿಂದರಾಜ ಅವರು "ಆಧುನಿಕ ಸಂಪಾದಿತ ಗ್ರಂಥಗಳನ್ನು

ಪರಿಷ್ಕರಿಸಲು ನಿಯಮಗಳನ್ನು ರೂಪಿಸಬೇಕು. ಏಕೆಂದರೆ ಅಭಿನಂದನ ಗ್ರಂಥಗಳು, ಸಂಸ್ಮರಣ ಗ್ರಂಥಗಳು, ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಸಂಪಾದಿಸುವಾಗ ಸಂಪಾದಕನಿಗೆ ಸಮಸ್ಯೆಗಳು ಎದುರಾಗುತ್ತವೆ. ಅಂಥ ಸಮಸ್ಯೆಗಳನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಅಭಿನಂದನ ಗ್ರಂಥವನ್ನು ಸಂಪಾದಿಸುವಾಗ ಅನುಸರಿಸಬೇಕಾದ ನಿಯಮಗಳೇನು?, ಸಂಸ್ಮರಣ ಗ್ರಂಥವನ್ನು ಸಿದ್ಧಪಡಿಸುವಾಗ ಸಂಪಾದಕನು ಅನುಸರಿಸಬೇಕಾದ ಕ್ರಮಗಳೇನು? ಕಥೆ, ಕವನ, ಲಲಿತ ಪ್ರಬಂಧಗಳನ್ನು ಸಂಪಾದಿಸುವಾಗ ಅನುಸರಿಸಬಹುದಾದ ತಂತ್ರಗಳೇನು? ಎಂಬುದನ್ನು ತಜ್ಞರು ಸೇರಿ ನಿಯಮಗಳನ್ನು ರೂಪಿಸಿ ಜಾರಿಗೆ ತರುವುದು ಈಗಿನ ಅಗತ್ಯವಾಗಿದೆ. ಏಕೆಂದರೆ ನಾನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾದ ಸಂದರ್ಭದಲ್ಲಿ ವಾರ್ಷಿಕವಾರು ಕಥೆ, ಕವನ, ಲಲಿತಪ್ರಬಂಧಗಳನ್ನು ಆಯ್ಕೆ ಮಾಡುವ ಸಂದರ್ಭ ಅಥವಾ ಅವುಗಳನ್ನು ಸಂಪಾದನೆಯಲ್ಲಿ ಅಳವಡಿಸುವಾಗಿನ ತೊಂದರೆಗಳನ್ನು ಗಮನಿಸಿದ್ದೇನೆ. ಈ ನಿಟ್ಟಿನಲ್ಲಿ ಇಂಥ ನಿಯಮಗಳನ್ನು ಜಾರಿಗೆ ತರುವುದು, ಅವುಗಳನ್ನು ಅಳವಡಿಸುವುದು ಇಂದಿನ ಅಗತ್ಯತೆಗಳಲ್ಲಿ ಒಂದು ಎಂಬುದು ನನ್ನ ಅನಿಸಿಕೆಯಾಗಿದೆ" ಎಂದರು. ಹತ್ತು ಜನ ಹಸ್ತಪ್ರತಿ ತಜ್ಞರ ಭಾವಚಿತ್ರವನ್ನು ಅನಾವರನ ಮಾಡಿದ ಹಿರಿಯ ವಿದ್ವಾಂಸರಾದ ಶ್ರೀ ಎನ್. ಬಸವಾರಾಧ್ಯ ಅವರು "ಹಸ್ತಪ್ರತಿಗಳು ನಮ್ಮ ನಾಡಿನ ಅಮೂಲ್ಯ ಆಸ್ತಿಗಳು. ಇವುಗಳನ್ನು ಸಂರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬನ ನಾಗರಿಕನ ಮೇಲಿದೆ. ಈವರೆಗೆ ನಮ್ಮ ನಾಡಿನ ಅನೇಕ ಮಠ–ಮಂದಿರಗಳು, ವಿಶ್ವವಿದ್ಯಾಲಯಗಳು, ಸಾರ್ವಜನಿಕ ಸಂಘಸಂಸ್ಥೆಗಳು ಹಸ್ತಪ್ರತಿಗಳನ್ನು ಸಂರಕ್ಷಿಸಿ ಪ್ರಕಟಿಸುವ ಕಾರ್ಯವನ್ನು ಒಂದು ವ್ರತವೆಂಬಂತೆ ಮಾಡುತ್ತ ಬಂದಿವೆ. ಇಷ್ಟಾದರೂ ಇನ್ನೂ ಅನೇಕ ಮನೆ–ಮಠಗಳಲ್ಲಿ ಅಧಿಕ ಪ್ರಮಾಣದ ಹಸ್ತಪ್ರತಿಗಳು ಸಂರಕ್ಷಣೆಗೊಳ್ಳದೇ ಅನಾಥವಾಗಿ ಬಿದ್ದಿವೆ. ಅಂಥ ಎಲ್ಲ ಹಸ್ತಪ್ರತಿಗಳನ್ನು ಶೋಧಿಸಿ ಸಂರಕ್ಷಿಸುವ ಜವಾಬ್ದಾರಿ ಇಂದಿನ ಯುವ ವಿದ್ಯಾರ್ಥಿಗಳು ವಹಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯವು ವಿಶೇಷವಾಗಿ ಹೈದ್ರಾಬಾದ ಕರ್ನಾಟಕ ಭಾಗದ ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸುವ ಕೆಲಸ ಮಾಡುತ್ತಿರುವುದನ್ನು ನಾನು ತುಂಬ ಹತ್ತಿರದಿಂದ ಗಮನಿಸಿದ್ದೇನೆ. ಆ ಕಾರ್ಯ ಇನ್ನೂ ವಿಸ್ತಾರಗೊಳ್ಳಲಿ. ಆ ಮೂಲಕ ಅನೇಕ ಅಪ್ರಕಟಿತ ಕೃತಿಗಳು ಬೆಳಕು ಕಾಣಲಿ" ಎಂದರು.

ಪ್ರಸಾರಾಂಗದ ಮೂಲಕ ಹತ್ತು ಪುಸ್ತಕಗಳನ್ನು ಪ್ರಕಟಿಸಿದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರು "ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಕಳೆದ ಹತ್ತು ವರ್ಷಗಳಲ್ಲಿ ತುಂಬ ರಚನಾತ್ಮಕವಾದ ಕೆಲಸಗಳನ್ನು ಮಾಡುತ್ತ ಬರುತ್ತಲಿರುವುದು ಸಂತಸದ ಸಂಗತಿ. ಉಪೇಕ್ಷೆಗೆ ಒಳಗಾಗಿದ್ದ ಅನೇಕ ಹಸ್ತಪ್ರತಿಗಳನ್ನು ಹುಡುಕಿ, ಅವುಗಳನ್ನು ಸಂರಕ್ಷಿಸಿ ಅಧ್ಯಯನಕಾರರಿಗೆ ಆಕರಗಳನ್ನು ಒದಗಿಸುತ್ತಿರುವುದು ಉಪಯುಕ್ತ ಕೆಲಸವಾಗಿದೆ. ಇದಕ್ಕಾಗಿ ಈ ವಿಭಾಗದ ಎಲ್ಲ ಪ್ರಾಧ್ಯಾಪಕರನ್ನು ಮತ್ತು ಅವರಿಗೆ ಕೈಜೋಡಿಸುತ್ತಿರುವ ಬೋಧಕೇತರ ಸಿಬ್ಬಂಧಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂದರ್ಭದಲ್ಲಿ ಏಕಕಾಲಕ್ಕೆ ಹತ್ತು ಪುಸ್ತಕಗಳನ್ನು ಲೋಕಾರ್ಪಣೆ ಮಾಡುತ್ತಿರುವುದು ಸಾಹಿತ್ಯ ಲೋಕಕ್ಕೆ ಸಂತಸದ ವಿಷಯವಾಗಿದೆ"ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನವದೆಹಲಿಯ ನ್ಯಾಷನಲ್ ಮಿಷನ್ ಫಾರ್ ಮ್ಯಾನುಸ್ಕ್ರಿಪ್ಟ್ಸ್ ಸಂಸ್ಥೆಯ ಸಹಾಯಕ ನಿರ್ದೇಶಕರಾದ ಡಾ. ದಿಲೀಪಕುಮಾರ್ ರಾಣಾ ಅವರು "ಸಾಹಿತ್ಯ ಸಂಸ್ಕೃತಿಯ ಅಧ್ಯಯನಕ್ಕೆ ಬಹುಮುಖ್ಯ ಆಕರಗಳಾದ ತಾಡೋಲೆ ಕೋರಿಕಾಗದ ಕಡತ ರೂಪದ ಹಸ್ತಪ್ರತಿಗಳ ಸರ್ವೇಕ್ಷಣ ಮತ್ತು ಸಂರಕ್ಷಣ ಕಾರ್ಯ ಇಡೀ ದೇಶದಾದ್ಯಂತ ಕೈಕೊಳ್ಳಲಾಗುತ್ತಿದೆ. ಆ ಮೂಲಕ ನಮ್ಮ ದೇಶದಲ್ಲಿ ಇರುವ ಹಸ್ತಪ್ರತಿಗಳ ಸಂಖ್ಯೆ, ಅವುಗಳಲ್ಲಿರುವ ಕವಿಕೃತಿಗಳ ಸಂಖ್ಯೆ ಸಿಗಲಿದೆ. ಈ ನಿಟ್ಟಿನಲ್ಲಿ ಭಾರತದಲ್ಲಿರುವ ಪ್ರಮುಖ ಹಸ್ತಪ್ರತಿ ಭಂಡಾರಗಳನ್ನು

ಸಂರಕ್ಷಣ ಕೇಂದ್ರಗಳೆಂದು ಗುರುತಿಸಲಾಗಿದೆ. ಅಂಥ ಕೇಂದ್ರಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವೂ ಒಂದು. ಈ ಕೇಂದ್ರವು ಹಸ್ತಪ್ರತಿಗಳ ಸರ್ವೇಕ್ಷಣೆ ಮತ್ತು ಸಂರಕ್ಷಣ ಕೆಲಸದಲ್ಲಿ ಉತ್ತಮವಾದ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ"ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಅವರು "ಸಂಶೋಧನೆ ಹಾಗೂ ಬೋಧನೆ ಎರಡೂ ಒಂದೇ ಎನ್ನುವುದು ಕನ್ನಡ ವಿಶ್ವವಿದ್ಯಾಲಯದ ತಿಳುವಳಿಕೆ. ಈ ವರ್ಷ ಹಸ್ತಪ್ರತಿಗಳ ದತ್ತಕಣಜವೊಂದನ್ನು ಸ್ಥಾಪಿಸುವ ಯೋಜನೆಯನ್ನು ರೂಪಿಸಲಾಗುತ್ತಿದೆ"ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎಫ್.ಟಿ.ಹಳ್ಳಿಕೇರಿ ಅವರು"ಹತ್ತು ವರ್ಷಗಳ ಅವಧಿಯಲ್ಲಿ ವಿಭಾಗವು ಕೈಕೊಂಡ ಸಂಶೋಧನ ಯೋಜನೆಗಳು, ವಿಚಾರ ಸಂಕಿರಣ, ಸಮ್ಮೇಳನ, ತರಬೇತಿ ಶಿಬಿರಗಳ ವಿವರಗಳನ್ನು ತಿಳಿಸಿದರು. ದಶಮಾನೋತ್ಸವದ ಅಂಗವಾಗಿ ವಿಶೇಷ ಯೋಜನೆಗಳ ಮಾಹಿತಿಯನ್ನು ಸಭೆಗೆ ವಿವರಿಸಿದರು.

ದಕ್ಷಿಣ ಭಾರತೀಯ ಗ್ರಂಥ ಸಂಪಾದನೆ: ರಾಷ್ಟ್ರೀಯ ವಿಚಾರ ಸಂಕಿರಣ

ದಶಮಾನೋತ್ಸವದ ಅಂಗವಾಗಿ ದಕ್ಷಿಣ ಭಾರತೀಯ ಗ್ರಂಥಸಂಪಾದನೆ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಭಾರತೀಯ ಗ್ರಂಥಸಂಪಾದನೆ:ತಾತ್ವಿಕತೆ, ದಕ್ಷಿಣ ಭಾರತೀಯ ಗ್ರಂಥಸಂಪಾದನೆ:ಒಂದು, ದಕ್ಷಿಣ ಭಾರತೀಯ ಗ್ರಂಥಸಂಪಾದನೆ:ಎರಡು, ಕನ್ನಡ ಗ್ರಂಥಸಂಪಾದನೆ ಎಂಬ ಮೂರು ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಭಾರತೀಯ ಗ್ರಂಥಸಂಪಾದನೆಯ ಸ್ವರೂಪ ಮತ್ತು ಇತಿಹಾಸ, ಗ್ರಂಥಸಂಪಾದನೆ:ಇತ್ತೀಚಿನ ಪ್ರವೃತ್ತಿಗಳು, ಮುಂದಿನ ಹೆಜ್ಜೆಗಳು, ತೆಲುಗು, ತಮಿಳು, ಮಲಯಾಳಂ, ಮರಾಠಿ, ತುಳು, ಸಂಸ್ಕೃತ ಭಾಷೆಯಲ್ಲಿ ನಡೆದ ಗ್ರಂಥಸಂಪಾದನೆ, ಹಾಗೆಯೇ ಕನ್ನಡದಲ್ಲಿ ಪಂಡಿತ ಆವೃತ್ತಿಗಳು, ಜನಪ್ರಿಯ ಆವೃತ್ತಿಗಳು, ಸಂಗ್ರಹ ಆವೃತ್ತಿಗಳ ಬಗ್ಗೆ ಸಂಪ್ರಬಂಧಗಳು ಮಂಡನೆಯಾದವು.

ಹತ್ತು ಜನ ಹಸ್ತಪ್ರತಿ ತಜ್ಞರಿಗೆ ಸನ್ಮಾನ

ದಶಮಾನೋತ್ಸವ ಅಂಗವಾಗಿ ಹಸ್ತಪ್ರತಿ-ಗ್ರಂಥಸಂಪಾದನೆ ಕ್ಷೇತ್ರಗಳಲ್ಲಿ ನಿರಂತರವಾಗಿ ದುಡಿಯುತ್ತಿರುವ ಹತ್ತು ಜನ ತಜ್ಞರಿಗೆ ಸನ್ಮಾನ ಮಾಡಲಾಯಿತು. ಮೈಸೂರಿನ ಜಿ.ಬ್ರಹ್ಮಪ್ಪ, ಬೆಂಗಳೂರಿನ ಎನ್.ಬಸವಾರಾಧ್ಯ, ಧರ್ಮಸ್ಥಳದ ಗೌ.ಮ.ಉಮಾಪತಿಶಾಸ್ತ್ರೀ, ಗುಲಬರ್ಗಾದ ಎಂ.ಎಸ್.ಲಠ್ಠೆ, ಮೈಸೂರಿನ ಬಿ.ಎಸ್.ಸಣ್ಣಯ್ಯ, ಜಿ.ಜಿ.ಮಂಜುನಾಥನ್, ದಾವಣಗೆರೆಯ ಎಸ್.ಉಮಾಪತಿ, ಮೈಸೂರಿನ ಟಿ.ಎನ್.ನಾಗರತ್ನ, ಬೆಂಗಳೂರಿನ ಎಸ್.ಶಿವಣ್ಣ, ಧಾರವಾಡದ ಬಿ.ವಿ.ಶಿರೂರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಹತ್ತು ಪುಸ್ತಕಗಳ ಲೋಕಾರ್ಪಣೆ

ದಶಮಾನೋತ್ಸವದ ನೆನಪಿಗಾಗಿ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಸಿದ್ಧಪಡಿಸಿದ ಹತ್ತು ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಸಂಪುಟ ೩(ಸಂ: ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ), ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಸಂಪುಟ ೪(ವೀರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ), ಚಿದಾನಂದಾವಧೂತ ಚಾರಿತ್ರ(ಸಂ: ಎಫ್.ಟಿ.ಹಳ್ಳಿಕೇರಿ), ಗುಂಡಬ್ರಹ್ಮಯ್ಯಗಳ ಸಾಹಿತ್ಯ(ಸಂ: ಕೆ.ರವೀಂದ್ರನಾಥ), ಕನ್ನಡ ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ(ಎಸ್.ಎಸ್.ಅಂಗಡಿ), ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು(ವೀರೇಶ

ಬಡಿಗೇರ), ಹಸ್ತಪ್ರತಿ ವ್ಯಾಸಂಗ ೫(ವೀರೇಶ ಬಡಿಗೇರ), ಹಸ್ತಪ್ರತಿ ವ್ಯಾಸಂಗ ೬(ಎಸ್.ಆರ್.ಚನ್ನವೀರಪ್ಪ), ಕನ್ನಡ ಟೀಕಾ ಸಾಹಿತ್ಯ(ಕೆ.ರವೀಂದ್ರನಾಥ), ಕವಳಿಗೆ: ದಶಮಾನೋತ್ಸವ ನೆನಪಿನ ಸಂಪುಟ(ಪ್ರಸಂ: ಎಫ್.ಟಿ.ಹಳ್ಳಿಕೇರಿ, ಸಂ: ಎ.ವಿ.ನಾವಡ, ಕೆ.ರವೀಂದ್ರನಾಥ) –ಹೀಗೆ ಹತ್ತು ಪುಸ್ತಕಗಳನ್ನು ಲೋಕಾರ್ಪಣೆಗೊಂಡವು.

ಹತ್ತು ಭಾವಚಿತ್ರಗಳ ಅನಾವರಣ

ದಶಮಾನೋತ್ಸವದ ನೆನಪಿಗಾಗಿ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಹತ್ತು ಜನ ಹಸ್ತಪ್ರತಿ–ಗ್ರಂಥಸಂಪಾದನೆಯಲ್ಲಿ ಕೆಲಸ ಮಾಡಿದ ಹರ್ಮನ್ ಮೋಗ್ಲಿಂಗ್, ಡಿ.ಎಲ್.ನರಸಿಂಹಾಚಾರ್, ಆರ್.ಸಿ.ಹಿರೇಮಠ, ಉತ್ತಂಗಿ ಚನ್ನಪ್ಪ, ಶಿ.ಶಿ.ಬಸವನಾಳ, ಕೆ.ಜಿ.ಕುಂದಣಗಾರ, ಫ.ಗು.ಹಳಕಟ್ಟಿ, ಆರ್.ನರಸಿಂಹಾಚಾರ್, ಶಿ.ಚ.ನಂದೀಮಠ, ಎನ್.ಅನಂತ ರಂಗಾಚಾರ್ ವಿದ್ವಾಂಸರ ಭಾವಚಿತ್ರಗಳನ್ನು ಅನಾವರಣ ಮಾಡಲಾಯಿತು. ಹಸ್ತಪ್ರತಿ ತಜ್ಞರು ತಮ್ಮ ಜೀವಮಾನದುದ್ದಕ್ಕೂ ಹಸ್ತಪ್ರತಿ–ಗ್ರಂಥಸಂಪಾದನೆ ಕ್ಷೇತ್ರಗಳಲ್ಲಿ ದುಡಿದವರು. ಹರ್ಮನ್ ಮೋಗ್ಲಿಂಗ್ ಕನ್ನಡದ ಮೊದಲ ಗ್ರಂಥಸಂಪಾದಕನೆಂದು ಹೆಸರಾದವರು. ಡಿ.ಎಲ್.ನರಸಿಂಹಾಚಾರ್ ಕನ್ನಡ ಗ್ರಂಥಸಂಪಾದನೆಯ ವೈಧಾನಿಕತೆಗಳನ್ನು ಮೊದಲ ಬಾರಿಗೆ ಹೇಳಿಕೊಟ್ಟವರು. ಆರ್.ಸಿ.ಹಿರೇಮಠ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ವಚನ ವಾಙ್ಮಯ ಪ್ರಕಟಣ ಯೋಜನೆಯನ್ನು ರೂಪಿಸಿ ಅನೇಕ ಶಿವಶರಣರ ವಚನಗಳನ್ನು ಸಂಪುಟಗಳ ರೂಪದಲ್ಲಿ ಪ್ರಕಟಿಸಿದವರು. ಉತ್ತಂಗಿ ಚನ್ನಪ್ಪನವರು ಸರ್ವಜ್ಞನ ವಚನಗಳನ್ನು ಪರಿಷ್ಕರಿಸಿ, ಪ್ರಕಟಿಸಿ ಪ್ರಚಾರ ಮಾಡಿದವರು. ಶಿ.ಶಿ.ಬಸವನಾಳ ಅವರು ಬಸವಣ್ಣನವರ ವಚನಗಳನ್ನು ಗ್ರಂಥಸಂಪಾದನೆಯ ವೈಧಾನಿಕ ಹಿನ್ನೆಲೆಯಲ್ಲಿ ಪರಿಷ್ಕರಿಸಿದವರು. ಕೆ.ಜಿ.ಕುಂದಣಗಾರ ಅವರು ಛಂದಸ್ಸು ನಿಘಂಟು, ಗ್ರಂಥಸಂಪಾದನೆಯಲ್ಲಿ ಕೃಷಿ ಮಾಡಿದವರು. ಆರ್. ನರಸಿಂಹಾಚಾರ್ ಅವರು ಹಸ್ತಪ್ರತಿಗಳ ಆಧಾರದಿಂದ ಕರ್ನಾಟಕ ಕವಿಚರಿತೆಯ ಮೂರು ಸಂಪುಟಗಳನ್ನು ರಚಿಸಿದವರು. ಫ.ಗು.ಹಳಕಟ್ಟಿ ಅವರು ಸಾವಿರಾರು ಹಸ್ತಪ್ರತಿಗಳನ್ನು ಶೋಧಿಸಿ ನೂರಾರು ಶಿವಶರಣರು ಮತ್ತು ಅವರ ವಚನಗಳನ್ನು ಸಂಪುಟಗಳ ರೂಪದಲ್ಲಿ ಪ್ರಕಟಿಸಿದವರು. ಶಿ.ಚ.ನಂದೀಮಠ ಅವರು ಕವಿಕರ್ಣ ರಸಾಯನ, ಕುವಲಯಾನಂದ, ಗಿರಿಜಾ ಕಲ್ಯಾಣ ಗ್ರಂಥಗಳನ್ನು ಪರಿಷ್ಕರಿಸಿದವರು. ಎನ್. ಅನಂತರಂಗಾಚಾರ್ ಅವರು ಮಲ್ಲಕವಿಯ ಕಾವ್ಯಸಾರ, ಮಲ್ಲಿಕಾರ್ಜುನ ಕವಿಯ ಸೂಕ್ತಿಸುಧಾರ್ಣವ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿದವರು. ಹೀಗೆ ಹಸ್ತಪ್ರತಿ–ಗ್ರಮಥಸಂಪಾದನ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿದ ಮಹನೀಯರಲ್ಲಿ ಸಾಂಕೇತಿಕವಾಗಿ ಹತ್ತು ಜನ ವಿದ್ವಾಂಸರ ಭಾವಚಿತ್ರವನ್ನು ಅನಾವರಣ ಮಾಡಲಾಯಿತು.

ಸಮಾರೋಪ ಸಮಾರಂಭ :

ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವದ ಸಮಾರೋಪ ಸಮಾರಂಭವು ೧೮.೩.೨೦೦೬ರಂದು ಸಾಯಂಕಾಲ ಭುವನ ವಿಜಯ ಸಭಾಂಗಣದಲ್ಲಿ ನಡೆಯಿತು. ಕನ್ನಡದ ಚಿಂತಕರಲ್ಲಿ ಒಬ್ಬರಾದ ಡಾ. ಕೆ.ವಿ.ನಾರಾಯಣ ಅವರು ಸಮಾರೋಪ ಭಾಷಣ ಮಾಡುತ್ತ "ಗ್ರಂಥಸಂಪಾದನಶಾಸ್ತ್ರದಲ್ಲಿ ಪಾಠಂತರಗಳನ್ನು ಗುರುತಿಸುವುದರ ಬಗ್ಗೆ ಆಕ್ಷೇಪವಿಲ್ಲ. ಆದರೆ ಭಿನ್ನಪಾಠಗಳನ್ನು ಒಂದು ಸಾಂಸ್ಕೃತಿಕ ಅನನ್ಯತೆಯ ಒತ್ತಾಸೆಯಾಗಿ ರೂಪುಗೊಂಡಿರಬಾರದೇಕೆ ? ಎಂದು ಪ್ರಶ್ನಿಸುವುದರ ಮೂಲಕ ಭಿನ್ನಪಾಠಗಳನ್ನು ಅಪಪಾಠವೆಂದಾಗಲಿ, ಅಶುದ್ಧಪಾಠವೆಂದಾಗಲಿ ಉಪೇಕ್ಷೆ ಮಾಡಬಾರದು" ಎಂದು ಸಲಹೆ ನೀಡಿದರು.

ಸನ್ಮಾನಕ್ಕೆ ಪಾತ್ರರಾದ ಹಸ್ತಪ್ರತಿ ತಜ್ಞರ ಪರವಾಗಿ ಡಾ. ಬಿ.ವಿ.ಶಿರೂರ ಅವರು ಮಾತನಾಡುತ್ತ"ಹಸ್ತಪ್ರತಿ-ಗ್ರಂಥಸಂಪಾದನ ಕ್ಷೇತ್ರದಲ್ಲಿ ನಾವು ಮಾಡಿದ ಅಲ್ಪ ಕಾರ್ಯವನ್ನು ಗುರುತಿಸಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ನಮ್ಮನ್ನು ಕರೆದು ಗೌರವಿಸಿದೆ. ಇದು ನಮಗೆ ಈ ಕ್ಷೇತ್ರದಲ್ಲಿ ಇನ್ನಷ್ಟು ಕೆಲಸ ಮಾಡಲು ಉತ್ತೇಜನ ನೀಡಿದೆ. ಸನ್ಮಾನಿತರ ಪರವಾಗಿ ನಾನು ಕನ್ನಡ ವಿಶ್ವವಿದ್ಯಾಲಯಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ನಾಡಿನಾದ್ಯಂತ ಕ್ಷೇತ್ರಕಾರ್ಯ ಕೈಕೊಂಡು ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ವೈಜ್ಞಾನಿಕವಾಗಿ ಸಂರಕ್ಷಣೆ ಮಾಡುತ್ತಿರುವುದು ಅಷ್ಟೇ ಮಹತ್ವದ ಸಂಗತಿಯಾಗಿದೆ. ಜೊತೆಗೆ ಹಸ್ತಪ್ರತಿಗಳನ್ನು ವಿವಿಧ ಆಯಾಮಗಳಿಂದ ಅಧ್ಯಯನಕ್ಕೊಳಪಡಿಸುತ್ತಿರುವುದು ಈ ವಿಭಾಗದ ಇನ್ನೊಂದು ವಿಶೇಷತೆಯಾಗಿದೆ. ಮುಂದಿನ ದಿನಮಾನಗಳಲ್ಲಿ ಈ ವಿಭಾಗವು ಇನ್ನೂ ಉತ್ತಮೋತ್ತಮ ಸಂಶೋಧನಾತ್ಮಕ ಯೋಜನೆಗಳನ್ನು ಕೈಗೊಳ್ಳಲಿ, ಹೆಚ್ಚು ಹೆಚ್ಚು ಕೆಲಸ ಮಾಡಲಿ"ಎಂದರು.

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಕರೀಗೌಡ ಬೀಚನಹಳ್ಳಿ ಅವರು "ಹಸ್ತಪ್ರತಿಶಾಸ್ತ್ರ ವಿಭಾಗದ ಎಲ್ಲ ಪ್ರಾಧ್ಯಾಪಕರು ನಿರಂತರವಾಗಿ ಕೆಲಸ ಮಾಡುತ್ತ ಬಂದ ಕಾರಣವಾಗಿ ನಾಡಿನ ವಿವಿಧ ಭಾಗಗಳಿಂದ ಅನೇಕ ಹಸ್ತಪ್ರತಿಗಳು ವಿಭಾಗದಲ್ಲಿ ಸಂಗ್ರಹಗೊಳ್ಳಲು ಕಾರಣವಾಗಿದೆ. ಅವರ ಈ ಕೆಲಸ ಹಿಗೆಯೇ ಮುಂದುವರಿಯಲಿ"ಎಂದರು.

ಎರಡು ದಿನ ನಡೆದ ದಶಮಾನೋತ್ಸವ ಕಾರ್ಯಕ್ರಮವನ್ನು ವಿಭಾಗದ ಪ್ರಾಧ್ಯಾಪಕರಾದ ಎ.ವಿ.ನಾವಡ, ವೀರೇಶ ಬಡಿಗೇರ, ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ, ಎಸ್.ಎಸ್.ಅಂಗಡಿ, ಎಸ್.ಆರ್.ಚನ್ನವೀರಪ್ಪ ಅವರು ಹಾಗೂ ವಿಭಾಗದ ಸಂಶೋಧನ ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಸಮಾರಂಭವನ್ನು ಆಯೋಜಿಸಿದ್ದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂಧಿಗಳು, ವಿವಿಧ ವಿಭಾಗದ ವಿದ್ಯಾಥಿಗಳು ಪಾಲ್ಗೊಂಡು ಯಶಸ್ವಿಗೊಳಿಸಿದರು.

❑❑

೧೨

ದತ್ತಿನಿಧಿಗಳ ವಿವರಗಳು

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಎರಡು ದತ್ತಿನಿಧಿಗಳನ್ನು ಸ್ಥಾಪಿಸಲಾಗಿದೆ. ಈ ದತ್ತಿನಿಧಿಗಳಿಂದ ಆಕರವಾಗುವ ಬಡ್ಡಿಹಣದಿಂದ ಪ್ರತಿವರ್ಷ ಕಾರ್ಯಕ್ರಮಗಳನ್ನು ನಾಡಿನ ವಿವಿಧ ಶೈಕ್ಷಣಿಕ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರಲಾಗುತ್ತಿದೆ. ಆ ದತ್ತಿನಿಧಿಗಳ ಉದ್ದೇಶ, ಸ್ವರೂಪ, ಮಹತ್ವ ಈ ಕೆಳಗಿನಂತಿವೆ.

೧. ಡಿ.ಎಲ್.ನರಸಿಂಹಾಚಾರ್ ದತ್ತಿನಿಧಿ

ಕನ್ನಡದ ಪ್ರಸಿದ್ಧ ವಿದ್ವಾಂಸರಲ್ಲಿ ಡಿ.ಎಲ್.ನರಸಿಂಹಾಚಾರ್ ಅವರೂ ಒಬ್ಬರು. ಕುವೆಂಪು, ಆ.ನೇ.ಉಪಾಧ್ಯೆ, ತಿ.ನಂ.ಶ್ರೀಕಂಠಯ್ಯ, ಟಿ.ಪಿ.ಕೃಷ್ಣಾಚಾರ್ ಮೊದಲಾದವರ ಸಮಕಾಲೀನರಾಗಿದ್ದ ಡಿ.ಎಲ್.ನರಸಿಂಹಾಚಾರ್ ಅವರು ಹಳಗನ್ನಡ ಸಾಹಿತ್ಯ, ಗ್ರಂಥಸಂಪಾದನೆ, ಛಂದಸ್ಸು, ಭಾಷಾವಿಜ್ಞಾನ ಇತ್ಯಾದಿ ಜ್ಞಾನಶಿಸ್ತುಗಳಲ್ಲಿ ಪ್ರಕಾಂಡ ಪಾಂಡಿತ್ಯವನ್ನು ಹೊಂದಿದ್ದರು. ಕನ್ನಡ ಗ್ರಂಥಸಂಪಾದನೆ, ಪೀಠಿಕೆಗಳು–ಲೇಖನಗಳು, ವಡ್ಡಾರಾಧನೆ, ಪಂಪರಾಮಾಯಣ ಸಂಗ್ರಹ, ಶಬ್ದಮಣಿದರ್ಪಣ ಮೊದಲಾದ ಹದಿನೈದಕ್ಕೂ ಹೆಚ್ಚು ಗ್ರಂಥಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಶ್ರೀಯುತರ ಜನ್ಮಶತಮಾನೋತ್ಸವದ ನೆನಪಿಗಾಗಿ ೨೦೦೬ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಡಿ.ಎಲ್. ನರಸಿಂಹಾಚಾರ್ ಅವರ ಜನ್ಮ ಶತಮಾನೋತ್ಸವದ ನೆನಪಿಗಾಗಿ ಡಿ.ಎಲ್.ನರಸಿಂಹಾಚಾರ್: ಶತಮಾನ ಸ್ಮರಣೆ ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರ ಹಾಗೂ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಆ ಸಂದರ್ಭದಲ್ಲಿ ಡಿ.ಎಲ್.ನರಸಿಂಹಾಚಾರ್ ಕುಟುಂಬ ಪರಿವಾರ, ಅವರ ವಿದ್ಯಾರ್ಥಿಗಳ ಬಳಗ ಸಮಾವೇಶಗೊಂಡಿತ್ತು. ಹಂಪ ನಾಗರಾಜಯ್ಯ, ಕಮಲಾ ಹಂಪನಾ, ಎನ್.ಬಸವಾರಾಧ್ಯ, ಸಿ.ಕೆ.ಪರಶುರಾಮಯ್ಯ, ಬಿ.ವಿ.ವೈಕುಂಠರಾಜು ಮೊದಲಾದ ವಿದ್ವಾಂಸರು ಡಿ.ಎಲ್.ಎನ್. ಅವರ ನೇರ ಶಿಷ್ಯರು. ಹೀಗಾಗಿ ಗುರುಗಳ ಜೊತೆಗಿನ ತಮ್ಮ ಒಡನಾಟವನ್ನು ಹಂಚಿಕೊಂಡರು. ಇದೇ ಸಂದರ್ಭದಲ್ಲಿ ಡಿ.ಎಲ್.ನರಸಿಂಹಾಚಾರ್: ಶತಮಾನ ಸ್ಮರಣೆ ಎಂಬ ನೆನಪಿನ ಸಂಪುಟವನ್ನು ಪ್ರಕಟಿಸಲಾಯಿತು. ಡಿ.ಎಲ್.ಎನ್. ಅವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ವಿವಿಧ ನೆಲೆಗಳಿಂದ ಅಧ್ಯಯನ ಮಾಡಿದ ಸಂಪ್ರಬಂಧಗಳನ್ನು ಒಳಗೊಂಡ ಕೃತಿ ಇದಾಗಿದೆ.

ಜನ್ಮಶತಮಾನೋತ್ಸವದ ನೆನಪಿಗಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ದತ್ತಿನಿಧಿಯನ್ನು ಸ್ಥಾಪಿಸಲು ಡಿ.ಎಲ್.ಎನ್. ಕುಟುಂಬ ಪರಿವಾರಕ್ಕೆ ಮನವಿ ಮಾಡಿಕೊಂಡಿತ್ತು. ಆ ಮನವಿಯನ್ನು ಪುರಸ್ಕರಿಸಿದ

ಡಿ.ಎಲ್.ಎನ್. ಕುಟುಂಬದ ಸದಸ್ಯರು ಒಂದು ಲಕ್ಷ ರೂಪಾಯಿ(೧,೦೦,೦೦೦/-)ಗಳನ್ನು ದತ್ತಿನಿಧಿ ಸ್ಥಾಪನೆಗೆ ವಿಶ್ವವಿದ್ಯಾಲಯಕ್ಕೆ ಕೊಡಮಾಡಿತು. ಡಿ.ಎಲ್.ನರಸಿಂಹಾಚಾರ ಅವರ ಜೀವನ ಮತ್ತು ಸಾಹಿತ್ಯವನ್ನು ಪ್ರಚುರಪಡಿಸುವುದು. ಅವರ ಆಸಕ್ತಿ ಅಧ್ಯಯನ ಕ್ಷೇತ್ರಗಳಾದ ಹಳಗನ್ನಡ ಸಾಹಿತ್ಯ, ಗ್ರಂಥಸಂಪಾದನೆ, ಹಸ್ತಪ್ರತಿಶಾಸ್ತ್ರ, ಛಂದಸ್ಸು, ವ್ಯಾಕರಣ ಇತ್ಯಾದಿ ವಿಷಯಗಳ ಬಗ್ಗೆ ಕಾರ್ಯಾಗಾರ, ವಿಚಾರ ಸಂಕಿರಣ, ವಿಶೇಷ ಉಪನ್ಯಾಸ, ತರಬೇತಿ ಶಿಬಿರಗಳನ್ನು ಆಯೋಜಿಸುವುದು ಈ ದತ್ತಿನಿಧಿಯ ಉದ್ದೇಶವಾಗಿದೆ. ಆ ಒಂದು ಲಕ್ಷ ರೂಪಾಯಿಗಳ ಮೂಲಧನದಿಂದ ಆಕರವಾಗುವ ಬಡ್ಡಿಹಣದಿಂದ ಪ್ರತಿವರ್ಷ ಡಿ.ಎಲ್.ನರಸಿಂಹಾಚಾರ್ ದತ್ತಿನಿಧಿ ಅಂಗವಾಗಿ ಹಳಗನ್ನಡ ಸಾಹಿತ್ಯ ಬೋಧನ ತರಬೇತಿ ಶಿಬಿರವನ್ನು ನಾಡಿನ ವಿವಿಧ ಶೈಕ್ಷಣಿಕ ಸಂಸ್ಥೆಗಳ ಸಹಯೋಗದಲ್ಲಿ ನಾಲ್ಕು ದಿನಗಳ ಕಾಲ ಆಯೋಜಿಸಲಾಗುತ್ತಿದೆ. ಪ್ರೌಢಶಾಲೆಯ ಶಿಕ್ಷಕರು ಹಾಗೂ ಪದವಿಪೂರ್ವ-ಪದವಿ ಕಾಲೇಜಿನ ಅಧ್ಯಾಪಕರಿಗೆ ಹಳಗನ್ನಡ ಸಾಹಿತ್ಯ ಪ್ರಕಾರಗಳಾದ ಚಂಪೂ, ಷಟ್ಪದಿ, ಸಾಂಗತ್ಯ, ಕಂದ, ತ್ರಿಪದಿ ಇತ್ಯಾದಿ ವಿಷಯಗಳ ಬಗ್ಗೆ ಪ್ರೌಢಶಾಲೆಯ ಶಿಕ್ಷಕರು ಹಾಗೂ ಪದವಿಪೂರ್ವ, ಪದವಿ ಮತ್ತು ಸ್ನಾತಕೋತ್ತರ ಅಧ್ಯಾಪಕರಿಗೆ ತರಬೇತಿ ನೀಡುವುದು. ಅಧ್ಯಾಪಕರು ಸಶಕ್ತವಾಗಿ ಹಳಗನ್ನಡ ಸಾಹಿತ್ಯವನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ಇಂಥ ಶಿಬಿರಗಳು ಅನುಕೂಲವಾಗುತ್ತವೆ. ಆಧುನಿಕ ತಂತ್ರಜ್ಞಾನದ ಮೂಲಕ ಹಳಗನ್ನಡ ಸಾಹಿತ್ಯದ ಬಗ್ಗೆ ಅಧ್ಯಾಪಕರಲ್ಲಿ ಜ್ಞಾನವನ್ನು ಅಪಡೇಟ್ ಮಾಡುವುದು. ಹಳಗನ್ನಡ ಕವಿ-ಕಾವ್ಯಗಳ ಪರಿಚಯ, ಪದಗಳ ವಿಂಗಡನೆ ಮಾಡುವ ಬಗೆ, ಪದ್ಯಗಳನ್ನು ಓದುವ ಕ್ರಮ ಹಾಗೂ ಅವುಗಳನ್ನು ಅರ್ಥೈಸುವ ರೀತಿ, ಕಾವ್ಯದ ಛಂದಸ್ಸು-ಅಲಂಕಾರ-ವರ್ಣನೆ ಮೊದಲಾದ ಸಂಗತಿಗಳನ್ನು ಹೇಳಿಕೊಡಲಾಗುತ್ತದೆ. ಈಗಾಗಲೇ ಇಂಥ ಹದಿನಾರು ಶಿಬಿರವನ್ನು ನಡೆಸಲಾಗಿದೆ. ಈ ಶಿಬಿರಗಳ ವಿವರಗಳನ್ನು ಇದೇ ಸಂಪುಟದಲ್ಲಿರುವ ಹಳಗನ್ನಡ ಸಾಹಿತ್ಯ ಬೋಧನ ಶಿಬಿರ ಕುರಿತ ಲೇಖನದಲ್ಲಿ ಅವಲೋಕಿಸಬಹುದು.

ಇಂಥ ಶಿಬಿರಗಳನ್ನು ಆಯೋಜಿಸಲು ಹಣದ ಕೊರತೆಯಾದ ಕಾರಣ ಇನ್ನಷ್ಟು ಧನಸಹಾಯ ನೀಡಿರಿ ಎಂದು ಕಳೆದ ವರ್ಷ ಮನವಿ ಮಾಡಲಾಗಿತ್ತು. ಆ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಡಿ.ಎಲ್.ಎನ್. ಅವರ ಹಿರಿಯ ಅಳಿಯಂದಿರಾದ ಶ್ರೀ ಎಂ.ಎನ್.ಸೀತಾರಾಮಯ್ಯಂಗಾರ್ ಅವರು ಕುಟುಂಬ ಸದಸ್ಯರೊಂದಿಗೆ ಚರ್ಚಿಸಿ, ನಾಲ್ಕು ಲಕ್ಷ(೪,೦೦,೦೦೦/-)ಗಳನ್ನು ಕೊಡಮಾಡಿದ್ದಾರೆ. ಹೀಗಾಗಿ ಡಿ.ಎಲ್.ಎನ್. ದತ್ತಿನಿಧಿಯ ಮೂಲಧನ ರೂ. ಐದು ಲಕ್ಷ(೫,೦೦,೦೦೦/-)ಗಳಾಗಿದೆ. ಮುಂದಿನ ದಿನಗಳಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗವು ಡಿ.ಎಲ್.ನರಸಿಂಹಾಚಾರ್ ದತ್ತಿನಿಧಿಯ ಅಂಗವಾಗಿ ಇನ್ನೂ ಉಪಯುಕ್ತವಾಗುವ ಕಾರ್ಯಕ್ರಮಗಳನ್ನು ನಾಡಿನಾದ್ಯಂತ ಆಯೋಜಿಸಲು ಯೋಜನೆಗಳನ್ನು ರೂಪಿಸುತ್ತಿದೆ,

೨. ಹಸ್ತಪ್ರತಿಶಾಸ್ತ್ರ ವಿಭಾಗದ ಹಿರಿಯ ವಿದ್ಯಾರ್ಥಿಗಳ ದತ್ತಿನಿಧಿ

ಹಸ್ತಪ್ರತಿಶಾಸ್ತ್ರ ವಿಭಾಗದಿಂದ ಪಿಎಚ್.ಡಿ. ಮತ್ತು ಎಂ.ಫಿಲ್. ಅಧ್ಯಯನ ಮಾಡಿದ ವಿದ್ಯಾರ್ಥಿಗಳ ದತ್ತಿನಿಧಿ ಇದಾಗಿದೆ. ರಜತ ಮಹೋತ್ಸವದ ನೆನಪಿಗಾಗಿ ವಿದ್ಯಾರ್ಥಿಗಳಿಂದ ಧನಸಹಾಯ ಪಡೆದು ಒಂದು ದತ್ತಿನಿಧಿ ಸ್ಥಾಪಿಸಲು ವಿಭಾಗದ ಸಭೆಯಲ್ಲಿ ನಿರ್ಧರಿಸಲಾಯಿತು. ಆ ನಿರ್ಧಾರವನ್ನು ಮಾನ್ಯ ಕುಲಪತಿಯವರಿಗೆ ಮತ್ತು ಮಾನ್ಯ ಕುಲಸಚಿವರಿಗೆ ತಿಳಿಸಿದಾಗ, ಅವರೂ ಸಹ ಅನುಮೋದನೆ ನೀಡಿ ದತ್ತಿನಿಧಿ ಸ್ಥಾಪಿಸಲು ಅನುಮತಿ ನೀಡಿದರು. ಆ ದತ್ತಿನಿಧಿಯ ಉದ್ದೇಶ, ಸ್ವರೂಪ ಮುಂತಾದ ವಿವರಗಳು ಹೀಗಿವೆ:

೧. ವಿದ್ಯಾರ್ಥಿಗಳಿಂದ ಅಂದಾಜು ರೂ. ಮೂರು ಲಕ್ಷ(೩,೦೦,೦೦೦/-)ಗಳನ್ನು ದತ್ತಿನಿಧಿಗೆ ಮೂಲ ಧನವನ್ನಾಗಿ ಇಡುವುದು.

೨. ಆ ದತ್ತಿನಿಧಿಯ ಮೂಲಕ ಪ್ರತಿವರ್ಷ ಒಂದು ಸಲ ವಿಭಾಗದ ವಿದ್ಯಾರ್ಥಿಗಳ ಸಮಾವೇಶವನ್ನು ಏರ್ಪಡಿಸುವುದು.

೩. ವಿಭಾಗದ ವಿದ್ಯಾರ್ಥಿಗಳಲ್ಲಿ ವಾರ್ಷಿಕ ವಿಶೇಷ ಸಾಧನೆಯನ್ನು ಪರಿಗಣಿಸಿ ಒಬ್ಬರನ್ನು ಆಯ್ಕೆ ಮಾಡಿ ಗೌರವಿಸುವುದು.

೪. ಪ್ರಶಸ್ತಿ ಪತ್ರದೊಂದಿಗೆ ನಗದು ಮೊತ್ತವನ್ನು ಆಯ್ಕೆ ಮಾಡಿದ ವಿದ್ಯಾರ್ಥಿಗೆ ನೀಡುವುದು.

೫. ಕಾಲಕಾಲಕ್ಕೆ ಅನುಗುಣವಾಗಿ ದತ್ತಿನಿಧಿಯ ನಿಯಮಗಳನ್ನು ಪರಿಷ್ಕರಿಸುವುದು.

ಈ ಉದ್ದೇಶಗಳನ್ನಿಟ್ಟುಕೊಂಡು ದತ್ತಿನಿಧಿಗೆ ಹಣ ಸಂಗ್ರಹಿಸಲು ಆರಂಭಿಸಲಾಯಿತು. ಕನ್ನಡ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳ ಹೆಸರಿನಲ್ಲಿರುವ ಅಕೌಂಟ್‌ಗೆ ವಿದ್ಯಾರ್ಥಿಗಳು ನೇರವಾಗಿ ಹಣವನ್ನು ವರ್ಗಾವಣೆ ಮಾಡಲು ಸೂಚಿಸಲಾಯಿತು. ಆ ಸೂಚನೆಯಂತೆ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಕಾರಾತ್ಮಕವಾಗಿ ಸ್ಪಂದಿಸಿ, ಧನಸಹಾಯ ಮಾಡಿದ್ದಾರೆ. ಈಗಾಗಲೇ ರೂ. ಮೂರು ಲಕ್ಷಗಳಷ್ಟು ಧನಸಹಾಯ ಬಂದಿದೆ. ಮುಂದಿನ ದಿನಗಳಲ್ಲಿ ಇನ್ನೂ ವಿದ್ಯಾರ್ಥಿಗಳು ಧನಸಹಾಯ ಮಾಡುವ ನಿರೀಕ್ಷೆ ಇದೆ. ಈವರೆಗೆ ಧನಸಹಾಯ ಮಾಡಿದ ವಿದ್ಯಾರ್ಥಿಗಳ ವಿವರಗಳು ಈ ಕೆಳಗಿನಂತಿವೆ :

ಕ್ರಸಂ.	ವಿದ್ಯಾರ್ಥಿಯ ಹೆಸರು	ಮೊತ್ತ
೧.	ಬಿ.ಜಿ.ಬಿರಾದಾರ, ಕಲಘಟಗಿ	೨೫,೦೦೦-೦೦
೨.	ರಮೇಶ ಕಲ್ಲನಗೌಡರ, ಹುಲಕೋಟಿ	೫,೦೦೦-೦೦
೩.	ಶೋಭಾ ಚಪ್ಪರದಳ್ಳಿಮಠ, ದಾವಣಗೆರೆ	೧೦,೦೦೦-೦೦
೪.	ಉಷಾರಾಣಿ ಶರ್ಮ, ಹೊಸಪೇಟೆ	೨೧,೦೦೦-೦೦
೫.	ಆಶಿಕಾ, ಕನಕಗಿರಿ	೧೦,೦೦೦-೦೦
೬.	ರಾಜಕುಮಾರ, ಬೀದರ	೫,೦೦೦-೦೦
೭.	ಎನ್.ಬಿ.ವಿರೂಪಾಕ್ಷಿ, ಬಾಗಲಕೋಟ	೧೦,೦೦೦-೦೦
೮.	ಮಲ್ಲಿಕಾರ್ಜುನ ಇಂಚಲ, ಬೈಲಹೊಂಗಲ	೫,೦೦೦-೦೦
೯.	ಚನ್ನಬಸಪ್ಪ ಚಿಲಕರಾಗಿ, ಸಿಂಧನೂರ	೧೦,೦೦೦-೦೦
೧೦.	ವಿಜಯಶ್ರೀ ಇಟ್ಟಣ್ಣವರ, ಬೀಳಗಿ	೫,೦೦೦-೦೦
೧೧.	ಎ. ಚನ್ನಪ್ಪ, ಬಳ್ಳಾರಿ	೨೫,೦೦೦-೦೦
೧೨.	ಬಿ. ಹುಲಿಗೆಮ್ಮ, ಕೊಪ್ಪಳ	೫,೦೦೦-೦೦
೧೩.	ಬಸವರಾಜ, ಹೊಸಪೇಟೆ	೨,೦೦೦-೦೦
೧೪.	ಎಚ್.ಬಿ. ಶ್ವೇತಾ, ದಾವಣಗೆರೆ	೨,೦೦೦-೦೦
೧೫.	ಡಿ.ಎ.ಬಾಗಲಕೋಟ, ರಬಕವಿ	೨,೦೦೦-೦೦
೧೬.	ರಾಜಶ್ರೀ ಪಾಟೀಲ, ಶಿಗ್ಗಾವಿ	೨,೦೦೦-೦೦
೧೭.	ಸುಮಂಗಲ ಮೇಟಿ	೫,೦೦೦-೦೦
೧೮.	ಸುರೇಶ ಹನಗಂಡಿ, ಗೋಕಾಕ	೫,೦೦೦-೦೦
೧೯.	ಕೆ.ಎಸ್.ಪರವ್ವಗೋಳ, ಗೋಕಾಕ	೫,೦೦೦-೦೦
೨೦.	ಮಾನಕರಿ ಶ್ರೀನಿವಾಸಚಾರ್, ಬಳ್ಳಾರಿ	೧೦,೦೦೦-೦೦
೨೧.	ಜೆ. ಕುಮಾರ, ಮುಂಡರಗಿ	೫,೦೦೦-೦೦

೨೨.	ಕೇಶವಮೂರ್ತಿ, ವಿದ್ಯಾರಣ್ಯ	೨,೦೦೦-೦೦
೨೩.	ಕರಿಬಸಪ್ಪ, ಆಲೂರ	೩,೦೦೦-೦೦
೨೪.	ಸುರೇಶ್, ಕಾಮಗೇತನಹಳ್ಳಿ	೫,೦೦೦-೦೦
೨೫.	ಶಿವಪ್ಪ, ವಿದ್ಯಾರಣ್ಯ	೫,೦೦೦-೦೦
೨೬.	ಕೆ.ರಮೇಶ, ವಿದ್ಯಾರಣ್ಯ	೨,೦೦೦-೦೦
೨೭.	ಚಿದಾನಂದ, ಸಿರಗುಪ್ಪ	೫,೦೦೦-೦೦
೨೮.	ಕಲ್ಲಯ್ಯ ಹಿರೇಮಠ, ನರೇಗಲ್ಲ	೫,೦೦೦-೦೦
೨೯.	ಅನ್ನಪೂರ್ಣ ಗೋಸ್ಬಾಳ, ಹೊಸಪೇಟೆ	೫,೦೦೦-೦೦
೩೦.	ವಿನೋದ ಬಂಡಿ, ಹುಬ್ಬಳ್ಳಿ	೨,೦೦೦-೦೦
೩೧.	ಅಕ್ಕಮಹಾದೇವಿ, ಹೊಸಪೇಟೆ	೫,೦೦೦-೦೦
೩೨.	ಸಣ್ಣಪಾಲಯ್ಯ, ಚಳ್ಳಕೆರೆ	೧,೦೦೦-೦೦
೩೩.	ಸರ್ವಮಂಗಳ ಸಕ್ರಿ, ರಾಯಚೂರ	೨,೦೦೦-೦೦
೩೪.	ಎ.ಬಿ.ಬಾಳಪ್ಪ	೧೦,೦೦೦-೦೦
೩೫.	ಯಲ್ಲವ್ವ ಹೆಬ್ಬಳ್ಳಿ, ನರಗುಂದ	೫,೦೦೦-೦೦
೩೬.	ವಾಯ್. ಎಂ.ಭಜಂತ್ರಿ, ಧಾರವಾಡ	೫,೦೦೦-೦೦
೩೭.	ಬಿ.ಕೆ.ಶಿಲ್ಪ, ಕೂಡ್ಲಿಗಿ	೫,೦೦೦-೦೦
೩೮.	ವಿರೂಪಾಕ್ಷಪ್ಪ, ಭದ್ರಾವತಿ	೫,೦೦೦-೦೦
೩೯.	ಚಂದ್ರಶೇಖರ ಕಾಳಣ್ಣವರ, ಬಾದಾಮಿ	೧,೧೧೧-೦೦
೪೦.	ಬಾಣದ ಮಂಜುನಾಥ, ಹೊಸಪೇಟೆ	೨,೦೦೦-೦೦
೪೧.	ಗವಿಸಿದ್ಧಪ್ಪ ಹಂದ್ರಾಳ, ಕೊಪ್ಪಳ	೧೦,೦೦೦-೦೦
೪೨.	ರೇವಯ್ಯ ಒಡೆಯರ, ಬೆಂಗಳೂರು	೮,೦೦೦-೦೦
೪೩.	ಕೆ. ರೂಪಾ, ವಿದ್ಯಾರಣ್ಯ	೩,೦೦೦-೦೦
೪೪.	ನಾಗರಾಜ ಬಸರಕೋಡ, ಬಳ್ಳಾರಿ	೫,೦೦೦-೦೦
೪೫	ಪ್ರಕಾಶ ಮೆಳವಂಕಿ, ಬೈಲಹೊಂಗಲ	೫,೦೦೦-೦೦
೪೬	ಶ್ರೀಶೈಲ ನರಸಪ್ಪ, ಯಾದಗಿರಿ	೨,೦೦೦-೦೦
೪೭.	ಜಿ.ಬಿ.ಶಿವಲಿಂಗಪ್ಪ, ವಿದ್ಯಾರಣ್ಯ	೧೦,೦೦೦-೦೦
೪೮.	ಜಿ.ಸಿ.ಸಾಗರ, ವಿದ್ಯಾರಣ್ಯ	೫,೦೦೦-೦೦
೪೯.	ಪಿ.ಕೆ.ಬೋರಯ್ಯ, ವಿದ್ಯಾರಣ್ಯ	೫,೦೦೦-೦೦
೫೦.	ಎ.ಎಂ.ರಾಜಶೇಖರಯ್ಯ, ಹರಪನಹಳ್ಳಿ	೫,೦೦೦-೦೦
೫೧.	ಹನಮಂತಗೌಡ ಕಲ್ಮನಿ, ಗದಗ	೨.೫೦೦-೦೦
೫೨.	ಪ್ರಕಾಶ ಗ. ಖಾಡೆ, ಬಾಗಲಕೋಟೆ	೫,೦೦೦-೦೦
೫೩.	ರಮೇಶ ಮಾಳಗೆ, ಉದ್ಗೀರ	೫.೦೦೦-೦೦
೫೪.	ಕರಿಯಪ್ಪ ಮಾಳಗೆ	೧೦,೦೦೦-೦೦
		೩,೨೯,೬೧೧-೦೦

೧೩

ಪ್ರಾಧ್ಯಾಪಕರ ಸಾಧನೆಗಳು

ಎ.ವಿ. ನಾವಡ

ಕಬ್ಬಿನಾಲೆ ವಸಂತ ಭಾರದ್ವಾಜ

ಜಾನಪದದಿಂದ ಹಿಡಿದು ಶಾಸ್ತ್ರಚಿಂತನೆಯವರೆಗೆ, ದಾಸಸಾಹಿತ್ಯದಿಂದ ಹಿಡಿದು ಮಿಷನರಿ ಸಾಹಿತ್ಯದವರೆಗೆ, ಸಾಹಿತ್ಯ ವಿಮರ್ಶೆಯಿಂದ ಹಿಡಿದು ಗ್ರಂಥಸಂಪಾದನೆಯವರೆಗೆ ಅರ್ಧಶತಮಾನವನ್ನೂ ಮೀರಿದ ನಿರಂತರ ವಾಙ್ಮಯ ಯಾತ್ರೆಯನ್ನು ಮಾಡುತ್ತಾ ಬಂದ ಅವಿಶ್ರಾಂತ ಸಾಧಕರು ಪ್ರೊ. ಎ.ವಿ.ನಾವಡ ಅವರು. ದಕ್ಷಿಣಕನ್ನಡ ಜಿಲ್ಲೆಯ ಬಂಟವಾಳ ಸಮೀಪದ ಅಮ್ಮೆಂಬಳ ಎಂಬ ಪುಟ್ಟಹಳ್ಳಿ ಪ್ರೊ. ನಾವಡ ಅವರ ಹಿರಿಯರ ಸ್ಥಳ. ಇವರ ತಂದೆ ಅಮ್ಮೆಂಬಳ ಶಂಕರನಾರಾಯಣ ನಾವಡರು ನೀರ್ಚಾಲು ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಮಂಗಳೂರು ಸೇರಿ ಕೋಟೆಕಾರಿನಲ್ಲಿ ಅಧ್ಯಾಪಕರಾಗಿದ್ದುಕೊಂಡು ನವೋದಯಕಾಲದ ಪ್ರಮುಖ ಕವಿಯೆಂದು ಹೆಸರಾದವರು. ಶಂಕರನಾರಾಯಣ ನಾವಡ ಮತ್ತು ಪಾರ್ವತಿ ದಂಪತಿಯ ಮೊದಲ ಮಗನಾಗಿ ಜನಿಸಿದ(೨೮ ಎಪ್ರಿಲ್ ೧೯೪೬) ಪ್ರೊ. ಎ.ವಿ.ನಾವಡರು ಬಾಲ್ಯದಲ್ಲಿ ಕೋಟೆಕಾರಿನಲ್ಲೇ ಓದಿ ಮುಂದೆ ಮಂಗಳೂರಿನಲ್ಲಿ ಕಾಲೇಜು ಶಿಕ್ಷಣ ಮುಗಿಸಿದರು. ಮೈಸೂರು ವಿ.ವಿ.ಯ ಮಂಗಳೂರು ಸ್ನಾತಕೋತ್ತರ ಕೇಂದ್ರದಲ್ಲಿ(೧೯೬೮–೭೦) ಕನ್ನಡ ಸ್ನಾತಕೋತ್ತರ ಪದವಿಯನ್ನು ಪಡೆದರು. ೧೯೭೦ರಲ್ಲಿ ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆಯನ್ನು ಆರಂಭಿಸಿದ ಇವರು ಅನಂತರ ಹಂಪಿಯ ಕನ್ನಡ ವಿವಿ.ಯನ್ನು ಪ್ರವೇಶಿಸಿ ಹಲವು ಮಹತ್ವದ ಹೊಣೆಗಳನ್ನು ನಿರ್ವಹಿಸಿದರು. ಪ್ರಸಾರಾಂಗದ ನಿರ್ದೇಶಕರಾಗಿ, ಭಾಷಾನಿಕಾಯದ ಡೀನ್ ಆಗಿ, ಪುರಂದರದಾಸ ಅಧ್ಯಯನ ಪೀಠದ ಸಂಚಾಲಕರಾಗಿ, ಪ್ರಭಾರ ಕುಲಸಚಿವರಾಗಿ ಇವರು ಸಲ್ಲಿಸಿದ ಸೇವೆ ಗಮನಾರ್ಹವಾದುದು. ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದ(೨೦೦೬) ಮೇಲೂ ಇವರು ಕನ್ನಡ ನುಡಿಪೂಜೆಯನ್ನು ವೀರವ್ರತದಂತೆ ಮುಂದುವರಿಸಿದರು. ಮಂಗಳೂರಿನ ಕರ್ನಾಟಕ ತಿಯಾಲಾಜಿಕಲ್ ಸಂಶೋಧನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ, ವಿವಿಧ ಯೋಜನೆಗಳ ಕ್ರತುಶಕ್ತಿಯಾಗಿ

ಇವರ ಸೇವೆ ಸಂದಿದೆ. ಪ್ರೊ. ನಾವಡ ಅವರ ಶ್ರೀಮತಿ ಡಾ. ಗಾಯತ್ರಿ ನಾವಡ(ವಿವಾಹ: ೧೯೭೫) ಅವರು ಕೂಡ ಲೇಖಕಿಯಾಗಿ, ಸಂಶೋಧಕಿಯಾಗಿ ಹೆಸರು ಗಳಿಸಿದವರು. ಈ ದಂಪತಿಯ ಮೊದಲ ಮಗಳು ಡಾ. ಪ್ರಜ್ಞಾ ಅಮ್ಮೆಂಬಳ ಕೆಎಎಸ್ ಅಧಿಕಾರಿಯಾದರೆ ಎರಡನೆಯ ಮಗಳು ಶ್ರೀಮತಿ ಪ್ರತೀಕ ಎಂ.ಟೆಕ್ ಪದವೀಧರೆ. ಈ ಇಳಿಹರೆಯದಲ್ಲೂ ನಿರಂತರ ಅಧ್ಯಯನ, ಸಂಶೋಧನೆ ಮತ್ತು ಗ್ರಂಥ ರಚನೆಗಳಲ್ಲಿ ತೊಡಗಿಕೊಂಡಿರುವ ಪ್ರೊ. ನಾವಡರು ನಮ್ಮ ನಡುವಿನ ಒಂದು ವಿಸ್ಮಯ. ಇವರ ಸಮಗ್ರ ಕನ್ನಡ ಸಾಹಿತ್ಯ ಸೃಜನೆಯನ್ನು ಸ್ಥೂಲವಾಗಿ ಹರಿದಾಸ ಸಾಹಿತ್ಯ, ಮಿಷನರಿ ಸಾಹಿತ್ಯ, ಜಾನಪದ ಶೋಧ ಮತ್ತು ಗ್ರಂಥಸಂಪಾದನೆ, ವಿಮರ್ಶೆ, ನಿಘಂಟು ರಚನೆಗಳೆಂಬ ಇತರ ಸಾಹಿತ್ಯವೆಂದು ನಾಲ್ಮೊಗವಾಗಿ ವರ್ಗೀಕರಿಸಬಹುದು. ಈ ಚತುರ್ಮುಖ ಸೌಂದರ್ಯವನ್ನು ಸಂಕ್ಷಿಪ್ತವಾಗಿ ಹೀಗೆ ಸಂಗ್ರಹಿಸಬಹುದು.

ಹರಿದಾಸ ಸಾಹಿತ್ಯ

ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾದ 'ಸಾವಿರಕೀರ್ತನೆಗಳು'(೨೦೦೦) ಮೊದಲ್ಗೊಂಡು ಪ್ರೊ. ನಾವಡರು ಹರಿದಾಸ ಸಾಹಿತ್ಯದ ಚಿಂತನೆಗೆ ಹೊಸ ಆಯಾಮಗಳನ್ನು ನೀಡುತ್ತಾ ಬಂದವರು. ಕೀರ್ತನೆಗಳ ಸಾಹಿತ್ಯ ಮೌಲ್ಯ, ಸಂಪಾದನ ವಿಧಾನ, ಸಾಂಸ್ಕೃತಿಕ ಪದಕೋಶ, ಪ್ರಾಯೋಗಿಕ ವಿಮರ್ಶೆ ಮುಂತಾದ ಬಹುಕೋನಗಳಲ್ಲಿ ಇವರ ಆಲೋಚನೆಗಳು ಹರಳುಗಟ್ಟಿವೆ. ಹರಿದಾಸ ಆಂದೋಲನವು ಭಕ್ತಿಯ ತಾತ್ವಿಕತೆಗಿಂತಲೂ ಹೆಚ್ಚಾಗಿ ಅವುಗಳು ಪ್ರತಿಬಿಂಬಿಸಿದ ಸಮಾಜಮುಖಿ ಚಿಂತನೆಗಳಿಂದ ನಮಗೆ ಮುಖ್ಯವೆಂದು ಪ್ರತಿಪಾದಿಸುವ ಪ್ರೊ. ನಾವಡರು ದಾಸಪರಂಪರೆಯು ಮತೀಯ ಚೌಕಟ್ಟನ್ನು ಮೀರಿ ಸಮಾಜದ ಸಾಮರಸ್ಯಕ್ಕಾಗಿ ದುಡಿದಿದೆ ಎಂಬುದನ್ನು ಒತ್ತಿಹೇಳುತ್ತಾರೆ. ಧರ್ಮವನ್ನು ಆಚರಣ ಕ್ಲಿಷ್ಟತೆಯಿಂದ ಪಾರುಮಾಡಿ, ಸಾಹಿತ್ಯವನ್ನು ಸಂಸ್ಕೃತ ಭಾಷೆಯಿಂದ ಬಿಡುಗಡೆಗೊಳಿಸಿ, ಜ್ಞಾನದಿಂದ ವಂಚಿತರಾದ ಜನಸಾಮಾನ್ಯರ ಬದುಕಿಗೆ ಹೊಸದೊಂದು ಅನುಭವಲೋಕವನ್ನು ತೆರೆದು ತೋರಿಸಿದ ಹರಿದಾಸ ಚಿಂತನೆಯನ್ನು ಬಲವಾಗಿ ಸಮರ್ಥಿಸಿದ್ದಾರೆ. ಲಿಖಿತ ಮತ್ತು ಮೌಖಿಕವೆಂಬ ಎರಡು ವಿಧದ ಪಠ್ಯಪರಂಪರೆಯಲ್ಲಿ ದಾಸಸಾಹಿತ್ಯವು ಮೌಖಿಕ ಪರಂಪರೆಗೆ ಸೇರಿದುದೆಂಬುದು ಇವರ ವಿಚಾರ ಲಹರಿ. ವರಾಹ ತಿಮ್ಮಪ್ಪ ಅಂಕಿತದ ನೆಕ್ಕಾರು ಕೃಷ್ಣದಾಸರ ಕೀರ್ತನೆಗಳು, ಮಧ್ವದಾಸ ಕವಿಯ ಚೌಪದಿಗಳು, ಶ್ರೀವಾದಿರಾಜತೀರ್ಥರ ಶ್ರೀಕೃಷ್ಣ ಬಾಲಲೀಲೆ, ವಿಠಲಸಂಪ್ರದಾಯದ ಐತಿಹಾಸಿಕ ಅಂಶಗಳು ಮುಂತಾದವುಗಳ ಕುರಿತು ಇವರು ಹಾಯಿಸಿದ ಬೆಳಕು ದಾಸಸಾಹಿತ್ಯದಲ್ಲಿ ಪಥದರ್ಶಕವಾಗಿದೆ. ಕನಕದಾಸರ ಕಾವ್ಯಸಂಗ್ರಹಕ್ಕೆ ಬರೆದ ಅಭ್ಯಾಸಪೂರ್ಣವಾದ ಪ್ರವೇಶಿಕೆ, ಕನಕದಾಸರ ಕೀರ್ತನೆಗಳ ಕುರಿತಾದ 'ಕನಕನ ಕಿಂಡಿ' ವಿಮರ್ಶಾ ಸಂಕಲನಕ್ಕೆ ಪ್ರೊ. ನಾವಡರು ಬರೆದ ಪ್ರಸ್ತಾವನೆ ಇತ್ಯಾದಿಗಳು ಕನಕದಾಸರ ಕಾವ್ಯಸೃಷ್ಟಿಯ ಒಳಪಾತಳಿಗಳನ್ನು ಹೊಸದಾಗಿ ಗ್ರಹಿಸುವಲ್ಲಿ ನೆರವಾಗಿವೆ. ಪಾವಂಜೆ ಗುರುರಾಯರು ದಾಸಸಾಹಿತ್ಯಕ್ಕೆ ಸಲ್ಲಿಸಿದ ಕೊಡುಗೆಗಳನ್ನು ದಾಖಲಿಸುವಲ್ಲಿಯೂ ಇವರ ಕೊಡುಗೆಯಿದೆ. ದಾಸ ಸಾಹಿತ್ಯವನ್ನು ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಸಾಂಪ್ರದಾಯಿಕ ನೆಲೆಯಲ್ಲಿ ಪರಿಭಾವಿಸುತ್ತಿದ್ದ ಹೊತ್ತಿನಲ್ಲಿ ಅದಕ್ಕೆ ಸಾಂಸ್ಕೃತಿಕ ಪಠ್ಯವೆಂಬ ಹೊಸ ಅಧ್ಯಯನ ಮುಖವನ್ನು ಜೋಡಿಸಿದ್ದು, ದ್ವೈತಸಿದ್ಧಾಂತದ ಬೆಳಕಿನಲ್ಲಿ ಸಾಗುತ್ತಿದ್ದ ವಿಮರ್ಶೆಯನ್ನು ಸಾಮಾಜಿಕ ತಲ್ಲಣಗಳಿಗೆ ನೀಡಿದ ಸಂತೈಕೆಯೆಂದು ಗ್ರಹಿಸಿದ್ದು ಇತ್ಯಾದಿ ಇವರ ಚಿಂತನೆಗಳು ದಾಸಸಾಹಿತ್ಯಕ್ಕೆ 'ಸಮಾಜೋ ಸಾಂಸ್ಕೃತಿಕ' ಆಯಾಮವನ್ನು ತಂದುಕೊಟ್ಟಿವೆ ಎನ್ನಬಹುದು. ಕನ್ನಡದಲ್ಲಿ ಹರಿದಾಸ ಸಾಹಿತ್ಯವು ಶಿವಶರಣರ ವಚನಸಾಹಿತ್ಯಕ್ಕೆ ಹೆಗಲೆಣೆಯಾಗಿ ಮೂಡಿಬಂದ ಅಭಿವ್ಯಕ್ತಿ ವಿಶೇಷ ಎಂದು ಸ್ಥಾಪಿಸುವಲ್ಲಿ ಪ್ರೊ. ನಾವಡರ ಪಾತ್ರ ಹಿರಿದಾಗಿದೆ.

ಮಿಷನರಿ ಸಾಹಿತ್ಯ

ಮಂಗಳೂರಿನ ಕರ್ನಾಟಕ ತಿಯಾಲಾಜಿಕಲ್ ಸಂಶೋಧನ ಕೇಂದ್ರದ ಆವರಣ ರೆ॥ ಕಿಟೆಲ್ ಮತ್ತು ಹರ್ಮನ್ ಮ್ಯೋಗ್ಲಿಂಗ್ ಅವರುಗಳ ತಪೋಭೂಮಿ. ಡಾ. ಶ್ರೀನಿವಾಸ ಹಾವನೂರರ ಬಳಿಕ ಪ್ರೊ. ನಾವಡರು ಈ ಕೇಂದ್ರದ ಸಂಚಾಲಕರಾಗಿ ಕಾರ್ಯನಿರ್ವಹಿಸಿದವರು. ಕ್ರೈಸ್ತ ಮಿಷನರಿಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಕನ್ನಡವನ್ನು ಕಟ್ಟಿದ ಮಾದರಿಗಳ ಅಧ್ಯಯನಕ್ಕೆ ಇಲ್ಲಿ ಪ್ರೊ. ನಾವಡರು ಅಸ್ತಿವಾರ ಹಾಕಿದರು. ವೈಯಕ್ತಿಕ ನೆಲೆಯಲ್ಲಿಯೂ ಅವರು ಮಿಷನರಿ ಸಾಹಿತ್ಯದ ಕುರಿತು ಗಂಭೀರ ಅಧ್ಯಯನ ನಡೆಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ 'ಮಿಷನರಿಗಳ ಕನ್ನಡ ವೃತ್ತಾಂತವು'(೨೦೧೭) ಮತ್ತು ಕಿಟೆಲರ 'ಕಥಾಮಾಲೆ'(೨೦೧೯). ಮಂಗಳೂರನ್ನು ಕೇಂದ್ರವಾಗಿಸಿಕೊಂಡು ಹೆಬಿಕ್, ಮೋಗ್ಲಿಂಗ್, ವೈಗಲ್ ಮತ್ತು ಕಿಟೆಲ್ ಅವರ ನುಡಿಸೇವೆಯ ಹರಹು ಮತ್ತು ಆ ಮೂಲಕ ಮಿಷನರಿಗಳು ತಂದ ಹೊಸ ಎಚ್ಚರವನ್ನು ಪ್ರೊ. ನಾವಡರು ಗುರುತಿಸಿದ್ದಾರೆ. ಆ ಕಾಲಘಟ್ಟದಲ್ಲಿ ಮಿಷನರಿಗಳು ನಡೆಸಿದ ಅನುವಾದಕಾರ್ಯ, ಮೌಖಿಕಸಾಹಿತ್ಯದ ಸಂಪಾದನೆ, ನಿಘಂಟು, ವ್ಯಾಕರಣ ಮತ್ತು ಪಠ್ಯಪುಸ್ತಕಗಳ ರಚನೆ, ಕ್ರಿಸ್ತಕಥನ ಕಾವ್ಯವಾದ 'ಕಥಾಮಾಲೆ'ಯ ಪ್ರಕಟಣೆ ಇತ್ಯಾದಿ ಅನೇಕ ಐತಿಹಾಸಿಕ ಅಂಶಗಳನ್ನು ವಿದ್ವಜ್ಜನರ ಮುಂದಿರಿಸಿದ್ದಾರೆ. ರೆ॥ ಕಿಟೆಲರನ್ನು 'ಕನ್ನಡದ ಅಕ್ಷರ ಪುರುಷ' ಎಂದು ಬಣ್ಣಿಸಿದ ಪ್ರೊ. ನಾವಡರು ಕಿಟೆಲರ ಕಾರ್ಯಕ್ಷಮತೆಯಿಂದ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವೂ ಬಹುತ್ವದ ಲವಲವಿಕೆಯೂ ಸಿದ್ಧಿಸಿತು ಎಂದು ಅಭಿಪ್ರಾಯಪಟ್ಟಿದ್ದಾರೆ. ಬಾಸೆಲ್ ಮಿಷನರಿಗಳು ಕರ್ನಾಟಕದಲ್ಲಿ ಶಿಕ್ಷಣ, ಮುದ್ರಣ, ಗ್ರಂಥಸಂಪಾದನೆ ಮುಂತಾದ ಕ್ಷೇತ್ರಗಳಲ್ಲಿ ಹೊಸಹಾದಿಯನ್ನು ತೆರೆದು ಕರ್ನಾಟಕದ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಕಾರಣರಾದರು ಎಂಬುದನ್ನು ಸಾಧಾರವಾಗಿ ನಿರೂಪಿಸಿದ್ದಾರೆ.

ಜಾನಪದ ಶೋಧ

ಉಡುಪಿಯ ಎಂಜಿಎಂ ಕಾಲೇಜಿನಲ್ಲಿ ಪ್ರೊ. ಕು.ಶಿ.ಹರಿದಾಸ ಭಟ್ಟರ ಸಾರಥ್ಯದಲ್ಲಿ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರವು ಆರಂಭಗೊಂಡು 'ಫೋರ್ಡ್ ಫೌಂಡೇಶನ್' ಆಶ್ರಯದಲ್ಲಿ ನೂರು ದಿನಗಳ ಕಾಲ ನಡೆದ 'ಅಂತಾರಾಷ್ಟ್ರೀಯ ಜಾನಪದ ಕಮ್ಮಟ'(೧೯೮೮)ದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದಲ್ಲಿಂದ ಪ್ರೊ. ನಾವಡರ ಜಾನಪದ ಶೋಧಯಾತ್ರೆ ತೊಡಗಿತು. ಕುಂದಾಪುರ ಪರಿಸರದಲ್ಲಿ ಹಿಂದುಳಿದ ದಲಿತ ಸಮುದಾಯದವರು ಆಚರಿಸುವ 'ಕಾಡ್ಯನಾಟ'ವೆಂಬ ಕಾಳಿಂಗ ಸರ್ಪಾರಾಧನೆಯ ಕುರಿತು ನಾವಡ ದಂಪತಿಗಳು ಗಂಭೀರವಾದ ಅಧ್ಯಯನವನ್ನು ನಡೆಸಿದರು. ಇದರ ಜೊತೆಗೆ ಕನ್ನಡ ಪ್ರದೇಶದ ಭೂತಾರಾಧನೆಯೆನಿಸಿದ ಪಾಣಾರಾಟ, ನಾಗಮಂಡಲದ ವೈದ್ಯರ ಹಾಡುಗಳು, ಕೊರಗ, ಕುಡುಬಿ, ಖಾರ್ವಿ ಮೊದಲಾದ ಬುಡಕಟ್ಟು ಜನಾಂಗದವರ ಬದುಕು ಮುಂತಾದವುಗಳನ್ನು ಕ್ಷೇತ್ರಕಾರ್ಯದ ಮೂಲಕ ಅಧ್ಯಯನಕ್ಕೆ ಒಳಪಡಿಸಿದರು. ತುಳುಪಾಡ್ದನಗಳ ಸಂಗ್ರಹ, ವಿಶ್ಲೇಷಣೆಯಲ್ಲಿಯೂ ಪ್ರೊ. ನಾವಡರ ಪ್ರಮುಖ ಕೊಡುಗೆಯಿದೆ. 'ತುಳುವ ದರ್ಶನ'(೧೯೮೭ ಮತ್ತು ೨೦೨೦), 'ಸಿರಿಜಾತ್ರೆ'(೧೯೯೧), ತುಳುಪಾಡ್ದನ-ಬಂಧ ಮತ್ತು ವಿನ್ಯಾಸ'(೨೦೦೩), 'ತುಳುಪೊಲಿ'(೨೦೧೩) ಮುಂತಾದ ಗ್ರಂಥಗಳು ತುಳು ಜಾನಪದ ಕ್ಷೇತ್ರದ ಆಚಾರ್ಯ ಕೃತಿಗಳೆಂಬ ಮಾನ್ಯತೆ ಗಳಿಸಿವೆ.

ಜಾಗತೀಕರಣದ ಸುರುಳಿಬಿಚ್ಚಿಕೊಂಡ ಕಾಲಘಟ್ಟದಲ್ಲಿಯೂ ಪ್ರೊ. ನಾವಡರು ಜಾನಪದೀಯ ಚಿಂತನೆಗಳನ್ನು ಹರಿಯಬಿಟ್ಟು ಹೊಸ ಹುಮ್ಮಸ್ಸಿನಿಂದ ಕಾರ್ಯತತ್ಪರರಾಗಿದ್ದಾರೆ. 'ಕರ್ನಾಟಕ ಸಂಶೋಧನಾ ಜಾನಪದ' ಎಂಬ ಗ್ರಂಥವನ್ನು ಸಂಪಾದಿಸಿದ್ದು(ಪ್ರ: ಕರ್ನಾಟಕ ಜಾನಪದ ವಿವಿ-೨೦೧೪) ಕಳೆದ ಒಂದು ಶತಮಾನದಲ್ಲಿ ಕರ್ನಾಟಕ ಜಾನಪದ ಇಟ್ಟ ಪ್ರಮುಖ ಹೆಜ್ಜೆಗಳನ್ನು ದಾಖಲಿಸುವ ಕೆಲಸ ಮಾಡಿದ್ದಾರೆ. ಜಾನಪದದ ಬಹುರೂಪಿತನವನ್ನು ತಿಳಿಯಲು ಸಾಧ್ಯವಾಗಬಲ್ಲ ವಿದ್ವತ್ಪೂರ್ಣ ಲೇಖನಗಳಿಂದಾಗಿ ಇದೊಂದು ಚಾರಿತ್ರಿಕ ಮಹತ್ತ್ವದ ಗ್ರಂಥವೆನಿಸಿದೆ.

ಪ್ರೊ. ನಾವಡರು ಜಾನಪದದ ಶಾಸ್ತ್ರೀಯ ಪರಿಭಾಷೆಯನ್ನು ಕರತಲಾಮಲಕ ಮಾಡಿಕೊಂಡ ವಿದ್ವಾಂಸರು. ವಿದೇಶೀ ಪ್ರಣೀತ ಜಾನಪದದ ಸ್ವರೂಪ-ನಿರ್ವಚನಗಳನ್ನು ಅಂತಸ್ಥಗೊಳಿಸಿಕೊಂಡು ಜಾನಪದವನ್ನು ಒಂದು ಕ್ಷೇತ್ರವಿಜ್ಞಾನವೆಂದು ಗ್ರಹಿಸಿ ಅದರ ಸಮಗ್ರ ಅಧ್ಯಯನವನ್ನು ಸಂಗ್ರಹ, ವರ್ಗೀಕರಣ ಮತ್ತು ವಿಶ್ಲೇಷಣೆಗಳೆಂಬ ಮೂರು ನೆಲೆಗಳಲ್ಲಿ ಕೈಗೊಂಡವರು. ಜಾನಪದದ ವಿಭಿನ್ನ ಪಠ್ಯಗಳೆಲ್ಲವನ್ನೂ ಮುಖ್ಯವೆಂದು ಪರಿಗ್ರಹಿಸುವುದು, ಜನಪದ ಕಾವ್ಯ ನಿರೂಪಕರನ್ನು ಮಾಹಿತಿದಾರರೆಂದು ಭಾವಿಸದೆ ಸೃಜನಶೀಲ ಕವಿಗಳೆಂದೇ ಗೌರವಿಸುವುದು ಹಾಗೂ ಜನಪದ ಕಾವ್ಯವು ಪ್ರದರ್ಶನ ಸಂದರ್ಭದಲ್ಲೇ ಪುನರ್‌ಸೃಷ್ಟಿಗೆ ಒಳಗಾಗುತ್ತದೆ ಎಂದು ತಿಳಿಯುವುದು ಎಂಬ ದೃಢನಿಲುವು ಪ್ರೊ. ನಾವಡರದು. ಪಶ್ಚಿಮದ ವಿದ್ವಾಂಸರು ಹೇಳಿದ ವಿವಿಧ ಜಾನಪದ ಸಿದ್ಧಾಂತಗಳು ಈ ಚಿಂತನೆಗೆ ಆಧಾರವಾಗಿವೆ.

ಗ್ರಂಥಸಂಪಾದನೆ, ವಿಮರ್ಶೆ, ನಿಘಂಟು ರಚನೆ ಇತ್ಯಾದಿ

ಪ್ರೊ. ನಾವಡರು ಆಧುನಿಕ ಗ್ರಂಥಸಂಪಾದನೆಯ ಕ್ಷೇತ್ರದಲ್ಲೂ ಕೆಲಸ ಮಾಡಿದವರು. ನವೋದಯ ಸಾಹಿತಿಗಳ ಕೃತಿಗಳ ಸಂಪಾದನೆಯಲ್ಲಿ ಹೆಚ್ಚು ತೊಡಗಿಕೊಂಡವರು. 'ಪೇಜಾವರ ಸದಾಶಿವರಾವ್ ಸಮಗ್ರ ಬರಹಗಳು'(ಪ್ರ: ಕೇಂದ್ರ ಸಾಹಿತ್ಯ ಅಕಾದೆಮಿ-೨೦೧೫) ಇವುಗಳಲ್ಲಿ ಮುಖ್ಯವಾದುದು. ಇತರ ಸಂಪಾದನ ಕೃತಿಗಳಲ್ಲಿ 'ಮುಂಬೆಳಗು-ಆಧುನಿಕ ಕನ್ನಡ ಸಾಹಿತ್ಯಚರಿತ್ರೆ ಸಂಪುಟ'(ಕನ್ನಡ ಸಾಹಿತ್ಯ ಪರಿಷತ್ತು-೨೦೧೫), 'ತುಳು ಸಾಹಿತ್ಯಚರಿತ್ರೆ'(ಕನ್ನಡ ವಿವಿ-೨೦೦೭), 'ಸಿರಿಗನ್ನಡ'(ಆಳ್ವಾಸ್ ಪ್ರಕಾಶನ-೨೦೧೩) ಮುಂತಾದವುಗಳನ್ನು ಹೆಸರಿಸಬಹುದು. ಸಾಹಿತ್ಯ ವಿಮರ್ಶಕರಾಗಿಯೂ ಇವರ ಸೇವೆ ಸಂದಿದೆ. ವಿವಿಧ ನಿಯತಕಾಲಿಕೆಗಳಲ್ಲಿ, ಅಭಿನಂದನ ಗ್ರಂಥಗಳಲ್ಲಿ ಇವರು ಬರೆದ ವಿಮರ್ಶಾಲೇಖನಗಳು ಬೆಳಕುಕಂಡಿವೆ. ಈ ಲೇಖನಗಳಲ್ಲಿ ತಾತ್ವಿಕತೆ, ವ್ಯಕ್ತಿಚಿತ್ರ, ಭಾಷಾಂತರ ವಿಚಾರ, ಸಂಪಾದನ ಪ್ರಕ್ರಿಯೆ, ನಿಘಂಟು, ಛಂದೋಲಯ ಮುಂತಾದ ಹಲವು ಜಿಜ್ಞಾಸೆಗಳು ಹಾದುಹೋಗುತ್ತವೆ. ಕನ್ನಡ ವಿಮರ್ಶೆಯ ಮೊದಲ ಹೆಜ್ಜೆಗಳು, ಹೊಸಗನ್ನಡ ಸಾಹಿತ್ಯಘಟ್ಟಗಳು ಮತ್ತು ಜೀವನಮೌಲ್ಯಗಳು, ಮೈಸೂರು ಪರಿಸರದ ಹದಿನೆಂಟನೆಯ ಶತಮಾನದ ಸಾಹಿತ್ಯ, ಎಸ್.ವಿ.ಪರಮೇಶ್ವರ ಭಟ್ಟರ ಪ್ರಯೋಗಶೀಲತೆ ಹಾಗೂ ಛಂದೋಲಯಗಳು, ಡಿವಿಜಿ ಮತ್ತು ಕನ್ನಡ, ಕಡೆಂಗೋಡ್ಲು ಅವರ ವಿಮರ್ಶ ಪ್ರಬಂಧಗಳು, ಅಂಕಣಕಾರ ನಿರಂಜನ, ಕು.ಶಿ.ವಾಙ್ಮಯ ಸಮೃದ್ಧಿ ಇತ್ಯಾದಿ ಗಮನಾರ್ಹ.

ಭಾಷಾವಿಜ್ಞಾನ ಸಂಬಂಧವಾಗಿ 'ವಿವಕ್ಷೆ'(೧೯೮೪), ಗೋವಿಂದಪೈ ನಿಘಂಟು(೨೦೧೧) ಇತ್ಯಾದಿ ಪ್ರೊ. ನಾವಡರ ಮುಖ್ಯ ಗ್ರಂಥಗಳು. ಬೆಳಾರಿ ಭಾಷೆ, ದಕ್ಷಿಣಕನ್ನಡದ ಉಪಭಾಷೆ, ಕುಂದಾಪುರ ಪ್ರದೇಶದ ಕೃಷಿ ಪದಕೋಶ, ಮೋಹನ ತರಂಗಿಣಿಯ ಶೈಲಿ ಮುಂತಾದ ಲೇಖನಗಳಲ್ಲಿ ಇವರ ಶಬ್ದಾರ್ಥ ಜಿಜ್ಞಾಸೆ ಕಂಡುಬರುತ್ತದೆ. ಹೀಗೆ ಹತ್ತು ಹಲವು ಶಾಖೆಗಳಲ್ಲಿ ಟಿಸಿಲೊಡೆದ ಪ್ರೊ. ನಾವಡರ ಸಾರಸ್ವತ ಕೃಷಿಗೆ 'ಸಾಹಿತ್ಯಶೋಧ' ಮತ್ತು 'ಜಾನಪದಶೋಧ' ಎಂಬ ಯಮಳಾರ್ಜುನ ಗ್ರಂಥಗಳು(೨೦೧೫) ಸಾಕ್ಷಿಯಾಗಿವೆ. ನಿಡುಗಾಲದ ಸಾಹಿತ್ಯ ಸೇವೆಗೆ ಕರ್ನಾಟಕ ಸರಕಾರದ 'ಕನಕಶ್ರೀ ಪ್ರಶಸ್ತಿ', ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿ ಗೌರವಗಳಲ್ಲದೆ ಖಾಸಗಿ ಸಂಸ್ಥೆಗಳ ಹತ್ತು ಹಲವು ಪ್ರಶಸ್ತಿ-ಪುರಸ್ಕಾರಗಳು ಇವರ ಮುಡಿಗೇರಿವೆ. ಈಗ ಈ ವಾಙ್ಮಯ ತಪಸ್ವಿಗೆ ಎಪ್ಪತ್ತೈದು ವಸಂತಗಳು ತುಂಬಿದ ಸಂದರ್ಭದಲ್ಲಿ ಅಭಿಮಾನಿಗಳು, ಶಿಷ್ಯರು ಮತ್ತು ಬಂಧುಗಳು ಸೇರಿ 'ಬಹುಧ್ಯಾನ' ಎಂಬ ಗೌರವ ಗ್ರಂಥವನ್ನು ಸಮರ್ಪಿಸುವ ಸನ್ನಾಹದಲ್ಲಿದ್ದಾರೆ. ಈ ಪರ್ವಕಾಲದಲ್ಲಿ ಪ್ರೊ. ನಾವಡರಿಗೆ ಸರ್ವರ ಶುಭಾಶಂಸನೆಗಳು.

❑❑

ವೀರೇಶ ಬಡಿಗೇರ

ಹಂದ್ರಾಳ ಗವಿಸಿದ್ದಪ್ಪ

ಡಾ. ವೀರೇಶ ಬಡಿಗೇರ ಅವರು ೪ ಏಪ್ರಿಲ್ ೧೯೬೬ರಂದು ತಂದೆ ಶೇಷಪ್ಪ ಬಡಿಗೇರ, ತಾಯಿ ತುಳಸಾಬಾಯಿಯವರ ಚೊಚ್ಚಲ ಮಗನಾಗಿ ತಾಯಿಯ ತವರಾದ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಬದನೂರು ಗ್ರಾಮದಲ್ಲಿ ಜನಿಸಿದರು.

ಪ್ರಾಥಮಿಕ ಶಿಕ್ಷಣವನ್ನು ಬೆಣ್ಣೂರಿನಲ್ಲಿ ಪ್ರೌಢ ಶಿಕ್ಷಣವನ್ನು ಮಸೂತಿ ಮತ್ತು ಬೇವೂರಿನಲ್ಲಿ, ಕಾಲೇಜು ಶಿಕ್ಷಣವನ್ನು ಬಾಗಲಕೋಟೆಯಲ್ಲಿ, ಬಿ.ಇಡಿ. ಪದವಿಯನ್ನು ಬೆಳಗಾವಿಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ ಹಾಗೂ ಡಿಪ್ಲೋಮಾ ಇನ್ ಎಫಿಗ್ರಾಫಿ ಪದವಿಯನ್ನು, ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.

ಕನ್ನಡ ಸಾಹಿತ್ಯ, ಸಂಸ್ಕೃತಿ, ಹಸ್ತಪ್ರತಿಶಾಸ್ತ್ರ, ಕನ್ನಡ ಗ್ರಂಥಸಂಪಾದನೆ, ಜಾನಪದ, ಸಂಗೀತ ಹಾಗೂ ತಂತ್ರಜ್ಞಾನ ಮುಂತಾದ ಕ್ಷೇತ್ರಗಳನ್ನು ತಮ್ಮ ಶೈಕ್ಷಣಿಕ ಆಸಕ್ತಿಯ ಕ್ಷೇತ್ರಗಳನ್ನಾಗಿ ಮಾಡಿಕೊಂಡು ಆ ಮೂಲಕ ಕನ್ನಡಕ್ಕೆ ಬೇಕಾದ ಹೊಸದೊಂದು ಚಿಂತನಾಕ್ರಮವನ್ನು ರೂಪಿಸಿದ್ದಾರೆ.

ಬೋಧನೆ ಮತ್ತು ಸಂಶೋಧನಾನುಭವ: ಶಿಕ್ಷಕ ವೃತ್ತಿ ಎಂದರೆ ಶ್ರೀಯುತರಿಗೆ ಅಪಾರ ಪ್ರೀತಿ. ಎಂ.ಎ. ಮುಗಿದ ತಕ್ಷಣ ಗುರುಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯ, ಕಲಾದಗಿ, ಪಿ.ಎಂ.ನಾಡಗೌಡ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ(೧೯೯೧-೯೨) ಹಾಗೂ ನಂತರ ೧೯೯೨ರಿಂದ ಪ್ರತಿಷ್ಠಿತ ಹಂಪಿ ಕನ್ನಡ ವಿಶ್ವವಿದ್ಯಾಯದಲ್ಲಿ ಸಂಶೋಧನಾ ಸಹಾಯಕ ಹಾಗೂ ಯೋಜನಾ ಸಹಾಯಕರಾಗಿ, ಪ್ರಸಾರಾಂಗದ ಸಹಾಯಕ ನಿರ್ದೇಶಕರಾಗಿ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ಸೇವೆ ಸಲ್ಲಿಸುತ್ತಿದ್ದಾರೆ. ಎಂ.ಎ., ಪಿಎಚ್.ಡಿ. ಕನ್ನಡ, ಮಹಿಳಾ ಅಧ್ಯಯನ ಹಾಗೂ ಜಾನಪದ ಸಂಯೋಜಿತ ಪದವಿಗಳು ಹಾಗು ಎಂ.ಫಿಲ್, ಪಿಎಚ್.ಡಿ. ಕೋರ್ಸ್ ವರ್ಕ್, ದೂರಶಿಕ್ಷಣ, ನೆಟ್, ಸೆಟ್, ಸ್ಪರ್ಧಾತ್ಮಕ ಪರೀಕ್ಷೆಗಳ ವಿದ್ಯಾರ್ಥಿಗಳಿಗೆ ಸತತ ೩೦ ವರ್ಷಗಳಿಂದ ತಮ್ಮದೇ ಆದ ಶೈಲಿಯಲ್ಲಿ ಬೋಧನೆ ಮಾಡಿ ಅನೇಕ ವಿದ್ಯಾರ್ಥಿಗಳ ಬದುಕು ರೂಪಿಸಿದ ರೂವಾರಿಗಳಾಗಿದ್ದಾರೆ. ಜಾತಿ, ಭೇದವೆನಿಸದೆ ವಿದ್ಯಾರ್ಥಿಗಳನ್ನು ತಮ್ಮ ಮನೆಯಲ್ಲಿಯೇ ಇರಿಸಿಕೊಂಡು ಅನ್ನ, ಆಶ್ರಯ ನೀಡುವ ಉದಾತ್ತ ಮನಸ್ಸಿನವರು. ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಬೇಕು, ಚಿಂತನಶೀಲರಾಗಬೇಕು ಎನ್ನುವುದು ಅವರ ಅಂತರಂಗದ ಮಾತು.

ಬೋಧನೆ ಮತ್ತು ಸಂಶೋಧನೆಯ ಜೊತೆಜೊತೆಗೆ ವಿಶ್ವವಿದ್ಯಾಲಯದ ಅನೇಕ ಆಡಳಿತ ವಿಭಾಗಗಳಲ್ಲಿ ಕಳೆದ ೨೪ ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಪ್ರಮುಖವಾಗಿ ೧೯೯೪ರಿಂದ ೧೯೯೬ರ ವರೆಗೆ ಕನ್ನಡ

ವಿಶ್ವವಿದ್ಯಾಲಯದ ಪ್ರಸಾರಾಂಗದ ಸಹಾಯಕ ನಿರ್ದೇಶಕರಾಗಿ, ೨೦೦೬ರಿಂದ ೨೦೦೯ರ ವರೆಗೆ ಹಿಂದುಳಿದ ವರ್ಗಗಳ ವಿಶೇಷ ಘಟಕದ ಸಂಯೋಜನಾಧಿಕಾರಿಗಳಾಗಿ, ೨೦೦೯ರಿಂದ ೨೦೧೧ರ ವರೆಗೆ ಅಧ್ಯಯನಾಂಗದ ನಿರ್ದೇಶಕರಾಗಿ, ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಮೂರು ಅವಧಿಗೆ ವಿಭಾಗದ ಮುಖ್ಯಸ್ಥರಾಗಿ, ೨೦೧೯ರಿಂದ ೨೦೨೨ ಮೇ ೨೮ರ ವರೆಗೆ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ಪ್ರಸ್ತುತ ೨೦೧೯ರಿಂದ ಭಾಷಾ ನಿಕಾಯದ ಡೀನ್‌ರಾಗಿ ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಸಾಹಿತ್ಯ ಸೇವೆ: ಡಾ. ವೀರೇಶ ಬಡಿಗೇರ ಅವರು ವೃತ್ತಿ ಬದುಕಿನಲ್ಲಿ ಬೋಧನೆ, ಸಂಶೋಧನೆ ಹಾಗೂ ಆಡಳಿತಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ನೀಡಿದ್ದರೋ ಅದಕ್ಕಿಂತ ಮುಖ್ಯವಾಗಿ ಓದುಬರೆಹಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ದೇಸೀ ಸಂಸ್ಕೃತಿಯ ಚಹರೆಗಳನ್ನು ಹೊಸ ರೀತಿಯಲ್ಲಿ ಓದುಗರಿಗೆ ತಮ್ಮ ಬರೆಹಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಸಾಹಿತ್ಯ, ನಾಟಕ, ಸಂಸ್ಕೃತಿ, ಆಚರಣೆ, ಶಾಸನ, ಶಾಸ್ತ್ರಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಕರ್ನಾಟಕ ನೆಲ, ಜಲಕ್ಕೆ ಸಂಬಂಧಿಸಿ ವಿಷಯಗಳ ಜೊತೆಗೆ ಜನರ ನಿತ್ಯಬದುಕಿನ ಭಾಗವಾಗಿದ್ದ ಶಕುನಶಾಸ್ತ್ರ, ವೈದ್ಯಶಾಸ್ತ್ರ, ಪಂಚಾಂಗ, ಜಲಶಾಸ್ತ್ರ, ಪ್ರಶ್ನೆಶಾಸ್ತ್ರ, ಪಗಡೆಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ಹಾಗೂ ಜನಪದಕಲೆ ಹಾಗೂ ಕಲಾವಿದರ ಕುರಿತು ಸುಮಾರು ೩೫ಕ್ಕೂ ಹೆಚ್ಚು ಪುಸ್ತಕಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಸ್ಥಳೀಯವೂ ಹಾಗೂ ಜನಮುಖಿಯೂ ಆಗಿ ಉಳಿದುಬಂದ ಹಾಗೂ ಅಂಚಿಗೆ ತಳ್ಳಿದ ಸಮುದಾಯ ಚಿಂತನೆಗಳನ್ನು ಹೊರ ತೆಗೆಯುವುದು ಇವರ ಚಿಂತನೆಯ ಮುಖ್ಯ ಶಕ್ತಿ. ವೈದ್ಯಶಾಸ್ತ್ರ, ಪ್ರಶ್ನೆಶಾಸ್ತ್ರ, ಜಲಶಾಸ್ತ್ರ, ನೀತಿಶಾಸ್ತ್ರ, ರಮಲಶಾಸ್ತ್ರ, ಮಾಟ–ಮಂತ್ರ–ಮೋಡಿಗಳಂಥ ದೇಸೀಯ ಹಾಗೂ ಶೈಕ್ಷಣಿಕ ವಲಯಗಳಿಂದ ಉಪೇಕ್ಷೆಗೆ ಗುರಿಯಾದ, ಅಧ್ಯಯನ ಕಾಣದೆ ಇದ್ದ ವಿಷಯ ವಸ್ತುಗಳನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದ ಮೂಲಕ ಪುನರಚಿಸಿ ಪ್ರಕಟಿಸಿದ್ದಾರೆ. ಜೊತೆಗೆ ಅನೇಕ ಹಸ್ತಪ್ರತಿಗಳನ್ನು ಹೊಸ ತಲೆಮಾರಿಗೆ ಬೇಕಾದ ರೀತಿಯಲ್ಲಿ ತಂತ್ರಜ್ಞಾನ ಸಹಾಯದಿಂದ ಸಂಪಾದಿಸಿ ಉಣಬಡಿಸಿದ್ದಾರೆ. ಜೊತೆಗೆ ಆಯಾ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕದಾದ್ಯಂತ ಹಸ್ತಪ್ರತಿ ಸಮ್ಮೇಳನ, ಹಳಗನ್ನಡ ತರಬೇತಿ ಬೋಧನಾಶಿಬಿರ, ಹಸ್ತಪ್ರತಿ ಜಾಗೃತಿ ಮತ್ತು ತರಬೇತಿ ಶಿಬಿರಗಳನ್ನು ಸಂಘಟಿಸಿದ್ದಾರೆ. ಜೊತೆಗೆ ನ್ಯಾಷನಲ್ ಮಿಷನ್ ಫಾರ್ ಮ್ಯಾನ್ಯುಸ್ಕ್ರಿಪ್ಟ್ಸ್ ಯೋಜನೆಯ ಸಂಯೋಜನಾಧಿಕಾರಿಗಳಾಗಿ ಕನ್ನಡದ ಹಸ್ತಪ್ರತಿಗಳ ಮಹತ್ವವನ್ನು ಜಾಗತಿಕ ಮಟ್ಟದಲ್ಲಿ ತಲುಪುವಂತೆ ಮಾಡಲು ಸಾಕಷ್ಟು ಶ್ರಮಿಸಿದ್ದಾರೆ.

ಸಂಶೋಧನಾ ಲೇಖನಗಳು: ಸಂಶೋಧನೆಗೆ ಸಂಬಂಧಿಸಿದಂತೆ ೧೨೫ಕ್ಕೂ ಹೆಚ್ಚು ಲೇಖನಗಳನ್ನು ಬರೆದು ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅವರ ಲೇಖನಗಳ ಹರವನ್ನು ಗಮನಿಸುವುದಾದರೆ ಅಡಿಪೂಜೆ, ಗೃಹವಾಸ್ತು ಮತ್ತು ಪಂಚ ಭೂತಗಳ ಕಲ್ಪನೆ, ಗೃಹೋಪಯೋಗಿ ಪೀಠೋಪಕರಣಗಳು, ನೀರಿನ ರಾಜಕೀಯ, ವಚನಕಾರರು ಮತ್ತು ವಾಸ್ತುಶಾಸ್ತ್ರದ ಪ್ರಮಾಣಗಳು, ಜನಪದ ಆಟಗಳು ಮತ್ತು ಫಲವಂತಿಕೆ, ಸೊನ್ನದ ಪಾರಿಜಾತ, ಗಣಕಯಂತ್ರ, ಜಾನಪದ ಮತ್ತು ಜಾಗತೀಕರಣ, ಡಾ. ಕಂಬಾರರ ಸಾಹಿತ್ಯ ಸಾಧನೆ, ಖರೇಖರೇ ಸಂಗ್ಯಾಬಾಳ್ಯ, ಸಂಧ್ಯಾರಾಗ, ಆಯಗಾರಿಕೆ, ತತ್ವಪದಕಾರರಲ್ಲಿ ವಿದ್ಯೆಯ ಸಂಕಥನ, ನಾಟಕ ಸಾಹಿತ್ಯ, ಡೊಳ್ಳು ಕುಣಿತ, ಜನಪದ ಸಂಗೀತ, ಮೋಡಿಲಿಪಿ, ಹಳಗನ್ನಡ ಕಾವ್ಯದ ವಸ್ತು ವಿನ್ಯಾಸ, ಮಳೆ ಹಾಗೂ ತಂತ್ರಜ್ಞಾನ, ಸಂಪಾದನೆ, ಪಾಠ ಪರಿಷ್ಕರಣೆ, ಅಭಿಜಾತ ಸಾಹಿತ್ಯ, ತೋಂಡಿ ಸಂಪ್ರದಾಯ, ಇವೆಲ್ಲವೂ ವಿಶೇಷ ಗಮನ ಸೆಳೆಯುತ್ತವೆ. ಮುಂದೆ ಅಧ್ಯಯನ ಕೈಗೊಳ್ಳುವ ಯುವ ಸಂಶೋಧಕರಿಗೆ ಸಾಕಷ್ಟು ವಿಷಯ ವಸ್ತುವನ್ನು ಈ ಬರಹಗಳು ಒದಗಿಸುತ್ತವೆ.

ಪುಸ್ತಕ ವಿಮರ್ಶೆ: ವಿಶೇಷವಾಗಿ ಧರ್ಮ ಮತ್ತು ತತ್ವಶಾಸ್ತ್ರ, ವಾಸ್ತುಶಿಲ್ಪದ ವಾಸ್ತವಗಳು, ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಬಿಸಿಲುಮರ, ಕನ್ನಡ ಜಾನಪದ ಗೀತೆಗಳು, ಅಬ್ಬಾಸರ ಕತೆಗಳು, ಮಹಾಮಾಯೆ, ಹುತ್ತ, ಲೇಸಬದುಕಿಗಾಗಿ,

ಕುಂದಣಗಾರರ ಆದಿಪುರಾಣ ಪ್ರಸ್ತಾವನೆ, ಎಂವೀಸೀ ಅವರ ಉದಯಾದಿತ್ಯಾಲಂಕಾರ ಪ್ರಸ್ತಾವನೆ, ನವೋದಯ ಕಾವ್ಯದ ಮೇಲೆ ಜಾನಪದದ ಪ್ರಭಾವ, ಬಿ.ಆರ್.ಹಿರೇಮಠ ಅವರ ಶಾಸನ ಅಧ್ಯಯನ, ವಿಶ್ವಕರ್ಮ ಸಾಹಿತ್ಯ ಮುಂತಾದ ಪುಸ್ತಕಗಳ ಸಶಕ್ತ ವಿಮರ್ಶೆ ಮಾಡಿ ವಿಮರ್ಶಾ ಕ್ಷೇತ್ರದಲ್ಲಿಯೂ ಗುರುತಿಸಿಕೊಂಡಿದ್ದಾರೆ.

ಜಾನಪದ ಕಲೆಗಳು, ಹಸ್ತಪ್ರತಿ ಭಂಡಾರಗಳು, ಭಾಷೆ, ನಾಟಕ ಸಾಹಿತ್ಯ, ಸಂಶೋಧನೆ, ಶಾಸನ, ದಾಸ ಸಾಹಿತ್ಯ, ಜನಪದ ಹಾಡುಗಳು, ದೊಡ್ಡಾಟ, ಪಾರಿಜಾತ, ದೇಸೀಯತೆ, ಹೆಣ್ಣಿನ ಅಸ್ಮಿತೆ, ಬರಹ ಮತ್ತು ಕಲೆ, ಜ್ಞಾನದ ಪರಿಕಲ್ಪನೆ ಮುಂತಾಗಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ೬೯ಕ್ಕಿಂತ ಹೆಚ್ಚು ಪ್ರಬಂಧಗಳನ್ನು ಮಂಡಿಸಿದ್ದಾರೆ. ಅದೇರೀತಿ ರಾಜ್ಯಮಟ್ಟದ ಸಮ್ಮೇಳನಗಳಲ್ಲಿ ೪೪ ಪ್ರಬಂಧಗಳನ್ನು ಮಂಡಿಸಿದ್ದಾರೆ.

ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ಎಲ್ಲಮ್ಮನ ಕಾವ್ಯ, ಹಸ್ತಪ್ರತಿಗಳ ದಾಖಲೀಕರಣ, ಸಂಗೊಳ್ಳಿ ರಾಯಣ್ಣ, ಹಸ್ತಪ್ರತಿಗಳ ಸಂರಕ್ಷಣೆಯ ಮಹತ್ವ, ಸೋಲಿಗರ ಭಾಷೆ, ಕನ್ನಡ ಹಸ್ತಪ್ರತಿಗಳ ಭಾಷೆ ಮತ್ತು ಸಂಸ್ಕೃತಿ, ಲಿಪಿಕಾರಿಕೆ ಮತ್ತು ಶೂದ್ರತ್ವ, ಶಾಸನಗಳಲ್ಲಿ ಆಯಾಗಾರರು, ಬಾದಾಮಿ ತಾಲೂಕಿನ ದೇಸಗತಿಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದ ೨೦ಕ್ಕೂ ಹೆಚ್ಚು ಕಾರ್ಯಾಗಾರಗಳನ್ನು ಆಯೋಜನೆ ಮಾಡಿದ್ದಲ್ಲದೆ; ೬೦ಕ್ಕೂ ಹೆಚ್ಚು ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ೪ ಪ್ರಬಂಧಗಳನ್ನು ಮಂಡಿಸಿ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರಮಟ್ಟದ ವಿದ್ವತ್‌ವಲಯದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ವಿವಿಧ ಸಂಘ ಸಂಸ್ಥೆಗಳು, ಮಠಗಳು, ವಿವಿಧ ವಿದ್ಯಾ ಸಂಸ್ಥೆಗಳು, ವಿಶ್ವವಿದ್ಯಾಲಯಗಳಲ್ಲಿ ಇವರು ೫೮ಕ್ಕೂ ಹೆಚ್ಚು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ.

ಇದುವರೆಗೂ ಕಾದಂಬರಿ ಕ್ಷೇತ್ರ, ಅಲಕ್ಷಿತ ವಚನಕಾರರು, ಹೈದರಾಬಾದ ಕರ್ನಾಟಕದ ಮಠಗಳು, ಹೊಸ್ತಿಲು, ಮುಕ್ತಿಯ ಪರಿಕಲ್ಪನೆ, ತತ್ವಪದ ಸಾಹಿತ್ಯ, ಸಾಹಿತ್ಯದಲ್ಲಿ ನಾದ ಮತ್ತು ಲಯಗಳ ಪರಿಕಲ್ಪನೆ, ಗ್ರಂಥ ಸಂಪಾದನಾ ಕ್ಷೇತ್ರ, ಮಾಧ್ಯಮ, ಕೊರವಂಜಿ, ಮಳೆ ಪರಂಪರೆ, ವಿಶ್ವಕರ್ಮ ಪತ್ರಿಕೆಗಳು, ಹಸ್ತಪ್ರತಿಗಳ ಅಧ್ಯಯನ, ತಂತ್ರಜ್ಞಾನ ಮತ್ತು ಹಸ್ತಪ್ರತಿ ಮುಂತಾದ ವಿಷಯಗಳಲ್ಲಿ ೨೦ ಸಂಶೋಧನಾರ್ಥಿಗಳಿಗೆ ಸಮರ್ಥವಾಗಿ ಪಿಹೆಚ್.ಡಿ. ಮಾರ್ಗದರ್ಶನ ಮಾಡಿದ್ದಾರೆ. ೮ ಜನ ವಿದ್ಯಾರ್ಥಿಗಳಿಗೆ ಎಂ.ಫಿಲ್ ಮಾರ್ಗದರ್ಶನ ಮಾಡಿದ್ದಾರೆ.

ಡಾ. ವೀರೇಶ ಬಡಿಗೇರ ಅವರು ಕೈಗೊಂಡ ಶೈಕ್ಷಣಿಕ ಯೋಜನೆಯ ವಿಷಯಗಳೂ ವೈವಿಧ್ಯಮಯವಾಗಿವೆ. ಇಲ್ಲಿ ಹೆಸರಿಸಬಹುದಾದವುಗಳೆಂದರೆ; ಗೃಹವಾಸ್ತು, ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ, ಹಳೆಯ ಲಾವಣಿಗೆಳು, ಬಾಚಿಕಾಯಕದ ಬಸವಯ್ಯ ವೃತ್ತಿ ಮತ್ತು ತತ್ವ ಮೀಮಾಂಸೆ, ವೀರಭದ್ರ ಕಲ್ಯಾಣ, ಪಂಚತಂತ್ರದ ಕಥೆಗಳು, ಹಸ್ತಪ್ರತಿ ಸೂಚಿ ಸಂಪುಟಗಳು, ಮೋಡಿಲಿಪಿ, ಜಲಶಾಸ್ತ್ರ, ಹಸ್ತಪ್ರತಿಗಳ ಮೌಖಿಕ ಸಂಕಥನ, ಕೊರವಂಜಿ, ಮಳೆಯರಾಜ, ಆಯಗಾರರು ಮತ್ತು ಚರ್ಮವಾದ್ಯಗಳಿಗೆ ಸಂಬಂಧಿಸಿದಂತೆ ೧೫ ವೈಯಕ್ತಿಕ ಯೋಜನೆಗಳು ಮತ್ತು ೨ ವಿಶೇಷ ಯೋಜನೆಗಳನ್ನು ಪೂರೈಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿ ಓದುಗರ ವಲಯಕ್ಕೆ ಉಣಬಡಿಸಿದ್ದಾರೆ.

ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣಾ ಕೇಂದ್ರದ ಸಂಯೋಜನಾಧಿಕಾರಿಯಾಗಿ ಎಸ್.ಡಿ.ಎಂ. ಕಾಲೇಜ್ ಉಜಿರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಕರ್ನಾಟಕ ವಿವಿ., ಧಾರವಾಡ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ, ದೂರಶಿಕ್ಷಣ ಕೇಂದ್ರ, ಕವಿವಿ, ಹಂಪಿ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠ, ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಯಪುರ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಮುಂತಾದ ಸಂಸ್ಥೆಗಳಲ್ಲಿ ಅಧ್ಯಯನ ಮಂಡಳಿಯ ಸದಸ್ಯರಾಗಿ, ಸಂಚಾಲಕರಾಗಿ

ಸಮಿತಿಯ ಸದಸ್ಯರಾಗಿ, ಅಧ್ಯಕ್ಷ, ಉಪಾಧ್ಯಕ್ಷರಾಗಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳ ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದ ಕೀರ್ತಿ ಅವರದು.

ಇವರ ವಿದ್ವತ್ತಿಗೆ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಮುಖವಾಗಿ ಹೆಸರಿಸುವುದಾದರೆ; ಗುಳ್ಳವ್ವ: ಆಚರಣೆ–ವಿಶ್ಲೇಷಣೆ ಕೃತಿಗೆ ಸಿಂಪಿಲಿಂಗಣ್ಣ ಪ್ರತಿಷ್ಠಾನದಿಂದ 'ಶ್ರೇಷ್ಠ ಜಾನಪದ ಕೃತಿ ಪ್ರಶಸ್ತಿ–೧೯೯೯', ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ ಕೃತಿಗೆ ೧೯೯೯ರ ಶ್ರೇಷ್ಠ ಸಂಶೋಧನಾ ಕೃತಿ ಪ್ರಶಸ್ತಿ, ಗುಲಬರ್ಗಾ ವಿವಿಯಿಂದ ೨೦೦೬ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಶ್ರೇಷ್ಠ ಯುವ ಸಾಹಿತಿ ಪ್ರಶಸ್ತಿ–೨೦೦೬, ಸ್ನೇಹ ಸೇತು ಸಾಹಿತ್ಯ ಪ್ರಶಸ್ತಿ–೨೦೦೯, ರಾಜ್ಯಮಟ್ಟದ ಆಜೂರ ಸಾಹಿತ್ಯ ಪ್ರಶಸ್ತಿ–೨೦೧೦, ಹಸ್ತಪ್ರತಿ ಸಂಕಥನ ಕೃತಿಗೆ ಶ್ರೇಷ್ಠ ಸಂಶೋಧನ ಪುಸ್ತಕ ಬಹುಮಾನ ಪ್ರಶಸ್ತಿ–೨೦೧೪, ಸಾಹಿತ್ಯ ಅಕಾಡೆಮಿಯಿಂದ ತಿಂಥಿಣಿ ಮೌನೇಶ್ವರ ವಚನಗಳು ಕೃತಿಗೆ ೨೦೧೬ರ ಉತ್ತಮ ಪುಸ್ತಕ ಬಹುಮಾನ, ನಾಡೋಜ ಎಲ್ಲಮ್ಮ ರೊಡ್ಡಪ್ಪನವರ ಕೃತಿ ೨೦೧೯ರ ಬಯಲಾಟ ಅಕಾಡೆಮಿಯ ಉತ್ತಮ ಪುಸ್ತಕ ಬಹುಮಾನ ಪ್ರಶಸ್ತಿಗಳು ಲಭಿಸಿವೆ.

ನನ್ನ ಉನ್ನತ ಶಿಕ್ಷಣದ ಅವಧಿಯಿಂದ ಹಿಡಿದು ಇಂದಿನವರೆಗೂ ನಿರಂತರವಾಗಿ ನನಗೆ ಮಾರ್ಗದರ್ಶನ ಮಾಡುತ್ತಾ ಬಂದಿರುವ ನನ್ನ ಗುರುಗಳ ಕುರಿತು ಅವರ ಜೀವನ ಮತ್ತು ಸಾಹಿತ್ಯ ಸಾಧನೆ ಕುರಿತು ಬರೆಯಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಎಲ್ಲರಿಗೂ ನಮಸ್ಕಾರಗಳನ್ನು ಈ ಮೂಲಕ ಸಲ್ಲಿಸುತ್ತೇನೆ.

❑❑

ಎಫ್.ಟಿ. ಹಳ್ಳಿಕೇರಿ

ರಮೇಶ ಮ. ಕಲ್ಲನಗೌಡರ

ಕನ್ನಡ ಸಂಸ್ಕೃತಿ ಅನನ್ಯವಾದ ಇತಿಹಾಸ ಹೊಂದಿದೆ. ಬಗೆದಷ್ಟು ನಾವಿನ್ಯ ಸಂಗತಿಗಳು ಗೋಚರಿಸುತ್ತವೆ. ಎರಡು ಸಾವಿರ ವರ್ಷಕ್ಕಿಂತಲೂ ಅಧಿಕಕಾಲದ ಇತಿಹಾಸವನ್ನು ಹೊಂದಿರುವ ಕನ್ನಡದ ಸಾಂಸ್ಕೃತಿಕ, ಸಾಮಾಜಿಕ, ಸಾಹಿತ್ಯಿಕ ಚರಿತ್ರೆಯನ್ನು ಆಧಾರ ಸಮೇತ ಪ್ರಸ್ತುತ ಜಗತ್ತಿಗೆ ಮತ್ತೆ ತೆರೆದು ತೋರಿಸುವ ದೊಡ್ಡ ಹೊಣೆಗಾರಿಕೆ ಇರುವುದು ಸಾಹಿತ್ಯ ಮತ್ತು ಇತಿಹಾಸ ಸಂಶೋಧಕರ ಮೇಲೆ. ಓರ್ವ ಸೃಜನಶೀಲ ಬರವಣಿಗೆಕಾರ ಏನನ್ನೂ ಬರೆದರೂ, ಸಾಹಿತ್ಯ ಲೋಕ ಸಹೃದಯತೆಯಿಂದ ಓದಿ ಆಸ್ವಾದಿಸುತ್ತದೆ. ಆದರೆ ಓರ್ವ ಸಂಶೋಧಕ ಬರೆದ ಲೇಖನ, ಕೃತಿಯನ್ನು ಸಹೃದಯದಿಂದ ಓದಿ ಅದನ್ನು ಪಕ್ಕಕ್ಕೆ ಇಡುವುದಿಲ್ಲ. ಅವನು ಬರೆದ ಬರವಣಿಗೆಯ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಿ ಸಾಹಿತ್ಯ ಲೋಕ ನೋಡುತ್ತದೆ. ಅದು ಸತ್ಯವಾಗಿದ್ದಾಗ ಮಾತ್ರ ಅದಕ್ಕೆ ಮಾನ್ಯತೆ. ಇಲ್ಲವಾದರೆ ಸಾರಾಸಗಾಟವಾಗಿ ಅದನ್ನು ತಿರಸ್ಕರಿಸುವುದರೊಂದಿಗೆ, ಬರವಣಿಗೆಯ ಲೋಕದಿಂದ ಅವನನ್ನು ದೂರವಿಡುತ್ತದೆ. ಅನೇಕ ಸಂಶೋಧಕರ ಹೊಸ ಬರವಣಿಗೆಯನ್ನು ಸಾಹಿತ್ಯ ಲೋಕದಲ್ಲಿ ಕಾತರದಿಂದ ಕಾಯುವವರು ಇದ್ದಾರೆ. ಅಂತಹ ಸಂಶೋಧಕರಲ್ಲಿ ಡಾ. ಎಂ.ಎಂ.ಕಲಬುರ್ಗಿ, ಡಾ. ವೀರಣ್ಣ ರಾಜೂರ ಮೊದಲಾದವರು ಪ್ರಥಮ ಶ್ರೇಣಿಯಲ್ಲಿ ನಿಲ್ಲುತ್ತಾರೆ. ಅಂತಹ ಮಹನೀಯರ ಗರಡಿಯಲ್ಲಿ ಬೆಳೆದು, ಪಳಗಿದ ಇಂದಿನ ಕೆಲವೆ ಕೆಲವು ಶ್ರೇಷ್ಠ ಸಂಶೋಧಕರಲ್ಲಿ ಓರ್ವರಾದವರು ಡಾ. ಎಫ್.ಟಿ.ಹಳ್ಳಿಕೇರಿ ಅವರು ಪ್ರಥಮರು.

ಡಾ. ಎಫ್.ಟಿ.ಹಳ್ಳಿಕೇರಿ ಅವರು ಕನ್ನಡದ ಅಸ್ಮಿತೆಯ ಸಂಕೇತವಾಗಿರುವ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಕಳೆದ ೨೮ ವರ್ಷಗಳಿಂದ ಕನ್ನಡ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಪ್ರಾಧ್ಯಾಪಕರೆಂದ ತಕ್ಷಣ ಕೇವಲ ಪಾಠ-ಪ್ರವಚನ ಮಾಡಿಕೊಂಡು ವೃತ್ತಿಗೆ ಅಂಟಿಕೊಂಡ ಅನೇಕರಂತೆ ಕಾರ್ಯವನ್ನು ಪೂರೈಸುವ ಸಾಮಾನ್ಯ ಅಧ್ಯಾಪಕರಂತೆ ವೃತ್ತಿಯನ್ನು ಮಾಡದವರು ಡಾ. ಎಫ್.ಟಿ.ಹಳ್ಳಿಕೇರಿ ಅವರು. ಇವರು ವಿದ್ಯಾರ್ಥಿದೆಸೆಯಿಂದ ಇಂದಿನವರೆಗೂ ಅಧ್ಯಯನ, ಅಧ್ಯಾಪನ ಮತ್ತು ಬರವಣಿಗೆ ಈ ಮೂರನ್ನು ತಮ್ಮ ಬದುಕಿನ ಅಂಗವನ್ನಾಗಿಸಿ ಕೊಂಡಿರುವರು. ಈ ಮೂರು ಕಾರ್ಯಗಳಿಗೆ ಎಂದಿಗೂ ಚ್ಯುತಿ ಬರದಂತೆ ತಮ್ಮ ವಿದ್ಯಾಗುರುಗಳಾದ ಡಾ. ಎಂ.ಎಂ.ಕಲಬುರ್ಗಿ ಮತ್ತು ಡಾ. ವೀರಣ್ಣ ರಾಜೂರ ಅವರ ಮಾರ್ಗದರ್ಶನದಲ್ಲಿ ಕನ್ನಡ ಸಂಶೋಧನ ಲೋಕದಲ್ಲಿ ತಮ್ಮದೆ ವಿಶಿಷ್ಟ ಛಾಪನ್ನು ಮೂಡಿಸುತ್ತಿರುವ ಮತ್ತು 'ಕಂಠಪತ್ರ' ಎಂಬ ಹೆಸರಡಿ ಸಂಶೋಧನಾ ಲೇಖನಗಳ ಗುಚ್ಛವನ್ನೆ ನೀಡುತ್ತಿರುವ ಶ್ರೇಷ್ಠ ಹಸ್ತಪ್ರತಿ ಶಾಸ್ತ್ರಜ್ಞರು.

ಡಾ. ಫಕೀರಪ್ಪ ತಿಪ್ಪಣ್ಣ ಹಳ್ಳಿಕೇರಿ ಅವರು ಮೂಲತಃ ಅಣ್ಣಿಗೇರಿ ತಾಲೂಕಿನ ನಾವಳ್ಳಿ ಎಂಬ ಗ್ರಾಮದ ಆದರ್ಶ ರೈತ ಕುಟುಂಬವಾದ ಹಳ್ಳಿಕೇರಿ ಮನೆತದಲ್ಲಿ ೧೯೬೬ ಜೂನ್ ೧ರಂದು ಜನಿಸಿದರು. ಡಾ. ಎಫ್.ಟಿ.ಹಳ್ಳಿಕೇರಿ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ನಾವಳ್ಳಿ, ಶಲವಡಿಗದುಗಿನಲ್ಲಿ ಪೂರೈಸಿ ಪದವಿ ಶಿಕ್ಷಣವನ್ನು ನವಲಗುಂದ ಮತ್ತು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪೂರೈಸಿದ್ದಾರೆ. ೧೯೮೭ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಕನ್ನಡ ಪದವಿಯನ್ನು ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ೧೯೮೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಿಂದ ಎಂ.ಎ. ಪದವಿಯನ್ನು ದ್ವಿತೀಯ ರ್‍ಯಾಂಕ್‌ನಲ್ಲಿ ಉತ್ತೀರ್ಣರಾದರು. ಅಲ್ಲದೆ ಬಸವ ಅಧ್ಯಯನದಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದರು. ಅದೇ ವರ್ಷದಲ್ಲಿ ಅಂದರೆ ೧೯೮೯ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ನಡೆಸುವ 'ಜ್ಯೂನಿಯರ್ ರೀಸರ್ಚ್ ಫೆಲೋ' ರಾಷ್ಟ್ರೀಯ ಮಟ್ಟದ ಪರೀಕ್ಷೆಯಲ್ಲಿ ಅರ್ಹತೆ ಪಡೆದದ್ದು ಇವರ ಪ್ರತಿಭೆಗೆ ಸಾಕ್ಷಿ. ಈ ಫೆಲೋ ಅಡಿಯಲ್ಲಿ ಕನ್ನಡ ಅಧ್ಯಯನ ಪೀಠದ ಹಿರಿಯ ಪ್ರಾಧ್ಯಾಪಕರು ಮತ್ತು ಶ್ರೇಷ್ಠ ಸಂಶೋಧಕರಾದ ಡಾ. ವೀರಣ್ಣ ರಾಜೂರ ಅವರ ಮಾರ್ಗದರ್ಶನದಲ್ಲಿ 'ಕೆರೆಯ ಪದ್ಮರಸನ ಕುಟುಂಬ ವರ್ಗ: ಒಂದು ಅಧ್ಯಯನ' ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿ ಪಿಎಚ್.ಡಿ. ಪದವಿಯನ್ನು ಪಡೆದರು.

ವಿದ್ಯಾರ್ಥಿದೆಸೆಯಿಂದಲೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯೆಡೆಗೆ ಅಪಾರ ಆಸಕ್ತಿ ಮತ್ತು ಕುತೂಹಲವನ್ನು ಹೊಂದಿದ್ದ ಡಾ. ಎಫ್.ಟಿ.ಹಳ್ಳಿಕೇರಿ ಅವರು ೧೯೯೨-೯೩ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಸಹಾಯಕರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಅವರ ಕರ್ತವ್ಯ ನಿಷ್ಠೆ, ವೃತ್ತಿ ಬದ್ಧತೆಯನ್ನು ಅನುಭವಿಸಿದ ಅಲ್ಲಿಯ ಹಿರಿಯ ಪ್ರಾಧ್ಯಾಪಕರು ಅವರನ್ನು ಯೋಜನಾ ಸಹಾಯಕರೆಂದು ನೇಮಿಸುವುದರೊಂದಿಗೆ ೧೯೯೩-೯೪ರಲ್ಲಿ ಅಧ್ಯಾಪಕರೆಂದು ಕಾರ್ಯನಿರ್ವಹಿಸಲು ಅದೇಶ ನೀಡಿತು. ಸದಾಕಾಲ ವಿದ್ಯಾರ್ಥಿ ಪ್ರಿಯರಾದ ಡಾ.ಎಫ್.ಟಿ. ಹಳ್ಳಿಕೇರಿ ಅವರು ಬೋಧನೆ ಮತ್ತು ಸಂಶೋಧನೆ ಈ ಎರಡನ್ನು ತಮ್ಮ ನೋಟದ ದೃಷ್ಟಿಗಳನ್ನಾಗಿ ಮಾಡಿಕೊಂಡು ತಾವು ನಿರ್ವಹಿಸುತ್ತಿರುವ ವೃತ್ತಿಗೆ ಘನತೆಯನ್ನು ತರುತ್ತಿರುವರು. ೧೯೯೭ರಿಂದ ಪ್ರವಾಚಕರಾಗಿ ಬಡ್ತಿಯನ್ನು ಹೊಂದಿದ ಅವರು ೨೦೦೫ರಿಂದ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಮತ್ತು ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸದಾಕಾಲವೂ ಒಂದಿಲ್ಲೊಂದು ಸಾಹಿತ್ಯದ ಬರವಣಿಗೆ ಮತ್ತು ಸಂಶೋಧನಾ ಪರವಾದ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಕೊಳ್ಳುವ ಅವರು ನಿತ್ಯ ಚೈತನ್ಯಶೀಲರು. ವಿಶ್ವವಿದ್ಯಾಲಯದ ಪ್ರತಿಯೊಂದು ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ ಅವರು ತಾವು ನಿರ್ವಹಿಸುವ ಯಾವುದೇ ಕಾರ್ಯಕ್ಕೂ ಘನತೆಯನ್ನು ತಂದುಕೊಡುವ ಸ್ವಭಾವದವರು. ಅವರ ಈ ಗುಣದ ಹಿಂದೆ ಅವರ ಗುರುದ್ವಯರಾದ ಡಾ. ಎಂ.ಎಂ.ಕಲಬುರ್ಗಿ ಮತ್ತು ಡಾ. ವೀರಣ್ಣ ರಾಜೂರ ಅವರ ದಟ್ಟ ಪ್ರಭಾವವಿದೆ. ಅದರಿಂದಾಗಿಯೆ ಅವರೀರ್ವರ ನಿಜವಾದ ವಾರಸುದಾರ ರಾಗಬಲ್ಲ ನಿಜವಾದ ಅರ್ಹತೆ ಇರುವುದು ಅದು ಡಾ. ಎಫ್.ಟಿ.ಹಳ್ಳಿಕೇರಿ ಅವರಿಗೆ ಮಾತ್ರ ಎಂದರೆ ತಪ್ಪಾಗುವುದಿಲ್ಲ.

ಡಾ. ಎಫ್.ಟಿ .ಹಳ್ಳಿಕೇರಿ ಅವರು ಇಲ್ಲಿಯವರೆಗೂ ತಮ್ಮ ವೃತ್ತಿಯೊಂದಿಗೆ ತಾವು ಕೈಗೊಳ್ಳುವ ಹಸ್ತಪ್ರತಿ ಸಂಗ್ರಹ. ಪರಿಷ್ಕರಣೆ, ಸಂಪಾದನೆ ಮತ್ತು ಪ್ರಕಟಣೆ ಇವುಗಳನ್ನು ತಪಸ್ಸೆಂಬಂತೆ ಮಾಡುತ್ತ ಬರುತ್ತಿರುವರು. ಸಾಮಾನ್ಯವಾಗಿ ಹಸ್ತಪ್ರತಿಶಾಸ್ತ್ರದ ಸಂಪಾದನೆ, ಪರಿಷ್ಕರಣೆ ಮತ್ತು ಪ್ರಕಟಣೆಗಳು ತುಂಬ ಶ್ರಮ, ತಾಳ್ಮೆ ಮತ್ತು ಎಲ್ಲಕ್ಕೂ ಹೆಚ್ಚಾಗಿ ಸಹನೆಯನ್ನು ಬಯಸುವ ಕ್ಷೇತ್ರಗಳು. ಇಲ್ಲಿ ಯಾವುದನ್ನೂ ತುಂಬ ಅವಸರವಸರಾಗಿ ಮಾಡಿ

ಮುಗಿಸಿಬಿಡೋಣವೆನ್ನುವಂತಿಲ್ಲ. ಒಂದು ಪ್ರಾಚೀನ ಹಸ್ತಪ್ರತಿ ದೊರೆತಿತೆಂದರೆ ಮೊದಲು ಅದರ ಸ್ವರೂಪ, ಕಾಲ, ಲೇಖಕ, ಭಾಷೆ, ವಸ್ತು ಅದು ಭೌತಿಕವಾಗಿ ಹೊಂದಿರುವ ಸ್ಥಿತಿಯೊಂದಿಗೆ ಎಲ್ಲವನ್ನೂ ಗುರುತಿಸುವ ದೊಡ್ಡ ಹೊಣೆಗಾರಿಕೆ ಹಸ್ತಪ್ರತಿಶಾಸ್ತ್ರಜ್ಞನ ಮೇಲಿರುತ್ತದೆ. ಅದನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಆ ಗ್ರಂಥದ ಕೃತಿಕಾರನ ಮನೋಪ್ರವೃತ್ತಿಯನ್ನು ಆವಾಹನೆ ಮಾಡಿಕೊಳ್ಳಬೇಕಾಗುತ್ತದೆ. ಕಾರಣವೆಂದರೆ ನೂರಾರೂ ವರ್ಷಗಳಲ್ಲಿ ಆ ಗ್ರಂಥ ಅನೇಕ ವಿಧದಲ್ಲಿ ತ್ರುಟಿತವಾಗಿ ಜೀರ್ಣವಾಗಿರುತ್ತದೆ. ಅಂಥ ಸ್ಥಿತಿಯಲ್ಲಿ ಆ ಗ್ರಂಥದ ಹಾಳಾದ, ಅವ್ಯವಸ್ಥಿತವಾದ ಭಾಗಗಳನ್ನು ವ್ಯವಸ್ಥಿತವಾಗಿ ಜೋಡಿಸಿ ತ್ರುಟಿತವಾದ ಭಾಗಗಳಲ್ಲಿ ಬಿಟ್ಟು ಹೋದ ಪದ್ಯ ಇಲ್ಲವೆ ಗದ್ಯ ಭಾಗದ ಅಕ್ಷರಗಳನ್ನು ಕವಿಯ ಮೂಲ ಆಶಯಕ್ಕೆ ಅನುಗುಣವಾಗುವಂತೆ, ಛಂದಸ್ಸಿಗೆ ಹೊಂದುವಂತೆ ಗ್ರಂಥ ಸಂಪಾದಕನೆ ಸೃಜನಶೀಲ ಲೇಖಕನಾಗಿ ಬರೆದು ತುಂಬಬೇಕಾಗುತ್ತದೆ. ಆದ್ದರಿಂದ ಓರ್ವ ಗ್ರಂಥ ಸಂಪಾದಕ, ಓರ್ವ ಸೃಜನಶೀಲ ಬರಹಗಾರನೂ ಆಗಿರುತ್ತಾನೆ. ಡಾ. ಎಫ್.ಟಿ.ಹಳ್ಳಿಕೇರಿ ಅವರು ಸಂಪಾದಿಸಿರುವ ಎಲ್ಲ ಗ್ರಂಥಗಳನ್ನು ಅಧ್ಯಯನ ಮಾಡಿದರೆ ಅವರ ಈ ಗುಣಗಳು ಸಹಜವಾಗಿ ಅವರು ಸಂಪಾದಿಸಿರುವ ಗ್ರಂಥಗಳಲ್ಲಿ ಮೇಲ್ನೋಟಕ್ಕೆ ಕಾಣುತ್ತವೆ. ದುರಂತವೆಂದರೆ ಒಂದು ನಾಡಿನ ನಿಜವಾದ ಇತಿಹಾಸ, ಸಂಸ್ಕೃತಿಯನ್ನು ಮತ್ತೆ ಪ್ರಸ್ತುತ ಜಗತ್ತಿಗೆ ತೆರೆದು ತೋರಿಸುವ ಗ್ರಂಥಸಂಪಾದಕ ಶ್ರೇಷ್ಠರು ಸಾಹಿತ್ಯ ಲೋಕದ ಪರೆದೆಯ ಹಿಂಭಾಗದಲ್ಲೆ ಉಳಿದುಬಿಡುತ್ತಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಾವು ಮಾಡುತ್ತಿರುವ ಅವರ ಸ್ಮರಣೆ ಸಾಲದು ಎಂದೆ ಹೇಳಬೇಕಾಗುತ್ತದೆ.

ಡಾ. ಎಫ್.ಟ.ಹಳ್ಳಿಕೇರಿ ಅವರು ಹಸ್ತಪ್ರತಿ, ಸಂಪಾದನೆ, ಪ್ರಾಚೀನ ಸಾಹಿತ್ಯ, ಶಾಸನ, ಇತಿಹಾಸ, ಹಾಲುಮತ ಸಂಸ್ಕೃತಿ, ಯೋಗಶಾಸ್ತ್ರ ಹೀಗೆ ಬಹುಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಲ್ಲಿಯವರೆಗೂ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ– ಕೆರೆಯ ಪದ್ಮರಸನ ವಂಶಜರು: ಒಂದುಅಧ್ಯಯನ(ಪಿಎಚ್.ಡಿ. ಮಹಾಪ್ರಬಂಧ), ಕಂಠಪತ್ರ–೧, ೨, ೩ ಮತ್ತು ೪ ಸಂಪುಟಗಳು, ಹಸ್ತಪ್ರತಿ ಕ್ಷೇತ್ರಕಾರ್ಯ, ಹಾಲುಮತ ಸಂಸ್ಕೃತಿ–೧ ಮತ್ತು ೨, ಕನ್ನಡ ಜೈನ ಹಾಡುಗಳು, ನವಮೋಹನ ತರಂಗಿಣಿ, ತಿಂಥಿಣಿ ಮೋನಪ್ಪಯ್ಯ ಚರಿತೆ, ಕರಸ್ಥಲ ಸಾಹಿತ್ಯ, ಹಾಲಸಿದ್ಧೇಶ್ವರ ಸಾಂಗತ್ಯ, ಕೋಕಶಾಸ್ತ್ರ, ಮಾಧವಾಂಕ ಚರಿತೆ, ಹಸ್ತಪ್ರತಿ ವ್ಯಾಸಂಗ ಸಂಪುಟಗಳು, ಹಾಲುಮತ ವ್ಯಾಸಂಗ ಸಂಪುಟಗಳು, ಯೋಗವಿಜಯ, ಇತ್ಯಾದಿ ೫೦ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ರಾಜ್ಯ–ರಾಷ್ಟ್ರ–ಅಂತಾರಾಷ್ಟ್ರಿಯಮಟ್ಟದ ಅನೇಕ ವಿಚಾರ ಸಂಕಿರಣ–ಶಿಬಿರಗಳಲ್ಲಿ ೧೫೦ಕ್ಕೂ ಅಧಿಕ ಸಂಪ್ರಬಂಧಗಳ ಮಂಡನೆ, ವಿವಿಧ ನಿಯತಕಾಲಿಕೆ–ಪತ್ರಿಕೆಗಳಲ್ಲಿ ೨೦೦ಕ್ಕೂ ಅಧಿಕ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ.

ಅವರ 'ಕಂಠಪತ್ರ' ಸಂಪುಟಗಳು ತುಂಬ ವಿಶೇಷ ಲೇಖನಗಳನ್ನು ಹೊಂದಿವೆ. ಅದರಲ್ಲೂ ಪ್ರಾಚೀನ ಮತ್ತು ಆರ್ವಾಚೀನ ಗ್ರಂಥಗಳ ಕುರಿತಾದ ಅಲ್ಲಿಯ ಲೇಖನಗಳು ಅನೇಕ ಸಂಶೋಧಕರಿಗೆ ಮಾರ್ಗದರ್ಶಿಗಳಾಗಿವೆ. ಅವರು ನೀಡುವ ಅನೇಕ ಆಧಾರಗಳು, ಮುಂದೆ ಕೈಗೊಳ್ಳಬಹುದಾದ ಸಂಶೋಧನೆಗಳ ಕುರಿತಾದ ಅನೇಕ ಸುಳುಹುಗಳನ್ನು ಕಂಠಪತ್ರದ ಸಂಪುಟಗಳಲ್ಲಿಯ ಲೇಖನಗಳಲ್ಲಿ ಹೆಜ್ಜೆಹೆಜ್ಜೆಗೂ ನೀಡುತ್ತಾರೆ. ಅವರ ಮತ್ತೊಂದು ಸಂಪುಟವಾದ 'ಹಾಲುಮತ ವ್ಯಾಸಂಗ'ಗಳು ಹಾಲುಮತ(ಕುರುಬ) ಸಂಸ್ಕೃತಿಯ ಪ್ರಾಚೀನತೆ, ಅದರ ಅನನ್ಯತೆಯನ್ನು ಹಾಗೂ ಅದು ಕನ್ನಡ ಮತ್ತು ಭಾರತದ ಪ್ರಾಚೀನ ದ್ರಾವಿಡ ಸಂಸ್ಕೃತಿಯ ಹೆಗ್ಗುರುತಾಗಿತ್ತೆಂದು ಸ್ಪಷ್ಟವಾಗಿ ದಾಖಲಿಸುತ್ತವೆ. ಹಾಲುಮತ ಸಂಸ್ಕೃತಿಯ ಬಹುಮುಖಿಯಾದ ಹರವನ್ನು ಈ ಸಂಪುಟಗಳು ತೆರೆದಿಡುತ್ತವೆ. ಶಂಬಾ ಜೋಷಿ ಅವರ ನಂತರ ಬಹುವ್ಯಾಪಕವಾಗಿ ಹಾಲುಮತ ಸಂಸ್ಕೃತಿಯನ್ನು ಮರು ಅಧ್ಯಯನಕ್ಕೆ, ಚಿಂತನೆಗೆ ಒಳಪಡಿಸಿದ ಹಿರಿಮೆ ಡಾ. ಎಫ್.ಟಿ.ಹಳ್ಳಿಕೇರಿ ಅವರಿಗೆ ಸಲ್ಲುತ್ತದೆ. ಇಲ್ಲಿಯವರೆಗೂ ನಿರ್ಲಕ್ಷ್ಯಕ್ಕೆ ಒಳಗಾದ

ಪ್ರಾಚೀನ ಲೇಖಕರ ಗ್ರಂಥಗಳನ್ನು ಸಂಗ್ರಹಿಸಿ ಸಂಪಾದಿಸಿದ್ದು ಡಾ. ಎಫ್.ಟಿ.ಹಳ್ಳಿಕೇರಿ ಅವರ ಮತ್ತೊಂದು ದಾಖಲಾರ್ಹ ಕಾರ್ಯ. ಅವುಗಳಲ್ಲಿ ಮಾಧವಾಂಕ ಚರಿತೆ, ಹಾಲಸಿದ್ಧೇಶ್ವರ ಸಾಂಗತ್ಯ, ತಿಂಥಿಣಿ ಮೋನಪ್ಪಯ್ಯ ಚರಿತೆ ಮುಖ್ಯವಾದವುಗಳು.

ಡಾ. ಎಫ್.ಟಿ.ಹಳ್ಳಿಕೇರಿ ಅವರು ಒಂದೆಡೆ ಸಾಹಿತ್ಯ-ಸಂಶೋಧನಾ ಕಾರ್ಯದಲ್ಲಿ ಸಕ್ರಿಯವಾಗಿದ್ದುಕೊಂಡು, ಅದರೊಟ್ಟಿಗೆ ತಮ್ಮ ಕಾರ್ಯಕ್ಷೇತ್ರವಾದ ಹಸ್ತಪ್ರತಿಶಾಸ್ತ್ರ ವಿಭಾಗದೊಂದಿಗೆ ಕನ್ನಡ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಕಾರ್ಯಗಳಲ್ಲೂ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಅದರಲ್ಲಿಯೂ ಮುಖ್ಯವಾಗಿ ಹಾಲುಮತ ಅಧ್ಯಯನ ಪೀಠದ ಸಂಚಾಲಕರಾಗಿ ೨೦೦೬-೨೦೧೮ರವರೆಗೆ ಮತ್ತು ೨೦೧೯ರಿಂದ ಇಂದಿನವರೆಗೂ ನಿರಂತರವಾಗಿ ಪುಸ್ತಕ ಪ್ರಕಟಣೆ ಮತ್ತು ಸಮ್ಮೇಳನಗಳ ಆಯೋಜನೆ ಮಾಡುವುದರ ಮೂಲಕ ಬಹುಮುಖಿ ಅಧ್ಯಯನಗಳಿಗೆ ಪೀಠವು ತನ್ನನ್ನು ತೆರೆದುಕೊಳ್ಳುವಂತೆ ಮಾಡಿದ್ದಾರೆ. ವಿಶ್ವವಿದ್ಯಾಲಯದ ಅಧ್ಯಯನಾಂಗದ ನಿರ್ದೇಶಕರಾಗಿ ಪಿಎಚ್.ಡಿ. ಸಂಶೋಧನ ವಿದ್ಯಾರ್ಥಿಗಳಿಗಾಗಿ ಅನೇಕ ಕಮ್ಮಟಗಳನ್ನು ನಿರಂತರವಾಗಿ ಸಂಘಟಿಸುತ್ತ ಬಂದಿರುವರು. ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಘಟಕದ ಸಂಯೋಜನಾಧಿಕಾರಿಗಳಾಗಿ ಮತ್ತು ೨೦೧೯ರಿಂದ ವಿಶ್ವವಿದ್ಯಾಲಯದ ಯೋಗ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಅನೇಕ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದ್ದಾರೆ.

ಡಾ. ಎಫ್.ಟಿ.ಹಳ್ಳಿಕೇರಿ ಅವರು ತಾವು ಕಾರ್ಯನಿರ್ವಹಿಸುವ ಹಸ್ತಪ್ರತಿಶಾಸ್ತ್ರ ವಿಭಾಗ, ಹತ್ತು ವರ್ಷಗಳನ್ನು ಪೂರೈಸಿದಾಗ ದಶಮಾನೋತ್ಸವ ಕಾರ್ಯಕ್ರಮವನ್ನು ಆಯೋಜಿಸಿ ಅದರ ನೆನಪಿಗಾಗಿ ನೆನಪಿನ ಸಂಪುಟ, ದಕ್ಷಿಣ ಭಾರತದ ಗ್ರಂಥಸಂಪಾದನೆ ಕುರಿತಾಗಿ ರಾಷ್ಟ್ರೀಯ ವಿಚಾರ ಸಂಕಿರಣ, ಹತ್ತು ಜನ ಹಸ್ತಪ್ರತಿ ಶಾಸ್ತ್ರಜ್ಞರ ಭಾವಚಿತ್ರ ಅನಾವರಣ, ಏಕಕಾಲಕ್ಕೆ ಹತ್ತು ಪುಸ್ತಕಗಳ ಪ್ರಕಟಣೆ, ಹತ್ತು ಜನ ವಿದ್ವಾಂಸರ ಸನ್ಮಾನ ಹೀಗೆ ಅನೇಕ ಕಾರ್ಯಗಳನ್ನು ಅರ್ಥಪೂರ್ಣವಾಗಿ ಮಾಡಿದ್ದಾರೆ. ವಿಭಾಗದಲ್ಲಿ ಡಿ.ಎಲ್.ನರಸಿಂಹಾಚಾರ್ಯ ಅವರ ಶತಮಾನೋತ್ಸವದ ನೆನಪಿಗಾಗಿ ದತ್ತಿನಿಧಿ ಸ್ಥಾಪಿಸಿ, ವಿಚಾರ ಸಂಕಿರಣ ಮತ್ತು ನೆನಪಿನ ಸಂಪುಟವನ್ನು ಪ್ರಕಟಿಸಿದ್ದಾರೆ. ಬಳ್ಳಾರಿ, ಕೊಪ್ಪಳ, ರಾಯಚೂರು, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ಹಸ್ತಪ್ರತಿ ಸರ್ವೇಕ್ಷಣೆ ಕೈಗೊಂಡು ಸಂಗ್ರಹ, ಹಸ್ತಪ್ರತಿ ಸೂಚಿರಚನೆ, ಪರಿಷ್ಕರಣೆ, ಮತ್ತು ಅಧ್ಯಯನ ಕೈಗೊಂಡಿದ್ದಾರೆ.

ಹಾಲುಮತ ಅಧ್ಯಯನ ಪೀಠದ ಸ್ಥಾಪಕ ಸಂಚಾಲಕರಾಗಿ ಅದಕ್ಕಾಗಿ ಅನುದಾನ ಕ್ರೋಢಿಕರಣ, ಹಾಲುಮತ ಭವನ ಕಟ್ಟಡ ನಿರ್ಮಾಣ, ಹಾಲುಮತ ಭಂಡಾರ ವಸ್ತುಸಂಗ್ರಹಾಲಯ ಹಾಗೂ ಹಾಲುಮತ ಮೇಲುದೀಪ ಗ್ರಂಥಾಲಯ ಸ್ಥಾಪನೆ, ಹಾಲುಮತ ಸಂಸ್ಕೃತಿ ಸಮ್ಮೇಳನ, ವಿಚಾರ ಸಂಕಿರಣ, ಪುಸ್ತಕಗಳ ಪ್ರಕಟಣೆ, ಮೊದಲಾದ ದಾಖಲಾರ್ಹ ಕಾರ್ಯಗಳನ್ನು ಮಾಡಿದ್ದಾರೆ. ಹಾಲುಮತ ಪೀಠದಿಂದ ಹತ್ತು ಪುಸ್ತಕಗಳ ಪ್ರಕಟಣೆ, 'ಹಾಲುತೆನೆ' ಎಂಬ ದಶಮಾನೋತ್ಸವ ನೆನಪಿನ ಸಂಪುಟ ಪ್ರಕಟಣೆ, ಛಾಯಾಚಿತ್ರ ಪ್ರದರ್ಶನ, ಕುರುಬರ ಕುಲವೃತ್ತಿಗಳು: ಪರಂಪರೆ ಮತ್ತು ಆಧುನಿಕತೆ ಕುರಿತಾದ ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಕೈಗೊಂಡಿದ್ದಾರೆ.

ಹರಿದ್ವಾರದ ಪತಂಜಲಿ ಯೋಗ ಪೀಠದ ಆಜೀವ ಸದಸ್ಯರಾಗಿರುವ ಡಾ. ಎಫ್.ಟಿ.ಹಳ್ಳಿಕೇರಿ ಅವರು ಕಳೆದ ಹದಿಮೂರು ವರ್ಷಗಳಿಂದ ಯೋಗ-ವ್ಯಾಯಾಮ-ಪ್ರಾಣಾಯಾಮ-ಧ್ಯಾನ ಕುರಿತು ಹರಿದ್ವಾರದಲ್ಲಿ ವಿಶೇಷ ತರಬೇತಿಯನ್ನು ಪಡೆದು ಯೋಗ ಸಾಧಕ-ಶಿಕ್ಷಕರಾಗಿ ಸಾಮಾಜಿಕ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತಿದ್ದಾರೆ. ಸಧ್ಯದಲ್ಲಿ ವಿಜಯನಗರ ಜಿಲ್ಲಾ ಪತಂಜಲಿ ಯೋಗ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ

ಯೋಗಜ್ಞಾನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ, 'ಯುವಜನಾಂಗಕ್ಕೆ ದೊರೆಯಲಿ ಎಂಬ ಸದಿಚ್ಛೆಯಿಂದ ವಿಶ್ವವಿದ್ಯಾಲಯದ ಯೋಗ ಅಧ್ಯಯನ ವಿಭಾಗದ ಸ್ಥಾಪಕ ನಿರ್ದೇಶಕರಾಗಿ, ಯೋಗ ಸರ್ಟಿಫಿಕೇಟ್, ಡಿಪ್ಲೋಮಾ ಹಾಗೂ ಎಂ.ಎಸ್ಸಿ. ಯೋಗ ವಿಜ್ಞಾನ ಕೋರ್ಸಗಳು ವಿಶ್ವವಿದ್ಯಾಲಯಗಳಲ್ಲಿ ಆರಂಭವಾಗುವಂತೆ ಮಾಡಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ.

ಡಾ. ಎಫ್.ಟಿ.ಹಳ್ಳಿಕೇರಿ ಅವರ ಸ್ವಭಾವ ನಿಂತ ನೀರಿನಂತಹದ್ದಲ್ಲ. ಸದಾಕಾಲ ಪ್ರವಹಿಸುವ ನೀರಿನಂತೆ ಚಲನಶೀಲ ಗುಣದವರು ಅವರು. ಇಂಥ ಗುಣಸ್ವಭಾವದ ಅವರ ಕಾರ್ಯಗಳನ್ನು, ಸಾಧನೆಗಳನ್ನು ಗಮನಿಸಿ ಅನೇಕ ಪ್ರಶಸ್ತಿ, ಪುರಸ್ಕಾರಗಳು ಅವರಿಗೆ ದೊರೆತಿವೆ. ಅವುಗಳಲ್ಲಿ ಮುಖ್ಯವಾಗಿ ಕಂಠಪತ್ರ ಕೃತಿಗೆ ಅನಂತರಂಗ ಸಂಶೋಧನ ಪ್ರಶಸ್ತಿ(೨೦೦೪), ಕಂಠಪತ್ರ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅತ್ಯುತ್ತಮ ಸಂಶೋಧನ ಗ್ರಂಥ ಬಹುಮಾನ ಪ್ರಶಸ್ತಿ(೨೦೦೬), ಕಂಠಪತ್ರ-೨ ಕೃತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪುಸ್ತಕ ಬಹುಮಾನ ಪ್ರಶಸ್ತಿ(೨೦೦೬), ಸಮಗ್ರ ಸಾಹಿತ್ಯವನ್ನು ಪರಿಗಣಿಸಿ ಅಡ್ನೂರಿನ ಬೇಂದ್ರೆ ಪ್ರತಿಷ್ಠಾನದ ಪ್ರಶಸ್ತಿ(೨೦೦೬), ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಜಯಲಕ್ಷ್ಮಮ್ಮ ಬಿ.ಎಸ್.ಸಣ್ಣಯ್ಯ ದತ್ತಿನಿಧಿ ಪ್ರಶಸ್ತಿ(೨೦೦೯), ಹಾಲುಮತ ಸಂಸ್ಕೃತಿ-೧ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅತ್ಯುತ್ತಮ ಸಂಶೋಧನ ಗ್ರಂಥ ಬಹುಮಾನ ಪ್ರಶಸ್ತಿ(೨೦೧೧), ಮಲ್ಲಿಕಾರ್ಜುನ ಕವಿಯ ಹಾಲಸಿದ್ಧೇಶ್ವರ ಸಾಂಗತ್ಯ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಜಯಲಕ್ಷ್ಮಮ್ಮ ಬಿ.ಎಸ್.ಸಣ್ಣಯ್ಯ ದತ್ತಿನಿಧಿ ಪ್ರಶಸ್ತಿ(೨೦೧೬), ಬೆಂಗಳೂರಿನ ಸುವರ್ಣಮುಖಿ ಸಂಸ್ಕೃತಿ ಧಾಮದ ಸುವರ್ಣಶ್ರೀ ಪ್ರಶಸ್ತಿ(೨೦೧೮), ಮಲ್ಲಣ್ಣಕವಿಯ ಕೋಕಶಾಸ್ತ್ರ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅತ್ಯುತ್ತಮ ಗ್ರಂಥ ಸಂಪಾದನಾ ಬಹುಮಾನ ಪ್ರಶಸ್ತಿ(೨೦೧೯), ಅಣ್ಣಿಗೇರಿ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಶರಣಶ್ರೀ ಪ್ರಶಸ್ತಿ(೨೦೧೯), ಇವೆಲ್ಲಕ್ಕೂ ಮುಕುಟಪ್ರಾಯವೆಂಬಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ೨೦೨೦ರಲ್ಲಿ ಸಾಹಿತ್ಯಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಒಟ್ಟಿನಲ್ಲಿ ಡಾ. ಎಫ್.ಟಿ.ಹಳ್ಳಿಕೇರಿ ಅವರದು ಬಹುಮುಖ ವ್ಯಕ್ತಿತ್ವ. ಕೇವಲ ವೇತನಕ್ಕಾಗಿ ವೃತ್ತಿಯನ್ನು ಎಂದಿಗೂ ಮಾಡದ ಅವರು ಅದೊಂದು ಸತ್ಯಶುದ್ಧ ಕಾಯಕವೆಂಬಂತೆ ಅರ್ಪಣಾಭಾವದಿಂದ ಮಾಡುತ್ತಿರುವ ಆದರ್ಶ ಪ್ರಾಧ್ಯಾಪಕರು. ಇಂಥ ವಿರಳ ವ್ಯಕ್ತಿತ್ವದ ಅವರಿಂದ ಇನ್ನಷ್ಟು, ಮತ್ತಷ್ಟು ಕಾರ್ಯಗಳು ಕನ್ನಡದ ಅಸ್ಮಿತೆಯನ್ನು ಹೆಚ್ಚಿಸಲೊಸುಗ ನಿರಂತರವಾಗಿ ನಡೆಯಲಿ ಎಂದು ಅವರ ವಿದ್ಯಾರ್ಥಿಯಾಗಿ ಶುಭಹಾರೈಸುತ್ತೇನೆ.

❑❑

ಕೆ. ರವೀಂದ್ರನಾಥ

ಜೆ. ಕುಮಾರ

ಕಲ್ಯಾಣ ಕರ್ನಾಟಕ ಭಾಗದ ಪ್ರಮುಖ ಸಂಶೋಧಕ-ಪ್ರಾಧ್ಯಾಪಕರಲ್ಲಿ ಗುರುಗಳಾದ ಡಾ. ಕೆ.ರವೀಂದ್ರನಾಥ ಅವರು ಒಬ್ಬರು. ಸಂಶೋಧನೆಯನ್ನು ತಮ್ಮ ಬದುಕಿನ ಬಹುಮುಖ್ಯ ಭಾಗವನ್ನಾಗಿಸಿಕೊಂಡು ಶ್ರದ್ಧೆ, ನಿಷ್ಠೆಗಳಿಂದ ಸಂಶೋಧನಾ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ನಿರಂತರ ಅಧ್ಯಯನ, ಕಠಿಣ ಪರಿಶ್ರಮ ಹಾಗೂ ಕ್ರಿಯಾಶೀಲತೆಯ ಫಲವಾಗಿ ಹಳಗನ್ನಡ-ನಡುಗನ್ನಡ ಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಶಾಸನಶಾಸ್ತ್ರ, ಗ್ರಂಥಸಂಪಾದನೆ, ಸಂಸ್ಕೃತಿ ಅಧ್ಯಯನಗಳು ಹಾಗೂ ವಚನಸಾಹಿತ್ಯ ಹೀಗೆ ಹತ್ತು ಹಲವು ಕ್ಷೇತ್ರದಲ್ಲಿನ ಇವರ ಕೊಡುಗೆ ಅಪಾರವಾಗಿದೆ. ಗಣ್ಯಪ್ರಾಧ್ಯಾಪಕರಾಗಿ, ವಿದ್ಯಾರ್ಥಿಗಳ ಪಾಲಿಗೆ ಪ್ರೀತಿಯ ಮೇಷ್ಟ್ರಾಗಿ ಹಸ್ತಪ್ರತಿಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅದರಲ್ಲೂ ಕನ್ನಡ ವಿಶ್ವವಿದ್ಯಾಲಯಕ್ಕೆ ಇವರು ಸಲ್ಲಿಸಿರುವ ಸೇವೆ ಎಂದೆಂದಿಗೂ ಅವಿಸ್ಮರಣೀಯ.

ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಅಂಬಳಿ ಒಂದು ಚಿಕ್ಕಗ್ರಾಮ. ಆ ಗ್ರಾಮದ ಶ್ರೀ ಕಾಡಪ್ಪನವರ ಮೂಗಪ್ಪ ಹಾಗೂ ಶ್ರೀಮತಿ ಶಿವಮ್ಮ ದಂಪತಿಗಳಿಗೆ ೨೨.೦೭.೧೯೬೨ರಂದು ಜನಿಸಿದರು. ಪ್ರಾರಂಭದ ಪ್ರಾಥಮಿಕ ವಿದ್ಯಾಭ್ಯಾಸವು ಸ್ವ-ಗ್ರಾಮ ಅಂಬಳಿಯಲ್ಲಿ, ಹೈಸ್ಕೂಲ್ ಶಿಕ್ಷಣವನ್ನು ಕೊಟ್ಟೂರಿನಲ್ಲಿ ಪೂರೈಸಿದರು. ಮುಂದೆ ಪದವಿ ಶಿಕ್ಷಣವನ್ನು ೧೯೮೪-೮೮ರಲ್ಲಿ ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆಯಲ್ಲಿ ಪ್ರೊ. ಎಂ.ಮರಿಯಪ್ಪ ಪ್ರಶಸ್ತಿಯೊಂದಿಗೆ ಪ್ರಥಮ ಶ್ರೇಣಿಯಲ್ಲಿ ಪಡೆದರು. ಎಂ.ಎ. ಕನ್ನಡ ಸ್ನಾತಕೋತ್ತರ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಡಾ. ಪಾಂಡುರಂಗರಾವ್ ದೇಶಮುಖ, ಡಾ. ಅನುಪಮ ನಿರಂಜನ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ ಮೂರು ಚಿನ್ನದ ಪದಕದೊಂದಿಗೆ ೧೯೮೮-೯೦ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಮುಗಿಸಿದರು. ೧೯೯೬ರಲ್ಲಿ ಅದೇ ವಿಶ್ವವಿದ್ಯಾಲಯದಿಂದ ಪ್ರಾಧ್ಯಾಪಕರಾದ ಡಾ. ಮೃತ್ಯುಂಜಯ ಹೊರಕೇರಿ ಅವರ ಮಾರ್ಗದರ್ಶನದಲ್ಲಿ "ಕನ್ನಡ ಸಾಹಿತ್ಯಕ್ಕೆ ಮಠ-ಮಾನ್ಯಗಳ ಸೇವೆ" ಎಂಬ ವಿಷಯದ ಮೇಲೆ ಪಿಎಚ್.ಡಿ ಪದವಿಯನ್ನು ಪಡೆದರು. ಮುಂದೆ ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ರಾಯಚೂರು ಮತ್ತು ಸಂಡೂರಿನಲ್ಲಿ ಉಪನ್ಯಾಸಕರಾಗಿ ಕೆಲವು ವರ್ಷಗಳ ಕಾಲ ತಮ್ಮ ಸೇವೆಯನ್ನು ಸಲ್ಲಿಸಿದರು. ನಂತರ ೧೯೯೭ರಿಂದ ಕನ್ನಡ ವಿಶ್ವವಿದ್ಯಾಲಯದ, ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಪೂರ್ಣಕಾಲಿಕ ಪ್ರಾಧ್ಯಾಪಕರಾಗಿ ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಿರುವರು. ಹಿರಿಯ ಪ್ರಾಧ್ಯಾಪಕರಾದ ಡಾ. ಎಂ.ಎಂ.ಕಲಬುರ್ಗಿ, ಡಾ. ಎಂ.ಜಿ.ಬಿರಾದಾರ್, ಡಾ. ಎಂ.ಎಸ್.ಲಠ್ಠೆ, ಡಾ. ಸಂಗಮೇಶ ಸವದತ್ತಿಮಠ, ಡಾ. ಬಿ.ವಿ.ಶಿರೂರ, ಡಾ. ವೀರಣ್ಣ

ರಾಜೂರ, ಡಾ. ಬಿ.ಎ.ವಿವೇಕ ರೈ ಅವರಂತಹ ಸಂಶೋಧಕರ ಮಾರ್ಗದರ್ಶನದಲ್ಲಿ ಬೆಳೆದ ಇವರು ಸಂಶೋಧನೆ, ಗ್ರಂಥಸಂಪಾದನೆ, ಸಂಪಾದನೆ, ವಿಮರ್ಶೆ ಹಾಗೂ ಜೀವನ ಚರಿತ್ರೆಯಂತಹ ಹಲವು ಕ್ಷೇತ್ರಗಳಲ್ಲಿ ಇವರ ಸಾಹಿತ್ಯ ಕೃಷಿ ಸಾಗಿದೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆಗೆ ಸೇರಿದ ಮೇಲೆ ವಿಶ್ವವಿದ್ಯಾಲಯವು ಕೆಲವು ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸಲು ಅವಕಾಶ ಮಾಡಿಕೊಟ್ಟಿತ್ತು. ವಿದ್ಯಾರ್ಥಿಗಳಿಗೆ ಪಾಠಪ್ರವಚನ ಮಾಡುವುದರೊಂದಿಗೆ ಉತ್ತಮ ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ ಹೆಸರುಗಳಿಸಿದಂತೆ ಆಡಳಿತರಂಗದಲ್ಲೂ ತಮ್ಮ ದಕ್ಷತೆಯಿಂದ ಕಾರ್ಯ ಮಾಡಿದರು. ಡಾ. ಶಂಬಾ ಜೋಶಿ ಅಧ್ಯಯನ ಪೀಠ ಹಾಗೂ ಜೈನ ಅಧ್ಯಯನ ಪೀಠಗಳ ಸಂಚಾಲಕರಾಗಿ ಉತ್ತಮ ಕೆಲಸ ಕಾರ್ಯಗಳನ್ನು ಮಾಡಿದರು. ಕೂಡಲಸಂಗಮ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇದ್ರದ ಪ್ರಾರಂಭದ ಮುಖ್ಯಸ್ಥರಾಗಿ, ಅದರ ಅಭಿವೃದ್ಧಿಗೆ ಅಡಿಪಾಯ ಹಾಕಿದರು. ಮುಂದೆ ಶೈಕ್ಷಣಿಕ ಉಪಕುಲಸಚಿವರಾಗಿ, ಅಧ್ಯಯನಾಂಗದ ನಿರ್ದೇಶಕರಾಗಿ ಹಲವು ಹತ್ತು ಉತ್ತಮ ಕೆಲಸಗಳನ್ನು ನಿರ್ವಹಿಸಿದರು. ಲಲಿತ ಕಲಾ ನಿಕಾಯದ ಡೀನರಾಗಿ, ವಿಭಾಗದ ಮುಖ್ಯಸ್ಥರಾಗಿ, ಸಿಂಡಿಕೇಟ್ ಸದಸ್ಯರಾಗಿ ಅದರ ಬೆಳವಣಿಗೆಗೆ ಅಪಾರವಾಗಿ ಶ್ರಮಿಸಿದರು. ವಿಭಾಗದ ಸಹೋದ್ಯೋಗಿಗಳ ಜೊತೆಗೆ ಹಸ್ತಪ್ರತಿಗಳ ಸಂಗ್ರಹಕಾರ್ಯದಲ್ಲಿ ತೊಡಗಿ, ನಾಡಿನಾದ್ಯಂತ ಸಂಚರಿಸಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಭಂಡಾರದ ಬೆಳವಣಿಗೆಯಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದಾರೆ. ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳ ಪರೀಕ್ಷಾ ಮಂಡಳಿ ಹಾಗೂ ಅಧ್ಯಯನ ಮಂಡಳಿಗಳ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಡಾ. ಕೆ.ರವೀಂದ್ರನಾಥ ಅವರದು ವ್ಯಾಪಕವಾದ ಅಧ್ಯಯನ. ಹಳಗನ್ನಡ–ನಡುಗನ್ನಡ, ಶಾಸ್ತ್ರಸಾಹಿತ್ಯ, ಶಾಸನಸಾಹಿತ್ಯ, ಹಸ್ತಪ್ರತಿ, ಗ್ರಂಥಸಂಪಾದನೆ ಮುಂತಾದ ವಿಷಯಗಳಲ್ಲಿ ಪರಿಣಿತಿಯನ್ನು ಹೊಂದಿದವರು. ವಿಶೇಷವಾಗಿ ಇವರದು ಸಂಶೋಧನ ಮನೋಧರ್ಮ. ಮೊದಲಿನಿಂದಲೂ ಸಂಶೋಧನೆಯನ್ನು ಒಂದು ವ್ರತವಾಗಿ ಸ್ವೀಕರಿಸಿದವರು. ಇದರ ಪರಿಣಾಮ 'ಕನ್ನಡ ಸಾಹಿತ್ಯಕ್ಕೆ ಮಠ–ಮಾನ್ಯಗಳ ಸೇವೆ' ಎಂಬ ಅತ್ಯುತ್ತಮ ಆಕರಗ್ರಂಥವನ್ನು ವಿದ್ವತ್‌ವಲಯಕ್ಕೆ ನೀಡಿದ್ದಾರೆ. ಅದೇರೀತಿ 'ಕನ್ನಡ ದಾಖಲು ಸಾಹಿತ್ಯ' ಇದು ಕನ್ನಡ ಸಂಶೋಧನೆಗೆ ಡಾ. ಕೆ.ರವೀಂದ್ರನಾಥ ಅವರು ನೀಡಿದ ಅಪರೂಪದ ಕೃತಿ. ವಿದ್ವಾಂಸರು ಪರಿಗಣಿಸದೇ ಇದ್ದ ಶಾಸನ, ಕಡತ, ನಿರೂಪ, ಭಿನ್ನವತ್ತಳೆ, ನಾಮೆ, ಸ್ಥಳಮಹಾತ್ಮೆ, ಬಖೈರು, ಕೈಪಿಯತ್ತು, ವಂಶಾವಳಿಗಳಂಥ ಅಪರೂಪದ ಆಕರ ಸಾಮಗ್ರಿಗಳನ್ನು ಮೊದಲಬಾರಿಗೆ ಶಾಸ್ತ್ರೀಯವಾಗಿ ಪರಿಚಯಿಸಿದ ಕೃತಿ. ಕನ್ನಡ ಟೀಕಾಸಾಹಿತ್ಯ ಎಂಬುದು ಪ್ರಾಚೀನ ಕಾವ್ಯಗಳಿಗೆ ಬರೆಯುತ್ತಿದ್ದ ವ್ಯಾಖ್ಯಾನದ ವಿವಿಧ ಮುಖಗಳನ್ನು ಸಂಶೋಧಿಸಿದ ಗ್ರಂಥ. ಹಸ್ತಪ್ರತಿಗಳನ್ನು ಇದುವರೆಗೆ ಶಾಸ್ತ್ರ, ಕಾವ್ಯದ ಭಾಗವಾಗಿ ನೋಡಿದ್ದಾರೆ. ಆದರೆ ಡಾ. ಕೆ.ರವೀಂದ್ರನಾಥ ಅವರು ಹಸ್ತಪ್ರತಿಗಳ ಮೂಲಕ ಕನ್ನಡಿಗರ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಕೌಟುಂಬಿಕ ಬದುಕನ್ನು 'ಹಸ್ತಪ್ರತಿಗಳು: ಕನ್ನಡಿಗರ ಬದುಕು' ಕೃತಿಯಲ್ಲಿ ನಿರೂಪಿಸಿದ್ದಾರೆ. ಮಾನ್ಯ, ಅಗ್ನಿದಿವ್ಯ, ಚರಿತ್ರೆ–ಚಾರಿತ್ರ್ಯ, ವ್ಯಕ್ತಿ–ಅಭಿವ್ಯಕ್ತಿ, ಆಕರಗಳು: ಶೋಧ–ಪರಿಶೋಧ ಕೃತಿಗಳು ಇವರ ಸಂಶೋಧನಾ ಲೇಖನಗಳ ಸಂಕಲನಗಳು. ಆಕರಗಳ ಶೋಧ, ಅವುಗಳ ವಿಶ್ಲೇಷಣೆಗಳಿಂದ ಇವರ ಸಂಶೋಧನ ಕೃತಿಗಳು ವಿದ್ವಾಂಸರ ಗೌರವಕ್ಕೆ ಪಾತ್ರವಾಗಿವೆ.

ಡಾ. ಕೆ.ರವೀಂದ್ರನಾಥ ಅವರು ಗ್ರಂಥಸಂಪಾದನ ಕ್ಷೇತ್ರದಲ್ಲಿಯೂ ಅವರ ಕೊಡುಗೆ ಗಮನಾರ್ಹವಾಗಿದೆ. ಹಸ್ತಪ್ರತಿಗಳ ಸಂಗ್ರಹ, ದುರಸ್ತಿ ಹಾಗೂ ಪ್ರಕಟಣೆಯಲ್ಲಿ ತಮ್ಮನ್ನು ಕಳೆದ ೨೫ ವರ್ಷಗಳಿಂದ ತೊಡಗಿಸಿಕೊಂಡಿದ್ದಾರೆ. ಇದರ ಪರಿಣಾಮವಾಗಿ ಕನ್ನಡ ಸಾಹಿತ್ಯಚರಿತ್ರೆಗೆ ಅಪರೂಪದ ಕೃತಿಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ಗ್ರಂಥಸಂಪಾದನೆ

ಮಾಡುವುದು ಸರಳವಲ್ಲ. ಸ್ವತಂತ್ರ ಕೃತಿರಚನೆಗಿಂತ ಕಷ್ಟಕರವಾದದ್ದು. ಪ್ರತಿಭೆ, ವಿದ್ವತ್ತು, ಆಳವಾದ ವ್ಯಾಸಂಗ, ಪರಿಶ್ರಮ, ತಾಳ್ಮೆಯನ್ನು ಬಯಸುವ ಈ ಕ್ಷೇತ್ರಕ್ಕೆ ಕರ್ನಾಟಕದಲ್ಲಿ ಒಂದು ಪ್ರಾಚೀನ ಪರಂಪರೆಯಿದೆ. ಆ ಪರಂಪರೆಯ ಮುಂದುವರಿಕೆಯಾಗಿ ಪ್ರೊ. ಕೆ.ರವೀಂದ್ರನಾಥ ಅವರು ಕಂಡುಬರುತ್ತಾರೆ. ಏಕೈಕ ಹಸ್ತಪ್ರತಿ, ಸಂರಕ್ಷಿತಪ್ರತಿ, ಹಲವು ಪ್ರತಿರೂಪದ ಕೃತಿಗಳನ್ನು ಬೆಳಕಿಗೆ ತಂದಿರುವ ಇವರು ಆ ಎಲ್ಲ ಕೃತಿಗಳಿಗೆ ಸೂಕ್ತವಾದ ಮತ್ತು ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಇವರು ಸಂಪಾದಿತ ಕೆಲವು ಕೃತಿಗಳನ್ನು ಗಮನಿಸುವುದಾದರೆ; ಬಸವಯುಗದ ವಚನೇತರ ಸಾಹಿತ್ಯ ಎಂಬ ಕೃತಿ ೧೨ನೆಯ ಶತಮಾನದ ವಚನಕಾರರ ವಚನಗಳನ್ನು ಹೊರತುಪಡಿಸಿ ಕಾಲಜ್ಞಾನ, ಮಂತ್ರಗೋಪ್ಯ, ಕರಣಹಸುಗೆ, ಮಿಶ್ರಾರ್ಪಣ, ಸ್ವರವಚನ, ಸೃಷ್ಟಿಯವಚನ ಇತ್ಯಾದಿ ವಚನೇತರ ಪ್ರಕಾರಗಳನ್ನು ಒಂದುಕಡೆ ಸಂಪಾದಿಸಿಕೊಟ್ಟ ಕೃತಿಯಾಗಿದೆ. ಓರಂಗಲ್ಲಿನ ಕಾಕತೀಯರ ಪರಿಸರದಲ್ಲಿದ್ದ 'ಗುಂಡಬ್ರಹ್ಮಯ್ಯ'ರೆಂಬ ಶರಣರನ್ನು ಕುರಿತು ಕನ್ನಡದಲ್ಲಿ ಆರು ಕೃತಿಗಳು ರಚನೆಯಾಗಿವೆ. ಅವುಗಳಲ್ಲಿ ಕೆಲವು ಹಸ್ತಪ್ರತಿ ಮೂಲದಲ್ಲಿಯೇ ಉಳಿದಿದ್ದವು. ಆ ಎಲ್ಲಾ ಕೃತಿಗಳನ್ನು ಸಂಗ್ರಹಿಸಿ ಸಂಪಾದಿಸಿದ ಕೃತಿ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'. ಅದೇರೀತಿ ನುಂಕೆಮಲೆ ಸಿದ್ದೇಶ್ವರ ಪುರಾಣ, ಅಮರೇಶ್ವರ ಪುರಾಣ, ಪರಶುರಾಮ ರಾಮಾಯಣ, ಕಿತ್ತೂರು ರುದ್ರಮ್ಮನ ಕಥೆ, ವರರಮ್ಯ ರತ್ನಾಕರ, ಉದ್ಧರಣೆ ಸಾಹಿತ್ಯ, ಕನ್ನಡ ಜೈನ ಹಾಡುಗಳು, ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂಪುಟ-೧ ಮತ್ತು ೨, ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆ, ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಮುಂತಾದ ಕೃತಿಗಳು ಇವರ ಗ್ರಂಥಸಂಪಾದನೆಯ ಕೊಡುಗೆಗಳಾಗಿವೆ.

ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ.ಎಂ.ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣಾ ಯೋಜನೆಯಲ್ಲಿ ಡಾ. ಕಲಬುರ್ಗಿಯವರ ೮ ಮಾರ್ಗ ಸಂಪುಟಗಳ ಲೇಖನಗಳನ್ನು ಶಾಸನ, ಶಾಸ್ತ್ರ, ವಚನ, ಕಾವ್ಯ ಮತ್ತು ಭಾಷಣಗಳು-ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿಗಳು ಹಾಗೂ ಸಂದರ್ಶನ ಸೇರಿದಂತೆ ಒಟ್ಟು ೫ ಸಂಪುಟಗಳನ್ನು ಶಾಸ್ತ್ರೀಯವಾಗಿ ವರ್ಗೀಕರಿಸಿ, ಮೌಲಿಕ ಪ್ರಸ್ತಾವನೆಯೊಂದಿಗೆ ಸಂಪಾದಿಸಿ ಕೊಟ್ಟಿರುವುದು ಇವರ ಆಧುನಿಕ ಸಾಹಿತ್ಯ ಗ್ರಂಥಸಂಪಾದನ ಕ್ಷೇತ್ರದ ಬೆಲೆಯುಳ್ಳ ಕೊಡುಗೆಯಾಗಿದೆ. ಅದೇರೀತಿ ಜನಪ್ರಿಯ ವಚನ ಸಂಪುಟಗಳ ೪ನೇ ಆವೃತ್ತಿಯನ್ನು ಪ್ರಕಟಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಯೋಜನೆಯಲ್ಲಿ ಡಾ. ಕೆ.ರವೀಂದ್ರನಾಥ ಅವರು ಸಂಕೀರ್ಣ ವಚನ ಸಂಪುಟ-೧ ಮತ್ತು ೨ ನ್ನು ಸಂಪಾದಿಸುವುದರ ಮೂಲಕ ವಚನ ಸಾಹಿತ್ಯ ಪ್ರಕಟಣೆ ಇತಿಹಾಸದಲ್ಲಿ ವಚನ ಪಿತಾಮಹ ಫ.ಗು.ಹಳಕಟ್ಟಿ, ಡಾ. ಆರ್.ಸಿ.ಹಿರೇಮಠ, ಡಾ. ಬಿ.ವ್ಹಿ.ಮಲ್ಲಾಪುರ, ಡಾ. ಎಲ್. ಬಸವರಾಜು, ಡಾ. ಎಂ.ಎಂ.ಕಲಬುರ್ಗಿ, ಡಾ. ವಿದ್ಯಾಂಶಕರ, ಡಾ. ವೀರಣ್ಣ ರಾಜೂರ, ಡಾ. ಎಸ್.ಶಿವಣ್ಣ, ಡಾ. ಬಿ.ಆರ್.ಹಿರೇಮಠ, ಡಾ. ಬಿ.ವ್ಹಿ.ಶಿರೂರ, ಡಾ. ವೈ.ಸಿ.ಭಾನುಮತಿ ಮುಂತಾದವರ ಪರಂಪರೆಯಲ್ಲಿ ಗುರುತಿಸಿ ಕೊಂಡಿದ್ದಾರೆ.

ಸುಮಾರು ಹದಿನಾಲ್ಕಕ್ಕಿಂತ ಹೆಚ್ಚು ಕೃತಿಗಳ ಸಂಪಾದನೆಯನ್ನು ಮಾಡಿರುವರು. ವೀರಶೈವ, ದಶಕದ ಕನ್ನಡ ಸಾಹಿತ್ಯ, ಹಸ್ತಪ್ರತಿ ವ್ಯಾಸಂಗ-೨, ಬಳ್ಳಾರಿ ಜಿಲ್ಲಾದರ್ಶನ, ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ವಿವೇಚನೆ, ಕವಳಿಗೆ, ಬಿ.ಎಂ.ಹೊರಕೇರಿ ಸಮಗ್ರ ಸಾಹಿತ್ಯ, ಅಧ್ಯಯನದ ವಿಧಿವಿಧಾನಗಳು, ಹಸ್ತಪ್ರತಿ ಅಧ್ಯಯನ, ಹಸ್ತಪ್ರತಿ ವ್ಯಾಸಂಗ-೧೧,೧೨,೧೮,೧೯, ಬಸವಣ್ಣನವರ ವಚನಗಳು ಪ್ರಾಚೀನ ಹಾಗೂ ಆಧುನಿಕ ಟೀಕುಗಳು ಇವರ ಮಹತ್ವದ ಸಂಪಾದನ ಕೃತಿಗಳಾಗಿವೆ. ಅಭಿನಂದನ, ಸಂಸ್ಮರಣ. ಜೀವನ ಚರಿತ್ರೆ ಹಾಗೂ ವಿಮರ್ಶೆ ಕೃತಿಗಳ ರಚನೆಯಲ್ಲೂ ಇವರ ಸಾಹಿತ್ಯ ಸೇವೆ ಫಸರಿಸಿದೆ. ಸುಮಾರು ಆರು ಅಭಿನಂದನ ಗ್ರಂಥಗಳನ್ನು, ಮೂರು ಜೀವನ ಚರಿತ್ರೆಗಳನ್ನು ರಚಿಸಿರುವರು. ಸಿರಿಸಂಪದ(ಡಾ. ಬಿ.ವಿ.ಶಿರೂರ ಅಭಿನಂದನಗ್ರಂಥ), ಕಲ್ಲರಳಿ(ಅರಳಿಹಳ್ಳಿ ಶರಣ

ಬಸವಾರ್ಯರ ಸಂಸ್ಮರಣ ಗ್ರಂಥ), ಅರಿವಿನೋಜ(ಡಾ. ಎಸ್.ಕೆ.ಕೊಪ್ಪ ಅಭಿನಂದನ ಗ್ರಂಥ), ಸಿದ್ಧರಾಮ ಸಂಪದ ಪೂಜ್ಯ ಗಂಗಾಧರ ಸ್ವಾಮಿಗಳ ಪಟ್ಟಾಧಿಕಾರ ಸಂಸ್ಮರಣಗ್ರಂಥ, ಅಭಿಜ್ಞಾನ(ಡಾ. ಸಿಂದಗಿ ರಾಜಶೇಖರ ಅಭಿನಂದನಾ ಗ್ರಂಥ), ಗುಣಸಂಪದ(ಡಾ. ಧನವಂತ ಹಾಜಗೋಳ ಅಭಿನಂದನಾಗ್ರಂಥ), ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಹಡಪದ ಅಪ್ಪಣ್ಣ, ಕುರೇಕುಪ್ಪೆ ಶ್ರೀ ಸಿದ್ಧಯ್ಯ ತಾತನವರು, ಬಿ.ಎಂ.ಹೊರಕೇರಿ ಅವರ ಜೀವನಚರಿತ್ರೆ ಕುರಿತಾಗಿ ಕೃತಿಗಳನ್ನು ಹೊರತಂದರು. ವ್ಯಕ್ತಿ ಮತ್ತು ಅಭಿವ್ಯಕ್ತಿ ಎಂಬ ಮಹತ್ವದ ವಿಮರ್ಶಾಧಾರಿತ ಕೃತಿಯನ್ನು ರಚಿಸಿದ್ದು ಇವರ ಆಳವಾದ ಅಧ್ಯಯನದ ವಿಸ್ತಾರವನ್ನು ಸೂಚಿಸುತ್ತದೆ.

ಸತತಾಭ್ಯಾಸ, ಅಧ್ಯಯನಶೀಲತೆ ಹಾಗೂ ಸಂಶೋಧನಾ ಪ್ರವೃತ್ತಿಯನ್ನು ಮೈಗೂಡಿಸಿಕೊಂಡವರನ್ನು ಈಗಿನ ಕಾಲದಲ್ಲಿ ಕಾಣುವುದು ಅಪರೂಪ. ಅಂಥ ಅಪರೂಪ ವ್ಯಕ್ತಿಗಳಲ್ಲಿ ಡಾ. ಕೆ.ರವೀಂದ್ರನಾಥರವರು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಂಶೋಧನೆಯ ಅಡಿಪಾಯ ಹಾಕಿದವರಲ್ಲಿ ಇವರೂ ಮುಖ್ಯರು. ಪಿಎಚ್.ಡಿ ಮತ್ತು ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಮಾಡಿದ ಕಾರ್ಯವು ಗಮನಾರ್ಹವಾಗಿದೆ. ಇದುವರೆಗೆ ಇವರ ಮಾರ್ಗದರ್ಶನದಲ್ಲಿ ಸುಮಾರು ೨೦ಜನ ಸಂಶೋಧಕರು ಸಂಶೋಧನಾ ಪ್ರಬಂಧವನ್ನು ಬರೆದು ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಅಲ್ಲದೇ ಐದುಜನ ವಿದ್ಯಾರ್ಥಿಗಳು ಎಂ.ಫಿಲ್ ಪದವಿಯನ್ನು ಪೂರೈಸಿರುವರು. ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ಅಷ್ಟು ಸರಳವಾದ ಕೆಲಸವಲ್ಲ. ಅದು ಪ್ರಾಧ್ಯಾಪಕರ ಯೋಗ್ಯತೆಯನ್ನು ಒರೆಗಲ್ಲಿಗೆ ಹಚ್ಚುತ್ತದೆ. ಭಿನ್ನ ಮಾದರಿಯ, ಭಿನ್ನ ಅಭಿರುಚಿಯ ವಿದ್ಯಾರ್ಥಿಗಳು ಅಧ್ಯಯನಮಾಡಲು ಬರುವರು. ಇವರು ವಿದ್ಯಾರ್ಥಿಗಳ ಸಂಶೋಧನೆಯ ಆಸಕ್ತಿಗೆ ತಕ್ಕಂತೆಕೊಡುವ ವಿಷಯದ ಬಗ್ಗೆ ತಾನು ಮೊದಲು ಕೂಲಂಕುಶವಾಗಿ ಯೋಚಿಸಿ, ನಂತರ ನಾಡಿನ ಹಿರಿಯ ವಿದ್ವಾಂಸರಜೊತೆ ಚರ್ಚಿಸಿ, ವಿಷಯದ ಆಯ್ಕೆಯನ್ನು ಅಂತಿಮಗೊಳಿಸುತ್ತಿದ್ದರು. ವಿಶೇಷವಾಗಿ ಉಪೇಕ್ಷಿತ ವಿಷಯಗಳನ್ನು ಆಯ್ದುಕೊಟ್ಟು ವಿದ್ಯಾರ್ಥಿಗಳಿಗೆ ಪ್ರಬಂಧದ ಶೀರ್ಷಿಕೆ, ಅದರ ವ್ಯಾಪ್ತಿ, ಅದು ಒಳಗೊಳ್ಳುವ ಅಂಶಗಳು, ವರ್ಗೀಕರಣ ಇವುಗಳ ಕುರಿತು ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ವಚನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಐತಿಹ್ಯ, ಸಮುದಾಯ ಅಧ್ಯಯನ, ಟೀಕಿನ ವಚನ, ಜೈನಸಾಹಿತ್ಯ, ಲಿಂಗಾಯತ ಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಶಾಸನ ಹಾಗೂ ಐತಿಹಾಸಿಕ-ಸಾಂಸ್ಕೃತಿಕ ಕೇಂದ್ರಗಳ ಕುರಿತು ಮಾರ್ಗದರ್ಶನ ಮಾಡುವ ಪ್ರಾಧ್ಯಾಪಕರು ವಿರಳ. ಆದರೆ ಅಂಥ ವಿರಳ ಪ್ರಾಧ್ಯಾಪಕರಲ್ಲಿ ಗುರುಗಳಾದ ಡಾ. ಕೆ.ರವೀಂದ್ರನಾಥರವರು ತಾವೂ ದುಡಿದಿದ್ದಾರೆ; ವಿದ್ಯಾರ್ಥಿಗಳನ್ನು ದುಡಿಸಿದ್ದಾರೆ. ವಿದ್ಯಾರ್ಥಿಗಳ ಬಗೆಗೆ ಅವರು ತೋರುವ ಆಸಕ್ತಿ, ನೀಡುವ ಧೈರ್ಯ, ಪ್ರೋತ್ಸಾಹ ಸಹಾಯ ಸಹಕಾರದ ಬಗೆಗೆ ಅವರ ವಿದ್ಯಾರ್ಥಿಯಾದ ನಾನು ಅನುಭವಿಸಿ ಹೇಳಬಲ್ಲೆ. ವಿಷಯದಆಯ್ಕೆ, ಅದರ ಸ್ವರೂಪ, ವಿಷಯ ಸಂಗ್ರಹಣೆ, ಬರೆಯುವ ಹಂತದಲ್ಲಿ ಕಾಡುವ ಸಮಸ್ಯೆ, ಹೀಗೆ ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವವರೆಗೂ ವಿದ್ಯಾರ್ಥಿಗಳ ಪಾಲಿಗೆ ಇವರು ಪ್ರಾತಃಸ್ಮರಣೀಯ ಮಾರ್ಗದರ್ಶಕರು. ಪಾಂಡಿತ್ಯ ಮತ್ತು ಮಾನವೀಯತೆಗಳೆರಡೂ ಮೈಗೂಡಿಸಿಕೊಂಡಿರುವ ಮೇರು ವ್ಯಕ್ತಿತ್ವ ಇವರದು.

ಹೀಗೆ ಸಾಹಿತ್ಯ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಇವರು ಮಾಡಿರುವ ಅನುಪಮ ಸೇವೆಯನ್ನು ಪರಿಗಣಿಸಿ ಸರಕಾರದಿಂದ, ವಿಶ್ವವಿದ್ಯಾಲಯಗಳಿಂದ ಹಾಗೂ ನಾಡಿನ ಅನೇಕ ಮಠಮಾನ್ಯಗಳು ಇವರಿಗೆ ಗೌರವ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿವೆ. ಕನ್ನಡ ಪುಸ್ತಕ ಪ್ರಾಧಿಕಾರವು ಕೊಡಮಾಡುವ 'ಕನ್ನಡ ಪುಸ್ತಕ ಸೊಗಸು' ಪ್ರಶಸ್ತಿಯನ್ನು ಇವರ 'ಮಾನ್ಯ' ಸಂಶೋಧನಾ ಕೃತಿಗೆ ೧೯೯೭ರಲ್ಲಿ ಲಭಿಸಿದೆ. 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಪ್ರಶಸ್ತಿಯು ಇವರ 'ಕನ್ನಡ

ದಾಖಲು ಸಾಹಿತ್ಯ' ಸಂಶೋಧನಾ ಕೃತಿಗೆ ೨೦೦೦ದಲ್ಲಿ ದೊರೆತಿದೆ. 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ' ಇವರ 'ಬಸವಯುಗದ ವಚನೇತರ ಸಾಹಿತ್ಯ' ಅತ್ಯುತ್ತಮ ಸಾಹಿತ್ಯಕೃತಿಗೆ ಲಭಿಸಿದೆ. 'ವಚನ ಸಾಹಿತ್ಯ ಪುರಸ್ಕಾರ' ಕನಕಪುರದಿಂದ ಇವರ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಕೃತಿಗೆ ೨೦೧೧ರಲ್ಲಿ ದೊರೆತಿದೆ. 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಇವರ ಮತ್ತೊಂದು ಕೃತಿಯಾದ 'ಉದ್ಧರಣೆ ಸಾಹಿತ್ಯ' ಸಂಪಾದಿತ ಕೃತಿಗೆ ೨೦೧೨ರಲ್ಲಿ ಬಂದಿದೆ. ಕೊಪ್ಪಳ ಗವಿಸಿದ್ಧೇಶ್ವರ ಶಾಖಾಮಠವಾದ ಹೂವಿನ ಹಡಗಲಿಯಿಂದ 'ಗವಿಶ್ರೀ ಪ್ರಶಸ್ತಿ' ಇವರ ಸಮಗ್ರ ಸಾಹಿತ್ಯಕ್ಕೆ ೨೦೧೪ರಲ್ಲಿ ದೊರೆತಿದೆ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಕೊಡಮಾಡುವ 'ಕರ್ನಾಟಕ ರಾಜ್ಯೋತ್ಸವ' ಪ್ರಶಸ್ತಿಯು ಇವರ 'ಆಕರಗಳ ಶೋಧ-ಪರಿಶೋಧ' ಎಂಬ ಸಂಶೋಧನಾ ಕೃತಿಗೆ ೨೦೧೯ರಲ್ಲಿ ಲಭಿಸಿದೆ. 'ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ'ಯು ವಚನ ಸಾಹಿತ್ಯ ಅಧ್ಯಯನಕ್ಕೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರುನಿಂದ ೨೦೧೯ರಲ್ಲಿ ಪಡೆದಿದ್ದಾರೆ. 'ಉರಿಲಿಂಗ ಪೆದ್ದಿ ಪ್ರಶಸ್ತಿ'ಯನ್ನು ಡಾ. ಎಂ.ಎಂ.ಕಲಬುರ್ಗಿ ಅವರ ಲೇಖನ ಸಂಪುಟಗಳ ಸಂಪಾದನೆಗಾಗಿ ದೊರೆತಿದೆ. ಕರ್ನಾಟಕ ಇತಿಹಾಸ ಅಕಾಡೆಮಿಯ 'ಸಂಶೋಧನಾಶ್ರೀ' ಪ್ರಶಸ್ತಿಯು ಸಮಗ್ರ ಸಂಶೋಧನೆಗಾಗಿ ೨೦೨೦ರಲ್ಲಿ, ಅದೇರೀತಿ ಇವರು ಸಂಪಾದಿಸಿದ 'ಲಿಂಗಣ್ಣಕವಿಯ ವರರಮ್ಯರತ್ನಾಕರ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ೨೦೨೦ರಲ್ಲಿ ದೊರೆತಿದೆ. ಹೀಗೆ ಸಾಹಿತ್ಯದ ಹತ್ತು ಹಲವು ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿರುವ ಇವರು ನಾಡಿನಾದ್ಯಂತ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

❑❑

ಎಸ್.ಎಸ್. ಅಂಗಡಿ

ಶಿವಪ್ಪ

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಎಸ್.ಎಸ್.ಅಂಗಡಿ ಅವರು ಸಂಶೋಧನೆಯನ್ನು ತಮ್ಮ ಬದುಕಿನ ಬಹುಮುಖ್ಯ ಭಾಗವನ್ನಾಗಿಸಿಕೊಂಡು ಶ್ರದ್ಧೆ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಸಂಶೋಧನ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಪ್ರಾಚೀನ ಸಾಹಿತ್ಯ ಛಂದಸ್ಸು, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ಜಾನಪದ, ಭಾಷಾಶಾಸ್ತ್ರ, ನಿಘಂಟು –ಹೀಗೆ ಹಲವು ಅಧ್ಯಯನ ಕ್ಷೇತ್ರಗಳಲ್ಲಿ ಅವರ ಕೊಡುಗೆ ಅಪಾರವಾಗಿದೆ. ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳ ಪಾಲಿಗೆ ಪ್ರೀತಿಯ ಗುರುಗಳಾಗಿದ್ದಾರೆ.

ಎಸ್.ಎಸ್.ಅಂಗಡಿ ಅವರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಯರಝುರವಿ ಎಂಬ ಗ್ರಾಮದಲ್ಲಿ ಶಂಕ್ರರಪ್ಪ ಹಾಗೂ ಶ್ರೀಮತಿ ಕಾಶಮ್ಮ ದಂಪತಿಗಳ ಪುತ್ರನಾಗಿ ೧೦.೦೬.೧೯೬೬ರಂದು ಜನಿಸಿದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ತಾಯಿಯ ತವರೂರಾದ ಗೋಕಾಕ ತಾಲೂಕಿನ ಮಮದಾಪೂರದಲ್ಲಿ ಮುಗಿಸಿದರು. ನಂತರ ವಿಜಯಪುರ ಮತ್ತು ಬೆಳಗಾವಿಯಲ್ಲಿ ಬಿ.ಎ. ಮತ್ತು ಬಿ.ಇಡಿ ಪದವಿಗಳನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ ಭಾಷಾಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ ಪ್ರಶಸ್ತಿ ಸಹಿತ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾದರು.

ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಕೆ.ವಿ.ನಾರಾಯಣ ಅವರ ಮಾರ್ಗದರ್ಶನದಲ್ಲಿ 'ಮಿಷನರಿಗಳ ದ್ವಿಭಾಷಿಕ ನಿಘಂಟುಗಳು: ತೌಲನಿಕ ಅಧ್ಯಯನ' ಎಂಬ ವಿಷಯದ ಮೇಲೆ ಪಿಎಚ್.ಡಿ. ಪದವಿಯನ್ನು ಪಡೆದ ಎಸ್.ಎಸ್.ಅಂಗಡಿಯವರು ಪ್ರತಿಭಾವಂತ ವಿದ್ಯಾರ್ಥಿಯೆಂದೇ ಖ್ಯಾತಿ ಪಡೆದಿದ್ದಾರೆ. ಶ್ರೇಷ್ಠ ವಿದ್ವಾಂಸರಾದ ಎಂ.ಚಿದಾನಂದಮೂರ್ತಿ ಅವರ ಪ್ರಭಾವವಲಯದಲ್ಲಿ ಎಸ್.ಎಸ್.ಅಂಗಡಿ ಅವರು ತಮ್ಮ ವೃತ್ತಿ ಬದುಕನ್ನು ರೂಪಿಸಿಕೊಂಡರು.

೧೯೯೩ರ ಜೂನ್ ತಿಂಗಳಿನಲ್ಲಿ ಸಂಶೋಧನ ಸಹಾಯಕರಾಗಿ ಹಂಪಿ, ಕನ್ನಡ ವಿಶ್ವವಿದ್ಯಾಲಯ ಪ್ರವೇಶಿಸಿ, ನಂತರ ಅದೇ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದ ಬೆಳಗಾವಿಯ ಡಾ. ಆ.ನೇ.ಉಪಾಧ್ಯೆ ವಿಸ್ತರಣಾಕೇಂದ್ರದಲ್ಲಿ ಮುಖ್ಯಸ್ಥರಾಗಿ, ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಅದರ ಬೆಳವಣಿಗೆಗೆ ಅಪಾರ ಶ್ರಮಿಸಿದ್ದಾರೆ. ಹಾಗೆಯೇ ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿರುವ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಹಸ್ತಪ್ರತಿಶಾಸ್ತ್ರ ವಿಭಾಗದ ಸಹೋದ್ಯೋಗಿಗಳೊಂದಿಗೆ ನಾಡಿನಾದ್ಯಂತ ಸಂಚರಿಸಿ ಹಸ್ತಪ್ರತಿಗಳ ಸಂಗ್ರಹ ಕಾರ್ಯದಲ್ಲಿ ತೊಡಗಿ,

ಅವುಗಳನ್ನು ಒಂದೆಡೆ ಸಂಗ್ರಹಿಸಿದರು. ಹೀಗೆ, ಸಂಗ್ರಹಿಸಿದುದರ ಫಲವಾಗಿ ಇಂದು ಕನ್ನಡ ವಿಶ್ವವಿದ್ಯಾಲಯದಲ್ಲಿ ಸುಸಜ್ಜಿತವಾದ ಹಸ್ತಪ್ರತಿ ಭಂಡಾರ ಸ್ಥಾಪನೆಯಾಗಲು ಸಾಧ್ಯವಾಯಿತು.

ಕನ್ನಡ ಭಾಷಾಧ್ಯಯನ, ಕನ್ನಡ ನಿಘಂಟು ಶಾಸ್ತ್ರ, ಕನ್ನಡ ಛಂದಃಶಾಸ್ತ್ರ, ಕನ್ನಡ ಗ್ರಂಥಸಂಪಾದನೆ ಚರಿತ್ರೆ, ಕನ್ನಡ ಜನಪದ ಸಾಹಿತ್ಯ, ಕನ್ನಡ ವಚನ ಅಧ್ಯಯನ, ಆಧುನಿಕ ಕನ್ನಡ ಸಂಶೋಧನೆ, ಎಂ.ಚಿದಾನಂದಮೂರ್ತಿಗಳ ಕೃತಿ ಸಮೀಕ್ಷೆ, ಸರಳ ಕವಿರಾಜಮಾರ್ಗ, ಸರಳ ವಡ್ಡಾರಾಧನೆ, ಎಂ.ಚಿದಾನಂದಮೂರ್ತಿಗಳ ಕೃತಿಗಳು, 'ಆರಲು'(ಡಾ. ಸ.ಚಿ.ರಮೇಶ ಅವರ ಜಾನಪದ ಅಧ್ಯಯನಗಳ ಚಿಂತನೆಗಳನ್ನು ಕುರಿತ ಸಂಪ್ರಬಂಧ), ಇವರ ಮಹತ್ವದ ಕೃತಿಗಳಾದ ಸಾಹಿತ್ಯಚರಿತ್ರೆ, ಭಾಷಾಶಾಸ್ತ್ರ ಛಂದಸ್ಸು, ಜಾನಪದ ಗ್ರಂಥಸಂಪಾದನೆ –ಇವುಗಳೆಲ್ಲ ಡಾ. ಅಂಗಡಿಯವರ ಗಮನಾರ್ಹ ಸಂಶೋಧನಾತ್ಮಕ ಕೃತಿಗಳಾಗಿವೆ. ಹೀಗಾಗಿ ಕನ್ನಡ ವಿದ್ವತ್ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ತರುಣ ಪೀಳಿಗೆಯ ವಿದ್ವಾಂಸರಲ್ಲಿ ಡಾ. ಎಸ್.ಎಸ್.ಅಂಗಡಿ ಅವರದು ಗಮನಾರ್ಹ ಹೆಸರು.

ಭಾಷಾಶಾಸ್ತ್ರ: ಭಾಷಾ ಕ್ಷೇತ್ರಕಾರ್ಯ(೧೯೯೬), ಶೋಧನ(ಭಾಷಾಶಾಸ್ತ್ರ ಸಂಪ್ರಬಂಧಗಳ ಸಂಕಲನ-೧೯೯೮), ಕುಂಬಾರ ವೃತ್ತಿಪದಕೋಶ(೧೯೯೮), ಬಡಿಗ ವೃತ್ತಿಪದ ಮಂಜರಿ(೧೯೯೯), ಕನ್ನಡ ಕ್ರಿಯಾರೂಪಗಳು(೨೦೦೦), ಸಂಬಂಧವಾಚಕಗಳು ಮತ್ತು ಸಂಬೋಧನೆಗಳು(೨೦೦೨), ಕನ್ನಡ ನಿಘಂಟುರಚನೆ(೨೦೦೩), ದಾಸಸಾಹಿತ್ಯ ಶಬ್ದಶಿಲ್ಪ(೨೦೦೫), ಕನ್ನಡ ವ್ಯಾಕರಣ ಪರಿಭಾಷೆ(೨೦೦೫), ವಚನಸಾಹಿತ್ಯ ಭಾಷೆ(೨೦೦೭), ಚಂಪಾ ನಾಟಕ ಭಾಷೆ(೨೦೦೭), ಕುರುಬ ಸಮುದಾಯ ಭಾಷೆ(೨೦೦೮), ಕರ್ನಾಟಕ ಬುಡಕಟ್ಟು ಭಾಷೆ(೨೦೦೮), ಜನಪದ ಸಾಹಿತ್ಯ ಭಾಷೆ(೨೦೦೮), ಶಂಬಾ ಜೋಶಿ ಭಾಷಿಕ ವಿವೇಚನೆ(೨೦೧೦), ಮನೋಭಾಷಾವಿಜ್ಞಾನ(೨೦೧೧), ಚಂದ್ರಶೇಖರ ಕಂಬಾರರ ಕಾವ್ಯ ಭಾಷೆ(೨೦೧೪), ಕ್ಷೇತ್ರಕಾರ್ಯ(೨೦೧೫), ಕನ್ನಡ ಭಾಷಾಧ್ಯಯನ(೨೦೧೭) ಮತ್ತು ಕನ್ನಡ ನಿಘಂಟುಶಾಸ್ತ್ರ(೨೦೧೯) ಇವುಗಳೆಲ್ಲ ಡಾ. ಎಸ್.ಎಸ್. ಅಂಗಡಿಯವರ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಮಹತ್ವದ ಕೃತಿಗಳಾಗಿವೆ.

ಛಂದಸ್ಸು: ವಚನಸಾಹಿತ್ಯ ಛಂದೋಲಯ(೨೦೦೮) ಮತ್ತು ಹೊಸಗನ್ನಡ ಛಂದಸ್ಸು(೨೦೦೮) ಕನ್ನಡ ಛಂದಃಶಾಸ್ತ್ರ ಇವು ಅವರ ಛಂದಸ್ಸಿಗೆ ಸಂಬಂಧಿಸಿದ ಕೃತಿಗಳಾಗಿವೆ.

ಗ್ರಂಥಸಂಪಾದನೆ: ಸರಳ ಶಬ್ದಮಣಿದರ್ಪಣ(೨೦೦೪), ಕನ್ನಡ ಹಸ್ತಪ್ರತಿರಚನೆ: ಭಾಷಿಕ ವಿವೇಚನೆ-೨೦೦೬, ಕರ್ಣಾಟಕ ಭಾಷಾಭೂಷಣಂ(೨೦೦೭), ಸರಳ ಕವಿರಾಜಮಾರ್ಗ(೨೦೦೯), ಸರಳ ಯಶೋಧರಚರಿತೆ(೨೦೧೨), ಸರಳ ವಡ್ಡಾರಾಧನೆ(೨೦೧೬), ಕನ್ನಡ ಗ್ರಂಥಸಂಪಾದನೆ ಚರಿತ್ರೆ(೨೦೧೮), ಸರಳ ರಾಮಾಶ್ವಮೇದ ಸಂಗ್ರಹ(೨೦೧೯), ಸರಳ ಧರ್ಮಾಮೃತ ಸಂಗ್ರಹ(೨೦೧೯), ಸರಳ ಹದಿಬದೆಯ ಧರ್ಮ(೨೦೧೯), ಸರಳ ಪ್ರಾಚೀನ ಗದ್ಯ ಸಾಹಿತ್ಯ(೨೦೨೦), ಸರಳ ನಂಬಿಯಣ್ಣನ ರಗಳೆ, ಸರಳ ಬಸವರಾಜದೇವರ ರಗಳೆ(೨೦೨೦) ಇತ್ಯಾದಿ ಗ್ರಂಥ ಸಂಪಾದನ ಕೃತಿಗಳಾಗಿವೆ.

ಸಂಪಾದನೆ: ಹಸ್ತಪ್ರತಿ ವ್ಯಾಸಂಗ(೨೦೧೦), ಹಸ್ತಪ್ರತಿ ಅಧ್ಯಯನ(೨೦೧೧), ಛಂದಸ್ಸಿನ ಅಧ್ಯಯನದ ನೆಲೆಗಳು (ಛಂದಸ್ಸಿನ ಕುರಿತು ಎಂ.ಎಂ.ಕುಲಬರ್ಗಿ ಅವರ ಸಂಪ್ರಬಂಧಗಳು-೨೦೧೧), ಕನ್ನಡ ಭಾಷಾವಲೋಕ(ಭಾಷೆ-ವ್ಯಾಕರಣ ಕುರಿತು ಎಂ.ಎಂ.ಕುಲಬರ್ಗಿ ಅವರ ಸಂಪ್ರಬಂಧಗಳು-೨೦೧೨), ಬೆಟಗೇರಿ ಕೃಷ್ಣಶರ್ಮರ ಆಯ್ದ ಬರಹಗಳು(೨೦೧೪) ಇತ್ಯಾದಿ ಎಸ್.ಎಸ್.ಅಂಗಡಿಯವರ ಸಂಪಾದನೆ ಕೃತಿಗಳಾಗಿವೆ.

ಸಾಹಿತ್ಯ ವಿಮರ್ಶೆ: ಎಂ.ಚಿದಾನಂದಮೂರ್ತಿ(೧೯೯೫), ಕನ್ನಡ ಸಂಶೋಧನೆ ಮತ್ತು ಎಂ.ಚಿದಾನಂದಮೂರ್ತಿ (೨೦೦೩), ಕಾಡುದನಿ (ಹಿ.ಚಿ.ಬೋರಲಿಂಗಯ್ಯ ಅವರ ಸಾಹಿತ್ಯ ಪರಾಮರ್ಶೆ(೨೦೦೬) ಟಿ.ವಿ.ವೆಂಕಟಾಚಲಶಾಸ್ತ್ರೀ ಬದುಕು-ಬರೆಹ(೨೦೦೬), ಎಂ.ಚಿದಾನಂದಮೂರ್ತಿ ಸಾಹಿತ್ಯ ಸಾಧನೆ(೨೦೧೦), ಎಂ.ಚಿದಾನಂದಮೂರ್ತಿ ವಚನ

ಸಾಹಿತ್ಯ ಮತ್ತು ಸಂಸ್ಕೃತಿ(೨೦೧೩), ಕನ್ನಡ ಜಾನಪದ ಶಾಸ್ತ್ರಕ್ಕೆ ಎಂ.ಚಿದಾನಂದಮೂರ್ತಿ ಅವರ ಕೊಡುಗೆ(೨೦೧೪), ಎಂ.ಚಿದಾನಂದಮೂರ್ತಿ ಅವರ ಹೊಸತು ಹೊಸತು ಸಾಂಸ್ಕೃತಿಕ ಅಧ್ಯಯನ(೨೦೧೬), ಎಂ. ಚಿದಾನಂದಮೂರ್ತಿ ಅವರ ಸಾಹಿತ್ಯ ಒಂದು ಅಧ್ಯಯನ(೨೦೧೭), ಕನ್ನಡ ವಚನ ಅಧ್ಯಯನ(೨೦೨೦), ಆಧುನಿಕ ಕನ್ನಡ ಸಂಶೋಧನೆ (೨೦೨೦) ಮುಂತಾದ ಕನ್ನಡ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಕೃತಿಗಳು ಡಾ. ಎಸ್.ಎಸ್.ಅಂಗಡಿಯವರಿಂದ ಕನ್ನಡ ಸಾರಸ್ವತಲೋಕಕ್ಕೆ ಲಭಿಸಿವೆ.

ಜಾನಪದ: ಸಂಗ್ಯಾ-ಬಾಳ್ಯಾ ಗೀತರೂಪಕದ ಅಧ್ಯಯನ(೧೯೯೬), ಹಂತಿ-ಪಂತಿ ಪದಗಳು(೧೯೯೭), ಕನ್ನಡ ಶಿಶುಪದಗಳು(೧೯೯೭), ಬಲವಂತ-ಬಸವಂತ(೧೯೯೭), ಕನ್ನಡ ಜನಪದ ಸಾಹಿತ್ಯ(೨೦೧೭), ಯರಝುರವಿ ಹಾಡು(ಬೆಳಗಾವಿ ಪರಿಸರದ ಜನಪದ ಹಾಡುಗಳು ಸಂಗ್ರಹ-೨೦೧೯) ಇವುಗಳಲ್ಲದೆ ಕನ್ನಡ ಪ್ರಭ ದಿನಪತ್ರಿಕೆಯ ಸಾಪ್ತಾಹಿಕ ಪ್ರಭ(೨೦೦೬-೨೦೦೮)ದಲ್ಲಿ ನುಡಿಕನ್ನಡಿ ಮತ್ತು ವಿಜಯವಾಣಿ ದಿನಪತ್ರಿಕೆಯ ಸಾಪ್ತಾಹಿಕ 'ವಿಜಯ ವಿಹಾರ'(೨೦೧೪ರಿಂದ) ಎಂಬ ಅಂಕಣದಲ್ಲಿ ಸಾಂಸ್ಕೃತಿಕ ಪದಗಳ ಸ್ವರೂಪ ಕುರಿತು ಚರ್ಚಿಸಿದ್ದಾರೆ. ಭಾಷಾಶಾಸ್ತ್ರ, ವ್ಯಾಕರಣ, ಛಂದಸ್ಸು, ಪ್ರಾಚೀನ ಸಾಹಿತ್ಯ ಹಸ್ತಪ್ರತಿ ಗ್ರಂಥಸಂಪಾದನೆ ಹಾಗೂ ಜಾನಪದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಎಸ್.ಎಸ್.ಅಂಗಡಿಯವರ ೧೦೦ಕ್ಕೂ ಹೆಚ್ಚು ಸಂಪ್ರಬಂಧಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಭಾಷೆ, ವ್ಯಾಕರಣ, ಛಂದಸ್ಸು, ನಿಘಂಟು, ಹಸ್ತಪ್ರತಿ-ಗ್ರಂಥಸಂಪಾದನೆ, ಜಾನಪದ ಇಂತಹ ಅಧ್ಯಯನ ಕ್ಷೇತ್ರಗಳಲ್ಲಿ ನಡೆದ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ, ಸಮ್ಮೇಳನಗಳಲ್ಲಿ ಭಾಗವಹಿಸಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸಂಪ್ರಬಂಧಗಳನ್ನು ಮಂಡಿಸಿದ್ದಾರೆ.

ಸುಮಾರು ಮೂರು ದಶಕಗಳಿಂದ ಸಾಹಿತ್ಯ ಮತ್ತು ಸಂಶೋಧನ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಡಾ.ಎಸ್.ಎಸ್.ಅಂಗಡಿಯವರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಅವರ ಕನ್ನಡ ಶಿಶುಪದಗಳು ಕೃತಿಗೆ ೧೯೯೯ರಲ್ಲಿ ಮೂಜಗಂ ಪ್ರಶಸ್ತಿ, ಕನ್ನಡ ಕ್ರಿಯಾರೂಪಗಳು ಕೃತಿಗೆ ೨೦೦೦ರಲ್ಲಿ ಲಿಂಗರಾಜ ಪ್ರಶಸ್ತಿ, ೨೦೦೬ರಲ್ಲಿ ದಾಸಸಾಹಿತ್ಯ ಶಬ್ದಶಿಲ್ಪ ಕೃತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ, ೨೦೦೭ರಲ್ಲಿ ವಚನಸಾಹಿತ್ಯ ಭಾಷೆ ಕೃತಿಗೆ ಆಜೂರೆ ಸಾಂಸ್ಕೃತಿಕ ಪ್ರತಿಷ್ಠಾನ ಪ್ರಶಸ್ತಿ, ೨೦೦೯ರಲ್ಲಿ ವಚನಸಾಹಿತ್ಯ ಛಂದೋಲಯ ಕೃತಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ೨೦೦೯ರಲ್ಲಿ ಸರಳ ಕವಿರಾಜಮಾರ್ಗ ಕೃತಿಗೆ ಸ್ನೇಹಸೇತು ಪ್ರಶಸ್ತಿ, ೨೦೦೯ರಲ್ಲಿ ವಚನಸಾಹಿತ್ಯ ಛಂದೋಲಯ ಕೃತಿಗೆ ಬೆಳುವಲ ಪ್ರಶಸ್ತಿ, ೨೦೧೪ರಲ್ಲಿ ಸಮಗ್ರ ಸಾಹಿತ್ಯಕ್ಕೆ ಸಪ್ನ ಬುಕ್ ಹೌಸ್ ಗೌರವ ಪ್ರಶಸ್ತಿ, ೨೦೧೪ರಲ್ಲಿ ಶರಣ ಸಾಹಿತ್ಯ-ಸಂಶೋಧನೆ ಕೃತಿಗೆ ರಮಣಶ್ರೀ ಶರಣ ಸಾಹಿತ್ಯ ಪ್ರಶಸ್ತಿ, ೨೦೧೪ರಲ್ಲಿ ವಚನ ಸಾಹಿತ್ಯಕ್ಕೆ ಎಂ. ಚಿದಾನಂದಮೂರ್ತಿ ಅವರ ಕೊಡುಗೆ ಎಂಬ ಕೃತಿಗೆ ಡಿ.ಎಸ್.ಕರ್ಕಿ ಕನ್ನಡ ದೀಪ ಪ್ರಶಸ್ತಿ, ೨೦೧೪ರಲ್ಲಿ ಚಂದ್ರಶೇಖರ ಕಂಬಾರರ ಕಾವ್ಯಭಾಷೆ ಕೃತಿಗೆ ಮಲ್ಲೇಪುರಂ ಪ್ರಶಸ್ತಿ, ೨೦೧೪ರಲ್ಲಿ ಚಂದ್ರಶೇಖರ ಕಂಬಾರರ ಕಾವ್ಯಭಾಷೆ ಕೃತಿಗೆ ಸಿರಿಗನ್ನಡ ಪುಸ್ತಕ ಪ್ರಶಸ್ತಿ, ೨೦೧೫ರಲ್ಲಿ ಸಮಗ್ರ ಸಾಹಿತ್ಯಕ್ಕೆ ಕನ್ನಡ ಕೌಸ್ತುಭ ಪ್ರಶಸ್ತಿ, ೨೦೧೮ರಲ್ಲಿ ಚಂದ್ರಶೇಖರ ಕಂಬಾರರ ಕಾವ್ಯಭಾಷೆ ಕೃತಿಗೆ ರಾಷ್ಟ್ರಕೂಟ ಪುಸ್ತಕ ಪ್ರಶಸ್ತಿ, ೨೦೧೮ರಲ್ಲಿ ಸಮಗ್ರ ಸಾಹಿತ್ಯಕ್ಕೆ ಎಸ್.ವಿದ್ಯಾಶಂಕರ ಪುರಸ್ಕಾರ ಲಭಿಸಿದೆ.

ನಿರಂತರ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ಎಸ್.ಎಸ್. ಅಂಗಡಿಯವರು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಮತ್ತು ಅಖಿಲ ಭಾರತ ಸ್ಥಳನಾಮಗಳ ಸಂಘ, ಮೈಸೂರು ಇದರ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗೆ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವ ಎಸ್.ಎಸ್. ಅಂಗಡಿಯವರು ನಾಡಿನಾದ್ಯಂತ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

□□

ಎಸ್.ಆರ್. ಚನ್ನವೀರಪ್ಪ

ಲಿಂಗರಾಜ ಉಳ್ಳಾಗಡ್ಡಿ

ಕನ್ನಡ ಸಾಹಿತ್ಯ ಚರಿತ್ರೆಗೆ ಬಹುದೊಡ್ಡ ಇತಿಹಾಸವಿದೆ. ಈ ಚರಿತ್ರೆಯನ್ನು ಜನರ ಮನಸ್ಸಿನಲ್ಲಿ ಉಳಿಯುವಂತೆ ನಮ್ಮ ನಾಡಿನ ಭವ್ಯ ಪರಂಪರೆಯನ್ನು ಸಾರುವ ಶ್ರೇಷ್ಠ ಕೃತಿಗಳನ್ನು ಅನೇಕ ವಿದ್ವಾಂಸರು ನಮಗೆ ಕೊಡುಗೆಯಾಗಿ ಕೊಟ್ಟು ಹೋಗಿದ್ದಾರೆ. ಹೀಗೆ ಕಾಲದಿಂದ ಕಾಲಕ್ಕೆ ಹಲವಾರು ಶ್ರೇಷ್ಠ ಕೃತಿಗಳು ರಚನೆಗೊಳ್ಳುತ್ತಾ ಬಂದರೂ ಕೆಲವು ಶ್ರೇಷ್ಠ ಕೃತಿಗಳು ಕಣ್ಣಿಂದ ಮರೆಯಾಗಿ ಓದಲು ದೊರೆಯದಂತೆ ಕಣ್ಮರೆಯಾಗಿವೆ. ಇದನ್ನು ಮನಗಂಡ ನಾಡಿನ ಅನೇಕ ವಿದ್ವಾಂಸರು ಈ ಓದುಗರ ಕುತೂಹಲವನ್ನು ಹೆಚ್ಚಿಸಲು ಹಲವಾರು ರೀತಿಯಲ್ಲಿ ತಮ್ಮನ್ನು ತಾವು ಸಂಶೋಧನಾ ಕೆಲಸದಲ್ಲಿ ತೊಡಗಿಸಿಕೊಂಡು ಹಸ್ತಪ್ರತಿ ಸಂಗ್ರಹ, ಪರಿಷ್ಕರಣೆ ಹಾಗೂ ಗ್ರಂಥಸಂಪಾದನೆ ಕಾರ್ಯದಲ್ಲಿ ಸತತವಾಗಿ ಶ್ರಮಿಸುತ್ತಾ ಬಂದಿದ್ದಾರೆ. ಅದೇರೀತಿಯಲ್ಲಿ ಕನ್ನಡ ಮನಸ್ಸುಗಳಿಗೆ ಸದಾಜ್ಞಾನದ ಬೆಳಕನ್ನು ಚೆಲ್ಲುತ್ತಿರುವ ವಿದ್ವಾಂಸರ ಸಾಲಿನಲ್ಲಿ ಡಾ. ಎಸ್.ಆರ್‌ಚನ್ನವೀರಪ್ಪ ಅವರ ಕೊಡುಗೆ ಪ್ರಮುಖವಾದುದಾಗಿದೆ.

ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವಿಷಯತಜ್ಞತೆ ಹೊಂದಿರುವ ಇವರು ಈ ಕ್ಷೇತ್ರದಲ್ಲಿ ಮಾತ್ರವಲ್ಲದೇ ಇನ್ನೂ ಹೆಚ್ಚಿನ ಕ್ಷೇತ್ರಗಳ ಓದಿನ ಆಸಕ್ತಿಯನ್ನು ಬೆಳೆಸಿಕೊಂಡು ತಮ್ಮ ಚಿಂತನೆಗಳನ್ನು ವಿವಿಧ ಜ್ಞಾನಶಿಸ್ತುಗಳೊಂದಿಗೆ ಒಗ್ಗೂಡಿಸಿಕೊಂಡು ಹಲವಾರು ಕೃತಿಗಳನ್ನು ಸಂಗ್ರಹಿಸಿ ಸಂಪಾದಿಸಿದ್ದಾರೆ. ಹಾಗೂ ಕೃತಿಗಳನ್ನು ಸ್ವತಃ ರಚನೆ ಮಾಡುವುದರೊಂದಿಗೆ ತಮ್ಮ ಓದಿನ ಸಾಧ್ಯತೆಗಳನ್ನು ವಿಸ್ತರಿಸಿಕೊಂಡು ಅದರ ಸದುಪಯೋಗವನ್ನು ಪ್ರತಿಯೊಬ್ಬರೂ ಆಸ್ವಾದಿಸುವಂತೆ ಮಾಡಿದ್ದಾರೆ.

ಡಾ. ಎಸ್.ಆರ್.ಚನ್ನವೀರಪ್ಪ ಅವರು ಮೂಲತಃ ಚಿತ್ರದುರ್ಗ ತಾಲೂಕಿನ ಸಿದ್ದಾಪುರ ಗ್ರಾಮದವರು ಇವರು ೦೧.೦೪.೧೯೭೧ರಂದು ದಾವಣಗೆರೆಯಲ್ಲಿ ಜನಿಸಿದರು. ತಂದೆ ಆರ್.ಸಿ.ರುದ್ರಪ್ಪ ಇವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ತಾಯಿ ಎಂ.ವೀರಮ್ಮನವರು. ತಂದೆಯವರು ಶಿಕ್ಷಕರಾಗಿದ್ದರಿಂದ ಶೈಕ್ಷಣಿಕ ವಾತಾವರಣದಲ್ಲಿ ಇವರು ಬೆಳೆಯುತ್ತಾ ಬಂದರು. ಶ್ರೀಯುತರು ಪ್ರಾಥಮಿಕ ಶಿಕ್ಷಣವು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಚಿತ್ತವಾಡಿಗಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಪ್ರೌಢ ಶಿಕ್ಷಣವು ಸರ್ಕಾರಿ ಪ್ರೌಢಶಾಲೆ ಚಿತ್ತವಾಡಿಗಿಯಲ್ಲಿ ಪೂರೈಸಿ, ಪದವಿ ಶಿಕ್ಷಣವನ್ನು ಹೊಸಪೇಟೆಯ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ವಿಜಯನಗರ ಮಹಾವಿದ್ಯಾಲಯದಲ್ಲಿ ಪೂರೈಸಿದ್ದಾರೆ. ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿಯನ್ನು ಪಡೆದಿರುತ್ತಾರೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ, ಸಹಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತ, ನಂತರ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರವಾದ ಕೂಡಲಸಂಗಮದ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿಯೂ ಸೇವೆಸಲ್ಲಿಸಿದ್ದಾರೆ. ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಮುಂದುವರಿಸಿದ್ದಾರೆ. ಹಲವಾರು ಕ್ಷೇತ್ರಗಳ ಮೂಲಕ ತಮ್ಮ ವಿದ್ವತ್ತನ್ನು ತೋರಿದ್ದಾರೆ. ಪ್ರಮುಖವಾಗಿ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಕ್ಷೇತ್ರದಲ್ಲಿ ಇವರ ಸೇವೆ ಸ್ಮರಣೀಯವಾದದು. ಹಲವಾರು ಪ್ರಮುಖ ಕೃತಿಗಳನ್ನು ಸಂಪಾದನೆ ಮಾಡುವುದರ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೂ ಹೊಸ ಕವಿ ಹಾಗೂ ಕೃತಿಗಳನ್ನು ಪರಿಚಯಿಸಿದ್ದಾರೆ. ಪ್ರಮುಖವಾಗಿ ಇವರು ಸಂಪಾದಿಸಿದ ಕೃತಿಗಳೆಂದರೆ ನಾಗಲಿಂಗಸ್ವಾಮಿ ತತ್ವಪದಗಳು, ಸ್ವರವಚನತರಂಗ ಸಂಪುಟ–೧, ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರಸಂಗ್ರಹ, ದಾಸರಾಯರ ಪದಗಳು, ಬಸವಕಲ್ಪಧೃವಂ, ಹಸ್ತಪ್ರತಿ ವ್ಯಾಸಂಗ ಸಂಪುಟಗಳು, ಹಸ್ತಪ್ರತಿ ಸೂಚಿ ಸಂಪುಟಗಳು, ಹಸ್ತಪ್ರತಿ ಅಧ್ಯಯನ ಈ ಕೃತಿಗಳನ್ನು ಸಂಪಾದಿಸಿದ್ದಾರೆ. ಮುಕ್ತಿಯ ಪರಿಕಲ್ಪನೆ, ಕೃತಿ ಪ್ರವೇಶ ಎಂಬ ಸ್ವತಂತ್ರ ಕೃತಿಗಳನ್ನು ರಚಿಸಿದ್ದಾರೆ. ಇವರ ಪಿಎಚ್.ಡಿ. ಮಹಾಪ್ರಬಂಧ 'ಕನ್ನಡ ಸಾಹಿತ್ಯದಲ್ಲಿ ಮುಕ್ತಿಯ ನಿರ್ವಚನ' ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಇವರ ಹಲವು ಸಂಶೋಧನ ಲೇಖನಗಳು ನಾಡಿನ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ರಾಜ್ಯ, ರಾಷ್ಟ್ರಮಟ್ಟದಲ್ಲಿ ಅನೇಕ ವಿಚಾರ ಸಂಕಿರಣಗಳಲ್ಲಿ, ಶಿಬಿರಗಳಲ್ಲಿ ತಮ್ಮ ಸಂಪ್ರಬಂಧಗಳನ್ನು ಮಂಡಿಸಿದ್ದಾರೆ. ಹಲವು ಪಿಎಚ್.ಡಿ ಹಾಗೂ ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಆ ಕಾಯಕ ಈಗಲೂ ಮುಂದುವರಿದಿದೆ. ಹೀಗೆ ಕ್ರಿಯಾಶೀಲರಾಗಿ ತಮ್ಮನ್ನು ಸದಾ ಅಧ್ಯಯನದಲ್ಲಿ ತೊಡಗಿಸಿಕೊಂಡು ಬಂದಿದ್ದಾರೆ.

ಇವರ ಸಂಪಾದನಾ ಕೃತಿಗಳ ಸಂಕ್ಷಿಪ್ತ ಅವಲೋಕನ ಮಾಡುವುದಾದರೆ, ಮೊದಲನೆಯದಾಗಿ 'ನಾಗಲಿಂಗ ಸ್ವಾಮಿತತ್ವ ಪದಗಳು' ಈ ಕೃತಿಯಲ್ಲಿ ಸರಳವಾದ ನಿತ್ಯ ಸತ್ಯದ ಸಂಗತಿಗಳನ್ನು, ಒಂದು ಸಮಾಜದ ನೋವು ನಲಿವುಗಳನ್ನು ಸ್ವಂತ ಅನುಭವದ ಮೂಲಕ ಜನತೆಯ ಕವಿಯಾಗಿ ಯಾವ ಧಾರ್ಮಿಕ, ರಾಜಕೀಯ ಒತ್ತಡಗಳಿಗೆ ಅಧೀನವಾಗದೆ ಬದುಕಿ ಬಾಳಿದ ನಾಗಲಿಂಗಸ್ವಾಮಿಗಳ ಜೀವನ ತತ್ವಗಳನ್ನು ಇಲ್ಲಿನ ಪದಗಳು ಭೋದಿಸುತ್ತವೆ. ಜಡಧರ್ಮ ಮತ್ತು ಪ್ರಭುತ್ವದ ಎಲ್ಲೆ ಮೀರಿ ಪರಂಪರೆಗಿಂತ ಭಿನ್ನವಾಗಿ ಒಡಮೂಡಿದ ಜನಮುಖಿಯಾದ ಜೀವಂತ ಪರಂಪರೆಯನ್ನು ಈ ತತ್ವಪದಕಾರನ ಹಾಡುಗಳಲ್ಲಿ ಕಾಣಬಹುದು. ಸಮಾನತೆ, ಸಹಬಾಳ್ವೆ, ಆತ್ಮಗೌರವ, ಗುರುಶಿಷ್ಯರ ಅನ್ಯೋನ್ಯ ಸಂಬಂಧ, ಹಲವಾರು ಸಾಮಾಜಿಕ ಮೌಲ್ಯಗಳು ಈ ಕೃತಿಯಲ್ಲಿ ವ್ಯಕ್ತವಾಗಿವೆ.

'ಸ್ವರವಚನತರಂಗ' ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಸ್ವರವಚನಗಳು ಬಹು ಮುಖ್ಯವಾಗಿವೆ. ವಚನಗಳಿಗಿಂತ ಇವು ರಾಗ ಸಂಯೋಜಿತವಾಗಿರುತ್ತವೆ. ಅಂದರೆ ಇಲ್ಲಿ ರಾಗ, ತಾಳಗಳಿಗೆ ಮಹತ್ವದ ಸ್ಥಾನಗಳಿರುತ್ತವೆ. ಸಾಮುದಾಯಿಕ ಕಳಕಳಿಯುಳ್ಳ ಸಮಾಜಮುಖಿ ಚಿಂತನೆಯುಳ್ಳ ಪರಿಪೂರ್ಣ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವುದು ಇಲ್ಲಿಯ ಆಶಯವಾಗಿದೆ. ಈ ಕಾರಣಗಳಿಂದ ಸ್ವರವಚನಗಳು ಇಂದಿಗೂ ಪ್ರಸ್ತುತವಾಗಿವೆ. ಇಲ್ಲಿ ಸಂಗ್ರಹಿಸಿದ ೧೫೫ ಸ್ವರವಚನಗಳು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ದೊರೆತಂಥವು. ಕರ್ನಾಟಕದ ವಿವಿಧ ಪ್ರದೇಶ ಹಾಗೂ ಸಮುದಾಯಗಳಿಂದ ಸಂಗ್ರಹಿತ ಈ ರಚನೆಗಳಲ್ಲಿ ಸಹಜವಾಗಿ ವಿಭಿನ್ನತೆಯಿದೆ. ಇದರಿಂದ ಸ್ಥಳೀಯ ಸಮುದಾಯದ ಸಾಂಸ್ಕೃತಿಕ ಬದುಕನ್ನು ಅದರ ವೈವಿಧ್ಯತೆಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

'ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರ ಸಂಗ್ರಹ' ಕನ್ನಡ ಕಥಾ ಸಾಹಿತ್ಯಕ್ಕೆ ಪ್ರಾಚೀನ ಇತಿಹಾಸ ಇರುವುದನ್ನು ನಾವು ಕಾಣುತ್ತೇವೆ. ಹೀಗೆ ಪ್ರಾಚೀನ ಕೃತಿಗಳು ರಚನೆಯಾದ ವಿಶಾಲವಾದ ಚರಿತ್ರೆಯನ್ನು ನಾವು

ಪ್ರಸ್ತುತ ನೋಡಲು ಸಾಧ್ಯವಾಗುತ್ತದೆ. ಇಂತಹ ಕೃತಿಗಳಲ್ಲಿ ದುರ್ಗಸಿಂಹನ ಪಂಚತಂತ್ರ ಸಾಮಾನ್ಯವಾಗಿ ಭಾರತದಲ್ಲಿ ಪ್ರಚಲಿತದಲ್ಲಿದೆ. ಆದರೆ ವಿಷ್ಣುಶರ್ಮನ ಪಂಚತಂತ್ರ ಕರ್ನಾಟಕದಲ್ಲಿ ದೊರೆತಿದ್ದು ವಿಶೇಷ. ಬಳ್ಳಾರಿ ಪರಿಸರದಲ್ಲಿ ದೊರೆತ ಒಂದು ಹಸ್ತಪ್ರತಿಯನ್ನಾಧರಿಸಿ ಸಂಪಾದಿಸಲಾಗಿದೆ. ದುರ್ಗಸಿಂಹನ ಪಂಚತಂತ್ರದಂತೆ ಇದೂ ಕೂಡ ಹಲವಾರು ಜನಪದ ಕತೆಗಳನ್ನು ಒಳಗೊಂಡಿದೆ. ವಿಶೇಷವೆಂದರೆ ಪ್ರಾದೇಶಿಕ ಭಾಷೆಯನ್ನು ಅಳವಡಿಸಿಕೊಂಡದ್ದು ಈ ಆವೃತ್ತಿಯ ಹೊಸತನವೆಂದು ಹೇಳಬೇಕು.

'ದಾಸರಾಯರ ಪದಗಳು' ಈ ಕೃತಿಯು ಶ್ರೀಯುತರು ಕ್ಷೇತ್ರಕಾರ್ಯ ಕೈಗೊಂಡಾಗ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನಲ್ಲಿನ ನಿಡಶೇಶಿ ಗ್ರಾಮದ ಪಶ್ಚಕಂತಿ ಹಿರೇಮಠದ ಶ್ರೀ ಶಾಂತಮೂರ್ತಿಸ್ವಾಮಿಗಳ ಕೊಡುಗೆಯಾಗಿ ಸಿಕ್ಕ ಈ ಕೃತಿ ಕೋರಿಕಾಗದದಲ್ಲಿ ರಚಿಸಲ್ಪಟ್ಟಿತ್ತು. ಇದನ್ನು ಶೋಧಿಸಿ ಸಂಪಾದಿಸಿರುವ ಡಾ. ಎಸ್.ಆರ್.ಚನ್ನವೀರಪ್ಪ ಅವರ ಶ್ರಮವನ್ನು ಸ್ಮರಿಸಬೇಕು. ಕನ್ನಡ ಅನುಭಾವ ಸಾಹಿತ್ಯದಲ್ಲಿ ವಚನ ಸಾಹಿತ್ಯವನ್ನು ಬಿಟ್ಟರೆ ಕಣ್ಣು ತುಂಬ ನಿಲ್ಲುವುದು ದಾಸ ಸಾಹಿತ್ಯ ಅಪಾರವಾದ ದಾಸ ಸಾಹಿತ್ಯ ರಾಶಿಯಲ್ಲಿ ಪ್ರಯೋಗವಾಗಿರುವ ವಿವಿಧ ಪ್ರಕಾರಗಳನ್ನು ಗೇಯ ಪ್ರಕಾರಗಳೆಂದು ಛಂದೋಬದ್ಧ ಹಾಡುಗಳೆಂದು ಎರಡು ಪ್ರಕಾರಗಳಲ್ಲಿ ವರ್ಗೀಕರಿಸಬಹುದು. ಇವುಗಳಲ್ಲಿ ಮೊದಲನೇ ವರ್ಗದಲ್ಲಿ ಸುಳಾದಿ, ಉಗಾಭೋಗ, ಕೀರ್ತನೆಗಳು ಸೇರುತ್ತದೆ. ಎರಡನೇ ವರ್ಗದಲ್ಲಿ ಸುವ್ವಿಹಾಡು, ವೃತ್ತನಾಮ, ಉದಯರಾಗ, ಇವು ಸೇರುತ್ತವೆ. ಪ್ರಸ್ತುತ ದಾಸರಾಯರ ಪದಗಳಲ್ಲಿ ಈ ಎಲ್ಲ ಗೇಯ ರೂಪಗಳು ಸೇರಿವೆ. ವಿಶೇಷವಾಗಿ ಈ ಆವೃತ್ತಿಯ ಮುಖ್ಯಾಂಶವೆಂದರೆ ಇವೆಲ್ಲವೂ ಅಪ್ರಕಟಿತ ರಚನೆಗಳಾಗಿವೆ.

'ಬಸವಕಲ್ಪಧ್ರುವಂ' ಉಪೇಕ್ಷೆಗೆ ಒಳಗಾಗಿದ್ದ ಹಲವಾರು ಅಪ್ರಕಟಿತ ರೂಪದ ಕೃತಿಗಳು ಇರುವುದನ್ನು ನಾವು ನೋಡಬಹುದು ಇಂತಹ ಅನೇಕ ಕೃತಿಗಳನ್ನು ಗುರುತಿಸುವುದರ ಮೂಲಕ ಅವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ, ಪ್ರಕಟಿಸುವ ಕಾಯಕವು ತುಂಬಾ ಶ್ರಮದಾಯಕವಾದುದು. ಈ ಕಾರ್ಯವನ್ನು ತಮ್ಮ ಧ್ಯೇಯವೆಂಬಂತೆ ತಮ್ಮನ್ನು ತಾವು ತೊಡಗಿಸಿಕೊಂಡಾಗ ಹಸ್ತಪ್ರತಿಗಳನ್ನು ವಿವಿಧ ನೆಲೆಗಳಲ್ಲಿ ಅಧ್ಯಯನಕ್ಕೆ ಒಳಪಡಿಸಿ ಅದರ ಫಲಿತಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಾ ಬಂದಿರುವುದು ಶ್ರೀಯುತರ ಶ್ರೇಯೊಭಿವೃದ್ಧಿಗೆ ಸಾಕ್ಷಿಯಾಗಿದೆ. ಇಂತಹ ಕಾರ್ಯದಲ್ಲಿ ತೊಡಗಿಸಿಕೊಂಡಾಗ ದಾವಣಗೆರೆ ತಾಲೂಕಿನ ಹೂವಿನಮಡು ಗ್ರಾಮದಲ್ಲಿರುವ ಶ್ರೀ ಗೌಡರ ಶಿವಶಂಕರಪ್ಪ ಎಂಬುವರ ಮನೆಯಿಂದ ಸಂಗ್ರಹಿಸಿದ ಹಸ್ತಪ್ರತಿ ಇದು ಬಸವಣ್ಣನವರ ಚರಿತ್ರೆಯೇ ಈ ಕಾವ್ಯದ ಮೂಲ ಕಥಾವಸ್ತು. ಬಸವಣ್ಣನವರ ಜೊತೆಗಿದ್ದ ಸಿದ್ಧರಾಮ, ಮಡಿವಾಳಯ್ಯ, ಹರಳಯ್ಯ, ಮುಂತಾದ ಶರಣರ ಬಗ್ಗೆಯೂ ಇಲ್ಲಿ ಕುತೂಹಲಕಾರಿ ಮಾಹಿತಿಗಳಿವೆ. ೧೭ ನೇ ಶತಮಾನದ ಮಧ್ಯಭಾಗದಲ್ಲಿ ಕಾಣಿಸಿಕೊಳ್ಳುವ 'ಬಸವ' ಎಂಬ ಕವಿಯಿಂದ ರಚಿಸಲ್ಪಟ್ಟ ಈ ವರ್ಣಕ ಕಾವ್ಯದಲ್ಲಿ ಬಸವಣ್ಣನವರನ್ನು ಇತರ ಶಿವಶರಣರೊಂದಿಗೆ ಸಮೀಕರಣ ಮಾಡುವುದರ ಮೂಲಕ ವೀರಶೈವಧರ್ಮದ ಅನನ್ಯತೆಯನ್ನು ಕಾಣಬಹುದು. ಈ ಮೂಲಕ 'ಬಸವ' ಎಂಬ ಕವಿಯನ್ನು 'ಬಸವಕಲ್ಪಧ್ರುವಂ' ಎಂಬ ಕಾವ್ಯವನ್ನು ಕನ್ನಡ ಸಾಹಿತ್ಯಚರಿತ್ರೆಗೆ ಶ್ರೀಯುತರು ನೀಡಿದ ಅಪರೂಪದ ಕೊಡುಗೆ ಎಂದು ಹೇಳಬಹುದು.

ಶ್ರೀಯುತರು ಸಂಪಾದನಾ ಕೃತಿಗಳೊಂದಿಗೆ ಕೆಲವು ಸ್ವತಂತ್ರ ಕೃತಿಗಳನ್ನು ತಮ್ಮ ವಿದ್ವತ್ತಿನ ನೆಲೆಯಲ್ಲಿ ರಚಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ಮುಕ್ತಿಯ ಪರಿಕಲ್ಪನೆ ಮತ್ತು ಕೃತಿ ಪ್ರವೇಶ ಎಂಬುವಾಗಿವೆ. 'ಮುಕ್ತಿಯ ಪರಿಕಲ್ಪನೆ' ಕೃತಿಯಲ್ಲಿ ಪ್ರಮುಖವಾಗಿ ಜೈನಧರ್ಮದ ಸಿದ್ಧಾಂತಗಳನ್ನು ಅವರ ಆಚರಣೆಗಳನ್ನು ನೋಡಬಹುದಾದರೂ ಮಾನವ ಜೀವನದ ತೊಳಲಾಟಗಳಲ್ಲಿ ಏನೆಲ್ಲಾ ಸಾಧ್ಯತೆಗಳು ಇವೆ ಎಂಬುದನ್ನು ಇಲ್ಲಿ ನೋಡುತ್ತಾ ಹೋಗಬಹುದು.

ಮಾನವ ತನ್ನನ್ನು ತಾನು ಮಹತ್ಮಾನನ್ನಾಗಿಸಿಕೊಂಡು 'ಹಲವಾರು ಜನ್ಮಾಂತರಗಳನ್ನು ಪಡೆದು ಕೊನೆಗೆ ಮುಕ್ತಿಯ ಮಾರ್ಗದೆಡೆಗೆ ತನ್ನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವ ವಿವಿಧ ಪರಿಗಳನ್ನು ಹಲವಾರು ಜೈನ ಕಥೆಗಳ ಮೂಲಕ ಡಾ. ಎಸ್.ಆರ್.ಚನ್ನವೀರಪ್ಪ ಅವರು ವಿವರಿಸುತ್ತಾ ಹೋಗುತ್ತಾರೆ. ನಂತರ 'ಕೃತಿ ಪ್ರವೇಶ' ಕೃತಿಯಲ್ಲಿ ನಾಡಿನ ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಸಮಗ್ರ ಕೃತಿಗಳ ಅವಲೋಕನವನ್ನು ಅಳವಡಿಸಿದ್ದಾರೆ. 'ಕೃತಿಗಳ ಮೂಲಕವೇ ಆಕೃತಿ ನಿರ್ಮಾಣ' ಸಾಧ್ಯ ಎಂಬ ನಿರ್ಣಯವನ್ನು ಶ್ರೀಯುತರು ಇಲ್ಲಿ ಸ್ಪಷ್ಟೀಕರಿಸಿದ್ದಾರೆ.

ಕಳೆದು ಹೋಗುವ ಮುನ್ನ ಪ್ರಾಚೀನ ಎಲ್ಲಾ ಗ್ರಂಥಗಳನ್ನು ಒಮ್ಮೆಯಾದರೂ ಮುದ್ರಿಸಬೇಕು ಎಂಬ ವಿದ್ವಾಂಸರ ಮಾತಿನಂತೆ ತಮ್ಮ ಅಭೂತಪೂರ್ವಜ್ಞಾನದ ಮೂಲಕ ಕ್ಷೇತ್ರಕಾರ್ಯ ಕೈಗೊಂಡು ಹಲವಾರು ಪ್ರದೇಶಗಳನ್ನು ಸುತ್ತಿ ಅಲ್ಲಿರುವ ಪ್ರಮುಖ ಕೃತಿಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ಸಂಸ್ಕರಿಸಿ, ಸಂಪಾದನೆ ಮಾಡುವುದರ ಮೂಲಕ ಓದುವ ವರ್ಗಕ್ಕೆ ಅವುಗಳನ್ನು ನೀಡಿದ್ದಾರೆ. ಹಸ್ತಪ್ರತಿಶಾಸ್ತ್ರ ವಿಭಾಗದಿಂದ ಹಮ್ಮಿಕೊಂಡು ಬಂದಿರುವ ಹಲವಾರು ವಿಚಾರ ಸಂಕಿರಣಗಳು, ಕಾರ್ಯಗಾರಗಳು, ಹಸ್ತಪ್ರತಿ ಸಮ್ಮೇಳನಗಳು ಇವುಗಳನ್ನು ಆಯೋಜನೆ ಮಾಡುವುದರೊಂದಿಗೆ ತಾವೂ ಭಾಗವಹಿಸಿ ಅಲ್ಲಿ ಚರ್ಚಿಸಿದ ವಿಚಾರಗಳು, ನಾಡಿನ ವಿವಿಧ ಭಾಗಗಳಿಂದ ಬಂದು ತಮ್ಮ ವಿಷಯವನ್ನು ಮಂಡಿಸಿರುವ ವಿದ್ವಾಂಸರ ಸಂಪ್ರಬಂಧಗಳನ್ನು ಸಂಗ್ರಹಿಸಿ, ಅವುಗಳನ್ನು ಜೋಡಿಸಿ ತಮ್ಮ ಸಹದ್ಯೋಗಿಗಳೊಂದಿಗೆ ಚರ್ಚಿಸಿ ಅವುಗಳನ್ನು 'ಹಸ್ತಪ್ರತಿ ವ್ಯಾಸಂಗ' ಸಂಪುಟಗಳಲ್ಲಿ ಸಂಪಾದಿಸಿ ಕೊಡುವುದರ ಮೂಲಕ ಪ್ರಸ್ತುತ ಅಧ್ಯಯನ ಕೈಗೊಳ್ಳುವವರಿಗೆ ಮಾದರಿಗಳನ್ನು ನೀಡಿದ್ದಾರೆ ಈ ಹಿನ್ನೆಲೆಯಲ್ಲಿ ಹಸ್ತಪ್ರತಿ ಮತ್ತು ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಇವರ ತೊಡಗಿಕೊಳ್ಳುವಿಕೆ ಸ್ಮರಣೀಯವಾದುದು.

ಸದಾ ಹಸನ್ಮುಖಿಗಳಾಗಿ ಸರಳ ವ್ಯಕ್ತಿತ್ವದವರಾದ ಡಾ. ಎಸ್.ಆರ್.ಚನ್ನವೀರಪ್ಪ ಹಲವಾರು ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಹಸ್ತಪ್ರತಿ ವಿಭಾಗದಲ್ಲಿ ಮುಖ್ಯಸ್ಥರಾಗಿ, ದೂರಶಿಕ್ಷಣ ಕೇಂದ್ರದಲ್ಲಿ ಉಪನಿರ್ದೇಕರಾಗಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಘಟಕದಲ್ಲಿ ಸಂಯೋಜನಾಧಿಕಾರಿಯಾಗಿ, ಪ್ರಸಾರಾಂಗದಲ್ಲಿ ಆಂತರಿಕ ಸಲಹಾ ಸಮಿತಿ ಸದಸ್ಯರಾಗಿ, ಇನ್ನೂ ಆಡಳಿತಾಂಗ ವಯಿಸುವ ಎಲ್ಲಾ ಜವಾಬ್ದಾರಿಗಳನ್ನು ನಿಷ್ಠೆಯಿಂದ ಮಾಡುತ್ತಾ ಬಂದಿದ್ದಾರೆ. ಹೀಗೆ ತಮ್ಮನ್ನು ಸದಾ ಕ್ರಿಯಾಶೀಲತೆಯಿಂದ ಅಧ್ಯಯನದಲ್ಲಿ ತೊಡಗಿಸಿಕೊಂಡು ಬರುತ್ತಿರುವ ಡಾ. ಎಸ್.ಆರ್.ಚನ್ನವೀರಪ್ಪ ಇವರ ಪ್ರಕಟಗೊಂಡ ಕೃತಿಗಳಿಗೆ, ಮಂಡಿಸಿದ ಪ್ರಬಂಧಗಳಿಗೆ, ಲೇಖನಗಳಿಗೆ, ನಾಡಿನ ವಿದ್ವಾಂಸರಿಂದ ಅಪಾರವಾದ ಮೆಚ್ಚುಗೆ ವ್ಯಕ್ತವಾಗಿದೆ.

ಒಟ್ಟಿನಲ್ಲಿ ಶ್ರೀಯುತರ ಅಧ್ಯಯನ ಆಸಕ್ತಿಯು ಮುಂದುವರೆದುಕೊಂಡು ಇವರ ಶೈಕ್ಷಣಿಕ ಕಾರ್ಯಗಳು ಇನ್ನೂ ಹೆಚ್ಚಿನದಾಗಿ ನಡೆಯಲಿ ಸದಾ ಹಸನ್ಮುಖಿಗಳಾಗಿರುವ ಇವರ ಸಂಶೋಧನೆ ಹಾಗೂ ಸಂಪಾದನೆ ಕಾರ್ಯವು ಇನ್ನೂ ಹೆಚ್ಚಿನ ಗುಣಮಟ್ಟದಲ್ಲಿ ಉನ್ನತ ಮಟ್ಟಕ್ಕೇರಲಿ ಹಾಗೂ ಹೊಸ ಸಾಧ್ಯತೆಗಳನ್ನೊಳಗೊಂಡ ಕೃತಿಗಳು ವಿದ್ಯಾರ್ಥಿ ವಲಯಕ್ಕೆ ಹಾಗೂ ಕನ್ನಡದ ಓದುವ ಮನಸ್ಸುಗಳಿಗೆ ಸಿಗುವಂತಾಗಲಿ ಎಂದು ಶ್ರೀಯುತರ ವಿದ್ಯಾರ್ಥಿಯಾಗಿ ಶುಭಕೋರುತ್ತೇನೆ.

□□

೧೪

ಪಿಎಚ್.ಡಿ. ಪದವಿ ವಿವರಗಳು

ಕ್ರಸಂ. ಅಭ್ಯರ್ಥಿಯ ಹೆಸರು / ಪ್ರಬಂಧದ ಶೀರ್ಷಿಕೆ / ಮಾರ್ಗದರ್ಶಕರ ಹೆಸರು / ಪದವಿ ಪಡೆದ ವರ್ಷ

೧. ರೇವಯ್ಯ ಒಡೆಯರ್, ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಮಾನವೀಕರಣದ ನೆಲೆಗಳು
ಪ್ರೊ. ಎ.ವಿ.ನಾವಡ ೨೦೦೧

೨. ಐ.ಜೆ.ಮ್ಯಾಗೇರಿ, ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು
ಡಾ. ವ್ಹಿ.ಎಸ್.ಬಡಿಗೇರ ೨೦೦೨

೩. ಅಕ್ಕಮಹಾದೇವಿ ಅಲಕ್ಷಿತ ವಚನಕಾರ್ತಿಯರ ವಚನಗಳ ಆಶಯ ಮತ್ತು ಅಭಿವ್ಯಕ್ತಿ
ಡಾ. ವ್ಹಿ.ಎಸ್.ಬಡಿಗೇರ ೨೦೦೨

೪. ಎ.ಚನ್ನಪ್ಪ, ಇಮ್ಮಡಿ ಮುರಿಗಾ ಗುರುಸಿದ್ಧರು: ಜೀವನ ಮತ್ತು ಸಾಹಿತ್ಯ, ಡಾ. ಎಫ್.ಟಿ.ಹಳ್ಳಿಕೇರಿ ೨೦೦೨

೫. ವೈ.ಎಂ.ಭಜಂತ್ರಿ, ದು.ನಿಂ.ಬೆಳಗಲಿ ಅವರ ಕಾದಂಬರಿಗಳು: ಒಂದು ಅಧ್ಯಯನ
ಡಾ. ಎಫ್.ಟಿ.ಹಳ್ಳಿಕೇರಿ ೨೦೦೨

೬. ಡಿ.ಎ.ಬಾಗಲಕೋಟ, ಪ್ರಭುಲಿಂಗ ಲೀಲೆ: ಒಂದು ದಾರ್ಶನಿಕ ಅಧ್ಯಯನ,
ಡಾ. ಎಫ್.ಟಿ.ಹಳ್ಳಿಕೇರಿ ೨೦೦೨

೭. ರಮೇಶ ಮೂಲಗೆ, ಹೈದ್ರಾಬಾದ್–ಕರ್ನಾಟಕ ವೀರಶೈವ ಮಠಗಳು: ಒಂದು ಅಧ್ಯಯನ
ಡಾ. ವಿ.ಎಸ್.ಬಡಿಗೇರ ೨೦೦೩

೮. ಕೇಶವಮೂರ್ತಿ ಕೆ.ಆರ್., ದಲಿತ ಬಂಡಾಯ ಕಾದಂಬರಿಗಳಲ್ಲಿ ಶ್ರಮ ಸಂಸ್ಕೃತಿಯ
ಎಚ್ಚರ ಹಾಗೂ ಪರ್ಯಾಯಗಳ ಹುಡುಕಾಟ, ಡಾ. ವಿ.ಎಸ್.ಬಡಿಗೇರ ೨೦೦೩

೯. ಎ.ಕರಿಬಸಪ್ಪ, ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಡಾ. ಕೆ.ರವೀಂದ್ರನಾಥ ೨೦೦೩

೧೦. ಶಕುಂತಲಾ ಗೋಪಶೆಟ್ಟಿ, ರೇವಣಸಿದ್ಧರು: ಒಂದು ಅಧ್ಯಯನ, ಡಾ. ಕೆ.ರವೀಂದ್ರನಾಥ ೨೦೦೩

೧೧. ಜೆ.ಕರಿಯಪ್ಪ, ಬಳ್ಳಾರಿ ಜಿಲ್ಲೆಯ ಅವಧೂತರು, ಡಾ. ಎಫ್.ಟಿ.ಹಳ್ಳಿಕೇರಿ ೨೦೦೪

೧೨. ಬಿ. ಮಂಜುಳಾ, ಸೂಪಶಾಸ್ತ್ರ: ಒಂದು ಅಧ್ಯಯನ, ಡಾ. ಕೆ.ರವೀಂದ್ರನಾಥ ೨೦೦೪

೧೩. ಸವಿತಾ ಧರ್ಮಪಾಲ, ಹೊಸ್ತಿಲು: ಅಧ್ಯಯನ, ಡಾ. ವಿ.ಎಸ್.ಬಡಿಗೇರ ೨೦೦೫

೧೪. ಪ್ರಕಾಶ್ ಗ. ಖಾಡೆ, ನವೋದಯ ಕಾವ್ಯದ ಮೇಲೆ ಜಾನಪದದ ಪ್ರಭಾವ,ಪ್ರೊ. ಎ.ವಿ.ನಾವಡ ೨೦೦೫

೧೫. ಮಾನಕರಿ ಶ್ರೀನಿವಾಸಾಚಾರ್ಯ, ಹರಿದಾಸ ಸಾಹಿತ್ಯ- ಶ್ರೀಮದ್ಭಾಗವತ ಋಣ ಮತ್ತು ವೃದ್ಧಿ ಪ್ರೊ. ಎ.ವಿ.ನಾವಡ ೨೦೦೫

೧೬. ಎಸ್.ಆರ್.ಚನ್ನವೀರಪ್ಪ, ಕನ್ನಡ ಸಾಹಿತ್ಯದಲ್ಲಿ ಮುಕ್ತಿಯ ನಿರ್ವಚನ, ಡಾ. ವಿ.ಎಸ್.ಬಡಿಗೇರ ೨೦೦೫

೧೭. ಕುಂಬಾರ ಚೆನ್ನಬಸಪ್ಪ, ಕಲ್ಲೂರಿನ ಲಿಂಗಣ್ಣ ಕವಿ ಮತ್ತು ಆತನ ವಂಶಜರು ಡಾ. ಎಸ್.ಎಸ್.ಅಂಗಡಿ ೨೦೦೬

೧೮. ಎಸ್. ಸಿ. ಕಲ್ಯಾಣಿ, ಬಾಗಲಕೋಟೆ ಜಿಲ್ಲೆಯ ದೇಸಗತಿಗಳು, ಡಾ. ವಿ.ಎಸ್.ಬಡಿಗೇರ ೨೦೦೬

೧೯. ಬಸವರಾಜ ಗೊಲ್ಲಾಳಪ್ಪ ಬಿರಾದಾರ, ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ ಡಾ. ಎಫ್.ಟಿ.ಹಳ್ಳಿಕೇರಿ ೨೦೦೮

೨೦. ಡೇವಿಡ್. ಟಿ.ಪುನೀತ್, ಕನ್ನಡ ಬೈಬಲ್: ಒಂದು ಅಧ್ಯಯನ, ಡಾ. ಎಫ್.ಟಿ.ಹಳ್ಳಿಕೇರಿ ೨೦೦೮

೨೧. ಉಷಾರಾಣಿ. ಎ.ಪಿ., ಹೆಳವನಕಟ್ಟೆ ಗಿರಿಯಮ್ಮನ ಜೀವನ ಮತ್ತು ಕೃತಿಗಳು ಡಾ. ಎಸ್.ಎಸ್.ಅಂಗಡಿ ೨೦೦೮

೨೨. ಸರ್ವಮಂಗಳ ಸಕ್ರಿ, ರಾಯಚೂರು ಜಿಲ್ಲೆಯ ತತ್ವಪದಕಾರರು ಮತ್ತು ಅವರ ಸಾಹಿತ್ಯ ಡಾ. ವೀರೇಶ ಬಡಿಗೇರ ೨೦೦೮

೨೩. ಹಂದ್ರಾಳ ಗವಿಸಿದ್ದಪ್ಪ, ಕನ್ನಡ ಸಾಹಿತ್ಯದಲ್ಲಿ ನಾದ ಮತ್ತು ಲಯದ ನಿರ್ವಚನ ಡಾ. ವಿ.ಎಸ್.ಬಡಿಗೇರ ೨೦೦೯

೨೪. ಚಂದ್ರಮೌಳಿ ಎಸ್., ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಸಮಗ್ರ ಸಾಹಿತ್ಯ: ಒಂದು ಅಧ್ಯಯನ ಡಾ. ಕೆ.ರವೀಂದ್ರನಾಥ ೨೦೦೯

೨೫. ಹೆಚ್.ಎಸ್. ವಿರೂಪಾಕ್ಷಪ್ಪ, ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ, ಡಾ. ಕೆ.ರವೀಂದ್ರನಾಥ ೨೦೦೯

೨೬. ಹುಲಿಗೆಮ್ಮ ಬಿ., ಹಾಲುಮತ ಪುರಾಣಗಳು: ಸಾಂಸ್ಕೃತಿಕ ಅಧ್ಯಯನ, ಡಾ. ಕೆ.ರವೀಂದ್ರನಾಥ ೨೦೦೯

೨೭. ಕುಮಾರ್ ಜೆ., ನೂರೊಂದು ವಿರಕ್ತರು: ಒಂದು ಅಧ್ಯಯನ ಡಾ. ಕೆ.ರವೀಂದ್ರನಾಥ ೨೦೦೯

೨೮. ಕಲ್ಲಯ್ಯ ಹಿರೇಮಠ, ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ, ಡಾ. ಎಫ್.ಟಿ.ಹಳ್ಳಿಕೇರಿ ೨೦೦೯

೨೯. ಉಷಾರಾಣಿ ಶರ್ಮ, ಕಮಲಾದೇವಿ ಚಟ್ಟೋಪಧ್ಯಾಯ-ಲಿಂಗ, ರಾಷ್ಟ್ರ-ಜಾತಿ, ವರ್ಗ ಸಂಬಂಧಿ ಸವಾಲುಗಳು, ಪ್ರೊ. ಎ.ವಿ.ನಾವಡ ೨೦೦೯

೩೦. ಶೋಭಾ ಚಪ್ಪರದಳ್ಳಿಮಠ, ಕೋಳೂರು ಶಂಕರಕವಿಯ ಸಮಗ್ರ ಸಾಹಿತ್ಯ ಡಾ. ಎಫ್.ಟಿ.ಹಳ್ಳಿಕೇರಿ ೨೦೧೦

೩೧. ಈರಣ್ಣ ಎನ್. ಹುರಳಿ, ಕನ್ನಡದಲ್ಲಿ ವೈದ್ಯಶಾಸ್ತ್ರದ ಹಸ್ತಪ್ರತಿಗಳು; ಸಾಂಸ್ಕೃತಿಕ ನಿರ್ವಚನ ಡಾ. ವಿ.ಎಸ್.ಬಡಿಗೇರ ೨೦೧೦

೩೨. ಎ.ಎಂ.ರಾಜಶೇಖರಯ್ಯ, ಕನ್ನಡ ಚುಟುಕು ಸಾಹಿತ್ಯ: ಸಾಮಾಜಿಕ ಪ್ರಜ್ಞೆ ಡಾ. ಎಸ್.ಆರ್.ಚನ್ನವೀರಪ್ಪ ೨೦೧೦

೩೩. ಸುಪ್ರಿಯಾ ವಿ. ನಾಗರಹಳ್ಳಿ, ಪುರಂದರದಾಸರ ಪ್ರತಿಮಾಲೋಕ, ಡಾ. ಎಸ್.ಎಸ್.ಅಂಗಡಿ ೨೦೧೦

೩೪. ಅನ್ನಪೂರ್ಣ ಎಸ್. ಗೋಸ್ಬಾಳ, ಹಾಲುಮತ ಅಧ್ಯಯನದ ಆಕರಗಳು: ಸ್ವರೂಪ ಮತ್ತು ವಿಶ್ಲೇಷಣೆ, ಡಾ. ಎಫ್.ಟಿ. ಹಳ್ಳಿಕೇರಿ ೨೦೧೧

೩೫. ಬಾಳಪ್ಪ ಎ.ಬಿ., ಕರ್ನಾಟಕ ಕುರುಬರ ಒಳಪಂಗಡಗಳು: ಸಾಂಸ್ಕೃತಿಕ ಅಧ್ಯಯನ ಡಾ. ಕೆ.ರವೀಂದ್ರನಾಥ ೨೦೧೧

೩೬. ಲಿಂಗಪ್ಪ, ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ, ಡಾ. ಎಸ್.ಆರ್.ಚನ್ನವೀರಪ್ಪ ೨೦೧೨

೩೭. ಉಮೇಶ ಹಡಗಲಿ, ಕನ್ನಡ ಸಂಸ್ಕೃತಿ ಮತ್ತು ಗ್ರಂಥ ಸಂರಕ್ಷಣಾ ಪದ್ಧತಿಗಳು ಡಾ. ವೀರೇಶ ಬಡಿಗೇರ ೨೦೧೩

೩೮. ಟಿ.ನಂದಿನಿ, ಗಲಗಲಿ ಅವ್ವನವರ ಜೀವನ ಮತ್ತು ಕೃತಿಗಳು, ಡಾ. ಎಸ್.ಆರ್.ಚನ್ನವೀರಪ್ಪ ೨೦೧೩

೩೯. ರಮೇಶ ಕೆ., ಕನ್ನಡ ಜೈನ ಹಾಡುಗಳು: ಸಾಂಸ್ಕೃತಿಕ ಅಧ್ಯಯನ, ಡಾ. ಕೆ.ರವೀಂದ್ರನಾಥ ೨೦೧೩

೪೦. ಮೇಟಿ ಸುಮಂಗಲಾ ಸಂಗಪ್ಪ, ಕರ್ನಾಟಕ ಲಿಂಗಾಯತ ರಾಣಿಯರು: ಒಂದು ಅಧ್ಯಯನ ಡಾ. ಕೆ.ರವೀಂದ್ರನಾಥ ೨೦೧೫

೪೧. ರಾಜಶೇಖರ ಸಿ. ಕಂಬಾರ, ಪ್ರೇಕ್ಷಕರ ಪ್ರತಿಕ್ರಿಯೆ: ದೃಶ್ಯ ಮಾಧ್ಯಮದ ಹಿನ್ನೆಲೆಯಲ್ಲಿ ಡಾ. ವೀರೇಶ ಬಡಿಗೇರ ೨೦೧೫

೪೨. ಹನಮಂತಮ್ಮ ಎಂ., ವಿ.ಆರ್. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ ಡಾ. ಎಫ್.ಟಿ.ಹಳ್ಳಿಕೇರಿ ೨೦೧೫

೪೩. ಪಾಟೀಲ ರಾಜಶ್ರೀ ಬಸನಗೌಡ, ಬೀರಪ್ಪ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ ಡಾ. ಎಫ್.ಟಿ.ಹಳ್ಳಿಕೇರಿ ೨೦೧೫

೪೪. ಮಠಪತಿ ಶ್ರೀಶೈಲ ಗುರುಸಿದ್ಧಯ್ಯ, ನಿಡಗುರುಕಿ ಜೀವೂಬಾಯಿ ಅವರ ಕೀರ್ತನೆಗಳು: ಒಂದು ಅಧ್ಯಯನ, ಡಾ. ಎಸ್.ಆರ್.ಚನ್ನವೀರಪ್ಪ ೨೦೧೫

೪೫. ಸಂತೋಷ ಕಾಳನ್ನವರ, ಮಳಿಯಪ್ಪನ ಪರಂಪರೆ ಮತ್ತು ಸಂಪ್ರದಾಯ ಡಾ. ವೀರೇಶ ಬಡಿಗೇರ ೨೦೧೫

೪೬. ಶಿವಪ್ಪ, ಕೊಪ್ಪಳ ಜಿಲ್ಲೆಯ ಜನಪದ ಗೀತ ಸಾಹಿತ್ಯ, ಡಾ. ಎಸ್.ಎಸ್.ಅಂಗಡಿ ೨೦೧೬

೪೭. ಶಿಗ್ಗಾವಿ ಬಸಮ್ಮ ಹನುಮರೆಡ್ಡಿ, ಕನ್ನಡ ಬಯಲಾಟದ ಹಸ್ತಪ್ರತಿಗಳು: ಸರ್ವೇಕ್ಷಣೆ ಮತ್ತು ಅಧ್ಯಯನ (ಉತ್ತರ ಕರ್ನಾಟಕ ಅನುಲಕ್ಷಿಸಿ), ಡಾ. ಕೆ.ರವೀಂದ್ರನಾಥ ೨೦೧೬

೪೮. ಶೀಲವಂತ ರಾಜೇಶ್ವರಿ ವೀರಣ್ಣ, ಕನ್ನಡ ಸಾಹಿತ್ಯದಲ್ಲಿ ಕೊರವಂಜಿ ಸಂಕಥನ ಡಾ. ವೀರೇಶ ಬಡಿಗೇರ ೨೦೧೬

೪೯. ಹನಗಂಡಿ ಸುರೇಶ ಭೀಮಪ್ಪ, ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು: ಒಂದು ಅಧ್ಯಯನ ಡಾ. ಎಸ್.ಎಸ್.ಅಂಗಡಿ ೨೦೧೭

೫೦. ಡಿ.ಬಸವರಾಜ, ಶ್ರೀನಿವಾಸ ಹಾವನೂರ ಅವರ ಸಮಗ್ರ ಸಾಹಿತ್ಯ, ಡಾ. ಎಫ್.ಟಿ.ಹಳ್ಳಿಕೇರಿ ೨೦೧೭

೫೧. ವಿರುಪಾಕ್ಷಿ ಎನ್.ಬಿ., ಕರ್ನಾಟಕ–ಆಂಧ್ರಪ್ರದೇಶಹ ಗಡಿನಾಡ ಕುರುಬ ಸಮುದಾಯ: ಸಾಂಸ್ಕೃತಿಕ ಅಧ್ಯಯನ, ಡಾ. ಎಫ್.ಟಿ. ಹಳ್ಳಿಕೇರಿ ೨೦೧೭

೫೨. ತಳವಾರ ವಿಠ್ಠಲ, ಕರ್ನಾಟಕ ತಳವಾರರು: ಸಾಂಸ್ಕೃತಿಕ ಅಧ್ಯಯನ, ಡಾ. ಎಸ್.ಎಸ್.ಅಂಗಡಿ ೨೦೧೭

೫೩. ಪ್ರಭಾಕರ ಎಂ., ಸೊಬಗಿನ ಸೋನೆ: ಒಂದು ಅಧ್ಯಯನ, ಡಾ. ಎಸ್.ಆರ್.ಚನ್ನವೀರಪ್ಪ ೨೦೧೭

೫೪. ಶಿವನಗೌಡ ಪಾಟೀಲ, ರಂ.ಶ್ರೀ. ಮುಗಳಿ ಅವರ ಸಮಗ್ರ ಸಾಹಿತ್ಯ, ಡಾ. ಎಸ್.ಎಸ್.ಅಂಗಡಿ ೨೦೧೭

೫೫. ಸಣ್ಣಪಾಲಯ್ಯ ಎಸ್.ಎಂ., ಸರೂರು ಹಾಲುಮತ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ ಡಾ. ಎಫ್.ಟಿ.ಹಳ್ಳಿಕೇರಿ ೨೦೧೭

೫೬. ಬೋರೇಶಿ ಇ., ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ ಡಾ. ಎಸ್.ಆರ್.ಚನ್ನವೀರಪ್ಪ ೨೦೧೭

೫೭. ಗೀತಾ ಸಿ., ಕನ್ನಡ ಗ್ರಂಥಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣ, ಡಾ. ವೀರೇಶ ಬಡಿಗೇರ ೨೦೧೮

೫೮. ಬಾಣದ ಮಂಜುನಾಥ, ಕರ್ನಾಟಕದಲ್ಲಿ ಹಸ್ತಪ್ರತಿ ಭಂಡಾರಗಳು: ಪರಂಪರೆ ಮತ್ತು ವರ್ತಮಾನ ಡಾ. ಎಸ್.ಆರ್.ಚನ್ನವೀರಪ್ಪ ೨೦೧೮

೫೯. ಪರ್ಸುನಾಯ್ಕ ಎಲ್.ಎಸ್., ಕನ್ನಡದಲ್ಲಿ ಗಜಶಾಸ್ತ್ರ ಸಾಹಿತ್ಯ, ಡಾ. ಕೆ. ರವೀಂದ್ರನಾಥ ೨೦೧೮

೬೦. ವಿಜಯಶಂಕರ ಭರಮಪ್ಪ, ಡಿ.ಎಲ್. ನರಸಿಂಹಾಚಾರ್ ಅವರ ಸಮಗ್ರ ಸಾಹಿತ್ಯ ಡಾ. ಎಸ್.ಎಸ್.ಅಂಗಡಿ ೨೦೧೯

೬೧. ಕಂಬಾರ ರಾಜು ನಾಗಪ್ಪ, ಕುಶಲಕರ್ಮಿಗಳು ಮತ್ತು ಶಿರಸಂಗಿ ಕಾಳಮ್ಮ ಡಾ. ಎಸ್.ಎಸ್.ಅಂಗಡಿ ೨೦೧೯

೬೨. ರಾಜಕುಮಾರ ಶರಣಪ್ಪ, ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಕೆ.ರವೀಂದ್ರನಾಥ ೨೦೧೯

೬೩. ರಮೇಶಗೌಡ ಮಲ್ಲನಗೌಡ ಕಲ್ಲನಗೌಡರ, ಕನ್ನಡ ಸಾಹಿತ್ಯದಲ್ಲಿ ಸತ್ಯೇಂದ್ರಚೋಳನ ಕಥೆ ಡಾ. ಎಫ್.ಟಿ.ಹಳ್ಳಿಕೇರಿ ೨೦೧೯

೬೪. ಪರವ್ವಗೋಳ ಕೆಂಪಣ್ಣ ಶಿವಲಿಂಗಪ್ಪ, ಬೆಳಗಾವಿ ಪರಿಸರದ ಹಸ್ತಪ್ರತಿಗಳು: ಸಾಂಸ್ಕೃತಿಕ ಅನನ್ಯತೆ ಡಾ. ಎಸ್.ಆರ್. ಚನ್ನವೀರಪ್ಪ ೨೦೧೯

೬೫. ಗೀತಾಬಾಯಿ ಬಡಿಗೇರ, ಕನ್ನಡ ಸಾಹಿತ್ಯದಲ್ಲಿ ಪಾಂಚಾಳರ ಪ್ರತಿನೀಧೀಕರಣ ಡಾ. ವೀರೇಶ ಬಡಿಗೇರ ೨೦೨೦

೬೬. ಆಶಿಕಾ ಹೆಚ್.ಸಿ., ಜೇಡರ ದಾಸಿಮಯ್ಯ: ಒಂದು ಅಧ್ಯಯನ, ಡಾ. ಕೆ.ರವೀಂದ್ರನಾಥ ೨೦೨೦

೬೭. ಆಶಾ ಎನ್.ಟಿ., ಕನ್ನಡದಲ್ಲಿ ಮಹಾತ್ಮೆಗಳು: ಸಾಂಸ್ಕೃತಿಕ ಅಧ್ಯಯನ, ಡಾ. ಎಫ್.ಟಿ.ಹಳ್ಳಿಕೇರಿ ೨೦೨೦

೬೮. ಪ್ರಿಯದರ್ಶಿನಿ ವೀರಭದ್ರಪ್ಪ, ಕನ್ನಡ ಅನುಭಾವ ಸಾಹಿತ್ಯದಲ್ಲಿ ಜ್ಞಾನದ ನಿರ್ವಚನ ಡಾ. ವೀರೇಶ ಬಡಿಗೇರ ೨೦೨೦

೬೯. ಶ್ವೇತ ಹೆಚ್.ಜಿ., ಎಂ.ಎಂ.ಕಲಬುರ್ಗಿ ಅವರ ವಚನ ವ್ಯವಸಾಯ: ಒಂದು ಅಧ್ಯಯನ ಡಾ. ಕೆ.ರವೀಂದ್ರನಾಥ ೨೦೨೦

೭೦. ನಿಂಬಣ್ಣ ನಿಂಗಪ್ಪ ಗೊರವರ, ಇಟ್ಟಪ್ಪ: ಸಾಂಸ್ಕೃತಿಕ ಅಧ್ಯಯನ, ಡಾ. ಎಫ್.ಟಿ.ಹಳ್ಳಿಕೇರಿ ೨೦೨೦

೭೧. ವಿನೋದ ಎಂ. ಬಂಡಿ, ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಸತಿಪದ್ಧತಿ
ಡಾ. ಎಸ್.ಆರ್.ಚನ್ನವೀರಪ್ಪ ೨೦೨೦

೭೨. ಸಂತೋಷಕುಮಾರ ಜಿ., ಹಂಡೆ ಅರಸುಮನೆತನ: ಸಾಂಸ್ಕೃತಿಕ ಅಧ್ಯಯನ
ಡಾ. ಕೆ.ರವೀಂದ್ರನಾಥ ೨೦೨೧

೭೩. ಚಂದ್ರಶೇಖರ ಕಾಳನ್ನವರ ಮುತ್ತಪ್ಪ, ಕನ್ನಡದಲ್ಲಿ ವಿಶ್ವಕರ್ಮ ಪತ್ರಿಕೆಗಳು ಹಾಗೂ
ಅವುಗಳ ತಾತ್ವಿಕ ಸ್ವರೂಪ, ಡಾ. ವೀರೇಶ ಬಡಿಗೇರ ೨೦೨೧

೭೪. ಪ್ರವೀಣ್ ಆರ್., ಕರ್ನಾಟಕದಲ್ಲಿ ಹಸ್ತಪ್ರತಿಗಳ ಅಧ್ಯಯನದ ಸ್ವರೂಪ ಹಾಗೂ
ಅದರ ತಾತ್ವಿಕ ನೆಲೆಗಳು, ಡಾ. ವೀರೇಶ ಬಡಿಗೇರ ೨೦೨೧

೭೫. ನಾಗರಾಜ್ ಎನ್., ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ತಂತ್ರಜ್ಞಾನದ ಪಾತ್ರ
ಡಾ. ವೀರೇಶ ಬಡಿಗೇರ ೨೦೨೧

೭೬. ಮಲ್ಲಿಕಾರ್ಜುನ ಇಂಚಲ, ಕುರುಬರ ಹೇಳಿಕೆಗಳು: ಸರ್ವೇಕ್ಷಣೆ ಮತ್ತು ವಿಶ್ಲೇಷಣೆ
ಡಾ. ಎಸ್.ಎಸ್.ಅಂಗಡಿ ೨೦೨೧

೭೭. ಮಂಜುನಾಥ ಜಿ.ವಿ., ಸಂಗೊಳ್ಳಿ ರಾಯಣ್ಣ ಆಕರಗಳು: ಸ್ವರೂಪ ಮತ್ತು ವಿಶ್ಲೇಷಣೆ
ಡಾ. ಎಸ್.ಎಸ್.ಅಂಗಡಿ ೨೦೨೧

೭೮. ವಿಶ್ವನಾಥ ದೊಡಮನಿ, ಕನ್ನಡ ಸಾಹಿತ್ಯದಲ್ಲಿ ಸಾನಂದನ ಕಥೆ: ಒಂದು ಅಧ್ಯಯನ
ಡಾ. ಸಣ್ಣವೀರಪ್ಪ ದೊಡ್ಡಮನಿ ೨೦೨೧

೭೯. ನಾಗರತ್ನ ಡಿ., ವಚನ ಸಾಹಿತ್ಯ: ಆಧುನಿಕಪೂರ್ವ ಅನುಸಂಧಾನದ ನೆಲೆಗಳು
ಡಾ. ಕೆ.ರವೀಂದ್ರನಾಥ ೨೦೨೨

೮೦. ಯಲ್ಲವ್ವ ಹೆಬ್ಬಳ್ಳಿ, ನರಗುಂದ ಪರಿಸರದ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್.ಎಸ್.ಅಂಗಡಿ ೨೦೨೨

೮೧. ನರಗುಂದ ಕಾಳುತಾಯಿ ಸಿದ್ಧಪ್ಪ, ಪಂಚಾಳ ವಚನಕಾರರ ಲೋಕದೃಷ್ಟಿ
ಡಾ. ವೀರೇಶ ಬಡಿಗೇರ ೨೦೨೨

೮೨. ಯಲ್ಲಜ್ಜರ ಫಕ್ಕೀರಪ್ಪ, ಕನ್ನಡ ಕಾವ್ಯಗಳಲ್ಲಿ ಸ್ವಪ್ನದ ಪರಿಕಲ್ಪನೆ, ಡಾ. ಎಫ್.ಟಿ.ಹಳ್ಳಿಕೇರಿ ೨೦೨೨

೮೩. ಕಾವ್ಯ ಎಂ., ಗೌ.ಮ.ಉಮಾಪತಿಶಾಸ್ತ್ರೀ ಅವರ ಗ್ರಂಥಸಂಪಾದನೆಯ ವೈಧಾನಿಕತೆ
ಡಾ. ಕೆ.ರವಿಂದ್ರನಾಥ ೨೦೨೨

೮೪. ಕಣಮಪ್ಪ ಕೆ., ಕನ್ನಡದಲ್ಲಿ ಧರ್ಮನಾಥ ಪುರಾಣ: ತೌಲನಿಕ ಅಧ್ಯಯನ
ಡಾ. ರಾಜಶೇಖರ ಎಸ್. ಬಸುಪಟ್ಟದ ೨೦೨೨

೮೫. ಸುರೇಶ ಮೂಲಿಮನಿ, ಏಕೋರಾಮೇಶ್ವರ ಪುರಾಣ: ಸಾಂಸ್ಕೃತಿಕ ಅಧ್ಯಯನ
ಡಾ. ಎ.ಸಿ.ವಾಲಿ ೨೦೨೨

❑❑

೧೫

ಎಂ.ಫಿಲ್. ಪದವಿ ವಿವರಗಳು

ಕ್ರಸಂ., ಅಭ್ಯರ್ಥಿಯ ಹೆಸರು / ಪ್ರಬಂಧದ ಶೀರ್ಷಿಕೆ / ಮಾರ್ಗದರ್ಶಕರ ಹೆಸರು / ಪದವಿ ಪಡೆದ ವರ್ಷ

೧. ಇಮಾಮಸಾಬ್ ಜಿ.ಮ್ಯಾಗೇರಿ, ಕನ್ನಡ ಹಸ್ತಪ್ರತಿಗಳ ವಿಷಯ ಸಂಪತ್ತು, ಡಾ. ವಿ.ಎಸ್.ಬಡಿಗೇರ ೧೯೯೭

೨. ನಾಗಭೂಷಣಗೌಡ ಪಾಟೇಲ್, ದೇವುಡು ಅವರ ಸಂಸ್ಕೃತಿ ಚಿಂತನೆ, ಡಾ. ಎಫ್.ಟಿ.ಹಳ್ಳಿಕೇರಿ ೧೯೯೭

೩. ಉಷಾರಾಣಿ ಎ.ಪಿ., ಡಾ. ಹರ್ಮನ್ ಮೋಗ್ಲಿಂಗ್ ಸಂಕಲಿಸಿದ ದಾಸರ ಪದಗಳು ಒಂದು ಅಧ್ಯಯನ, ಪ್ರೊ. ಎ.ವಿ.ನಾವಡ ೨೦೦೨

೪. ರೋಜಾ ಜೆ., ಕನ್ನಡ ಹಸ್ತಪ್ರತಿಗಳು ಮತ್ತು ಮಹಿಳಾ ಬರಹಗಾರ್ತಿಯರು ಡಾ. ವಿ.ಎಸ್.ಬಡಿಗೇರ ೨೦೦೪

೫. ದೀಪಾ ಕೆ.ಎನ್., ಭರತೇಶ ವೈಭವ: ಛಂದಸ್ಸು ಮತ್ತು ಶೈಲಿ, ಡಾ. ಎಸ್.ಎಸ್.ಅಂಗಡಿ ೨೦೦೬

೬. ಶರಣಬಸವ ಜಿ.ಎಂ., ಎಲ್.ಬಸವರಾಜು ಅವರು ಸಂಪಾದಿಸಿದ ಶಿವದಾಸ ಗೀತಾಂಜಲಿ: ಒಂದು ಅಧ್ಯಯನ, ಡಾ. ಎಸ್.ಆರ್. ಚೆನ್ನವೀರಪ್ಪ ೨೦೦೬

೭. ಲಲಿತಾ ಭಾವಿಕಟ್ಟಿ, ಇಲ್‌ಕಲ್ ಸೀರೆ: ಸಾಂಸ್ಕೃತಿಕ ಅಧ್ಯಯನ, ಡಾ. ಕೆ.ರವೀಂದ್ರನಾಥ ೨೦೦೬

೮. ಸುರೇಶ ಭೀಮಪ್ಪ ಹನಗಂಡಿ ರಾಘವೇಂದ್ರ ಪಾಟೀಲರ ತೇರು ಕಾದಂಬರಿ ಒಂದು ವಿವೇಚನೆ, ಡಾ. ಎಸ್.ಎಸ್.ಅಂಗಡಿ ೨೦೦೮

೯. ರಾಜೇಶ್ವರಿ ವೀರಣ್ಣ ಶೀಲವಂತ, ಚಂದ್ರಶೇಖರ ಕಂಬಾರರ ಕಾದಂಬರಿಗಳಲ್ಲಿ 'ತಾಯಿ ಸಂಸ್ಕೃತಿ'ಯ ಪ್ರಾತಿನಿಧ್ಯ, ಡಾ. ವಿ.ಎಸ್.ಬಡಿಗೇರ ೨೦೦೮

೧೦. ವಿಜಯಶ್ರೀ ಶ್ರೀರಾಮ ಇಟ್ಟಣ್ಣವರ, ಕಂಬಳಿ: ಸಾಂಸ್ಕೃತಿಕ ಅಧ್ಯಯನ, ಡಾ. ಎಫ್.ಟಿ.ಹಳ್ಳಿಕೇರಿ ೨೦೦೮

೧೧. ಸಂಗಪ್ಪ ಈರಣ್ಣ ತೇಲಿ, ಶರಣ ಹಾವಿನಹಾಳ ಕಲ್ಲಯ್ಯ: ದಾರ್ಶನಿಕ ಚಿಂತನೆಗಳು ಡಾ. ವಿ.ಎಸ್.ಬಡಿಗೇರ ೨೦೦೮

೧೨. ಮೈಲಾರಪ್ಪ. ಬಿ., ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳು, ಡಾ. ಎಸ್.ಎಸ್.ಅಂಗಡಿ ೨೦೦೮

೧೩. ಈಶ್ವರಗೌಡ ಎಂ. ಚೋಬಾರಿ, ಆರ್.ಬಿ.ಚಿಲಮಿ ಅವರ ಬದುಕು-ಬರಹ
ಡಾ. ಎಸ್.ಆರ್.ಚನ್ನವೀರಪ್ಪ ೨೦೦೮

೧೪. ಶಾಂತಪ್ಪ. ರಾಮಣ್ಣ. ಕೆಂಚಣ್ಣವರ, ರಾ.ಕು.ಅವರ ಲಲಿತ ಪ್ರಬಂಧ ಸಾಹಿತ್ಯ ಒಂದು ಅಧ್ಯಯನ
ಡಾ. ಎಸ್.ಆರ್.ಚನ್ನವೀರಪ್ಪ ೨೦೦೮

೧೫. ಸುಮಂಗಲಾ ಸಂ. ಮೇಟಿ, ಮೊಲ್ಲೆ ಬೊಮ್ಮಯ್ಯಗಳ ಕಾವ್ಯ: ಒಂದು ಅಧ್ಯಯನ
ಡಾ. ಎಫ್.ಟಿ.ಹಳ್ಳಿಕೇರಿ ೨೦೦೮

೧೬ ಮುಧೋಬ ನಾಯಕ ಎಂ., ವಚನಸಾಹಿತ್ಯ ಸಂಪಾದನೆ ಮತ್ತು ಎಸ್. ಶಿವಣ್ಣ
ಡಾ. ಎಸ್.ಆರ್.ಚನ್ನವೀರಪ್ಪ ೨೦೧೦

೧೭ ಹನುಮಂತಗೌಡ ಆರ್. ಕಲ್ಮನಿ, ಪಾರಂಪರಿಕ ಸಂರಕ್ಷಣಾ ವಿಧಾನಗಳು: ಒಂದು ಅಧ್ಯಯನ
ಡಾ. ವಿ.ಎಸ್.ಬಡಿಗೇರ ೨೦೧೦

೧೮ ರಾಜಶ್ರೀ ಎಂ. ಪಾಟೀಲ, ಸರೂರು ಶಾಂತಮುತ್ತಯ್ಯ: ಒಂದು ಅಧ್ಯಯನ
ಡಾ. ಎಫ್.ಟಿ.ಹಳ್ಳಿಕೇರಿ ೨೦೧೦

೧೯. ತಳವಾರ ವಿಠಲ, ವೀರೇಂದ್ರ ಸಿಂಪಿ ಅವರ ಆಯ್ದ ಲಲಿತ ಪ್ರಬಂಧಗಳು ಒಂದು ವಿವೇಚನೆ
ಡಾ. ಎಸ್.ಆರ್. ಚನ್ನವೀರಪ್ಪ ೨೦೧೦

೨೦. ವಿರುಪಾಕ್ಷಿ. ಎನ್.ಬಿ., ಬ.ಪ.ನಾಯ್ಕರ ಅವರ ಸಮಗ್ರ ಸಾಹಿತ್ಯ, ಡಾ. ಎಫ್.ಟಿ.ಹಳ್ಳಿಕೇರಿ ೨೦೧೦

೨೧. ಕ್ರಿಷ್ಟಪ್ಪ ಯಂಕಪ್ಪ, ಕನ್ನಡ ಹಸ್ತಪ್ರತಿಗಳಲ್ಲಿ ದೈವೀ ನೆಲೆಗಳು, ಡಾ. ವಿ.ಎಸ್.ಬಡಿಗೇರ ೨೦೧೦

೨೨. ಮಾರನೂರ ರಾಜಶೇಖರ ಸಿದ್ರಾಮಪ್ಪ, ಇಂಡಿ ತಾಲ್ಲೂಕಿನ ಹಾಲುಮತ ದೈವಗಳು:
ಒಂದು ಅಧ್ಯಯನ, ಡಾ. ಎಫ್.ಟಿ.ಹಳ್ಳಿಕೇರಿ ೨೦೧೦

೨೩ ಗೋಡಿಹಾಳ ಕಾಂತೇಶರೆಡ್ಡಿ ರಾಮರೆಡ್ಡಿ, ಧರ್ಮ ಕಲ್ಯಾಣ: ಒಂದು ಸಾಂಸ್ಕೃತಿಕ ಅಧ್ಯಯನ
ಡಾ. ಕೆ.ರವೀಂದ್ರನಾಥ ೨೦೧೦

೨೪ ಸುರೇಶ ವೈ., ಬಾಚಿಕಾಯಕದ ಬಸವಯ್ಯನ ವಚನಗಳ ತಾತ್ವಿಕ ಸ್ವರೂಪ
ಡಾ. ವೀರೇಶ ಬಡಿಗೇರ ೨೦೧೮

೨೫ ನಾಗಪ್ಪ ಕೆ., ಮುದೇನೂರು ಸಂಗಣ್ಣನವರ ಸಂಪಾದಿತ ಕೃತಿಗಳು, ಡಾ. ವೀರೇಶ ಬಡಿಗೇರ ೨೦೧೮

೨೬ ಮಡಪತಿ ಜ್ಯೋತಿ, ಗಂಗಾಧರ ಮಡಿವಾಳೇಶ್ವರ ತುರಮರಿಯವರ ಟೀಕುಗಳು ಮತ್ತು
ಅನುವಾದ ಸಾಹಿತ್ಯ, ಡಾ. ಕೆ.ರವೀಂದ್ರನಾಥ ೨೦೧೮

೨೭. ಮಹಂತೇಶ ಜಿ.ಆರ್., ಸಿ.ಕೆ.ಪರಶುರಾಮಯ್ಯ ಅವರ ಸಮಗ್ರ ಸಾಹಿತ್ಯ, ಡಾ. ಎಫ್.ಟಿ.ಹಳ್ಳಿಕೇರಿ ೨೦೧೮

೨೮. ವೀಣಾ ಎಂ., ಭಂಡಾರ: ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಎಸ್.ಎಸ್.ಅಂಗಡಿ ೨೦೧೮

೨೯. ಓಬಣ್ಣ ಪಿ., ಯೋಗರತ್ನಾಕರ: ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಎಫ್.ಟಿ.ಹಳ್ಳಿಕೇರಿ ೨೦೧೯

೩೦. ಶಿವಣ್ಣ, ನುಂಕೆಮಲೆ ಸಿದ್ಧೇಶ್ವರ ಚಾರಿತ್ರ: ಒಂದು ಅಧ್ಯಯನ, ಡಾ. ಎಫ್.ಟಿ.ಹಳ್ಳಿಕೇರಿ ೨೦೨೦

೧೬

ಪೋಸ್ಟ್ ಡಾಕ್ಟರಲ್ ಫೆಲೋ ವಿವರಗಳು

ಕ್ರಸಂ.	ಪಿ.ಡಿ.ಎಫ್. ವಿದ್ಯಾರ್ಥಿ ಹೆಸರು / ವಿಷಯ / ಮಾರ್ಗದರ್ಶಕರು / ವರ್ಷ	
೧.	ಕೆ.ಆರ್.ಕೇಶವಮೂರ್ತಿ ಹಸ್ತಪ್ರತಿಗಳು ಮತ್ತು ಕುಶಲಕಮಿಗಳು ಕೆ.ರವೀಂದ್ರನಾಥ	೨೦೧೪-೨೦೧೫
೨.	ಹಂದ್ರಾಳ ಗವಿಸಿದ್ಧಪ್ಪ ಕನ್ನಡ ಹಸ್ತಪ್ರತಿಗಳ ಸಾಂಸ್ಕೃತಿಕ ಅಧ್ಯಯನ ವೀರೇಶ ಬಡಿಗೇರ	೨೦೧೫-೨೦೧೬
೩.	ರಾಜಶ್ರೀ ಬ. ಪಾಟೀಲ ಹಾಲುಮತ ಸಮುದಾಯದ ಆಚರಣೆಗಳ ಸೈದ್ಧಾಂತಿಕ ಅಧ್ಯಯನ ಎಫ್.ಟಿ.ಹಳ್ಳಿಕೇರಿ	೨೦೧೬-೨೦೧೭
೪.	ಶಿವಪ್ಪ ಹಂಪಿ ಪರಿಸರದ ಜನಪದ ವೈದ್ಯ ಪದ್ಧತಿ ಎಸ್.ಎಸ್.ಅಂಗಡಿ	೨೦೧೭-೨೦೧೮

❑❑

೧೭

ಗಣ್ಯಮಾನ್ಯರು ಹಾಗೂ ಶಿಬಿರಾರ್ಥಿಗಳ ಅಭಿಪ್ರಾಯಗಳು

Departmrnt of Manuscriptology, Women, Tribal Communities, Dalits have the Past as their major are's of attention. while others look at the Present status of the region and its people from a development point of View, which covers language, literature, etc., we think such judicious choice is to be maintaine in the University's future plans for adding departments..

NAAC Report, 21.3.2003

The good work done by Kannada University with the regard to the manuscript Servey be considered a model for the future pre-survey work in the districts.

Dr. Sudha Gopalkrishnan

National Misson for Manuscripts

NEW DELHI

ನಮ್ಮ ನಾಡಿನಲ್ಲಿ ಕೆಲವು ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿ ವಿಭಾಗಗಳು ಅಸ್ತಿತ್ವಕ್ಕೆ ಬಂದಿವೆ. ಇವುಗಳಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಹಸ್ತಪ್ರತಿ ಬಂಡಾರದ ಬಾಗಿಲು ಮೊದಲಿನಿಂದಲೂ ಮುಚ್ಚಿಯೇ ಇದೆ. ಎಸ್.ಶಿವಣ್ಣ ಅವರಿಂದಾಗಿ ಕ್ರಿಯಾಶೀಲವಾಗಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದ ಬಾಗಿಲು, ಅವರ ನಿವೃತ್ತಿಯ ಬಳಿಕ ಮುಚ್ಚಿಯೇ ಹೋಯಿತು. ಕರ್ನಾಟಕ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದ ಬಾಗಿಲು ಮುಂಜಾನೆ ತೆರೆಯುವ, ಸಂಜೆ ಮುಚ್ಚುವ ಸ್ಥಿತಿಗಿಳಿದಿದೆ. ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ವಿಭಾಗ ಮೊದಲಿನ ವೈಭವ ಕಳೆದು ಕೊಂಡಿದ್ದರೂ ತಕ್ಕಮಟ್ಟಿಗೆ ಕೆಲಸ ಮಾಡುತ್ತಲಿದೆ. ಹೀಗೆ ಇವೆಲ್ಲ ಮಲಗಿರುವ-ಮಲಗುತ್ತಲಿರುವ ಸಂದರ್ಭದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಎಚ್ಚರವಾಗಿರುವುದು, ಸಂತೋಷದ ಸಂಗತಿ. ಹಸ್ತಪ್ರತಿಗಳ

ಸಂಗ್ರಹ-ಸಂರಕ್ಷಣೆ-ಸೂಚೀ ರಚನೆ ಇತ್ಯಾದಿ ಸಾಂಪ್ರದಾಯಿಕ ವಿದ್ವತ್ತಿನ ಕಾರ್ಯಗಳೊಂದಿಗೆ, ಭಿನ್ನಪಾಠದ ಚಲನಶೀಲತೆ-ಹಸ್ತಪ್ರತಿಗಳ ಕಂಪ್ಯೂಟರೀಕರಣ ಇತ್ಯಾದಿ ಹೊಸ ಹೊಸ ಚಿಂತನೆಗಳಲ್ಲಿ ಮುಂದುವರಿಯುತ್ತಿರುವುದು, ಅದರ ಆಧುನಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಇದೂ ಸಾಲದೆಂಬಂತೆ ಹಸ್ತಪ್ರತಿ ಅಧ್ಯಯನ ಹೆಸರಿನ ಪತ್ರಿಕೆಯ ಆರಂಭ, ಯು.ಜಿ.ಸಿ. ನೆರವಿನ ಅರ್ಥಪೂರ್ಣ ಯೋಜನೆಗಳು, ವಿದ್ಯಾರ್ಥಿಗಳಿಗೆ ನೀಡುವ ಹಸ್ತಪ್ರತಿ ವಾಚನ ತರಬೇತಿ ಮೊದಲಾದವು, ಈ ವಿಭಾಗದ ಶೈಕ್ಷಣಿಕ ಆಸಕ್ತಿಯನ್ನು ಸೂಚಿಸುತ್ತವೆ.

ಎಂ.ಎಂ. ಕಲಬುರ್ಗಿ

ಕನ್ನಡ ವಿ.ವಿ. ವಿಶ್ರಾಂತ ಕುಲಪತಿಗಳು, ಧಾರವಾಡ, ೧೬.೯.೨೦೦೫

•

Large and Very interesting collection of manuscripts. A wealth information is available and staff makes it Kindly of desposal of scholar. A lot can be alone yet, so much has to be done with it.

Nicole Mercy, France, 12.2.2014

'ಎಲ್ಲರೂ ಮಲಗಿರುವಾಗ ಇವನೊಬ್ಬ ಎದ್ದ' ಎಂಬಂತೆ ಎಲ್ಲಾ ವಿಶ್ವವಿದ್ಯಾನಿಲಯಗಳೂ ಹಸ್ತಪ್ರತಿಗಳ ವಿಚಾರದಲ್ಲಿ ಆಸಕ್ತಿಯನ್ನೇ ಕಳೆದುಕೊಂಡು ಸುಷುಪ್ತಾವಸ್ಥೆಯಲ್ಲಿರುವಾಗ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಮಾತ್ರ ಎಚ್ಚೆತ್ತು ಹುಮ್ಮಸ್ಸಿನಿಂದ ಕಾರ್ಯನಿರ್ವಹಿಸುತ್ತಿರುವುದು ನನ್ನಂಥವರಿಗೆ ಬಹು ಹೆಮ್ಮೆಯ ವಿಷಯವಾಗಿದೆ. ಈ ದಿಸೆಯಲ್ಲಿ ಮಾಡುವ ಕೆಲಸ ಅಗಾಧವಾಗಿದ್ದರೂ ತನ್ನ ಕೈಲಾದಷ್ಟು ಸೇವೆ ಸಲ್ಲಿಸುತ್ತಿರುವ ಈ ವಿಭಾಗಕ್ಕೆ, ಅದಕ್ಕೆ ಉತ್ತೇಜನ ನೀಡುತ್ತಿರುವ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮೊದಲು ಕೃತಜ್ಞತೆ ಸಲ್ಲಿಸುತ್ತೇನೆ.

ಬಿ.ಎಸ್. ಸಣ್ಣಯ್ಯ

ಹಿರಿಯ ವಿದ್ವಾಂಸರು, ಮೈಸೂರು, ೨೭.೯.೨೦೦೬

ಹಸ್ತಪ್ರತಿಗಳ ಅಧ್ಯಯನದ ವಿವಿಧ ಅಂಗಗಳಿಗೆ ಸಂಬಂಧಿಸಿದಂತೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಮಾಡುತ್ತಿರುವ ಕಾರ್ಯ ತುಂಬ ಪ್ರಶಂಸನೀಯ ಮತ್ತು ಅನುಕರಣೀಯ. ಆ ವಿಭಾಗದಲ್ಲಿರುವ ವೀರೇಶ ಬಡಿಗೇರ, ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ, ಎಸ್.ಎಸ್.ಅಂಗಡಿ, ಎಸ್.ಆರ್.ಚನ್ನವೀರಪ್ಪ ಅವರಂಥ ಯುವಪೀಳಿಗೆ ಅರ್ಪಿತ ಮನೋಭಾವದಿಂದ, ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣ, ಸೂಚೀಕರಣ, ಸಂಪಾದನ ಮತ್ತು ಕ್ಷೇತ್ರಕಾರ್ಯಗಳಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡಿರುವುದು ತುಂಬ ಸಂತಸದ ಸಂಗತಿ. ಭಾಷೆಯ ದೃಷ್ಟಿಯಿಂದ ಆಧುನಿಕ ದೃಷ್ಟಿಯಿಂದ ಹಸ್ತಪ್ರತಿಗಳನ್ನು ಅಭ್ಯಸಿಸಿ, ಆ ಕುರಿತು ಗ್ರಂಥಗಳನ್ನು ಹೊರತರುತ್ತಿರುವುದು, ಅಪ್ರಕಟಿತ ಪುಸ್ತಕಗಳನ್ನು ಪ್ರಕಟಿಸುತ್ತಿರುವುದು, ತರಬೇತಿ ಕೇಂದ್ರಗಳನ್ನು ನಡೆಸುತ್ತಿರುವುದು, ಹಸ್ತಪ್ರತಿ ಸಮ್ಮೇಳನಗಳನ್ನು ನಾಡಿನ ಬೇರೆಬೇರೆ ಭಾಗಗಳಲ್ಲಿ ಏರ್ಪಡಿಸುತ್ತಿರುವುದು ಆ ವಿಭಾಗದ ಕಾರ್ಯವ್ಯಾಪ್ತಿಯನ್ನು ಎತ್ತಿ ತೋರಿಸುತ್ತದೆ. ಇತರ ವಿಶ್ವವಿದ್ಯಾಲಯಗಳು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಾರ್ಯಮಾಡುತ್ತಿರುವಂತೆ ತೋರುವುದಿಲ್ಲ.

ಬಿ.ವಿ. ಮಲ್ಲಾಪುರ

ಹಿರಿಯ ವಿದ್ವಾಂಸರು, ಧಾರವಾಡ, ೨೯.೧೨.೨೦೦೭

ಹಸ್ತಪ್ರತಿಶಾಸ್ತ್ರ ವಿಭಾಗವು ಈವರೆಗೆ ಆರು ಸೂಚೀ ಸಂಪುಟಗಳನ್ನು ತಂದಿರುವುದು ಸಂತಸದ ವಿಷಯ. ಅಲ್ಲದೇ ಹಸ್ತಪ್ರತಿಗಳನ್ನು ಕುರಿತು ಅಲ್ಲಲ್ಲಿ ತರಬೇತಿ ಶಿಬಿರಗಳನ್ನು ನಡೆಸುತ್ತಿರುವುದು, ಅದಕ್ಕಾಗಿಯೇ ಒಂದು ಪತ್ರಿಕೆಯನ್ನು ಮೀಸಲಾಗಿರಿಸಿ ಮೌಲಿಖ ಲೇಖನಗಳನ್ನು ಪ್ರಕಟಿಸುತ್ತಿರುವುದು, ವರ್ಷಂಪ್ರತಿ ಸಮ್ಮೇಳನವನ್ನು ನಡೆಸಿ ಆಗಿರುವ, ಆಗಬೇಕಾಗಿರುವ ಕಾರ್ಯಗಳನ್ನು ಕುರಿತು ಚರ್ಚಿಸುವುದು ಮತ್ತು ಅಲ್ಲಿ ಅಲಕ್ಷಿತ ಶಾಸ್ತ್ರ ಸಾಹಿತ್ಯವನ್ನು ಕುರಿತು ಗೋಷ್ಠಿಗಳನ್ನು ಏರ್ಪಡಿಸುವುದು, ಹಳಗನ್ನಡ ಸಾಹಿತ್ಯ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು, ಆಧುನಿಕ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಹಸ್ತಪ್ರತಿಗಳನ್ನು ಅವಲೋಕಿಸುವುದು, ಸಂಶೋಧನ ವಿದ್ಯಾರ್ಥಿಗಳಿಗೆ ಪ್ರಾಚೀನ ಶಾಸ್ತ್ರ ವಿಷಯವನ್ನೇ ಕೊಟ್ಟು ಅಧ್ಯಯನ ಮಾಡಿಸುವುದು, ಹಲವಾರು ಅಪ್ರಕಟಿತ ಕೃತಿಗಳನ್ನು ಪ್ರಕಟಿಸುತ್ತಿರುವುದು ಮೆಚ್ಚಬೇಕಾದ ಕೆಲಸಗಳೇ. ಕೇಂದ್ರ ಸರಕಾರದ ರಾಷ್ಟ್ರೀಯ ಹಸ್ತಪ್ರತಿ ಅಭಿಯಾನದ ಅಡಿಯಲ್ಲಿ ಕರ್ನಾಟಕದ ಎಲ್ಲ ಹಸ್ತಪ್ರತಿಗಳ ಸೇವಾಕಾರ್ಯವನ್ನು ಕೂಡಾ ಹಂಪಿ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಹಮ್ಮಿಕೊಂಡಿರುವುದು ಸಂತಸದ ವಿಷಯ.

ಬಿ.ವಿ. ಶಿರೂರ

ಹಿರಿಯ ಸಂಶೋಧಕರು, ಹುಬ್ಬಳ್ಳಿ, ೧.೪.೨೦೧೧

ಕನ್ನಡ ವಿಶ್ವವಿದ್ಯಾಲಯದಲ್ಲಿ ತನ್ನ ಅರ್ಥಪೂರ್ಣ ಕಾರ್ಯಯೋಜನೆಗಳಿಂದ ಹೆಚ್ಚು ಕ್ರಿಯಾಶೀಲವಾಗಿ ಎದ್ದು ಕಾಣುವ ವಿಭಾಗವೆಂದರೆ ಹಸ್ತಪ್ರತಿಶಾಸ್ತ್ರ ವಿಭಾಗ. ಇನ್ನೂ ಕೇವಲ ಒಂದು ತಿಂಗಳಲ್ಲಿ ೨೧ನೆಯ ವರ್ಷದಲ್ಲಿ ಕಾಲಿರಿಸುತ್ತಿರುವ(ಸ್ಥಾಪನೆ-೧೯೯೬) ಈ ವಿಭಾಗ ಕಳೆದ ಎರಡು ದಶಕಗಳಲ್ಲಿ ಮಾಡಿದ ಕಾರ್ಯ ಬೆರಗುಗೊಳಿಸುವಂತಿದೆ. ಹಸ್ತಪ್ರತಿ ಪರಿವೀಕ್ಷಣೆ ಮತ್ತು ಹಸ್ತಪ್ರತಿ ಸಂಗ್ರಹದಿಂದ ಆರಂಭವಾದ ಇದರ ಚಟುವಟಿಕೆಗಳು ಮುಂದೆ ಹಸ್ತಪ್ರತಿ ಸಂರಕ್ಷಣೆ, ಸೂಚೀಕರಣ, ಗ್ರಂಥ ಪರಿಷ್ಕರಣೆ, ಪ್ರಕಟಣೆ ಎಂಬ ಹಂತಗಳನ್ನು ದಾಟಿ, ಈಗ ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳತ್ತ ದಾಪುಗಾಲು ಹಾಕುತ್ತಿರುವುದು ಅದರ ಪ್ರಗತಿಶೀಲ ಧೋರಣೆಯ ದ್ಯೋತಕವೆನಿಸಿದೆ. ಅದು ತನ್ನ ಕಕ್ಷೆಯಲ್ಲಿ ರೂಪಿಸಿಕೊಂಡ ವೈಯಕ್ತಿಕ ಮತ್ತು ಸಾಂಘಿಕ ಯೋಜನೆಗಳು, ಯು.ಜಿ.ಸಿ. ಅನುದಾನಿತ ಯೋಜನೆಗಳು, 'ಹಸ್ತಪ್ರತಿ ಸಮಗ್ರ ಸೂಚಿ' ಯೋಜನೆ, ಹಸ್ತಪ್ರತಿ ಜಾಗೃತಿ ಮತ್ತು ತರಬೇತಿ ಶಿಬಿರ, ಐತಿಹಾಸಿಕ ಪರಂಪರೆ ಉಳಿಸಿ-ಸಪ್ತಾಹ, ಹಸ್ತಪ್ರತಿ ವ್ಯಾಸಂಗ ಪ್ರಕಟಣ ಮಾಲೆ, ಹಸ್ತಪ್ರತಿ ಅಧ್ಯಯನ ಪತ್ರಿಕೆ, ಹಸ್ತಪ್ರತಿ ಆಧಾರಿತ ವಿಷಯಗಳಿಗೆ ಪಿಎಚ್.ಡಿ. ಮಾರ್ಗದರ್ಶನ, ಹಸ್ತಪ್ರತಿ ಗಣಕೀಕರಣ ವ್ಯವಸ್ಥೆ, ವೆಬ್‌ಸೈಟ್ ನಿರ್ಮಾಣ ಇತ್ಯಾದಿಗಳೆಲ್ಲ ಅದರ ಬಹುಮುಖೀ ಕಾರ್ಯದಕ್ಷತೆಗೆ ಸಾಕ್ಷಿ ಎನಿಸಿವೆ. ಉತ್ಸಾಹಿ-ಪ್ರತಿಭಾವಂತ-ಪರಿಶ್ರಮ ಪ್ರವೃತ್ತಿಯ ಪ್ರಾಧ್ಯಾಪಕರ ಸಾಂಘಿಕ ಪ್ರಯತ್ನದ ಫಲವಾಗಿ ಈ ವಿಭಾಗಕ್ಕೆ ಎನ್.ಎಂ.ಎಂ.(ನ್ಯಾಷನಲ್ ಮಿಷನ್ ಫಾರ್ ಮ್ಯಾನ್ಯುಸ್ಕ್ರಿಪ್ಟ್)ದಿಂದ 'ಹಸ್ತಪ್ರತಿ ಸಂಪನ್ಮೂಲ ಕೇಂದ್ರ' ಎಂಬ ಮಾನ್ಯತೆ ದೊರೆತಿರುವುದು ಸಹಜವೇ ಆಗಿದೆ.

ಡಾ. ವೀರಣ್ಣ ರಾಜೂರ

ಹಿರಿಯ ವಿದ್ವಾಂಸರು, ಧಾರವಾಡ, ೪.೧೨.೨೦೧೫

ಕನ್ನಡ ವಿಶ್ವ ವಿದ್ಯಾಲಯದ ಹಸ್ತಪ್ರತಿ ವಿಭಾಗವು ರಜತ ಮಹೋತ್ಸವ ಆಚರಿಸುತ್ತಿರುವುದು ತುಂಬಾ ಸಂತೋಷ. ಆ ವಿಭಾಗವು ಆರಂಭದಿಂದ ಇಲ್ಲಿಯ ತನಕ ಉತ್ಸಾಹ ಕಳೆದುಕೊಳ್ಳದೆ ಕೆಲಸ ಮಾಡುತ್ತಾ ಬಂದಿರುವುದನ್ನು

ಗಮನಿಸಿದ್ದೇನೆ. ಪ್ರೊಫೆಸರ್‌ಗಳಾದ ಎ.ವಿ.ನಾವಡ, ವೀರೇಶ ಬಡಿಗೇರ, ಎಫ್.ಟಿ.ಹಳ್ಳಿಕೇರಿ, ಕೆ.ರವೀಂದ್ರನಾಥ್, ಎಸ್.ಎಸ್.ಅಂಗಡಿ, ಎಸ್.ಆರ್.ಚನ್ನವೀರಪ್ಪ ಅವರುಗಳು ಈ ವಿಭಾಗದ ಬೆಳವಣಿಗೆಗೆ ವಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಶ್ರಮಿಸಿದ್ದಾರೆ. ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮುಂತಾದ ಕಾರ್ಯವನ್ನು ಶಾಸ್ತ್ರೀಯವಾಗಿ ನಿರ್ವಹಣೆ ಮಾಡಿದ್ದಾರೆ. ಇನ್ನೂ ಅನೇಕ ಮೌಖಿಕ ಅಜ್ಞಾತ ಹಸ್ತಪ್ರತಿಗಳಲ್ಲಿ ಅಡಗಿರುವ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಶೋಧಿಸುವುದು ನಡೆಯಬೇಕಾಗಿದೆ. ಬಂದಿರುವ ವಿಭಾಗದ ಪ್ರಕಟಣೆ, ನಡೆದಿರುವ ವಿಚಾರ ಸಂಕಿರಣ, ತರಬೇತಿಗಳನ್ನು ನೋಡಿದರೆ ಹೆಚ್ಚು ಕೆಲಸ ನಡೆದಿದೆ. ಇದನ್ನು ಬೇರೆ ವಿಭಾಗದವರು ಮೆಚ್ಚಿ ತಲೆ ತೂಗಬೇಕು. ವಿಭಾಗಕ್ಕೆ ವಿ.ವಿ.ಯಿಂದ ಸಿಕ್ಕ ಸಣ್ಣ ಆರ್ಥಿಕ ಅನುದಾನ, ಹೊರಗಿನಿಂದ ತಂದ ಅನುದಾನ ಇದರಿಂದ ವಿಭಾಗವನ್ನ ಬೆಳೆಸಿದ್ದನ್ನು ನಾನು ಹತ್ತಿರದಿಂದ ಕಂಡವನು. ಅದೆಲ್ಲಾ ಇಲ್ಲಿ ಸಾರ್ಥಕವಾಗಿದೆ. ಅಲ್ಲಿನ ಎಲ್ಲಾ ವಿದ್ವಾಂಸರಿಗೆ ಈ ಸಂದರ್ಭದಲ್ಲಿ ನನ್ನ ಅಭಿನಂದನೆಗಳು. ನಿಮ್ಮ ವಿಭಾಗದ ರಜತ ಪ್ರಕಟಣೆಗೆ ನನ್ನ ಹಾರೈಕೆಗಳು. ಹೀಗೇ ನಿಮ್ಮ ವಿಭಾಗ ವೃದ್ಧಿಯನ್ನು ಕಾಣಲಿ.

ಡಾ. ಕರೀಗೌಡ ಬೀಚನಹಳ್ಳಿ

ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರು, ಬೆಂಗಳೂರು, ೨೮.೧.೨೦೨೨

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೂ ನನಗೂ ಅತ್ಯಂತ ನಿಕಟ ಸಂಬಂಧ. ಹಸ್ತಪ್ರತಿಶಾಸ್ತ್ರ ವಿಭಾಗದ ಎಲ್ಲಾ ಪ್ರಾಧ್ಯಾಪಕರು ಹಸ್ತಪ್ರತಿಶಾಸ್ತ್ರ ವಿಷಯದಲ್ಲಿ ಮಾಡುತ್ತಿರುವ ಸೇವೆ ಸ್ಮರಣೀಯವಾದುದು. ಈವರೆಗೆ ಹಸ್ತಪ್ರತಿಗಳ ಸಂಗ್ರಹ–ಸಂಪಾದನೆ–ಗ್ರಂಥ ಪ್ರಕಟಣೆಗೆ ಮಾತ್ರ ಮೀಸಲಾಗಿತ್ತು. ಆದರೆ ಈ ವಿಭಾಗವು ಇವೆಲ್ಲವನ್ನು ಮೀರಿ ಹೊಸ ಹೊಸ ಸಾಧ್ಯತೆಗಳನ್ನು ತೆರೆದು ತೋರಿಸಿದೆ. ಹಸ್ತಪ್ರತಿಗಳ ವಿಷಯವಾಗಿ ಈವರೆಗೆ ನಡೆದ ಅಧ್ಯಯನದ ಸಮೀಕ್ಷೆ, ವಿಮರ್ಶೆ, ಹೊಸ ಹೊಸ ಶೋಧಗಳ ನಿರಂತರ ಕ್ರಿಯಾಶೀಲ ದುಡಿಮೆಯಿಂದ ಹಸ್ತಪ್ರತಿ ವಿಷಯವಾಗಿ ಈ ವಿಭಾಗದಿಂದ ಐವತ್ತಕ್ಕೂ ಹೆಚ್ಚು ಮೌಲಿಕ ಗ್ರಂಥಗಳು ಪ್ರಕಟಗೊಂಡಿರುವುದು ಅತ್ಯಂತ ಅಭಿಮಾನದ ವಿಷಯವಾಗಿದೆ.

ಎಸ್.ಆರ್. ಗುಂಜಾಳ

ಗ್ರಂಥಾಲಯ ವಿಜ್ಞಾನಿ, ಧಾರವಾಡ, ೪.೧೧.೨೦೨೦

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಮಾತ್ರ ಯುವಕರಿಗೆ ಹಸ್ತಪ್ರತಿಶಾಸ್ತ್ರದಲ್ಲಿ ಕಳೆದ ಎರಡು ದಶಕಗಳಿಂದ ತರಬೇತಿ ಕಮ್ಮಟಗಳನ್ನು ನಡೆಸಿಕೊಂಡು ಬರುತ್ತಿರುವ ಒಂದು ಗಮನಾರ್ಹ ಸಂಗತಿ. ಇನ್ನೊಂದೆಡೆ ಮಠಮಾನ್ಯಗಳು, ದೇಗುಲಗಳು ತಮ್ಮಲ್ಲಿನ ತಾಡೋಲೆ ಕಟ್ಟುಗಳನ್ನು ಬಿಚ್ಚಿ ವಿದ್ವಾಂಸರ ಗಮನಕ್ಕೆ ತರುವ ಒಳ್ಳೆಯ ಪ್ರಯತ್ನ ಮಾಡುತ್ತಿರುವುದು ಕನ್ನಡಿಗರ ಭಾಗ್ಯ ವಿಶೇಷ. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಹಸ್ತಪ್ರತಿಗಳ ಸಂರಕ್ಷಣೆಯ ಜೊತೆಗೆ ಡಿಜಿಟಲೀಕರಣ ಕಾರ್ಯ ಸಾಕಷ್ಟು ಪ್ರಗತಿಯಲ್ಲಿದ್ದು ಅದರೊಳಗಿನ ಜ್ಞಾನಸಂಪತ್ತು ಲೋಕಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿ. ಪ್ರೊ. ಎಂ.ಎಂ.ಕಲಬುರ್ಗಿಯವರ ಮಾರ್ಗದರ್ಶನದಲ್ಲಿ ಆರಂಭವಾಗಿ ಹಸ್ತಪ್ರತಿಶಾಸ್ತ್ರ ವಿಭಾಗ ಹಸ್ತಪ್ರತಿಸೂಚಿ ಸರಣಿಯಲ್ಲಿ ಈಗಾಗಲೇ ಐದು ಸಂಪುಟಗಳು ಪ್ರಕಟವಾಗಿದ್ದು ಸಂಶೋಧನೆಗೆ ಲಭ್ಯವಿವೆ. ಹಸ್ತಪ್ರತಿ ಸಮ್ಮೇಳನದಲ್ಲಿ ಮಂಡಿತವಾದ ಸಂಪ್ರಬಂಧಗಳು ಹಸ್ತಪ್ರತಿ ವ್ಯಾಸಂಗ ಹೆಸರಿನಲ್ಲಿ ಪ್ರಕಟವಾಗುತ್ತಲಿವೆ.

ಈವರೆಗೆ ೨೧ ಸಂಪುಟಗಳು ಹೊರಬಂದಿರುವುದು ಸಮ್ಮೇಳನದ ಮಹತ್ವವನ್ನು ಎತ್ತಿಹೇಳುತ್ತವೆ. ಹಸ್ತಪ್ರತಿಶಾಸ್ತ್ರ ಪರಿಣತರು ತಮ್ಮ ಹಕ್ಕೊತ್ತಾಯ ಮಂಡಿಸುತ್ತಾ ಬಂದ 'ಸಮಗ್ರ ಹಸ್ತಪ್ರತಿ ಭಾಂಡಾರ' ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಾಪಿತವಾಗಿ ಆ ಮೂಲಕ ನಾಡಿಗೆ ಜ್ಞಾನದಾಸೋಹದ ಪುಣ್ಯಕಾರ್ಯ ಆರಂಭಗೊಳ್ಳಲಿ ಎಂದು ಹಾರೈಸುತ್ತೇನೆ.

ಪ್ರೊ. ಎ.ವಿ. ನಾವಡ

ಹಿರಿಯ ವಿದ್ವಾಂಸರು, ಮಂಗಳೂರು, ೫.೩.೨೦೨೨

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಹಸ್ತಪ್ರತಿ ಪ್ರೇಮಿಗಳ ಆಶಾಕಿರಣವಾಗಿದೆ. ಏಕೆಂದರೆ ಕರ್ನಾಟಕದ ಇತರ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿ ಚಟುವಟಿಕೆಗಳು ನಾನಾ ಕಾರಣಗಳಿಂದಾಗಿ ಕ್ಷೀಣಿಸುತ್ತಿರುವುದು ಸರ್ವವಿದಿತವಾಗಿದೆ. ಪ್ರಸ್ತುತ ವಿಭಾಗವು ಹಸ್ತಪ್ರತಿ ಸಂಗೋಪನೆ, ಸೂಚೀಕರಣ, ಪ್ರಕಟಣೆ, ಹಸ್ತಪ್ರತಿ ನಿಯತಕಾಲಿಕೆ, ಪ್ರಾಚೀನ ಕಾವ್ಯ ಪ್ರಕಟಣೆ ಇಂಥ ಹಲವಾರು ಕಾರ್ಯಯೋಜನೆಗಳನ್ನು ನಿರ್ವಹಿಸುತ್ತಿರುವುದರ ಜೊತೆಗೆ ಹಸ್ತಪ್ರತಿ ಶಾಸ್ತ್ರವನ್ನು ಬದಲಾದ ಕಾಲಮಾನಕ್ಕೆ ಅನುಗುಣವಾಗಿ ಮರುಓದಿಗೆ ಅಳವಡಿಸುವ ಪ್ರಯತ್ನವನ್ನು ಮಾಡುತ್ತ ಬಂದಿದೆ. ಹೊಸ ಚಿಂತನೆಗಳ ನೆಲೆಯಲ್ಲಿ ಹಸ್ತಪ್ರತಿ ವಿಭಾಗ ಕೆಲಸ ಮಾಡುತ್ತಿದೆ. ಹಸ್ತಪ್ರತಿ ಸಾಫ್ಟ್‌ವೇರ್, ಕನ್ನಡ ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ, ಹಸ್ತಪ್ರತಿಗಳಲ್ಲಿ ಕನ್ನಡಿಗರ ಬದುಕು, ಹಸ್ತಪ್ರತಿ ಲಿಪಿಕಾರರ ಕುರಿತ ಯೋಜನೆ, ಹಸ್ತಪ್ರತಿ ಅಧ್ಯಯನ ಮುಂತಾದ ಈ ವಿಭಾಗದ ಪ್ರಕಟಣೆಗಳು ಹಸ್ತಪ್ರತಿ ಅಧ್ಯಯನಕಾರರ ಮೆಚ್ಚುಗೆಗೆ ಪಾತ್ರವಾಗಿವೆ.

ಡಾ. ವೈ.ಸಿ. ಭಾನುಮತಿ, ಹಿರಿಯ ವಿದ್ವಾಂಸರು, ಮೈಸೂರು

೭.೧೦.೨೦೧೬

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗವು ಕೊಪ್ಪಳದಲ್ಲಿ ಏರ್ಪಡಿಸಿದ ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರದ ಈ ಪ್ರಯತ್ನವು ಯುವ ಜನರು ಅಥವಾ ಅಧ್ಯಯನಪ್ರಿಯರ ಒಲವನ್ನು ಮೂಡಿಸಲು ನೆರವಾಗಿದೆ. ಎಲೆಮರೆಯ ಕಾಯಿಯಂತೆ ಕನ್ನಡ ಸಾಹಿತ್ಯಕ್ಕೆ ತಮ್ಮ ಕಾವ್ಯದ ಮೂಲಕ ಸಾಹಿತ್ಯದ ಚಲುವನ್ನು ಹೆಚ್ಚಿಸಿದ ಕವಿ ಹಾಗೂ ಲಿಪಿಕಾರರ ಪರಿಚಯ ನಮಗೆ ಆಯಿತು. ಇಂತಹ ಶಿಬಿರ ನಡೆಸಿದ ಕನ್ನಡ ವಿಶ್ವವಿದ್ಯಾಲಯಕ್ಕೆ ನನ್ನ ವಂದನೆಗಳು.

ಮುದುಕಪ್ಪ ಹನುಮಪ್ಪ ಕೊನೇರಿ

ಬಿ.ಎ. ಮೂರನೆಯ ಸೆಮಿಸ್ಟರ್ ವಿದ್ಯಾರ್ಥಿ

ಸರಕಾರಿ ಪ್ರಥಮ ದರ್ಜೆ ಕಾಲೇಜು ಕೊಪ್ಪಳ, ೬.೧೦.೨೦೧೯

□□

